# ಜೊತೆಗೂಡಿ ನಡೆಯೋಣ

**ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ 2016, ವಿಜಯಪುರ**


ಸಂ:

**ದು. ಸರಸ್ವತಿ**

ಮತ್ತು

**ಸಂಪಾದಕ ಮಂಡಳಿ**



ಕವಿ ಪ್ರಕಾಶನ

ಕವಲಕ್ಕಿ

**Jotegoodi Nadeyona -** Memoirs of International women's Day-2016 Vijayapura, **Editor :** D. Saraswathi, A001, RNS, Shantinivasa, Tumkur Road, Yeshwantpur, Bengaluru-560022

***Editorial board***

Hameedabanu Athani
Dr Bhagyashri Dodamani
Dr Surekha Rathod
Dr Shailashri Ahirsang
Bhuvaneshwari Kamble
Shashikala Rathod
Dr. Sukanya Havanur
Shivamma A.
Dr Renuka Mandrup
Manjula Devappa
Raziya Nadaf

***Published by***

**KAVI PRAKASHANA**
Jalaja General and Maternity Clinic
Kavalakki - 581361
Honnavara Tq
Uttara Kannada Dist. Ph: 9480211320
**E-mail:** bhoomibalaga.anu@gmail.com

| | | |
|---|---|---|
| First Print | : | 2017 |
| Copies | : | 1000 |
| Price | : | **₹ 100/-** |
| Pages | : | 124 + 8 page colour pages = 132 |
| Size | : | $1/8^{th}$ Demi |
| Paper used | : | 70 gsm Maplitho |
| ISBN | : | 978-81-931893-5-1 |

© : Karnataka Rajya Mahila Dourjanya Virodhi Okkuta, Vijayapura

Cover Design : Chetana Teerthalli

***Text Layout & Printed at***

ILA MUDRANA
Bengaluru - 560 026
Ph : 080-26757159

# ಜೊತೆಗೂಡಿ ನಡೆಯೋಣ



## ಪುಟ ನಡುಗೆ


- ಜೊತೆಗೂಡಿ ನಡೆದ ಹಾದಿ – ದು. ಸರಸ್ವತಿ : 7
- ವಿಜಯಪುರ ನಾಡಿನಲ್ಲಿ ಸಂಭ್ರಮದ ಮಹಿಳಾ ದಿನಾಚರಣೆ
  – *ಡಾ. ಸುರೇಖಾ ರಾಠೋಡ್ :* 9
- ಕರಪತ್ರ 14
- ವಿಜಯಪುರದ ಜೀವಪರ ಮಹಿಳಾ ಪರಂಪರೆ – *ದು. ಸರಸ್ವತಿ* 23
- ವಿಚಾರ ಸಂಕಿರಣ 27
- ಪ್ರಸ್ತಾವನೆ – *ಪ್ರೊ. ಆರ್. ಸುನಂದಮ್ಮ* 29
- ಸಮಸಮಾಜಕ್ಕಾಗಿ ಸಂಘರ್ಷ – *ಪ್ರೊ. ಉಮಾ ಚಕ್ರವರ್ತಿ* 35
- ಮಹಿಳೆ ಮನೆಯ ನಡುಗಂಬ, ದೇಶದ ಬೆನ್ನೆಲುಬು
  – *ಸರಸ್ವತಿ ಚಿಮ್ಮಲಗಿ* 41
- ಪ್ರತಿ ದಿನವೂ ಮಹಿಳಾ ದಿನಾಚರಣೆಯಾಗಬೇಕು
  *ಪ್ರೊ. ಮೀನಾ ಆರ್. ಚಂದಾವರಕರ್ :* 47
- ರೈತ ಆತ್ಮಹತ್ಯೆ ಕೃಷಿ ಬಿಕ್ಕಟ್ಟಿನ ಒಂದು ಲಕ್ಷಣ – *ವಿ. ಗಾಯತ್ರಿ :* 51
- ಅಪರಾಧೀಕರಣ: ದೇವದಾಸಿಯರು ಹಾಗೂ ಲೈಂಗಿಕ ಕಾರ್ಯಕರ್ತೆಯರು
  – *ಆರ್. ಮೀರಾ* : 58
- ಒಂಟಿ ಮಹಿಳೆಯರ ಸಾಮಾಜಿಕ ಸಮಸ್ಯೆಗಳು
  – *ಶಕುನ್ ಮೋಹಿನಿ* : 65
- ಅಪರಾಧ ವಯಸ್ಸು – *ದರ್ಶನಾ ಮಿತ್ರ* : 71
- ಕೌಟುಂಬಿಕ ದೌರ್ಜನ್ಯ: ಸಾಮಾಜಿಕ ಆಯಾಮ
  – *ಬಿ. ಸಿ. ಮಂಜುಳಾ* : 75
- ಮಹಿಳೆ ಮತ್ತು ರಾಜಕೀಯ ಪ್ರಾತಿನಿಧ್ಯ
  – *ಡಾ. ಎಚ್.ಎಸ್. ಅನುಪಮಾ* : 80
- ಪ್ರತಿಕ್ರಿಯೆಗಳು : 89
- ಮಹಿಳಾ ಶಕ್ತಿ ಬಂದಿದೆ, ಹೊಸ ಬೆಳಕು ತಂದಿದೆ
  – *ಮೇಧಾ ಪಾಟ್ಕರ್* : 92
- ಸಮಾವೇಶದ ನಿರ್ಣಯಗಳು 106
- ಸಮಾವೇಶದ ಮೆಲುಕುಗಳು 109
- ಮರೆಯಾದ ಗೆಳತಿಯರು 116


# ‘ಅನಿಬರುಂ ಮುನ್ನೀರೊಳ್ ಮುಳುಗಿರಲ್...’

‘ಅನಿಬರುಂ ಮುನ್ನೀರೊಳ್ ಮುಳುಗಿರಲ್ ಆರನಾರ್ ರಕ್ಷಿಪರ್?’ – ‘ಸ್ಮಶಾನ ಕುರುಕ್ಷೇತ್ರ’ದಲ್ಲಿ ಬರುವ ಈ ಮಾತು ಹೆಣ್ಣುಮಕ್ಕಳಿಗೆ ಸರಿಯಾಗಿ ಅನ್ವಯಿಸುತ್ತದೆ. ಈ ಭೂಮಿಯ ಮೇಲೆ ಪ್ರತಿದಿನವೂ ಹುಟ್ಟುವ ಸೂರ್ಯನಷ್ಟೇ ನಿಶ್ಚಿತವಾದದ್ದು ಲಿಂಗ ತಾರತಮ್ಯ ಮತ್ತು ಮಹಿಳಾ ದೌರ್ಜನ್ಯ. ಲಿಂಗ ತಾರತಮ್ಯ ತಲೆತಲಾಂತರಗಳಿಂದ ಅವ್ಯಾಹತವಾಗಿ ನಡೆಯುತ್ತ ಬಂದರೂ ದನಿಯಿಲ್ಲದವಳಾಗಿದ್ದ ಹೆಣ್ಣು ಇತ್ತೀಚೆಗಷ್ಟೇ ತನ್ನ ಮೇಲಾಗುವ ಅನ್ಯಾಯವನ್ನು, ಅದರ ಕಾರಣಗಳನ್ನು ಗುರುತಿಸುವ, ದನಿಯೆತ್ತಿ ಪ್ರತಿಭಟಿಸುವ ದಾರಿಯಲ್ಲಿ ಮೊದಲ ಹೆಜ್ಜೆಗಳನ್ನಿಡುತ್ತಿದ್ದಾಳೆ. ಸಂಘಟಿತ ಪ್ರಯತ್ನವೊಂದೆ ತನ್ನ ಸಮಾನತೆಯ ಕನಸುಗಳ ಸಾಕಾರಕ್ಕೆ ಇರುವ ದಾರಿ ಎಂದು ಕಂಡುಕೊಂಡಿದ್ದಾಳೆ. ಸಾಮಾಜಿಕ ನ್ಯಾಯದ ಚಳುವಳಿಗಳಲ್ಲಿ ಲಿಂಗಪ್ರಶ್ನೆಯೂ ಮುನ್ನೆಲೆಗೆ ಬಂದು ಮಹಿಳೆಯರು ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದಾರೆ.

ಕರ್ನಾಟಕದಲ್ಲೂ ಅನೇಕ ಸಂಘ–ಸಂಘಟನೆ–ಚಳುವಳಿಗಳು ಮಹಿಳಾ ಸಮಸ್ಯೆಗಳನ್ನೆತ್ತಿಕೊಂಡು ದಶಕಗಳಿಂದ ಸಕ್ರಿಯವಾಗಿವೆ. ಕರ್ನಾಟಕದ ಅಂತಹ ಮಹಿಳಾಪರ ವ್ಯಕ್ತಿ–ಸಂಘ–ಸಂಘಟನೆಗಳ ಜಾಲವೇ ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ. ಸಮತೆ–ಸೋದರಿತ್ವದ ಆಶಯ ಹೊತ್ತು ಅದು ಕಳೆದ 5 ವರ್ಷಗಳಿಂದ ಪ್ರತಿ ವರ್ಷ ಕರ್ನಾಟಕದ ಒಂದೊಂದು ಜಿಲ್ಲಾ ಕೇಂದ್ರದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ‘ಮಹಿಳಾ ಚೈತನ್ಯ ದಿನ’ವೆಂದು ಆಚರಿಸುತ್ತ ಬಂದಿದೆ. ಮಹಿಳಾ ಪರ, ಜಾತ್ಯತೀತ ಮನಸುಗಳ ಸಂಪರ್ಕ ಜಾಲವಾಗಿ ಮಹಿಳಾ ಜಾಗೃತಿ ಮೂಡಿಸುವ ಕೆಲಸ ಮಾಡುತ್ತಿದೆ. ಅದರ ಸಮಾವೇಶಗಳಲ್ಲಿ

ಸಕ್ರಿಯ ಹೋರಾಟ–ಬರಹದಲ್ಲಿ ತೊಡಗಿಕೊಂಡ ಹೊರರಾಜ್ಯದ ಮಹಿಳೆಯರೂ ಪಾಲ್ಗೊಂಡಿದ್ದಾರೆ.

ನಾವು ನಂಬುವ ಪ್ರಜಾಸತ್ತಾತ್ಮಕ ನೆಲೆಯ, ಸಮಾನತೆಯ, ಸಾಮೂಹಿಕ ಪ್ರಯತ್ನ–ಬಹುತ್ವದ ಮೌಲ್ಯಗಳನ್ನು ನಮ್ಮ ಸಮಕಾಲೀನ ಮನಸುಗಳಲ್ಲಿ ಬಿತ್ತುವುದು ಒಕ್ಕೂಟ ಮತ್ತು ಸಮಾವೇಶದ ಆಶಯವಾಗಿದೆ. ಅದರ ವಿಸ್ತರಣೆಯಾಗಿ ಪ್ರತಿ ವರ್ಷ ನಡೆದ ಸಮಾವೇಶದ ತಯಾರಿ, ಆಗುಹೋಗು, ಸಂವಾದಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲಾಗುತ್ತಿದೆ. ಈ ವರ್ಷ ವಿಜಯಪುರದ 2016ರ ಸಮಾವೇಶದ ಆಗುಹೋಗುಗಳ ದಾಖಲೆಯಾಗಿ 'ಜೊತೆಗೂಡಿ ನಡೆಯೋಣ' ಪುಸ್ತಕ ನಿಮ್ಮ ಕೈಯಲ್ಲಿದೆ. ಮಹಿಳಾ ದಿನಾಚರಣೆ ನಡೆದ ಕುರಿತಷ್ಟೆ ಅಲ್ಲದೆ, ಇದೇ ವರ್ಷ ನಮ್ಮನ್ನಗಲಿದ ಮೂವರು ಮಹಿಳಾ ಚೇತನಗಳ ನೆನಪಿಸಿಕೊಳ್ಳುವ ಪ್ರಯತ್ನವನ್ನೂ ಈ ಪುಸ್ತಕದಲ್ಲಿ ಮಾಡಲಾಗಿದೆ. ನಮ್ಮೊಡನಿದ್ದು ಕಾಲದ ಅನಿವಾರ್ಯತೆಗೆ ದೇಹ ತೊರೆದು ಹೋಗುವ ಜೀವಗಳ ನೆನಪುಗಳು ಹಸಿಯಾಗಿರಬೇಕು; ದೈಹಿಕವಾಗಿ ಇಂದು ನಮ್ಮ ನಡುವಿರದಿದ್ದರೂ ಗಾಢವಾಗಿ ಮಹಿಳಾ ನಡೆಗಳನ್ನು ಪ್ರಭಾವಿಸಿದ ಹಲವರಲ್ಲಿ ಕೆಲವರನ್ನಾದರೂ ನೆನಪಿಸಿಕೊಳ್ಳಬೇಕು ಎನ್ನುವುದು 'ಮರೆಯಾದ ಗೆಳತಿಯರು' ಎಂಬ ಅಧ್ಯಾಯ ಸೇರಿಸಿದ ಉದ್ದೇಶವಾಗಿದೆ.

ಹೀಗೆ, ವಿಜಯಪುರ ಸಮಾವೇಶದ ಮೆಲುಕುಗಳು 'ಜೊತೆಗೂಡಿ ನಡೆಯೋಣ' ಹೊತ್ತಗೆಯಾಗಿ ನಿಮ್ಮ ಕೈಯಲ್ಲಿರುವಾಗ ಇಂಥ ಇನ್ನಷ್ಟು ನಡೆ–ನಡಿಗೆಗಳಿಗೆ ಸ್ಫೂರ್ತಿಯಾಗಲೆಂದು ಆಶಿಸುತ್ತೇವೆ. ಈ ಹೊತ್ತು ಪುಸ್ತಕವನ್ನು ಸಂಪಾದಿಸಿಕೊಟ್ಟ ಗೆಳತಿ ದು. ಸರಸ್ವತಿ ಮತ್ತು ಸಂಪಾದಕ ಮಂಡಳಿಯ ಗೆಳತಿಯರಿಗೆ; ಅಡೆತಡೆಗಳ ನಡುವೆಯೂ ಯಶಸ್ವಿ ಸಮಾವೇಶ ಮಾಡಿ ತೋರಿಸಿದ ದಿಟ್ಟೆ ಸೋದರಿಯರಿಗೆ; ವಿಜಯಪುರದ ಮಹಿಳಾಪರ ಮನಸುಗಳಿಗೆ; ಮುದ್ರಣ ವೆಚ್ಚ ಭರಿಸಿದ ವಿಜಯಪುರ ಒಕ್ಕೂಟದವರಿಗೆ; ಮುಖಪುಟ ರಚಿಸಿದ ಚೇತನಾ ತೀರ್ಥಹಳ್ಳಿ ಅವರಿಗೆ; ಅಂದವಾಗಿ ಮುದ್ರಿಸಿದ ಇಳಾ ಮುದ್ರಣದ ಗುರು ಮತ್ತು ಸಿಬ್ಬಂದಿ ವರ್ಗದವರಿಗೆ ಶರಣು..

ಎಲ್ಲ ಕೆಲಸ ಕಾರ್ಯಗಳಿಗೆ 'ಬ್ಯಾಕ್ ಅಪ್' ಶಕ್ತಿ ಒದಗಿಸುವ ಕುಟುಂಬ, ಸ್ನೇಹದ ಬಳಗ ಮತ್ತು ಬಸುವಿಗೆ; ಸಹೃದಯ ಓದುಗರಿಗೆ ನನ್ನ ಮನದಾಳದ ಕೃತಜ್ಞತೆಗಳು ಸಲ್ಲುತ್ತವೆ.

**ಅನುಪಮಾ, ಕವಲಕ್ಕಿ**



# 'ಜೊತೆಗೂಡಿ ನಡೆದ' ಹಾದಿ..

ಕಳೆದ ನಾಲ್ಕು ವರ್ಷಗಳಿಂದ ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು ರಾಜ್ಯ ಮಟ್ಟದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಿಕೊಂಡು ಬರುತ್ತಿದೆ. ಪ್ರತಿ ವರ್ಷದಂತೆ ಈ ಸಲವೂ ಮಾರ್ಚ್ 8 ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಕಾರ್ಯಕ್ರಮದ ನಡಾವಳಿಯನ್ನು ಪುಸ್ತಕವಾಗಿ ಪ್ರಕಟಿಸುತ್ತಿದ್ದೇವೆ. ಯಾವ ಜಿಲ್ಲೆಯಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸುತ್ತೇವೋ ಆ ಊರಿನವರು ಪುಸ್ತಕ ಪ್ರಕಟಿಸುವ ಜವಾಬ್ದಾರಿ ತೆಗೆದುಕೊಳ್ಳಬೇಕೆಂಬ ಅಲಿಖಿತ ನಿಯಮ ಪಾಲಿಸುತ್ತಿದ್ದೇವೆ. ಅಂತೆಯೇ ವಿಜಯಪುರದಲ್ಲಿ ನಡೆದ ಮಹಿಳಾ ದಿನಾಚರಣೆಯ ವಿವರಗಳಿರುವ ಪುಸ್ತಕವನ್ನು ತಯಾರಿಸುವ ಹೊಣೆಯನ್ನು ವಿಜಯಪುರದ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗ ಮತ್ತು ಮಹಿಳಾ ಅಧ್ಯಯನ ಕೇಂದ್ರದ ಸೋದರಿಯರು ತೆಗೆದುಕೊಂಡಿದ್ದೇವೆ.

ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಯೋಜಿಸಿ, ನಡೆಸುವುದು ಒಂದು ಬಗೆಯ ಜವಾಬ್ದಾರಿಯಾದರೆ, ನಡೆದ ಕಾರ್ಯಕ್ರಮವನ್ನು ದಾಖಲಿಸಲು ಬೇರೆಯೇ ರೀತಿಯ ಶ್ರಮ ಮತ್ತು ಶಿಸ್ತಿನ ಅಗತ್ಯವಿದೆ. ವಿಚಾರ ಸಂಕಿರಣದಲ್ಲಿ, ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಸಂಪನ್ಮೂಲ ವ್ಯಕ್ತಿಗಳು ಮಾಡಿದ ಭಾಷಣವನ್ನು, ಕಾರ್ಯಕ್ರಮಕ್ಕಾಗಿ ನಡೆಸಿದ ತಯಾರಿಯನ್ನು ಬರವಣಿಗೆಗೆ ಇಳಿಸಬೇಕು; ಕಾರ್ಯಕ್ರಮದ ಭಾಗವಾಗಿ ಪ್ರಕಟಿಸಿದ ಕರಪತ್ರ, ಲೇಖನಗಳನ್ನು ದಾಖಲಿಸಬೇಕು; ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಫೋಟೋಗಳನ್ನು ಸಂಗ್ರಹಿಸಿ, ವಿಂಗಡಿಸಿ, ಸೂಕ್ತ ಶೀರ್ಷಿಕೆ ನೀಡಬೇಕು; ಕಾರ್ಯಕ್ರಮಕ್ಕಾಗಿ ಶ್ರಮಿಸಿದವರ ಅಭಿಪ್ರಾಯಗಳನ್ನು ಸಂಗ್ರಹಿಸಿ

ದಾಖಲಿಸಬೇಕು; ಆ ನಂತರ ಮೂರು–ನಾಲ್ಕು ಸಾರಿ ಪ್ರೂಫ್ ನೋಡಬೇಕು; ಸೂಕ್ತ ಮುಖಪುಟವನ್ನು ಆಯ್ಕೆ ಮಾಡಬೇಕು; ಎಲ್ಲಕ್ಕಿಂತ ಹೆಚ್ಚಿನದಾಗಿ ಪ್ರಕಟಣೆಯಾದ ಮೇಲೂ ಇರಬಹುದಾದ ತಪ್ಪುಗಳಿಗೆ ತಲೆ ಕೊಡಬೇಕು! ಅಪಾರ ತಾಳ್ಮೆ, ಶ್ರದ್ಧೆ, ಹಲವರ ಸಹಕಾರ ಇಲ್ಲದೆ ಹೋದರೆ ಈ ಕೆಲಸವನ್ನು ಮಾಡಲಾಗುವುದಿಲ್ಲ.

ಈ ಸಾಹಸದಲ್ಲಿ ಕೈ ಜೋಡಿಸಿದ ಹಮೀದಾ ಬಾನು ಅಥಣಿ, ಡಾ. ಸುಕನ್ಯಾ ಹಾವನೂರ, ಡಾ. ಭಾಗ್ಯಶ್ರೀ ದೊಡಮನಿ, ಶಿವಮ್ಮ. ಎ, ಡಾ. ಸುರೇಖಾ ರಾಠೋಡ, ಡಾ. ರೇಣುಕಾ ಮಂದ್ರೂಪ, ಡಾ. ಶೈಲಶ್ರೀ ಅಹಿರಸಂಗ್, ಮಂಜುಳಾ ದೇವಪ್ಪ, ಭುವನೇಶ್ವರಿ ಕಾಂಬ್ಳೆ, ರಜಿಯಾ ನದಾಫ್, ಶಶಿಕಲಾ ರಾಠೋಡ ಮತ್ತು ಬಹಳ ಮುಖ್ಯವಾಗಿ ಕೊಟ್ಟ ವರದಿಯನ್ನು ಚೆಂದದ ಪುಸ್ತಕವಾಗಿ ಪ್ರಕಟಿಸುತ್ತಿರುವ ಆತ್ಮೀಯ ಗೆಳತಿ ಡಾ. ಎಚ್. ಎಸ್. ಅನುಪಮಾ ಅವರ ಶ್ರಮ, ಸಹಕಾರ ಮತ್ತು ಇನ್ನು ಎಷ್ಟೆಷ್ಟೋ ಜನರ ಹಾರೈಕೆಯಿಂದಾಗಿ ಈ ಪುಸ್ತಕ ನಿಮ್ಮ ಮುಂದಿದೆ. ಎಲ್ಲಕ್ಕಿಂತ ಮಿಗಿಲಾಗಿ, 'ನಾವ್ ಬಿಜಾಪುರ್ ಮಂದಿ ಮಾಡಿದ್ರ ಗೋಲ್ ಗುಂಬಜ್, ಇಲ್ಲಂದ್ರ ಬಾರಾ ಕಮಾನ' ಎಂದ ವಿಜಯಪುರದ ಒಕ್ಕೂಟದ ಗೆಳತಿಯರನ್ನು ಮರೆಯುವಂತಿಲ್ಲ. ಅವರು ಗೋಲ್ ಗುಂಬಜ್‌ನಷ್ಟೇ, ಅಪೂರ್ಣವಾಗಿದ್ದರೂ ಭವ್ಯವಾಗಿ ಸುಂದರವಾಗಿರುವ ಬಾರಾ ಕಮಾನಿನಷ್ಟೇ ಚಂದದ ಸಮಾವೇಶ ನಡೆಸಿ ತೋರಿಸಿಕೊಟ್ಟಿದ್ದಾರೆ. ಅವರೆಲ್ಲರ ಚೈತನ್ಯ ಈ ಪುಸ್ತಕದ ಹಿಂದಿದೆ. ಸಂಪಾದಕರು ಇಲ್ಲಿ ನೆಪ ಮಾತ್ರ. ಸರ್ವರಿಗು ಶರಣು..

**ದು. ಸರಸ್ವತಿ**



# ವಿಜಯಪುರ ನಾಡಿನಲ್ಲಿ ಸಂಭ್ರಮದ ಮಹಿಳಾ ದಿನಾಚರಣೆ

**ಡಾ. ಸುರೇಖಾ ರಾಠೋಡ್**

ಮಹಿಳೆಯರೆಲ್ಲರೂ ಸೋದರಿತ್ವದ ನೆಲೆಯಲ್ಲಿ ಭಿನ್ನತೆಗಳನ್ನಿಟ್ಟುಕೊಂಡೇ ಒಗ್ಗೂಡಿ ಮಹಿಳೆಯರ ಮೇಲೆ ಜಾತಿ, ವರ್ಗ, ಕೋಮು, ಅಭಿವೃದ್ಧಿ, ದೇಶ, ಗಡಿ, ಸಿದ್ಧಾಂತ ಇತ್ಯಾದಿ ಹೆಸರಿನಲ್ಲಿ ನಡೆಯುವ ಹಿಂಸೆ, ದೌರ್ಜನ್ಯಗಳನ್ನು ವಿರೋಧಿಸುವ/ತಡೆಯುವ ಕೆಲಸವನ್ನು ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ಸಮಾನ ಮನಸ್ಕ ಮಹಿಳಾ ಸಂಘಟನೆಗಳು ಹಾಗೂ ಮಹಿಳಾ, ಮಾನವ ಹಕ್ಕುಗಳ ಬಗ್ಗೆ ಕಾಳಜಿ ಇರುವ ಪ್ರಗತಿಪರ ಸಂಘಟನೆಗಳು ಒಟ್ಟು ಸೇರಿ ರಾಜ್ಯಮಟ್ಟದಲ್ಲಿ ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವನ್ನು ರಚಿಸಿಕೊಂಡು, ಕಳೆದ ಮೂರು ವರ್ಷಗಳಿಂದ ಮಾರ್ಚ್ 8 – ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಯಶಸ್ವಿಯಾಗಿ ಆಚರಿಸುತ್ತಾ ಬಂದಿವೆ.

ಈ ಹಿಂದೆ ಮಂಗಳೂರು, ಮೈಸೂರು ಮತ್ತು ಬೆಂಗಳೂರಿನಲ್ಲಿ ಆಚರಿಸಿದಂತೆ ಮಹಿಳಾ ದಿನಾಚರಣೆಯನ್ನು ಬರಗಾಲಕ್ಕೆ, ಸಮೃದ್ಧ ಪರಂಪರೆಗೆ ಹೆಸರುವಾಸಿಯಾದ ವಿಜಯಪುರ ಜಿಲ್ಲೆಯಲ್ಲಿ ನಡೆಸಲು ತೀರ್ಮಾನಿಸಲಾಯಿತು. ಮೊದಲ ವರ್ಷ ಮಂಗಳೂರಿನಲ್ಲಿ ನಡೆದ ಮಹಿಳಾ ದಿನಾಚರಣೆಗೆ ರಾಜಸ್ಥಾನದ ಭಾಂವ್ರಿ ದೇವಿಯವರು ವಿಶೇಷ ಆಹ್ವಾನಿತರಾಗಿದ್ದರು. ಎರಡನೇ ವರ್ಷ ಮೈಸೂರಿನಲ್ಲಿ ನಡೆದ ಮಹಿಳಾ ದಿನಾಚರಣೆಗೆ ಮಣಿಪುರದ ಇಮಾ ನಾನ್ಬಿ, ಚಿತ್ರಾ ಅಹೆಂತಮ್, ರೇಣು

**ಗಲ್ಲಿಗೇರಿಸಬೇಕಿರುವುದು ಅತ್ಯಾಚಾರಿಯನ್ನಲ್ಲ ಹೆಣ್ಣನ್ನು ಭೋಗವಸ್ತುವಾಗಿ ಕಾಣುವಮನಸ್ಥಿತಿಯನ್ನು**

ತಕೆಲೆಂಬಂ ಅವರುಗಳು ವಿಶೇಷ ಆಹ್ವಾನಿತರಾಗಿದ್ದರು. ನಂತರ 2015ರಲ್ಲಿ ಬೆಂಗಳೂರಿನಲ್ಲಿ ನಡೆದ ಮಹಿಳಾ ದಿನಾಚರಣೆಗೆ ಭೂಪಾಲಿನ ರಶೀದಾ ಬಾನು ಮತ್ತು ಚಂಪಾದೇವಿ ಶುಕ್ಲಾ ಅವರು ವಿಶೇಷ ಆಹ್ವಾನಿತರಾಗಿ ಬಂದಿದ್ದರು. 2016ರ ಮಹಿಳಾ ದಿನಾಚರಣೆಯನ್ನು ವಿಜಯಪುರದಲ್ಲಿ ಆಚರಿಸುವ ಉದ್ದೇಶದಿಂದ ವಿಜಯಪುರದ ಮಹಿಳಾ ಸಂಘಟನೆಗಳು ಮತ್ತು ಸಮಾನಮನಸ್ಕ ಸಂಘಟನೆಗಳ ಸಭೆಯನ್ನು ದಿನಾಂಕ 27/12/2015ರಂದು 4 ಗಂಟೆಗೆ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಸಿಟಿ ಕ್ಯಾಂಪಸ್ ಆವರಣದಲ್ಲಿರುವ ಅಂಬೇಡ್ಕರ್ ಭವನದಲ್ಲಿ ಕರೆಯಲಾಯಿತು. ಆ ಸಭೆಯಲ್ಲಿ ಈ ಸಲದ ಮುಖ್ಯ ವಿಷಯ ಏನಾಗಿರಬೇಕು? ಕಾರ್ಯಕ್ರಮದ ಸ್ವರೂಪ ಹೇಗಿರಬೇಕು? ಎಷ್ಟು ದಿನಗಳ ಕಾಲ, ಎಲ್ಲಿ ಮಾಡಬೇಕು? ಒಳಗೊಳ್ಳಬೇಕಾದ ಸಂಘಟನೆಗಳು, ಕರೆಯಬೇಕಾದ ಸಂಪನ್ಮೂಲ ವ್ಯಕ್ತಿಗಳು ಮುಂತಾದ ವಿಷಯಗಳ ಕುರಿತು ಚರ್ಚೆ ಮಾಡಲಾಯಿತು. ಈ ಸಲದ ಮಹಿಳಾ ದಿನಾಚರಣೆಯನ್ನು ಚಾಂದ್ ಬೀಬಿ ಮತ್ತು ಅಕ್ಕಮಹಾದೇವಿಯರ ನೆನಪಿಗೆ ಅರ್ಪಿಸಬೇಕೆಂದು ತೀರ್ಮಾನಿಸಲಾಯಿತು.

ಕಳೆದ ಮೂರು ವರ್ಷಗಳಿಂದ 7ನೇ ತಾರೀಖು ವಿಚಾರ ಸಂಕಿರಣ, ಅದೇ ದಿನ ಸಂಜೆ 'ವಿಮೆನ್ ಇನ್ ಬ್ಲ್ಯಾಕ್' ಕಾರ್ಯಕ್ರಮ ಹಾಗು 8ನೇ ತಾರೀಖು ಮೆರವಣಿಗೆ ಮತ್ತು ಸಾರ್ವಜನಿಕ ಸಭೆಯನ್ನು ಆಯೋಜಿಸಲಾಗುತ್ತಿತ್ತು. ಈ ಸಲ 7ನೇ ತಾರೀಖು ಶಿವರಾತ್ರಿ ಹಬ್ಬ ಬಂದಿರುವುದರಿಂದ 8ನೇ ಹಾಗೂ 9ನೇ ತಾರೀಖು ಆಚರಿಸಬೇಕೆಂದು, ಹಿಂದೆ ನಡೆಸಿರುವ ರೀತಿಯಲ್ಲಿಯೇ ಕಾರ್ಯಕ್ರಮ ಮಾಡಬಹುದೆಂದು ತೀರ್ಮಾನಿಸಲಾಯಿತು. 8ನೇ ತಾರೀಖಿನಂದು ಆಯೋಜಿಸಲಾಗುವ ವಿಚಾರ ಸಂಕಿರಣದಲ್ಲಿ, ರೈತರ ಆತ್ಮಹತ್ಯೆಯ ಹಿನ್ನೆಲೆಯಲ್ಲಿ ಕೃಷಿ ಬಿಕ್ಕಟ್ಟು ಹಾಗೂ ಮಹಿಳೆ, ವಿಧವೆಯರು ಮತ್ತು ಒಂಟಿ ಮಹಿಳೆಯರ ಸಮಸ್ಯೆಗಳು, ಬಾಲ್ಯವಿವಾಹ ಮತ್ತು ಮಕ್ಕಳ ಮೇಲಿನ ಲೈಂಗಿಕ ಹಿಂಸೆ, ದೇವದಾಸಿಯರು, ವೇಶ್ಯಾವೃತ್ತಿಯಲ್ಲಿರುವ ಮಹಿಳೆಯರು ಮತ್ತು ಮಾನವ ಸಾಗಣೆ, ಕೌಟುಂಬಿಕ ದೌರ್ಜನ್ಯ, ಮಹಿಳಾ ರಾಜಕೀಯ ಪ್ರಾತಿನಿಧ್ಯ ಈ ವಿಷಯಗಳ ಕುರಿತು ವಿಷಯ ಮಂಡನಾಕಾರರನ್ನು ಕರೆಯಿಸಿ ಮಾತನಾಡಿಸಬೇಕೆಂದು ಸಭೆಯಲ್ಲಿ ನಿರ್ಧರಿಸಲಾಯಿತು. ಮುಖ್ಯ ಭಾಷಣಕಾರರಾಗಿ ದೆಹಲಿಯ ಜೆಎನ್ಯು ನಿವೃತ್ತ ಪ್ರಾಧ್ಯಾಪಕರಾದ ಶ್ರೀಮತಿ ಉಮಾ ಚಕ್ರವರ್ತಿಯವರನ್ನು ಕರೆಯಲು ತೀರ್ಮಾನಿಸಲಾಯಿತು. ಹಾಗೆಯೇ ವಿಚಾರ ಸಂಕಿರಣವನ್ನು ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಮಾಡಬೇಕೆಂದು ತೀರ್ಮಾನಿಸಲಾಯಿತು.

8ನೇ ತಾರೀಖಿನ ಕಾರ್ಯಕ್ರಮವನ್ನು ಕಂದಗಲ್ ಹಣಮಂತರಾಯ ರಂಗ ಮಂದಿರದಲ್ಲಿ, ಮತ್ತೆ ಅದೇ ದಿನ ಸಂಜೆ 'ವಿಮೆನ್ ಇನ್ ಬ್ಲ್ಯಾಕ್' ಕಾರ್ಯಕ್ರಮವನ್ನು ಶಾಸ್ತ್ರಿ ಮಾರ್ಕೆಟ್‌ನಲ್ಲಿ ಮಾಡಲು ನಿರ್ಧರಿಸಲಾಯಿತು. 9ನೇ ತಾರೀಖಿನಂದು ಮೆರವಣಿಗೆ ಮತ್ತು ಸಾರ್ವಜನಿಕ ಸಭೆ ನಡೆಸಲು ತೀರ್ಮಾನಿಸಲಾಯಿತು.



ಮೆರವಣಿಗೆಯನ್ನು ಶಿವಾಜಿ ಸರ್ಕಲ್‌ನಿಂದ ದರ್ಬಾರ್ ಶಾಲೆಯ ಮೈದಾನದ ವರೆಗೂ ಆಯೋಜಿಸಿ, ಸಾರ್ವಜನಿಕ ಸಭೆಯನ್ನು ದರ್ಬಾರ್ ಸ್ಕೂಲಿನ ಮೈದಾನದಲ್ಲಿ ನಡೆಸಲು ತೀರ್ಮಾನಿಸಲಾಯಿತು. ಸಾರ್ವಜನಿಕ ಸಭೆಗೆ ಅತಿಥಿಗಳಾಗಿ 'ನರ್ಮದಾ ಬಚಾವೋ' ಚಳುವಳಿ ಹೋರಾಟಗಾರ್ತಿಯಾದ ಮೇಧಾ ಪಾಟ್ಕರ್ ಅವರನ್ನು ಕರೆಯಿಸುವುದು ಎಂದು ತೀರ್ಮಾನಿಸಲಾಯಿತು.

ಎರಡು ದಿನಗಳ ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ, ಅಚ್ಚುಕಟ್ಟಾಗಿ ಮಾಡಬೇಕಾಗಿದ್ದರಿಂದ ಸಮಿತಿಗಳನ್ನು ರಚಿಸಿಕೊಳ್ಳಲಾಯಿತು. ಸಂಘಟನಾ ಸಮಿತಿ, ಪ್ರಚಾರ ಸಮಿತಿ, ವಸತಿ ಸಮಿತಿ, ಹಣಕಾಸು ಸಮಿತಿ, ಊಟದ ಸಮಿತಿ, ಆತಿಥ್ಯದ ಸಮಿತಿ ಮತ್ತು ವಿಚಾರ ಸಂಕಿರಣದ ಸಮಿತಿಗಳನ್ನು ರಚಿಸಿ ಕೆಲಸವನ್ನು ಆರಂಭಿಸಲಾಯಿತು. ಮೊದಲನೆಯ, ಎರಡನೆಯ ಮತ್ತು ಮೂರನೆಯ ಸಿದ್ಧತಾ ಸಭೆಗಳಲ್ಲಿ ಪ್ರತಿಯೊಂದು ಸಮಿತಿಗಳಲ್ಲಿ ಎಷ್ಟು ಜನ ಇರಬೇಕು, ಅವರು ಮಾಡಬೇಕಾದ ಕೆಲಸಗಳೇನು? ಕಾರ್ಯಕ್ರಮವನ್ನು ಹೇಗೆ ಅಚ್ಚುಕಟ್ಟಾಗಿ ನಿರ್ವಹಿಸಬೇಕು? ಅದಕ್ಕಾಗಿ ಯಾವ ರೀತಿಯಲ್ಲಿ ಸಿದ್ಧರಾಗಬೇಕು? ಇನ್ನೂ ಒಳಗೊಳ್ಳಬೇಕಾದ ಸಂಘಟನೆಗಳಾವುವು? ಎಂಬ ಬಗ್ಗೆ ವಿವರವಾಗಿ ಚರ್ಚಿಸಿ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

ಒಕ್ಕೂಟದ ಹೆಸರಿನಲ್ಲಿ ಚೈತನ್ಯ ಮಹಿಳಾ ಕೋ–ಆಪರೇಟಿವ್ ಬ್ಯಾಂಕಿನಲ್ಲಿ ಖಾತೆ ತೆರೆಯಲಾಯಿತು. ಕಳೆದ ವರ್ಷ ಹಣಸಂಗ್ರಹಣೆಯ ಉದ್ದೇಶದಿಂದ ಒಕ್ಕೂಟದ ಸಹಭಾಗಿಗಳಾಗಿರುವ ಗಾರ್ಮೆಂಟ್ ಅಂಡ್ ಟೈಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ ನಿಂದ ಕರವಸ್ತ್ರಗಳನ್ನು ಹೊಲೆಸಿ ಮಾರಾಟ ಮಾಡಲಾಗಿತ್ತು. ಈ ಸಲವೂ ಅದನ್ನು ಮಾಡಬಹುದೆಂದು ನಾಲ್ಕನೆಯ ಸಿದ್ಧತಾ ಸಭೆಯಲ್ಲಿ ತೀರ್ಮಾನಿಸಲಾಯಿತು, 530 ಮೀಟರ್ ಬಟ್ಟೆಯನ್ನು ಚಡಚಣದಿಂದ ರೂ.20,075 ಕೊಟ್ಟು ಖರೀದಿಸಲಾಯಿತು. ಬಟ್ಟೆಯನ್ನು ಕರವಸ್ತ್ರದ ಅಳತೆಗೆ ಸಬಲ ಸಂಸ್ಥೆಯವರು ತಮ್ಮ ಖರ್ಚಿನಲ್ಲಿ ಕತ್ತರಿಸಿಕೊಟ್ಟರು. ಕರವಸ್ತ್ರವನ್ನು ಹೊಲಿಯುವ ಕೆಲಸವನ್ನು ದಲಿತ ಜನ ಸೇನೆಯ ಮಹಿಳಾ ಘಟಕದ ಸದಸ್ಯರು ಅಚ್ಚುಕಟ್ಟಾಗಿ ನಿರ್ವಹಿಸಿದರು. ಒಟ್ಟು 5000 ಸಾವಿರ ಕರವಸ್ತ್ರಗಳನ್ನು ತಲಾ 25 ರೂ.ಗಳಂತೆ ಮಾರಾಟ ಮಾಡಲಾಯಿತು. ಹಾಗೆಯೇ ಹಣ ಸಂಗ್ರಹಣೆ ಮಾಡಲು 25 ಹಾಳೆಗಳಿರುವ 100 ರಸೀದಿ ಪುಸ್ತಕವನ್ನು, ಖರ್ಚನ್ನು ತೋರಿಸಲು ಎರಡು ವೋಚರ್‌ಗಳನ್ನು ಪ್ರಿಂಟ್ ಮಾಡಿಸಲಾಯಿತು. ಜಮಾ–ಖರ್ಚಿನ ವಿವರವನ್ನು ದಾಖಲಿಸುವ ಜವಾಬ್ದಾರಿಯನ್ನು ಹಣಕಾಸಿನ ಸಮಿತಿಯವರು ವಹಿಸಿಕೊಂಡರು.

ಜನರನ್ನು ಸಂಘಟಿಸಲು ಒಕ್ಕೂಟದ ಉದ್ದೇಶ, ಸಮಾವೇಶಕ್ಕೆ ಆಯ್ಕೆ ಮಾಡಲಾದ ವಿಷಯಗಳು, ಕಾರ್ಯಕ್ರಮಗಳ ವಿವರ, ಬೇಡಿಕೆಗಳು ಮತ್ತು ಸಂಪರ್ಕ ದೂರವಾಣಿ ಸಂಖ್ಯೆಗಳನ್ನು ಒಳಗೊಂಡ ಕರಪತ್ರವನ್ನು ಸಭೆಗಳಲ್ಲಿ ಚರ್ಚಿಸಿ, ಪ್ರಕಟಿಸಲಾಯಿತು. ನಂತರ ತಂಡಗಳನ್ನು ಮಾಡಿಕೊಂಡು ವಿವಿಧ ಶಾಲೆ, ಕಾಲೇಜು,

**ಗಂಡು ಮೇಲಲ್ಲ ಹೆಣ್ಣು ಕೀಳಲ್ಲ ಮೇಲು ಕೀಳು ಇರುವಲ್ಲಿ ನೆಮ್ಮದಿಯ ಬದುಕು ಸಾಧ್ಯವಿಲ್ಲ.**

ಸಾರ್ವಜನಿಕ ಸಂಸ್ಥೆಗಳು ಮತ್ತು ಸ್ಥಳಗಳಿಗೆ ಹೋಗಿ ಕಾರ್ಯಕ್ರಮದ ಉದ್ದೇಶವನ್ನು ತಿಳಿಸಿ ಕರಪತ್ರವನ್ನು ಹಂಚಿ ಜನರನ್ನು ಕಾರ್ಯಕ್ರಮಕ್ಕೆ ಬರಲು ಆಹ್ವಾನಿಸಲಾಯಿತು. ಜೊತೆಗೆ ಜನರಿಂದ ಕಾರ್ಯಕ್ರಮಕ್ಕಾಗಿ ರೂ.5, ರೂ.10, ರೂ.20, ರೂ.50 ಮತ್ತು ರೂ.100ರಂತೆ ದೇಣಿಗೆಯನ್ನು ಸಂಗ್ರಹಿಸಲಾಯಿತು.


ರಾಜ್ಯಾದ್ಯಂತ 5000 ಸಾವಿರ ಮಹಿಳೆಯರನ್ನು ಸೇರಿಸಿ, ಎರಡು ದಿನಗಳ ಊಟ, ವಸತಿ, ಕುರ್ಚಿ, ಪೆಂಡಾಲ್, ಕಾರ್ಯಕ್ರಮ ನಡೆಸಲು ಸ್ಥಳ, ಅತಿಥಿಗಳ ಪ್ರಯಾಣ ಖರ್ಚು, ಕರಪತ್ರ, ರಸೀದಿ ಪುಸ್ತಕ ಇತ್ಯಾದಿ ಪ್ರಕಟಣೆ ಇತ್ಯಾದಿಯನ್ನು ವ್ಯವಸ್ಥೆ ಮಾಡಲು ಹಣದ ಅವಶ್ಯಕತೆ ಇದೆ. ಹಣವನ್ನು ಸಾರ್ವಜನಿಕರಿಂದ, ಸಮಾನ ಮನಸ್ಕ ಸಹೃದಯರು ಮತ್ತು ಸಂಘ-ಸಂಸ್ಥೆಗಳಿಂದ ಮತ್ತು ಒಕ್ಕೂಟದ ಸಹಭಾಗಿ ಸಂಘಟನೆಗಳಿಂದ ಮಾತ್ರ ಸಂಗ್ರಹಿಸಲು ತೀರ್ಮಾನಿಸಲಾಯಿತು. ವಿಜಯಪುರ ಒಕ್ಕೂಟದಲ್ಲಿ ಭಾಗಿಯಾಗಿರುವ ಸಂಘಟನೆಗಳು ಸಾಧ್ಯವಾದವರು ತಲಾ ರೂ.5000ವನ್ನು, ಆಗದವರು ರೂ1000ವನ್ನಾದರು ನೀಡಬೇಕೆಂದು ಕೋರಲಾಯಿತು. ಬೆಂಗಳೂರು, ಮೈಸೂರು ಮತ್ತು ಮಂಗಳೂರಿನ ಒಕ್ಕೂಟದವರು ದೇಣಿಗೆ ನೀಡಿದರು. ಪೆಂಡಾಲ್ ಹಾಗೂ ಚೇರಿನ ವ್ಯವಸ್ಥೆ, ವಸತಿ ವ್ಯವಸ್ಥೆ, ಹಣಕಾಸಿನ ವ್ಯವಸ್ಥೆ, ವಿಚಾರ ಸಂಕಿರಣದ ವ್ಯವಸ್ಥೆ, ಜನರನ್ನು ಸಂಘಟಿಸುವುದು, ಪ್ಲಕಾರ್ಡುಗಳ, ಬ್ಯಾನರುಗಳ ತಯಾರಿ, ಪ್ರಚಾರ, ನೀರಿನ ವ್ಯವಸ್ಥೆ, ಸ್ಟೇಜ್ ನಿರ್ವಹಣೆ, ಅತಿಥಿಗಳನ್ನು ನೋಡಿಕೊಳ್ಳುವುದು, ಹಣ ಸಂಗ್ರಹಣೆ ಇತ್ಯಾದಿ ಜವಾಬ್ದಾರಿಗಳನ್ನು ಸ್ಥಳೀಯ ಮಹಿಳಾ ಸಂಘಟನೆಗಳು ಮತ್ತು ಪ್ರಗತಿಪರ ಸಮಾನ ಮನಸ್ಕ ಸಂಘಟನೆಗಳು ವಹಿಸಿಕೊಂಡವು. ಶಿಸ್ತುಬದ್ಧ ವ್ಯವಸ್ಥಿತ ಕೆಲಸ ನಡೆಯಲು ಕೆಳಕಂಡ ಸಮಿತಿಗಳನ್ನು ರಚಿಸಿ ಜವಾಬ್ದಾರಿ ನೀಡಲಾಯಿತು.

ರ್‍ಯಾಲಿ ಸಮಿತಿ, ಸ್ಟೇಜ್ ಸಮಿತಿ, ಊಟದ ಸಮಿತಿ, ವಸತಿ ಸಮಿತಿ, ಹಣಕಾಸಿನ ಸಮಿತಿಗಳನ್ನು ಮಾಡಿಕೊಂಡು ಆರ್. ಸುನಂದಮ್ಮ, ದು. ಸರಸ್ವತಿ, ಅಪ್ಸರಾ ಬೇಗಂ ಚಪ್ಪರ್‌ಬಂದ್, ಮಲ್ಲಮ್ಮ ಯಾಳವಾರ, ಪ್ರಭುಗೌಡ ಪಾಟೀಲ್, ಶಿವಬಾಳಮ್ಮ, ಶೈಲಾ ಕಟ್ಟಿ, ಯಲ್ಲಮ್ಮ ಇಳ್‌ಕಲ್, ಲಕ್ಷ್ಮಿ, ಸುನಂದ ಹಾದಿಮನಿ, ಲಲಿತ ಬಿಜ್ಜರಗಿ, ಲಕ್ಷ್ಮಿ ದೇಸಾಯಿ, ಕಲಾ ಉಮ್ರಾಣಿ, ಹಫೀಜಾ ಇನಾಂದಾರ್, ಮೀನಾಕ್ಷಿ ಕೋರಿ, ವಿದ್ಯಾವತಿ ಅಂಕಲಗಿ, ಶೈಲಶ್ರೀ ಅಹಿರಸಂಗ್, ಉಜ್ವಲಾ ಎ. ಎಸ್, ರೇಣುಕಾ ಮಂದ್ರೂಪ್, ಶೈಲಾ ಕಟ್ಟಿ, ಮೀನಾಕ್ಷಿ ಉಟಗಿ, ಮಹಿಳಾ ವಿವಿಯ ಹಲವು ವಿದ್ಯಾರ್ಥಿ-ಬೋಧಕ ಸಿಬ್ಬಂದಿಗಳು ಜವಾಬ್ದಾರಿ ಹಂಚಿಕೊಂಡರು.

ಹೀಗೆ ಜವಾಬ್ದಾರಿಯನ್ನು ಹಂಚಿಕೊಂಡ ವಿಜಾಪುರದ ಸೋದರಿಯರು ಅವನ್ನೆಲ್ಲ ಯಶಸ್ವಿಯಾಗಿ ನಿರ್ವಹಿಸಿದ್ದು ಮಾರ್ಚ 8, 9ರ ಕಾರ್ಯಕ್ರಮಗಳಲ್ಲಿ ಎದ್ದು ಕಾಣುತ್ತಿತ್ತು. ಮಾರ್ಚ್ 8ನೇ ತಾರೀಖಿನಂದು ಕಂದಗಲ್ ಹಣಮಂತರಾಯ ರಂಗಮಂದಿರದಲ್ಲಿ ನಡೆದ ವಿಚಾರಸಂಕಿರಣದಲ್ಲಿ ಸಾವಿರಕ್ಕೂ ಹೆಚ್ಚಿನ ಜನ ಭಾಗವಹಿಸಿದರು. ಸಂಜೆ ಶಾಸ್ತ್ರಿ ಮಾರ್ಕೆಟ್‌ನಲ್ಲಿ 'ಕಪ್ಪು ಉಡುಪಿನಲ್ಲಿ ಮಹಿಳೆಯರು' ಎಂಬ ಮೌನ ಪ್ರತಿಭಟನೆಯಲ್ಲಿ ನೂರಾರು ಮಹಿಳೆಯರು ಭಾಗವಹಿಸಿ ಕೈಲಿ ಮೊಂಬತ್ತಿ ಹಿಡಿದು ಒಂದು ತಾಸು ಮೌನವಾಗಿ ನಿಂತದ್ದು ಅವಿಸ್ಮರಣೀಯ. ಮಾರನೆಯ ದಿನ 9ನೇ ತಾರೀಖಿನಂದು ಸಾವಿರಾರು ಮಹಿಳೆಯರು ಶಿವಾಜಿ ಸರ್ಕಲ್‌ನಿಂದ ದರ್ಬಾರ್ ಶಾಲೆಯ ಮೈದಾನದವರೆಗೂ ಮೇಧಾ ಪಾಟ್ಕರ್ ಅವರ ಮುಂದಾಳತ್ವದಲ್ಲಿ ಘೋಷಣೆಗಳನ್ನು ಮೊಳಗಿಸುತ್ತಾ ಮೆರವಣಿಗೆಯಲ್ಲಿ ಸಾಗಿದ್ದು ಹಾಗೂ ದರ್ಬಾರ್ ಶಾಲೆಯ ಮೈದಾನದಲ್ಲಿ ಮೇಧಾ ಪಾಟ್ಕರ್ ಅವರ ಮನಮುಟ್ಟುವ ಭಾಷಣ, ಸಹಭಾಗಿ ಸಂಘಟನೆಗಳ ಪ್ರತಿನಿಧಿಗಳ ಆಶಯದ ಮಾತುಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ವಿಜಯಪುರದ ಇತಿಹಾಸದಲ್ಲಿ ಒಂದು ಮೈಲಿಗಲ್ಲಾಯಿತು. ಆ ಮೈಲಿಗಲ್ಲಿಗೆ ಕಾರಣರಾದವರು ಉತ್ಸಾಹ, ಸಂಭ್ರಮ ಮತ್ತು ಬದ್ಧತೆಯಿಂದ ದುಡಿದ ವಿಜಯಪುರದ ಸೋದರಿಯರು. ರಾಜ್ಯದೆಲ್ಲೆಡೆಯಿಂದ ಆಗಮಿಸಿದ ಕರ್ನಾಟಕದ ಸೋದರಿಯರೆಲ್ಲರೂ ವಿಜಯಪುರದ ಸೋದರಿಯರೊಂದಿಗೆ ಕೈಗೂಡಿಸಿ, ಸಕ್ರಿಯವಾಗಿ, ಸಂಭ್ರಮದಿಂದ ಎರಡು ದಿನಗಳ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು ಅಚ್ಚಳಿಯದ ನೆನಪಷ್ಟೇ ಅಲ್ಲ, ಸೋದರಿಯರ ಐಕ್ಯತೆಗೆ ಸಾಕ್ಷಿಯಾಯಿತು.

**ಎಲ್ಲ ಪುರುಷರೂ ಅತ್ಯಾಚಾರಿಗಳಲ್ಲ ಅತ್ಯಾಚಾರಗೈಯ್ಯುವ ಯಾರೂ ಮನುಷ್ಯರಲ್ಲ.**

# ಕರಪತ್ರ



## ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ

**ಅಕ್ಕಮಹಾದೇವಿ ಮತ್ತು ಚಾಂದ್ ಬೀಬೀ ನೆನಪಿನ**
**ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ 2016 – ವಿಜಯಪುರ**

**ದಮನಿತ ನೊಂದ ಮಹಿಳೆಯರ ಜೊತೆಗೂಡಿ ನಡೆಯೋಣ**
**ವಿಷಮಯ ಕೃಷಿ ಕೊನೆಯಾಗಲಿ**
**ಮಹಿಳೆಯರ, ಮಕ್ಕಳ ಸಾಗಣೆ ಮತ್ತು ಅವರ ಮೇಲಿನ ದೌರ್ಜನ್ಯ ನಿಲ್ಲಲಿ**



**ಮೊಲೆ ಮುಡಿ ಬಂದಡೆ ಹೆಣ್ಣೆಂಬರು**
**ಮೀಸೆಕಾಸೆ ಬಂದಡೆ ಗಂಡೆಂಬರು**
**ಈ ಉಭಯದ ಜ್ಞಾನ**
**ಹೆಣ್ಣೊ ಗಂಡೊ ನಾಸ್ತಿನಾಥ?**
**– ಗೊಗ್ಗವ್ವೆ**

ಸೋದರಿತ್ವದ ಶಕ್ತಿಯೊಂದಿಗೆ ಮಹಿಳೆಯರ ಮೇಲಾಗುವ ಹಿಂಸೆ, ದೌರ್ಜನ್ಯಗಳಿಗೆ ಬಲವಾದ ಪ್ರತಿರೋಧ ಒಡ್ಡಲು ಹಾಗೂ ಆರೋಗ್ಯಕರವಾದ ಸಮಸಮಾಜವನ್ನು ಕಟ್ಟುವ ಆಶಯದೊಂದಿಗೆ "ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ"ವನ್ನು ರಚಿಸಲಾಗಿದೆ. ಸಮಾನತೆ, ಸಾಮಾಜಿಕ ನ್ಯಾಯ, ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳಲ್ಲಿ ನಂಬಿಕೆ ಇರುವ ಸಮಾನ ಮನಸ್ಕರು ಸೇರಿ ಈ ಒಕ್ಕೂಟವನ್ನು ರಚಿಸಿದ್ದೇವೆ. ಒಕ್ಕೂಟವು ಕಳೆದ ಮೂರು ವರ್ಷಗಳಿಂದ ಸಾವಿರಾರು ಮಹಿಳೆಯರನ್ನು ಸೇರಿಸಿ ಮಾರ್ಚ್ 8ರ ಮಹಿಳಾ ದಿನಾಚರಣೆಯನ್ನು ಮಹಿಳಾ ಚೈತನ್ಯದ ದಿನವನ್ನಾಗಿ ರಾಜ್ಯಮಟ್ಟದಲ್ಲಿ ಆಚರಿಸುತ್ತ ಬಂದಿದೆ.

ಜೋಳ, ದ್ರಾಕ್ಷಿ, ದಾಳಿಂಬೆ ಮತ್ತು ಹತ್ತಿಗೆ ಹೆಸರುವಾಸಿಯಾಗಿರುವ; ಪಂಚ ನದಿಗಳ ಬೀಡಾದ; ಪ್ರತಿ ಕಲ್ಲು ಇತಿಹಾಸವನ್ನು ಹೇಳುವ; ಮಸೀದಿಗಳು, ಬಾವಿಗಳು, ದೇವಾಲಯಗಳು, ಜೈನ ಮತ್ತು ಬೌದ್ಧ ಚೈತ್ಯಾಲಯಗಳು, ಸ್ಮಾರಕಗಳಿರುವ; ವಚನಕಾರರು ಮತ್ತು ಸೂಫಿ ಸಂತರ ನೆಲೆಯಾಗಿದ್ದ; ವಿಶ್ವ ಮಾನ್ಯತೆ ಪಡೆದ ಮೊದಲ ಪಿಸುಗುಡುವ ಗೋಳಗುಮ್ಮಟ ಇರುವ ವಿಜಯಪುರದಲ್ಲಿ ಈ ಸಲದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯು ನಡೆಯಲಿದೆ. ಸಮಾನತೆ, ವೈವಿಧ್ಯತೆ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ನಂಬುವ ವಿಜಯಪುರದ ಸೋದರಿಯರು ಒಗ್ಗೂಡಿ ರಾಜ್ಯದಾದ್ಯಂತ ಸೋದರಿಯರನ್ನು ಒಗ್ಗೂಡಿಸಿ ಸೋದರಿತ್ವದ ಜಯಭೇರಿ ಮೊಳಗಿಸಲು ಮುಂದಾಗಿದ್ದಾರೆ. ಕನ್ನಡ ನಾಡಿನ ನಾಡು–ನುಡಿ–ಸಂಸ್ಕೃತಿಗೆ ಅಪಾರವಾದ ಕೊಡುಗೆಯನ್ನು ನೀಡಿರುವ ವಿಜಯಪುರವು ಉತ್ತರ ಕರ್ನಾಟಕದ ಬಹು ಮುಖ್ಯ ಜಿಲ್ಲೆಯಾಗಿದೆ. ಶಾಂತಿ, ಸೌಹಾರ್ದತೆ ಮತ್ತು ಸಾಮರಸ್ಯಕ್ಕೆ ಹೆಸರುವಾಸಿಯಾಗಿದೆ. ಆದರೆ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ವಿಜಯಪುರದ ಸ್ಥಾನ 29ನೆಯದಾಗಿದೆ. ಮಹಿಳಾ ಸಾಕ್ಷರತೆ ಇಲ್ಲಿ ಕೇವಲ ಶೇ. 56.54 ಇದ್ದು, ಅನುಸೂಚಿತ ಮಹಿಳೆಯರ ಸಾಕ್ಷರತೆ ಶೇ. 39.52ರಷ್ಟಿದೆ. ಲಿಂಗಾನುಪಾತ 930 ರಷ್ಟಿದ್ದು, ಶಿಕ್ಷಣ, ಉದ್ಯೋಗದ ವಿಷಯದಲ್ಲಂತೂ ಜಿಲ್ಲೆಯು ಅತ್ಯಂತ ಹಿಂದುಳಿದಿದೆ.

### ವಿಷಮಯ ಕೃಷಿ ಕೊನೆಯಾಗಲಿ

ಹೈಬ್ರಿಡ್ ಮತ್ತು ಬಿಟಿ ತಳಿಗಳು, ರಾಸಾಯನಿಕ ಗೊಬ್ಬರ ಮತ್ತು ವಿಷಕಾರಿ ಕ್ರಿಮಿನಾಶಕ ಕಂಪನಿಗಳ ಜೀವವಿರೋಧಿ ಲಾಭಕೋರತನವು ಹುಟ್ಟುಹಾಕಿರುವ ಕೃಷಿ

ಬಿಕ್ಕಟ್ಟಿನಿಂದಾಗಿ ಇಡಿ ಪರಿಸರವೇ ವಿಷಮಯವಾಗುತ್ತಿದೆಯಲ್ಲದೆ ರೈತರು ಆತ್ಮಹತ್ಯೆ ಮಾಡಿಕೊಂಡು ಸಾಯುತ್ತಿದ್ದಾರೆ. ಕೃಷಿ ಕುರಿತು ತಮಗೆ ತಿಳಿದಿದ್ದ ಸಾಂಪ್ರದಾಯಕ ಜ್ಞಾನಕ್ಕೆ ಮೌಲ್ಯವನ್ನು ಹಾಗೂ ಉಳುವ ಭೂಮಿಯ ಮೇಲೆ ತಮಗಿದ್ದ ಅಲ್ಪ-ಸ್ವಲ್ಪ ಸ್ವಾಮ್ಯತೆಯನ್ನು ಕಳೆದುಕೊಂಡಿರುವ ರೈತ ಮಹಿಳೆಯರ ಪರಿಸ್ಥಿತಿಯಂತು ಅತ್ಯಂತ ದಾರುಣವಾಗಿದೆ. ಆತ್ಮಹತ್ಯೆಗಳು ಸಂಭವಿಸಿದಾಗ ದಿಕ್ಕುಕಾಣದಂತಾದರೂ ಕಣ್ಣೆದುರಿನ ಬದುಕಿನ ಹೊರೆಗೆ ಹೆಗಲು ಕೊಡುವ ಅನಿವಾರ್ಯ ಪರಿಸ್ಥಿತಿ ಅವರದಾಗಿದೆ. ವಿಷಮಯ ಕೃಷಿಯ ಬಿಕ್ಕಟ್ಟಿನಲ್ಲಿ ಸಿಲುಕಿ ನಲುಗುತ್ತಿರುವ ರೈತ ಸಮುದಾಯಕ್ಕೆ ನಿಮ್ಮೊಂದಿಗೆ ನಾವಿದ್ದೇವೆಂದು ಕೈ ಜೋಡಿಸುವುದು ನಮ್ಮ ಜವಾಬ್ದಾರಿಯಾಗಿದೆ.

## ಕಾನೂನುಬಾಹಿರ ಅಪರಾಧೀಕರಣ ಮತ್ತು ಮಹಿಳಾ ಸಾಗಣೆ ನಿಲ್ಲಲಿ

ಇಲ್ಲಿ ಆಚರಣೆಯಲ್ಲಿರುವ ದೇವದಾಸಿ ಪದ್ಧತಿ, ಅಣೆಕಟ್ಟಿನಿಂದಾದ ಸ್ಥಳಾಂತರ, ಬಡತನ, ಜಾತೀಯತೆಯಂತಹ ಕಾರಣಗಳಿಗಾಗಿ ಹೆಣ್ಣು ಮಕ್ಕಳ ಸಾಗಣೆ ಮತ್ತು ಎಚ್‌ಐವಿ/ಏಯ್ಡ್ಸ್ ಹೊಂದಿರುವವರ ಸಂಖ್ಯೆಯಲ್ಲಿ ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಗಳು ಮಿಕ್ಕೆಲ್ಲ ಜಿಲ್ಲೆಗಳಿಗಿಂತ ಮುಂದಿವೆ. ಹೆಣ್ಣುಮಕ್ಕಳು ಮತ್ತು ಮಹಿಳೆಯರನ್ನು ಮಾರಾಟದ ಸರಕಾಗಿಸಿರುವ ಜಾಗತಿಕ ಮಾರುಕಟ್ಟೆ ಆರ್ಥಿಕತೆಯ ನೇರ ಬಲಿಪಶುಗಳೆಂದರೆ ಲೈಂಗಿಕ ಕಾರ್ಯಕರ್ತೆಯರು ಮತ್ತು ದೇವದಾಸಿ ಮಹಿಳೆಯರು. ಕುಟುಂಬದ ಭದ್ರತೆಯಾಗಲಿ, ಸರ್ಕಾರದ ಭದ್ರತೆಯಾಗಲಿ ಇಲ್ಲದೆ ಕಳಂಕವನ್ನು, ಕೌಟುಂಬಿಕ ಹೊರೆಯನ್ನು ಹೊತ್ತುಕೊಂಡು ಬದುಕುವ ಪಾಡು ಈ ಮಹಿಳೆಯರದು. ಜೊತೆಗೆ ಪೊಲೀಸರು, ಗೂಂಡಾಗಳು, ಪಿಂಪ್‌ಗಳು, ಪಾರ್ಟ್‌ನರ್ ಗಳಿಂದಾಗಿ ಅಪರಾಧೀಕರಣಗೊಂಡಿರುವ ಈ ವೃತ್ತಿಯಲ್ಲಿ ಅಮಾನುಷ ಹಿಂಸೆಗೆ ಒಳಗಾಗುತ್ತಾರೆ. ಆದರೆ ಇವರ ದುಡಿಮೆಯಿಂದ ದೇಶದ ಆರ್ಥಿಕತೆಗಾಗಲಿ ಅಥವಾ ಕುಟುಂಬದ ಆರ್ಥಿಕತೆಗಾಗಲಿ ಸಿಗುವ ಲಾಭಕ್ಕೆ ಮಾತ್ರ ಯಾವ ಕಳಂಕವೂ ಇಲ್ಲ. ವಯಸ್ಸು ಕಳೆದಂತೆ ಈ ಮಹಿಳೆಯರು ತಮ್ಮ ಸೇವೆಗಾಗಿ ಪಡೆದುಕೊಳ್ಳುವುದು ಮಾರಣಾಂತಿಕ ರೋಗಗಳನ್ನು ಮತ್ತು ಯಾರ ಆಸರೆ, ಸಹಕಾರವೂ ಇಲ್ಲದ ಏಕಾಂಗಿತನವನ್ನು. ಈ ಸೋದರಿಯರ ಸಂಕಟಕ್ಕೆ ಹೆಗಲು ನೀಡುವುದು ನಮ್ಮ ಕರ್ತವ್ಯವಾಗಿದೆ.

## ಒಂಟಿ ಮಹಿಳೆಯರ ಪಾಡು ಕೊನೆಯಾಗಲಿ

ಮದುವೆ ಮತ್ತು ಕೌಟುಂಬಿಕ ಸಂಸ್ಥೆಯೊಳಗಡೆಯೇ ಬೇಜವಾಬ್ದಾರಿ ಗಂಡ ನಿಂದಾಗಿಯೋ, ಕುಡುಕ ಗಂಡನಿಂದಾಗಿಯೋ, ತೊರೆದು ಹೋದ ಗಂಡ ನಿಂದಾಗಿಯೋ, ಅಕಾಲಿಕವಾಗಿ ತೀರಿಹೋದ ಗಂಡನಿಂದಾಗಿಯೋ, ಮದುವೆ ಯಾಗದೆಯೋ ಅಪಾರವಾದ ನೋವು, ಸಂಕಟ, ಅವಮಾನಗಳನ್ನು ಅನುಭವಿಸು

ನಮ್ಮ ಉಡುಪು ನಮ್ಮ ಇಷ್ಟ ನಮ್ಮ ಬದುಕು ನಮ್ಮ ಹಕ್ಕು



ವುದರ ಜೊತೆಗೆ ಬದುಕಿನ ಬಂಡಿಯನ್ನು ಎಳೆಯುವ ಜವಾಬ್ದಾರಿಯನ್ನು ಹೊತ್ತ ಒಂಟಿ ಮಹಿಳೆಯರು ಅನೇಕರು ನಮ್ಮ ನಡುವೆ ಇದ್ದಾರೆ. ಭಾವನಾತ್ಮಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಯಾವರೀತಿಯ ಭದ್ರತೆಯೂ ಇಲ್ಲದೆ ಪರರ ಹಂಗಿನಲ್ಲಿ ಬದುಕುವ ಪರಿಸ್ಥಿತಿ ಈ ಮಹಿಳೆಯರದು. ಕುಟುಂಬಗಳಲ್ಲಿ ಪ್ರಬಲವಾಗಿ ಬೇರೂರಿರುವ ಪಿತೃಪ್ರಧಾನ ಮೌಲ್ಯಗಳಿಂದಾಗಿ ನಿರಂತರವಾಗಿ ಉಸಿರುಗಟ್ಟುವಂಥ ಪರಿಸ್ಥಿತಿಯಲ್ಲಿ ಬದುಕುತ್ತಿರುವ ಒಂಟಿ ಮಹಿಳೆಯರಿಗೆ ಸೂಕ್ತವಾದ ಆರ್ಥಿಕ, ಸಾಮಾಜಿಕ ಭದ್ರತೆ ಒದಗಿಸುವ ಹಾದಿಯಲ್ಲಿ ಜೊತೆಯಾಗುವುದು ನಮ್ಮ ಆಶಯವಾಗಿದೆ.

## ಬೇಕು ಮಕ್ಕಳಿಗೆ ಆರೋಗ್ಯಕರ ವಾತಾವರಣ

ದೈಹಿಕವಾಗಿ, ಮಾನಸಿಕವಾಗಿ ಇನ್ನೂ ಬೆಳೆಯದ ಪುಟ್ಟ ಮಕ್ಕಳಿಗೆ ಮದುವೆ ಮಾಡುವುದು ಕಾನೂನಿನ ಪ್ರಕಾರ ಅಪರಾಧವಾಗಿದೆ. ಆದರೂ ಸಹ ಎಳೆವಯಸ್ಸಿನ ಹೆಣ್ಣುಮಕ್ಕಳಿಗೆ ಮದುವೆ ಮಾಡುವುದು ಇನ್ನೂ ಚಾಲ್ತಿಯಲ್ಲಿದೆ. ಉತ್ತಮ ಆರೋಗ್ಯ ಮತ್ತು ಶಿಕ್ಷಣ ಪಡೆದುಕೊಂಡು ಉತ್ತಮ ಭವಿಷ್ಯವನ್ನು ರೂಪಿಸಿಕೊಂಡು ಸಮಾಜದ ಏಳಿಗೆಗೆ ಕಾಣಿಕೆ ನೀಡಬೇಕಾದ ಮಕ್ಕಳು ತಮ್ಮ ವಯಸ್ಸಿಗೂ ಮೀರಿದ ವೈವಾಹಿಕ ಜವಾಬ್ದಾರಿಯನ್ನು ಹೊತ್ತುಕೊಂಡು ತಮ್ಮ ಭವಿಷ್ಯವನ್ನು ಹಾಳು ಮಾಡಿಕೊಳ್ಳುವುದನ್ನು ನಾವು ತಡೆಯಬೇಕಾಗಿದೆ. ಅಲ್ಲದೆ ತಾಯ್ತನದ ಮರಣ ಸಂಖ್ಯೆ ಹೆಚ್ಚಲು ಬಾಲ್ಯ ವಿವಾಹವು ಬಹುಮುಖ್ಯ ಕಾರಣವಾಗಿದೆ. ಮಕ್ಕಳ ಉತ್ತಮ ಭವಿಷ್ಯಕ್ಕೆ ಸೂಕ್ತವಾದ ಆರೋಗ್ಯಕರ ವಾತಾವರಣ ಕಲ್ಪಿಸದಿದ್ದರೆ ಅವರ ಭವಿಷ್ಯವಷ್ಟೇ ಅಲ್ಲ ಸಮಾಜದ ಭವಿಷ್ಯಕ್ಕೂ ಸಹ ಅದು ಕಂಟಕವಾಗುತ್ತದೆ. ಅಪ್ರಾಪ್ತವಯಸ್ಸಿನ ಮಕ್ಕಳ ಮೇಲಿನ ಹಿಂಸೆ ಇಂದು ಮಾಮೂಲಿಯಾಗಿಬಿಟ್ಟಿದೆ. ಬುದ್ಧಿ ಬಲಿಯದ ಮುಗ್ಧ ಹಸುಳೆಗಳ ಮೇಲೆ ನಡೆಯುವ ಹಿಂಸೆ, ಲೈಂಗಿಕ ಕಿರುಕುಳ ಅತ್ಯಾಚಾರಗಳ ಸಂಖ್ಯೆ ಗಾಬರಿ ಹುಟ್ಟಿಸುತ್ತದೆ. ನಮ್ಮ ಭವಿಷ್ಯವಾದ ಮಕ್ಕಳ ಬೆಳವಣಿಗೆ ಮತ್ತು ಪ್ರಗತಿಗಾಗಿ ಸೂಕ್ತವಾದ ಆರೋಗ್ಯಕರವಾದ ವಾತಾವರಣವನ್ನು ರೂಪಿಸುವುದು ನಮ್ಮೆಲ್ಲರ ನೈತಿಕ ಜವಾಬ್ದಾರಿಯಾಗಿದೆ.

## ಕುಟುಂಬಗಳು ಹಿಂಸೆಯ ಕೂಪಗಳಾಗದಿರಲಿ

ಆರ್ಥಿಕವಾಗಿ, ಭಾವನಾತ್ಮಕವಾಗಿ, ಸಾಮಾಜಿಕವಾಗಿ ಭದ್ರತೆಯನ್ನು ನೀಡಬೇಕಾದ ಕುಟುಂಬವು ಮಹಿಳೆಯರು ಮತ್ತು ಹೆಣ್ಣುಮಕ್ಕಳಿಗೆ ಹಿಂಸೆಯ, ಭೀತಿಯ ಕೂಪವಾಗಿದೆ. ವರದಕ್ಷಿಣೆಗಾಗಿ ಕಿರುಕುಳ ನೀಡುವುದು, ಕೊಲೆಮಾಡುವುದು, ಹೊಡೆತ, ಬೈಗುಳ, ನಿಂದನೆಯಂತಹ ಮಹಿಳೆಯರ ಮೇಲೆ ನಡೆಯುತ್ತಿರುವ ಕೌಟುಂಬಿಕ ದೌರ್ಜನ್ಯದ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿದೆ. ಇದು ಕುಟುಂಬವೆಂಬುದು ಮಹಿಳೆಯರಿಗೆ ಹೊರ ಜಗತ್ತಿನಷ್ಟೇ ಅಪಾಯಕಾರಿಯಾಗಿದೆ

ಎಂಬುದನ್ನು ಸೂಚಿಸುತ್ತದೆ. ಸಮಾನತೆ ಮತ್ತು ಸಾಮಾಜಿಕ ನ್ಯಾಯವು ನಮ್ಮ ದೇಶದ ಸಂವಿಧಾನದ ಆಶಯವಾಗಿದೆ. ಆ ಆಶಯದಂತೆ ನಮ್ಮ ಕುಟುಂಬಗಳು ಸಹ ಸಮಾನತೆ ಮತ್ತು ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಅಳವಡಿಸಿಕೊಂಡು ಪೋಷಿಸಬೇಕಾಗಿದೆ. ತಮ್ಮ ದುಡಿಮೆ ಮತ್ತು ಸೇವೆಯ ಮೂಲಕ ಕುಟುಂಬದ/ದೇಶದ ಪ್ರಗತಿಗೆ ಕಾಣಿಕೆ ನೀಡುತ್ತಿರುವ ಮಹಿಳೆಯರಿಗೆ ಸುಭದ್ರವಾದ, ನೆಮ್ಮದಿಯಿಂದಿರುವ ನೆಲೆಯನ್ನು ಒದಗಿಸುವುದು ಸಮಾಜದ, ಸರ್ಕಾರದ ಕರ್ತವ್ಯವಾಗಿದೆ.

## ಇರಲಿ ನಮಗೂ ಅಧಿಕಾರದಲ್ಲಿ ಸಮಪಾಲು

ದೇಶದ ಪ್ರಗತಿಗೆ, ಆರ್ಥಿಕತೆಗೆ ಅಪಾರವಾದ ಸೇವೆ ಮತ್ತು ಕೊಡುಗೆ ಸಲ್ಲಿಸುತ್ತಿರುವ ಮಹಿಳೆಯರಿಗೆ ನಿರ್ಧರಿಸುವ ರಾಜಕೀಯ ಅಧಿಕಾರವನ್ನು ನೀಡುವುದು ನ್ಯಾಯ ಸಮ್ಮತವಾಗಿದೆ. ಹಾಗಾಗಿ ಮಹಿಳೆಯರಿಗೆ ಸೂಕ್ತವಾದ ರಾಜಕೀಯ ಪ್ರಾತಿನಿಧ್ಯ ಎಲ್ಲ ಹಂತಗಳಲ್ಲಿ ಸಾಮಾಜಿಕ ನ್ಯಾಯವನ್ನು ಆಧರಿಸಿ ನೀಡಬೇಕಾಗಿರುವುದು ಸರ್ಕಾರದ, ಸಮಾಜದ ಸಾಂವಿಧಾನಿಕ ಕರ್ತವ್ಯವಾಗಿದೆ. ಅಂತೆಯೇ ಎಲ್ಲ ರಾಜಕೀಯ ಪಕ್ಷಗಳು, ಸಂಘ, ಸಂಸ್ಥೆ, ಸಂಘಟನೆಗಳು ಅಧಿಕಾರದಲ್ಲಿ ಮಹಿಳೆಯರಿಗೆ ಸಮಪಾಲು ನೀಡುವ ಮೂಲಕ ಸಮಾನತೆಯನ್ನು ಪೋಷಿಸಬೇಕಾಗಿದೆ.

## ನಮ್ಮ ಹಕ್ಕೊತ್ತಾಯಗಳು

- ✓ ಜಾತಿ, ವರ್ಗ, ಮತ, ಧರ್ಮ, ಜನಾಂಗ, ಯುದ್ಧ, ಭಯೋತ್ಪಾದನೆ, ಸಿದ್ಧಾಂತ, ಅಭಿವೃದ್ಧಿ ಇತ್ಯಾದಿ ಹೆಸರಿನಲ್ಲಿ ಮಹಿಳೆಯರ ಮೇಲಾಗುವ ಹಿಂಸೆ, ದೌರ್ಜನ್ಯ, ಅತ್ಯಾಚಾರಗಳು ನಿಲ್ಲಬೇಕು. ಹಿಂಸೆ–ಪ್ರತಿಹಿಂಸೆಯ ದಾಳವಾಗಿ ಮಹಿಳೆಯರು ಬಳಕೆಯಾಗುವುದು ನಿಲ್ಲಬೇಕು.
- ✓ ಕೃಷಿಭೂಮಿಯನ್ನು ರೈತರಿಂದ ಅಭಿವೃದ್ಧಿಯ ಹೆಸರಿನಲ್ಲಿ ಬಲವಂತವಾಗಿ ಕಿತ್ತುಕೊಳ್ಳುವುದನ್ನು ತಡೆಯಬೇಕು. ಬೆಂಬಲ ಬೆಲೆ ನಿಗದಿ ಮಾಡುವ ಮೂಲಕ ರೈತರ ಬದುಕಿಗೆ ಭದ್ರತೆ ನೀಡಬೇಕು. ಕೃಷಿಯಲ್ಲಿನ ವೇತನ ತಾರತಮ್ಯ ಅಳಿಸಿ ಸಮಾನ ವೇತನ ಜಾರಿಯಾಗಬೇಕು. ಭೂಮಿ ಸ್ವಾಮ್ಯತೆಯಲ್ಲಿ ಮಹಿಳೆಯರಿಗೆ ಸಮಪಾಲು ನೀಡಬೇಕು. ಸಾವಯವ ಕೃಷಿಗೆ ಆದ್ಯತೆ ನೀಡಬೇಕು.
- ✓ ಉದ್ಯೋಗ ಪ್ರತಿ ಪ್ರಜೆಯ ಹಕ್ಕು. ಸಾಮರ್ಥ್ಯಕ್ಕೆ ತಕ್ಕ ಉದ್ಯೋಗ ಮತ್ತು ಬದುಕುವ ವೇತನ ಮಹಿಳೆಯರಿಗೆ ದೊರೆಯಬೇಕು.
- ✓ ಯೋಜನೆಗಳ ಹಣ ವಾಪಸಾಗುವುದು, ದುರ್ಬಳಕೆಯಾಗುವುದನ್ನು ಕಾವಲು ಸಮಿತಿಯ ರಚನೆಯ ಮೂಲಕ ತಡೆಯಬೇಕು ಮತ್ತು 1984ರಲ್ಲಿ ಆದೇಶವಾಗಿರುವ ಜಂಡರ್ ಬಜೆಟ್ ಕಡ್ಡಾಯವಾಗಿ ಜಾರಿಯಾಗಬೇಕು.

ಹೆದರುವವರನ್ನು ಹೆದರಿಸುತ್ತಾರೆ ಎದ್ದುನಂತರೆ ಕಾಲು ಕೀಳುತ್ತಾರೆ



- ✓ ಬಾಲ್ಯ ವಿವಾಹ, ಹೆಣ್ಣುಮಕ್ಕಳ ಮತ್ತು ಮಹಿಳೆಯರ ಸಾಗಣೆ, ಅತ್ಯಾಚಾರ, ಆ್ಯಸಿಡ್ ದಾಳಿಗಳು, ಲೈಂಗಿಕ ಕಿರುಕುಳ, ಹೆಣ್ಣು ಭ್ರೂಣಹತ್ಯೆ ನಿಲ್ಲಬೇಕು. ಹೆಣ್ಣುಮಕ್ಕಳು ಮತ್ತು ಮಹಿಳೆಯರನ್ನು ಸಹಜೀವಿಯಾಗಿ ಗೌರವಿಸುವ ಪಠ್ಯಕ್ರಮಗಳು ಮತ್ತು ಆರೋಗ್ಯಕರ ಲೈಂಗಿಕ ಶಿಕ್ಷಣ ಜಾರಿಯಾಗಬೇಕು.
- ✓ ವರದಕ್ಷಿಣೆ, ಕೌಟುಂಬಿಕ ಹಿಂಸೆಯನ್ನು ತಡೆಗಟ್ಟುವ ಕಾನೂನು ಕ್ರಮಗಳು ಪರಿಣಾಮಕಾರಿಯಾಗಿ ಜಾರಿಯಾಗಬೇಕು.
- ✓ ಮಹಿಳೆಯರ, ಕಾರ್ಮಿಕರ, ದಲಿತರ ಹಾಗೂ ಆದಿವಾಸಿಗಳ ಸಂವಿಧಾನಾತ್ಮಕ ಹಕ್ಕುಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು ಮತ್ತು ಅವುಗಳಿಗೆ ಧಕ್ಕೆಯಾಗುವ ಕಾನೂನಿನ ತಿದ್ದುಪಡಿಗಳು ರದ್ದಾಗಬೇಕು.
- ✓ ಸರ್ಕಾರ ರಚನೆಯಲ್ಲಿ ಮತ್ತು ರಾಜಕೀಯ ರಂಗವೂ ಸೇರಿದಂತೆ ಎಲ್ಲ ರಂಗಗಳಲ್ಲಿಯೂ ಸಾಮಾಜಿಕ ನ್ಯಾಯವನ್ನು ಆಧರಿಸಿದ ಮೀಸಲಾತಿಯನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕು ಹಾಗೂ ರಾಜಕೀಯ ಪಕ್ಷಗಳಲ್ಲಿ ಮತ್ತು ಸಂಘ, ಸಂಸ್ಥೆ, ಸಂಘಟನೆಗಳಲ್ಲಿ ಮಹಿಳಾ ನಾಯಕತ್ವವನ್ನು ಬೆಳೆಸಬೇಕು. ಮಹಿಳಾ ವಿಶ್ವವಿದ್ಯಾಲಯದಲ್ಲಿ ಶೇ.50ಕ್ಕು ಹೆಚ್ಚಿನ ಹುದ್ದೆಗಳನ್ನು ಮಹಿಳೆಯರಿಗೆ ಮೀಸಲಿಡಬೇಕು.
- ✓ ಕುಟುಂಬ/ಗಂಡ/ಸಂಗಾತಿಯ ಆಸ್ತಿಯಲ್ಲಿ ಮಹಿಳೆಯರಿಗೆ ಸಮಪಾಲು ಸಿಗಬೇಕು.
- ✓ ಪೌರಕಾರ್ಮಿಕರಿಗೆ ಸಮಾನ ವೇತನ, ಸುರಕ್ಷಾ ಸಲಕರಣೆಗಳು, ಉತ್ತಮ ಕೆಲಸದ ವಾತಾವರಣ, ಖಾಯಂ ನೌಕರಿ ದೊರಕಲೇಬೇಕು. ಒಳಚರಂಡಿ ವ್ಯವಸ್ಥೆಯನ್ನು ಸಂಪೂರ್ಣವಾಗಿ ಯಾಂತ್ರೀಕೃತಗೊಳಿಸಬೇಕು. ಒಳಚರಂಡಿಯನ್ನು ಸ್ವಚ್ಛಗೊಳಿಸುವಾಗ ಮೃತಪಟ್ಟ ಕಾರ್ಮಿಕರಿಗೆ ಕಾನೂಬದ್ಧವಾಗಿ ನೀಡಬೇಕಾದ 10 ಲಕ್ಷ ಪರಿಹಾರವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲೇಬೇಕು. ಮಲಬಾಚುವ ಪದ್ಧತಿಯನ್ನು ಯುದ್ಧೋಪಾದಿಯಲ್ಲಿ ಕೊನೆಗಾಣಿಸಬೇಕು.
- ✓ ಲೈಂಗಿಕ ವೃತ್ತಿಯ ಅಪರಾಧೀಕರಣವು ಕೊನೆಯಾಗಬೇಕು. ಲೈಂಗಿಕ ಕಾರ್ಯಕರ್ತೆಯರ, ದೇವದಾಸಿಯರ, ಲಿಂಗತ್ವ ಅಲ್ಪಸಂಖ್ಯಾತರ, ಆರೋಗ್ಯ, ಶಿಕ್ಷಣ, ಉದ್ಯೋಗ, ಮಾನವ ಘನತೆ ಇತರ ನಾಗರಿಕ ಹಕ್ಕುಗಳು ಕಡ್ಡಾಯವಾಗಿ ಜಾರಿಯಾಗಬೇಕು.
- ✓ ಅಸ್ಪೃಶ್ಯತೆ, ಜಾತೀಯತೆಯನ್ನು ನಿಷೇಧಿಸುವ ಕಾನೂನುಗಳು ಪರಿಣಾಮಕಾರಿಯಾಗಿ ಜಾರಿಗೊಳ್ಳಬೇಕು.
- ✓ ಗಾರ್ಮೆಂಟ್ಸ್ ನೌಕರರು, ಗೃಹ ಕಾರ್ಮಿಕರು, ಕಟ್ಟಡ ಕಾರ್ಮಿಕರು, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಬಿಸಿಯೂಟದ ಕಾರ್ಮಿಕರು ಹಾಗೂ ಇನ್ನಿತರ ಅಸಂಘಟಿತ ವಲಯದಲ್ಲಿನ

ಮಹಿಳೆಯರಿಗೆ ಬದುಕುವ ವೇತನ, ಕಿರುಕುಳ ಮುಕ್ತ ಆರೋಗ್ಯಕರ ಕೆಲಸದ ವಾತಾವರಣ ದೊರಕಲೇಬೇಕು.

✓ ಅಸಂಘಟಿತ ವಲಯದ ಹಿರಿಯ ನಾಗರಿಕರಿಗೆ ಪಿಂಚಣಿ ಜಾರಿಯಾಗಬೇಕು.
✓ ಬೀದಿಬದಿ ವ್ಯಾಪಾರಿಗಳ ಎತ್ತಂಗಡಿ ನಿಲ್ಲಬೇಕು. ಅವರ ವ್ಯಾಪಾರವನ್ನು ಅಧಿಕೃತಗೊಳಿಸಬೇಕು.
✓ ಶಿಕ್ಷಣ, ಆರೋಗ್ಯ ಹಾಗು ಇನ್ನಿತರ ಸಾರ್ವಜನಿಕ ಕ್ಷೇತ್ರಗಳ ಖಾಸಗೀಕರಣ, ಕಾರ್ಪೊರೇಟರೀಕರಣವನ್ನು ನಿಯಂತ್ರಿಸಿ ಸಾರ್ವಜನಿಕ ಹಿತಾಸಕ್ತಿ ಮತ್ತು ಸಹಕಾರಿ ತತ್ವಗಳು ಜಾರಿಯಾಗಬೇಕು.
✓ ವಿಜಯಪುರದ ಐತಿಹಾಸಿಕ ಬಾವಿಗಳ ದುರಸ್ತಿಗೊಳಿಸಿ ಜನೋಪಯೋಗಿ ಯಾಗುವಂತೆ ಮಾಡಬೇಕು.
✓ ಸ್ಲಂಗಳ ಅನೈತಿಕ ಎತ್ತಂಗಡಿಗಳು ನಿಲ್ಲಬೇಕು.
✓ ಅಂಗವಿಕಲರಿಗೆ ಸೂಕ್ತವಾದ ಸವಲತ್ತುಗಳು ಜಾರಿಯಾಗಬೇಕು.
✓ ಮುಟ್ಟು-ಬಸಿರಿನ ಸೂತಕ ನಿಷೇಧವಾಗಬೇಕು.
✓ ಸಮಾನತೆ-ಮಾನವತೆ ವಿರೋಧಿ ಮೌಢ್ಯಾಚರಣೆಗಳನ್ನು ತಡೆಯಬೇಕು.
✓ ಎಲ್ಲ ರೀತಿಯ ಮತಾಂಧತೆಯನ್ನು ತಡೆಯಬೇಕು.

## ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮಗಳ ವಿವರ

❖ ವಿಚಾರ ಸಂಕಿರಣ 'ಮಹಿಳೆ ಮತ್ತು ವರ್ತಮಾನದ ಬಿಕ್ಕಟ್ಟುಗಳು' ದಿನಾಂಕ 08/03/2016ರಂದು ಬೆಳಗ್ಗೆ 10 ರಿಂದ ಸಂಜೆ 5.30ರವರೆಗೆ ಸ್ಥಳ: ಕಂದಗಲ್ ಹಣಮಂತರಾಯ ರಂಗಮಂದಿರ, ಸ್ಟೇಶನ್ ರೋಡ್, ವಿಜಯಪುರ.
❖ ಸಂಜೆ 6.30ಕ್ಕೆ ಶಾಸ್ತ್ರಿ ಮಾರ್ಕೆಟ್, ಗಾಂಧಿ ಚೌಕದಲ್ಲಿ 'ಕಪ್ಪು ಉಡುಪಿನಲ್ಲಿ ಮಹಿಳೆಯರು' ಮೌನ ಪ್ರತಿಭಟನೆ.
❖ ದಿನಾಂಕ 09/03/2016 ರಂದು ಬೆಳಿಗ್ಗೆ 9.30ಕ್ಕೆ ಶಿವಾಜಿ ಸರ್ಕಲ್‌ನಿಂದ ದರ್ಬಾರ್ ಹೈಸ್ಕೂಲ್‌ವರೆಗೆ ಸಾರ್ವಜನಿಕ ರ್‍ಯಾಲಿ ಮತ್ತು ದರ್ಬಾರ್ ಹೈಸ್ಕೂಲ್ ಮೈದಾನದಲ್ಲಿ ಸಾರ್ವಜನಿಕ ಸಭೆ. 'ನರ್ಮದಾ ಬಚಾವೋ' ಆಂದೋಲನ ಖ್ಯಾತಿಯ ಮೇಧಾ ಪಾಟ್ಕರ್ ಅವರು ಮುಖ್ಯ ಅತಿಥಿಗಳಾಗಿ ಬರುತ್ತಿದ್ದಾರೆ.

## ಸಹಭಾಗಿ ಸಂಘಟನೆಗಳು/ ಸಂಸ್ಥೆಗಳು

ಸಬಲ ಸಂಸ್ಥೆ, ಫೆಡಿನಾ ಸಂಸ್ಥೆ, ಬೆಂಗಳೂರು-ವಿಜಯಪುರ, ದಲಿತ ಜನಸೇನೆ ಮಹಿಳಾ ಒಕ್ಕೂಟ, ಏಡ್ಸ್ ಜಾಗೃತಿ ಮಹಿಳಾ ಸಂಸ್ಥೆ, ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ, ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಉಜ್ವಲ

> ಏನು ಮಾಡುವಿರಿ ದೃಷ್ಟಿ ನೀಡುವ ಕಣ್ಣೇ ಇಲ್ಲದಿದ್ದರೆ?
> ಏನು ಮಾಡುವಿರಿ ಜೀವ ನೀಡುವ ಹೆಣ್ಣೇಇಲ್ಲದಿದ್ದರೆ?



ಸಂಸ್ಥೆ, ವಿಜಾಪೂರ ಜಿಲ್ಲಾ ಗೃಹ ಕಾರ್ಮಿಕರ ಯೂನಿಯನ್, ವಿಜಾಪೂರ ನಗರ ಬೀದಿ ವ್ಯಾಪಾರಿಗಳ ಒಕ್ಕೂಟ, ಫೆಡಿನಾ ಸ್ಲಂ ಮಹಿಳಾ ಸ್ವ-ಸಹಾಯ ಸಂಘಗಳ ಒಕ್ಕೂಟ, ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘಟನೆ-ವಿಜಾಪೂರ, ಬಿಸಿ ಊಟದ ಕಾರ್ಯಕರ್ತರ ಸಂಘಟನೆ-ವಿಜಾಪೂರ, ಸ್ಲಂ ಜನರ ಸಂಘಟನೆ-ಕರ್ನಾಟಕ, ಬೆಂಗಳೂರು, ವಿಜಾಪೂರ, ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಕಲ್ಯಾಣ ಮಂಡಳಿ-ಬೆಂಗಳೂರು, ಪೌರ ಕಾರ್ಮಿಕರ ಯೂನಿಯನ್-ವಿಜಾಪೂರ, ಮಾನವ ಬಂಧುತ್ವ ವೇದಿಕೆ-ಕರ್ನಾಟಕ, ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ, ಬೆಂಗಳೂರು, ವಿಜಾಪೂರ, ವಿಜಾಪೂರ ಜಿಲ್ಲಾ ಕಟ್ಟಡ ಕಾರ್ಮಿಕರ ಯೂನಿಯನ್, ಎಪಿಡಿ ಸಂಸ್ಥೆ, ಅನೌಪಚಾರಿಕ ಶಿಕ್ಷಣ ಸಂಸ್ಥೆ, ಮಹಿಳಾ ಸಮಖ್ಯಾ, ಸರ್ಕಾರಿ ಮಹಿಳಾ ಪದವಿಪೂರ್ವ ಶಿಕ್ಷಣ ಸಂಘಟನೆಗಳ ಕೋರ ಕಮಿಟಿ, ಚೈತನ್ಯ ಮಹಿಳಾ ಕೋಆಪರೇಟಿವ್ ಬ್ಯಾಂಕ್ ಲಿ., ಗೀತಾಂಜಲಿ ಮಾದರಿ ಶಾಲೆ, ಪ್ರಿಯದರ್ಶಿನಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಂಸ್ಥೆ, ಕರ್ನಾಟಕ ಅಂಗವಿಕಲರ ಐಕತ್ಯಾ ವೇದಿಕೆ, ನವಸ್ಫೂರ್ತಿ ಸಂಸ್ಥೆ, ಕರ್ನಾಟಕ ಪ್ರಾಂತ್ಯ ರೈತ ಸಂಘ, ರೀಚ್ ಸಂಸ್ಥೆ-ಮುದ್ದೇಬಿಹಾಳ, ಜಿಲ್ಲಾ ಸಹೋದರಿ ಸಂಸ್ಥೆ-ವಿಜಯಪುರ, ಜಿಲ್ಲಾ ತಾಯ್ತನ ರಕ್ಷಣಾ ವೇದಿಕೆ-ಕೊಪ್ಪಳ, ಅಂಗಳಾ-ಸಮತೆಯ ಬದುಕಿಗಾಗಿ, ಹಿಟ್ನಾಳ್, ನವಜೀವನ ಮಹಿಳಾ ಒಕ್ಕೂಟ-ರಾಯಚೂರು, ಜಾಗೃತ ಮಹಿಳಾ ಸಂಘಟನೆ-ಪೋತ್ನಾಳ್, ಭಾರತೀಯ ಮುಸ್ಲಿಂ ಮಹಿಳಾ ಆಂದೋಲನ-ಹೊಸಪೇಟೆ, ಮಾನಸ ಬಳಗ-ಬೆಂಗಳೂರು, ವಿಮೋಚನ ಮಹಿಳಾ ಹಕ್ಕುಗಳ ವೇದಿಕೆ-ಬೆಂಗಳೂರು, ವಿಮೆನ್ಸ್ ವಾಯ್ಸ್, ಮಹಿಳಾ ದೌರ್ಜನ್ಯ ವಿರೋಧಿ ವೇದಿಕೆ ಮಂಗಳೂರು, ಕರಾವಳಿ ಲೇಖಕಿಯರ ಮತ್ತು ವಾಚಕಿಯರ ಸಂಘ-ಮಂಗಳೂರು, ಮೈಸೂರು ಜಿಲ್ಲಾ ಮಹಿಳಾ ಮತ್ತು ಪ್ರಗತಿಪರ ಸಂಘಟನೆಗಳ ಒಕ್ಕೂಟ, ಸ್ಪಂದನ-ಮಂಡ್ಯ, ಗಾರ್ಮೆಂಟ್ಸ್ ಮಹಿಳಾ ಕಾರ್ಮಿಕರ ಮುನ್ನಡೆ, ಗಾರ್ಮೆಂಟ್ಸ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್, ಸಾಧನಾ ಮಹಿಳಾ ಗುಂಪು-ಬೆಂಗಳೂರು, ವಿಮೋಚನ ಸಂಘ-ಅಥಣಿ, ಕರ್ನಾಟಕ ಲೇಖಕಿಯರ ಸಂಘ, ಕರ್ನಾಟಕ ರಾಜ್ಯ ದಲಿತ ಮಹಿಳಾ ಒಕ್ಕೂಟ, ಆಲ್ ಇಂಡಿಯಾ ಪ್ರೋಗ್ರೆಸಿವ್ ವಿಮೆನ್ಸ್ ಅಸೋಸಿಯೇಷನ್, ಕರ್ನಾಟಕ ದಲಿತ ಮಹಿಳಾ ವೇದಿಕೆ, ಅತ್ಯಾಚಾರ ವಿರೋಧಿ ಪ್ರಚಾರಾಂದೋಲನ, ಮಾನಿನಿ, ಗಾರ್ಮೆಂಟ್ಸ್ ಲೇಬರ್ ಯೂನಿಯನ್, ಮುನ್ನಡೆ ಸಾಮಾಜಿಕ ಸಂಘಟನೆ, ಸ್ತ್ರೀ ಜಾಗೃತಿ ಸಮಿತಿ, ಚರಕ ಮಹಿಳಾ ವಿವಿಧೋದ್ದೇಶ ಸಂಘ-ಹೆಗ್ಗೋಡು, ಸಖಿ ಸಂಸ್ಥೆ- ಹೊಸಪೇಟೆ, ಕವಲಕ್ಕಿ ಮಹಿಳಾ ಸಂಘಟನೆ, ಪಿಯುಸಿಎಲ್-ಕರ್ನಾಟಕ, ಎಸ್‌ಎಫ್‌ಐ, ಡಿವೈಎಫ್‌ಐ, ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ, (ಅಂಬೇಡ್ಕರ್ ವಾದ), ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ, ಸಮತಾ ಸೈನಿಕ ದಳ, ಡಿಎಸ್‌ಎಸ್ ಭೀಮವಾದ, ಕರ್ನಾಟಕ ಲೈಂಗಿಕ ಅಲ್ಪಸಂಖ್ಯಾತರ ವೇದಿಕೆ, ಕರ್ನಾಟಕ ಲೈಂಗಿಕ ಕಾರ್ಮಿಕರ ಯೂನಿಯನ್, ಸಂಗಮ, ಕರ್ನಾಟಕ ವಿದ್ಯಾರ್ಥಿ ಸಂಘಟನೆ, ಆಲ್ಟರ್‌ನೇಟಿವ್ ಲಾ ಫೋರಂ, ದಲಿತ

ಬಹುಜನ ಚಳವಳಿ, ಎಐಎಸ್‌ಎಫ್, ಎಐವೈಎಫ್, ಅಭಿಮತ, ಅನೇಕ, ಜೀವ, ಒಂದೆಡೆ, ಸ್ವರಾಜ್ ಸಮುದಾಯ ಸಂಘಟನೆ, ಪ್ರಜಾ ರಾಜಕೀಯ ವೇದಿಕೆ, ಸಂಚಯ ನೆಲೆ, ವಿಸ್ತಾರ್, ಜನ ಸಹಯೋಗ, ತರಿಕಿಟ ಕಲಾ ಕಮ್ಮಟ, ಸಂವಾದ, ಭಾರತೀಯ ಜ್ಞಾನ ವಿಜ್ಞಾನ ಸಮಿತಿ, ನಾರ್ಥ ಈಸ್ಟ್ ಸಾಲಿಡಾರಿಟಿ, ಅಲೆಮಾರಿ ಬುಡಕಟ್ಟು ಮಹಾಸಭಾ, ಬೆಂಗಳೂರು ಬಸ್ ಪ್ರಯಾಣಿಕರ ವೇದಿಕೆ, ಬೀದಿ ವ್ಯಾಪಾರಿ ಸಂಘಟನೆ –ಬೆಂಗಳೂರು, ಸ್ಲಂ ಜನಾಂದೋಲನ ಸಮಿತಿ, ಐಎಸ್‌ಐ, ಪೌರಕಾರ್ಮಿಕರ ಸಂಘಟನೆ– ಬೆಂಗಳೂರು, ಸಮಾನತೆ ಯೂನಿಯನ್–ಕರ್ನಾಟಕ, ಯುನೈಟೆಡ್ ಥಿಯೋಲಾಜಿಕಲ್ ಕಾಲೇಜ್–ಮಹಿಳಾ ಘಟಕ, ಬಹುಳ ಜನವೇದಿಕೆ, ಮಂಥನ್ ಕಾನೂನು, ಪಯಣ, ಸಮಾಜವಾದಿ ಜನ ಪರಿಷದ್, ಕರ್ನಾಟಕ ಜನಶಕ್ತಿ, ಕರ್ನಾಟಕ ಕೋಮು ಸೌಹಾರ್ದ ವೇದಿಕೆ, ಫೋರಂ ಫಾರ್ ವರ್ಕರ್ಸ್ ರೈಟ್ಸ್, ಭೂಮ್ತಾಯಿ ಬಳಗ–ದೊಡ್ಡಬಳ್ಳಾಪುರ, ಬಯಲು ಬಳಗ, ಪೆಡಸ್ಟ್ರಿಯನ್ ಪಿಕ್ಚರ್ಸ್ ಬೆಂಗಳೂರು, ಎಐಸಿಸಿಟಿಯು, ಡಾ. ರಾಮಮನೋಹರ ಲೋಹಿಯಾ ಸಮತಾ ವಿದ್ಯಾಲಯ, ಸಮರ, ಕರ್ನಾಟಕ ಗಾರ್ಮೆಂಟ್ಸ್ ವರ್ಕರ್ಸ್ ಯೂನಿಯನ್, ಅಖಿಲ ಕರ್ನಾಟಕ ಕಟ್ಟಡ ಕಾರ್ಮಿಕರ ಯೂನಿಯನ್, ರಿಟೈರ್ಡ್ ಅನ್ ಆರ್ಗನೈಸ್ಡ್ ಸೆಕ್ಟರ್ ಯೂನಿಯನ್, ಮನೆಗೆಲಸ ಕಾರ್ಮಿಕರ ಯೂನಿಯನ್, ಐಕ್ಯತಾ, ಕರ್ನಾಟಕ ರಾಜ್ಯ ರೈತ ಸಂಘ, ಸೌತ್ ಇಂಡಿಯಾ ಫೆಡರೇಷನ್ ಆಫ್ ಟ್ರೇಡ್ ಯೂನಿಯನ್ಸ್ ಹಾಗು ಸಮಾನ ಮನಸ್ಕರು.

**ಸಂಪರ್ಕ ದೂರವಾಣಿ ಸಂಖ್ಯೆಗಳು:**

ಪ್ರೊ. ಆರ್. ಸುನಂದಮ್ಮ – 9448986031; ಡಾ. ಲಕ್ಷ್ಮಿದೇವಿ ವಾಯ್. – 9902234469; ವಿದ್ಯಾವತಿ ಅಂಕಲಗಿ – 9739751154; ಮಲ್ಲಮ್ಮ ಯಾಳವಾರ್– 9448118204, ಮೀನಾಕ್ಷಿ ಕೋ – 9538174449; ಸುಶೀಲ ಕಾಂಬ್ಳಿ – 7760444872; ಮೀನಾಕ್ಷಿ ಉಟಗಿ – 9916937741; ಅಪ್ಸರಾಬೇಗಂ ಚಪ್ಪರ್‌ಬಂದ್ –8722098955; ಶಿವಬಾಳಮ್ಮ – 959179419; ಲಲಿತ ಬಿಜ್ಜರಗಿ – 886734328; ಸವಿತಾ ನಾಯಕ್ – 9035855641; ಮಹಾದೇವಿ ಹುಲ್ಲೂರ –9900670349; ಸರೋಜ ಬಿರಾದಾರ್ – 9448381560; ಸುನಂದ ತೋಳಬಂದಿ – 944833552.

**ಬನ್ನಿ, ಸಹಸ್ರಾರು ಸಂಖ್ಯೆಯಲ್ಲಿ ಪಾಲ್ಗೊಳ್ಳಿ**

**ಗಂಡ ಹೆಂಡತಿ ಎಂಬ ತರತಮಭಾವ ಬಿಟ್ಟುಬಿಡಿ**
**ಗೆಳೆಯ ಗೆಳತಿಯರಂತಿರಿ ಬದುಕು ನಂದನವನ ನೋಡಿ**



# ವಿಜಯಪುರದ ಜೀವಪರ ಮಹಿಳಾ ಪರಂಪರೆ

**ದು. ಸರಸ್ವತಿ**

ಕಾಖಂಡಕಿ ಕೆಂಚಮ್ಮನೆಂಬ ಹೆಣ್ಣುಮಗಳು ದೇವದಾಸಿಯಾಗಿದ್ದಳು. ಬಬಲೇಶ್ವರದ ಸ್ವಾಮಿಯೊಬ್ಬರಿಂದ ದೀಕ್ಷೆ ಪಡೆದುಕೊಂಡು ತಾನು ಸಂಪಾದಿಸಿದ ಸಂಪತ್ತನ್ನೆಲ್ಲಾ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಮೀಸಲಿಟ್ಟಳು. ಆಕೆ ತಾನು ಭಾಗವಹಿಸುತ್ತಿದ್ದ ಮದುವೆಯಲ್ಲಿ ಅದೆಷ್ಟು ದಾರಾಳವಾಗಿ ಹಣವನ್ನು ಉಡುಗೊರೆಯಾಗಿ ನೀಡುತ್ತಿದ್ದಳೆಂದರೆ ಅಷ್ಟು ಮೊತ್ತವನ್ನು ಕೊಡಲು ಮನಸ್ಸಿಲ್ಲದ ಶ್ರೀಮಂತರು ಅವಳು ಹೋಗುತ್ತಿದ್ದ ಮದುವೆಗಳಿಗೆ ಹೋಗುತ್ತಿರಲಿಲ್ಲವೆಂಬ ಕತೆಗಳಿವೆ.

ಇಟಗಿ ಭೀಮವ್ವ ಕಡುಬಡತನದ ಮನೆಯ ಹೆಣ್ಣುಮಗಳು. ಸಣ್ಣವಯಸ್ಸಿನಲ್ಲೇ ಆಕೆಯ ತಂದೆ ತೀರಿಹೋದಾಗ ಏನೂ ಅರಿಯದ ಭೀಮವ್ವ ಮತ್ತು ಅವಳ ತಾಯಿಯನ್ನು ಸಂಬಂಧಿಕರು ವಂಚಿಸಿ ಆಸ್ತಿಯನ್ನು ಕಿತ್ತುಕೊಂಡರು. ಸಾಕುವ ಶಕ್ತಿಯೂ ಇಲ್ಲದಂತಾದಾಗ ಅವಳ ತಾಯಿಯು ಮಗಳನ್ನು ಮಠದ ಶರಣರಿಗೆ ಒಪ್ಪಿಸುತ್ತಾಳೆ. ಅಲ್ಲಿ ಆಕೆ ದೀಕ್ಷೆ ಪಡೆದುಕೊಂಡು ಶಿವಶರಣೆಯಾಗುತ್ತಾಳೆ. ಜನಸೇವೆಯಲ್ಲಿ ತೊಡಗಿಸಿಕೊಳ್ಳುತ್ತಾಳೆ. ಸ್ಥಳೀಯರಿಗೆ ನೂಲುವುದನ್ನು ಕಲಿಸುತ್ತಾಳೆ. ದೇಸಿ ವೈದ್ಯ ಮಾಡಿ ಕಾಯಿಲೆಗಳನ್ನು ವಾಸಿ ಮಾಡುತ್ತಾಳೆ. ಕಣ್ಣಿಲ್ಲದವರಿಗೆ ಕಣ್ಣು ಬರಿಸಿದಳೆಂಬ ಪ್ರತೀತಿಯೂ ಇದೆ. ಆಳವಾದ ಆಧ್ಯಾತ್ಮಿಕ ಹುಡುಕಾಟವಿದ್ದ ಆಕೆಯ ಮಾತುಗಳನ್ನು ಜನರು ಶ್ರದ್ದೆಯಿಂದ ಅನುಸರಿಸುತ್ತಿದ್ದರು.

ಸಂಖ್ ಗ್ರಾಮದ ಶಿವಶರಣೆ ದಾನಮ್ಮದೇವಿ ಜನಸೇವೆಗಾಗಿಯೇ ಪ್ರಸಿದ್ಧಳು. ವಿದ್ಯೆ ಕಲಿತ ಮೇಲೆ ಮನೆಯವರು ಮದುವೆಯಾಗಲು ಹೇಳಿದಾಗ ಕಲ್ಯಾಣದ ಬಸವಣ್ಣನನ್ನು ಕಂಡ ನಂತರ ನಾನು ಮದುವೆಯಾಗುವುದೆಂದು ಹೇಳಿ ಅಲ್ಲಿಗೆ ಹೊರಡುತ್ತಾಳೆ. ದಾರಿಯಲ್ಲಿ ಕಂಡ ಹುಷಾರಿಲ್ಲದ ವೃದ್ಧ ದಂಪತಿಗಳ ಸೇವೆಗೆಂದು ನಿಂತವಳು ಅಲ್ಲಿಯೇ ಜನರ ಸೇವೆ ಮಾಡಿಕೊಂಡು, ದಾಸೋಹ ಮಾಡಿಕೊಂಡು

ಸಮೀಪದ ಗುಡ್ಡಾಪುರದಲ್ಲೆ ಉಳಿದುಬಿಡುತ್ತಾಳೆ. ವಿಷಯ ತಿಳಿದ ಬಸವಣ್ಣನೇ ಅವಳನ್ನು ನೋಡಲು ಅಲ್ಲಿಗೆ ಬರುತ್ತಾರೆ. ಪ್ರತೀಕಾರದ ಭಾವ ಎಳ್ಳಷ್ಟೂ ಇಲ್ಲದೆ ನಿಸ್ವಾರ್ಥ ಪ್ರೀತಿಯಿಂದ ಜನರನ್ನು ಹರಸುತ್ತಿದ್ದರಿಂದ ಬೇಡಿಕೊಂಡಿದ್ದನ್ನೆಲ್ಲ ನೆರವೇರಿಸುತ್ತಾಳೆ ಎಂಬ ನಂಬಿಕೆ ಜನಜನಿತವಾಗಿದೆ. ಈಗಲೂ ಗುಡ್ಡಾಪುರಕ್ಕೆ ಇಲ್ಲಿನ ಹೆಣ್ಣುಮಕ್ಕಳು ಕಾಲ್ನಡಿಗೆಯಲ್ಲಿ ನಡೆದು ಹೋಗುತ್ತಾರೆ. ನಡೆದು ಹೋಗುವವ ರೆಲ್ಲರಿಗೂ ತಿಂಡಿ, ಊಟ, ನೀರು, ಪಾನಕಗಳ ವ್ಯವಸ್ಥೆಯನ್ನು ಆಯಾ ಗ್ರಾಮದ ಜನರೇ ಉಚಿತವಾಗಿ ಒದಗಿಸುತ್ತಾರೆ.

ವಿಜಯಪುರದ ಬೀಳಗಿಯ ಅಮೀರಬಾಯಿ ಕರ್ನಾಟಕಿ ಹೆಸರಾಂತ ಹಿಂದೂಸ್ತಾನಿ ಹಾಗು ಕರ್ನಾಟಕ ಸಂಗೀತದ ಗಾಯಕಿಯಾಗಿದ್ದರು. ಇವರು ಹಾಡಿದ 'ವೈಷ್ಣವ ಜನತೊ...' ಹಾಡನ್ನು ಗಾಂಧೀಜಿಯವರು ಅಪಾರವಾಗಿ ಮೆಚ್ಚಿಕೊಂಡಿದ್ದರು. ಇವರ ಹಾಡುಗಳು ಸ್ವಾತಂತ್ರ್ಯ ಹೋರಾಟದ ಪ್ರಭಾತ ಫೇರಿಗಳಲ್ಲಿ ಜನಪ್ರಿಯವಾಗಿದ್ದವು. ಇದಲ್ಲದೆ ಆಕೆ ಅದ್ಭುತವಾದ ರಂಗಭೂಮಿ ಹಾಗೂ ಚಲನಚಿತ್ರ ಕಲಾವಿದೆಯಾಗಿದ್ದರು. ಇವರ ಮಧುರವಾದ ಗಾಯನದಿಂದಾಗಿ 'ಕಿಸ್ಮತ್' ಎಂಬ ಹಿಂದಿ ಚಲನಚಿತ್ರ 3 ವರ್ಷ 8ತಿಂಗಳುಗಳ ಕಾಲ ಓಡಿತ್ತು.

## ಸಾಮರಸ್ಯ, ಸರ್ವಧರ್ಮ ಸಹಿಷ್ಣುತೆಯ ಪರಂಪರೆ

ದೇವಾಲಯಗಳು, ಮಸೀದಿಗಳು, ಬೌದ್ಧ-ಜೈನ ಚೈತ್ಯಾಲಯಗಳು, ಬಾವಿಗಳು, ಸ್ಮಾರಕಗಳ ನಗರವಾದ ವಿಜಯಪುರ ಸಾಮರಸ್ಯ ಹಾಗೂ ಸಹಿಷ್ಣುತೆಗೆ ಮನೆ ಮಾತಾಗಿದೆ. ವಚನಕಾರರು ಮತ್ತು ಸೂಫಿ ಸಂತರ ಬೀಡಾಗಿದೆ. ಹಿಂದೊಮ್ಮೆ ಐದು ನದಿಗಳ ನಾಡಾಗಿದ್ದ ವಿಜಯಪುರ ಹತ್ತಿ, ಜೋಳ, ದಾಳಿಂಬೆ ಮತ್ತು ದ್ರಾಕ್ಷಿಗೆ ಹೆಸರು ವಾಸಿಯಗಿದೆ. 'ಡೋಣಿ ನದಿ ತುಂಬಿ ಹರದ್ರ ಓಣೆಲ್ಲ ಜ್ವಾಳ' ಎಂಬ ಗಾದೆ ಇಲ್ಲಿ ಪ್ರಚಲಿತವಿದೆ.

ಇತಿಹಾಸ ಹೇಗಿರಬೇಕೆಂಬುದಕ್ಕೆ ಉದಾಹರಣೆಯಾಗಿ, ಮುಂಬೈ ನ್ಯಾಯಾಲಯದ ಇತಿಹಾಸವನ್ನು ಮುಂಬೈ ಗೆಜೆಟಿಯರ್‌ನಲ್ಲಿ ಬರೆಯುವ ಸಂದರ್ಭದಲ್ಲಿ ವಿಜಯಪುರ ರಾಜ ಆದಿಲ್ ಶಾಹಿಯ ಮಾತುಗಳನ್ನು ಉಲ್ಲೇಖಿಸಲಾಗಿದೆ. ಎತ್ತಣಿಂದೆತ್ತ ಸಂಬಂಧವಯ್ಯಾ ಎನಿಸಬಹುದು. ಅಲ್ಲಿ ಪ್ರಸ್ತಾಪಿಸಿರುವುದರ ಹಿಂದಿರುವ ಉದ್ದೇಶ ಮಹತ್ವವಾದುದು. ವಿಜಯಪುರದ ಇತಿಹಾಸವನ್ನು ಬರೆಯಲು ಇಬ್ರಾಹಿಂ ಆದಿಲ್ ಶಾಹಿಯು ಫರಿಷ್ತ ಎಂಬ ಇತಿಹಾಸಕಾರನನ್ನು ಕರೆಸಿ ಭಯ ಮತ್ತು ಹೊಗಳಿಕೆಯನ್ನು ಬಿಟ್ಟು ಇತಿಹಾಸವನ್ನು ಬರೆಯಬೇಕೆಂದು ಕೇಳಿದ. ಭಯ ಮತ್ತು ಹೊಗಳಿಕೆಯಿಂದ ಮುಕ್ತವಾಗಿದ್ದರೆ ಮಾತ್ರ ಇತಿಹಾಸ ವಸ್ತುನಿಷ್ಠವಾಗಬಲ್ಲದು ಎಂಬ ಅರಿವು ಆತನಿಗಿತ್ತು.

ಇಂತಿಪ್ಪ ಮಹಿಳಾ ಪರಂಪರೆ ಹಾಗೂ ಸಾಮರಸ್ಯದ ಇತಿಹಾಸ ಇರುವ ವಿಜಯಪುರದಲ್ಲಿ ಈ ಸಲದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯು



ನಡೆಯುತ್ತಿದೆ. ಸೋದರಿತ್ವ, ಸಮಾನತೆ, ವೈವಿಧ್ಯತೆಯನ್ನು ನಂಬುವ ಮಹಿಳಾ ಚಳವಳಿಯು ಮಹಿಳೆಯರ ಆತ್ಮಘನತೆ ಮತ್ತು ಮಾನವ ಹಕ್ಕುಗಳಿಗಾಗಿ ದನಿ ಎತ್ತುತ್ತಲೇ ಬಂದಿದೆ. ಅನ್ಯಾಯ, ಅಸಮಾನತೆಯ ವಿರುದ್ಧ ಪ್ರಬಲವಾದ ಪ್ರತಿರೋಧವನ್ನು ಒಡ್ಡಿದೆ. ಸಮಸಮಾಜದ ಆಶಯದತ್ತ ನಡೆಯಲು ಘನವಾದ ಕೊಡುಗೆಯನ್ನು ನೀಡುತ್ತಾ ಬಂದಿದೆ. ನಡೆದ ದಾರಿ, ಪಡೆದ ಅನುಭವ, ಎದುರಿಸಿದ ಸಾಹಸ, ಗಳಿಸಿದ ಸಾರ್ಥಕತೆ ಇವೆಲ್ಲವನ್ನು ಒಟ್ಟು ಮಾಡಿ ಮಹಿಳಾ ಚೈತನ್ಯದ ದಿನವಾಗಿ ಮಾರ್ಚ್ 8ರ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಕಳೆದ ಮೂರು ವರ್ಷಗಳಿಂದ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು ನಡೆಸಿಕೊಂಡು ಬರುತ್ತಿದೆ. ಒಕ್ಕೂಟವು ಭಿನ್ನತೆ, ಭಿನ್ನಾಭಿಪ್ರಾಯಗಳೊಂದಿಗೆಯೇ ಒಟ್ಟಿಗೆ ಹೆಜ್ಜೆ ಇಡುತ್ತಿರುವುದು ಮಹತ್ವದ ವಿಷಯವಾಗಿದೆ. ವಿಚಾರ ಸಂಕಿರಣ, ಮೌನ ಪ್ರತಿಭಟನೆ, ರ್‍ಯಾಲಿ ಹಾಗು ಸಾರ್ವಜನಿಕ ಸಭೆಯಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಎಲ್ಲರನ್ನೂ ಒಳಗೊಳ್ಳುವ ಪ್ರಯತ್ನ ಮಾಡುತ್ತಿದೆ. ವಿಚಾರ ಸಂಕಿರಣಗಳಲ್ಲಿ ಯುವ ಜನರು ಉತ್ಸಾಹದಿಂದ ಪಾಲ್ಗೊಂಡಿದ್ದಾರೆ.

ಎಡರುತೊಡರುಗಳ ನಡುವೆಯೂ, ಭಿನ್ನಾಭಿಪ್ರಾಯಗಳ ನಡುವೆಯೂ, ದ್ವೇಷ, ಕ್ರೌರ್ಯ, ಹಿಂಸೆಯ ಕತ್ತಲಿಗೆ ಪ್ರೀತಿಯ ದೊಂದಿ ಹಿಡಿದು ಜೊತೆಯಾಗಿ ನಡೆಯಲು ಆರಂಭಿಸಿದ್ದೇವೆ. ನಡಿಗೆ ಮುಂದುವರೆಸಿದ್ದೇವೆ. ಈ ಸಲ ದೊಂದಿ ಹಿಡಿದು ನಡೆಸುತ್ತಿರುವವರು ವಿಜಯಪುರದ ಸೋದರಿಯರು.

**ಆರೂ ಇಲ್ಲದವಳೆಂದು ಆಳಿಗೊಳಲು ಬೇಡ ಕಂಡೆಯಾ?**
**ಏನು ಮಾಡಿದಡೂ ಆನಂಜುವಳಲ್ಲ**
**ನೂಲಮರೆಯಲ್ಲಿ ಅಡಗಿತ್ತೆಂದು ಅಂಜುವರು, ಅಳುಕುವರು.**
**ಮನಮೆಚ್ಚದಭಿಮಾನಕ್ಕೆ ಆವುದು ಮರೆ ಹೇಳಾ? ಉಡಿಗೆಯ**
**ಸೆಳೆದುಕೊಂಡೆಡೆ, ಮುಚ್ಚಿದ ಸೀರೆ ಹೋದರೆ ಅಂಜುವರೆ ಮರುಳೆ?**
**ಚೆನ್ನಮಲ್ಲಿಕಾರ್ಜುನಂಗೆ ಶರಣೆಂದು ನಂಬಿ ಮರೆಹೊಕ್ಕಡೆ**
**ಅಂಜಿ ನಿಂದುದಲ್ಲಾ!**

ಎಂದ ಮಹಿಳೆಯರ ಸ್ಥೈರ್ಯ, ಚೈತನ್ಯಗಳ ಸಂಕೇತವಾದ ಅಕ್ಕಮಹಾದೇವಿ ಹಾಗೂ ವಿಜಯಪುರದ ಸಮರ್ಥ ಆಡಳಿತಗಾರಳಾಗಿದ್ದ ಚಾಂದ್ ಬೀಬೀ ಇವರ ನೆನಪಿಗೆ ಈ ಸಲದ ಮಹಿಳಾ ದಿನಾಚರಣೆಯನ್ನು ಅರ್ಪಿಸಲಾಗಿದೆ. ರಾಜಕೀಯ ಪ್ರಾತಿನಿಧ್ಯಕ್ಕಾಗಿ ಮಹಿಳೆಯರು ಹೋರಾಡುತ್ತಿರುವ ಈ ಸಂದರ್ಭದಲ್ಲಿ ವಿಜಯಪುರ ನಗರ ಕಟ್ಟುವಲ್ಲಿ ಪ್ರಮುಖ ಪಾತ್ರ ವಹಿಸಿದ, ಮಗನನ್ನು ಉತ್ತಮ ಅಭಿರುಚಿಯುಳ್ಳವನಾಗಿ ಮಾಡುವುದರಲ್ಲಿ ಮಹತ್ತರ ಪಾತ್ರವಹಿಸಿದ, ಕನ್ನಡ, ದಖ್ಖನಿ, ಪರ್ಷಿಯಾ, ಅರೆಬಿಕ್, ಟರ್ಕಿಷ್, ಮರಾಠಿ ಭಾಷೆಗಳನ್ನು ಬಲ್ಲವಳಾಗಿದ್ದ, ಉತ್ತಮ ಚಿತ್ರಕಲಾವಿದೆ ಹಾಗೂ ಸಿತಾರ್ ವಾದಕಿಯಾಗಿದ್ದ, ಮೊಗಲ್ ಸಾಮ್ರಾಜ್ಯದ ವಿರುದ್ಧ

**ಅನುಕಂಪ ಬೇಕಿಲ್ಲ ಅವಕಾಶ ಕೊಡಿ ನಮ್ಮ ಸಾಧನೆಯನ್ನು ಮತ್ತೇ ನೀವೇ ನೋಡಿ**

ಸ್ವಾಯತ್ತತೆಗಾಗಿ ವೀರಾವೇಶದಿಂದ ಹೋರಾಡಿದ, ಸಮರ್ಥಳಾಗಿದ್ದ ಕಾರಣಕ್ಕಾಗಿ ತನ್ನ ಆಸ್ಥಾನದ ಅಧಿಕಾರ ವಲಯದವರಿಂದಲೇ ಹತಳಾದ ಚಾಂದ್‌ಬೀಬೀ ಬಹಳ ಮುಖ್ಯವಾಗುತ್ತಾಳೆ.

ಈ ಇಬ್ಬರು ಮಹಿಳೆಯರ ನೆನಪಿಗೆ ಈ ಸಲದ ಮಹಿಳಾ ದಿನಾಚರಣೆಯನ್ನು ವಿಜಯಪುರದ ಸೋದರಿಯರು ಅರ್ಪಿಸಿದ್ದಾರೆ. ಕೃಷಿ ಬಿಕ್ಕಟ್ಟಿನಲ್ಲಿ ನಲುಗುತ್ತಿರುವ ರೈತ ಮಹಿಳೆಯರು, ಅಪರಾಧೀಕರಣದಲ್ಲಿ ಸಿಲುಕಿಕೊಂಡಿರುವ ದೇವದಾಸಿ ಮಹಿಳೆಯರು, ಲೈಂಗಿಕ ಕಾರ್ಯಕರ್ತೆಯರು, ಲಿಂಗತ್ವ ಅಲ್ಪಸಂಖ್ಯಾತರು, ಬಾಲ್ಯವಿವಾಹ–ಮಾನವ ಸಾಗಣೆ–ಹಿಂಸೆಯಲ್ಲಿ ಸುರುಟುತ್ತಿರುವ ಮಕ್ಕಳು, ಭದ್ರತೆ ನೀಡಬೇಕಿದ್ದ ಕುಟುಂಬಗಳಲ್ಲೇ ಭೀತಿಯಿಂದ ಉಸಿರುಗಟ್ಟುತ್ತಿರುವ ಮಹಿಳೆಯರು, ಸಾಮರ್ಥ್ಯವಿದ್ದರೂ ರಾಜಕೀಯ ಪ್ರಾತಿನಿಧ್ಯ ಪಡೆಯದ ಮಹಿಳೆಯರನ್ನು ಕುರಿತ ವಿಚಾರ ಸಂಕಿರಣವನ್ನು ಮಾರ್ಚ್ 8ರಂದು ಹಮ್ಮಿಕೊಳ್ಳಲಾಗಿದೆ. ರಾಜ್ಯಾದ್ಯಂತ ಸುಮಾರು ಐದು ಸಾವಿರ ಮಹಿಳೆಯರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಅವರೆಲ್ಲರಿಗು ಊಟ–ವಸತಿಯ ವ್ಯವಸ್ಥೆ ಒದಗಿಸಲು, ಹಮ್ಮಿಕೊಂಡಿರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಮಾಡಲು ಸಿದ್ಧತೆ ನಡೆದಿದೆ. ಸಿದ್ಧತಾ ಸಭೆಗಳು ನಡೆಯುತ್ತಿರುವುದು, ತನಗೆ ಸೂರೇ ಇರಬಾರದೆಂದು ಹೇಳಿದ, ವಿಜಯಪುರಕ್ಕೆ ಬಂದ ಮೊದಲ ಸಂತ ಹಜ಼ರತ್ ಕ್ವಾಜ಼ ಸೈದ್ ಹಾಜಿ ರೂಮಿ ಬಾಬಾ ದರ್ಗಾದಲ್ಲಿ. ಸಹೃದಯರ, ಸಮಾನ ಮನಸ್ಕರ ಧನ ಸಹಾಯ ಹಾಗೂ ಬೆಂಬಲದೊಂದಿಗೆ ಈ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ. ಸಮಾನತೆ, ಜಾತ್ಯತೀತತೆಯನ್ನು ನಂಬುವ, ಈ ನಾಡಿನ ಬಹು ವೈವಿಧ್ಯತೆಯನ್ನು ಗೌರವಿಸುವ ಸುಮಾರು ಇನ್ನೂರಕ್ಕೂ ಹೆಚ್ಚಿನ ಸಂಘಟನೆಗಳು, ಸಂಸ್ಥೆಗಳು ಮತ್ತು ಹಲವಾರು ವ್ಯಕ್ತಿಗಳು ಒಕ್ಕೂಟದೊಂದಿಗೆ ಕೈಜೋಡಿಸಿವೆ. ಹಿಂಸೆ ಮುಕ್ತ, ಸಮಸಮಾಜದ ಕನಸಿರುವ, ಪ್ರೀತಿ ಕರುಣೆಯಲ್ಲಿ ನಂಬಿಕೆ ಇರುವವರೆಲ್ಲರಿಗೂ ಆತ್ಮೀಯ ಸ್ವಾಗತ.

ನಮ್ಮೊಂದಿಗೆ ಹೆಜ್ಜೆ ಹಾಕಲು ಸಹಸ್ರಾರು ಸಂಖ್ಯೆಯಲ್ಲಿ ಬನ್ನಿ.

(ಕನ್ನಡ ಪ್ರಭ)



# ವಿಚಾರ ಸಂಕಿರಣ

**ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ ಮಹಿಳಾ ಅಧ್ಯಯನ ವಿಭಾಗ ಮತ್ತು ಮಹಿಳಾ ಅಧ್ಯಯನ ಕೇಂದ್ರ**

ಹಾಗೂ

**ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟ ವಿಜಯಪುರ ಇವರ ಸಹಯೋಗದೊಂದಿಗೆ**

**ಮಾರ್ಚ್, 8, 2016 ರಂದು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ**

**ವಿಚಾರ ಸಂಕಿರಣ**

## ಮಹಿಳೆ ಮತ್ತು ವರ್ತಮಾನದ ಬಿಕ್ಕಟ್ಟುಗಳು

**ಸ್ಥಳ: ಕಂದಗಲ್ ಹನುಮಂತರಾಯ ರಂಗಮಂದಿರ**
**ಸ್ಟೇಶನ್ ರೋಡ, ವಿಜಯಪುರ**

| | | |
|---|---|---|
| ಪ್ರಾಸ್ತಾವಿಕ ನುಡಿ | : | **ಪ್ರೊ. ಆರ್. ಸುನಂದಮ್ಮ,** ಮುಖ್ಯಸ್ಥರು, ಮಹಿಳಾ ಅಧ್ಯಯನ ವಿಭಾಗ, ಕ.ರಾ.ಮ.ವಿ.ವಿ., ವಿಜಯಪುರ |
| ಉದ್ಘಾಟನೆ ಮತ್ತು ದಿಕ್ಸೂಚಿ ಮಾತು | : | **ಪ್ರೊ. ಉಮಾ ಚಕ್ರವರ್ತಿ,** ಸಂದರ್ಶನ ಪ್ರಾಧ್ಯಾಪಕರು, ಸೆಂಟರ್ ಫಾರ್ ಲಾ & ಗವರನೆನ್ಸ್, ಜವಾಹರಲಾಲ್ ನೆಹರು ವಿಶ್ವವಿದ್ಯಾಲಯ, ನವದೆಹಲಿ |
| ಪುಸ್ತಕ ಬಿಡುಗಡೆ | : | **ಡಾ. ಸರಸ್ವತಿ ಚಿಮ್ಮಲಗಿ,** ಖ್ಯಾತ ಸಾಹಿತಿಗಳು, ವಿಜಯಪುರ. |
| ಅಧ್ಯಕ್ಷತೆ | : | **ಪ್ರೊ. ಮೀನಾ ಆರ್. ಚಂದಾವರಕರ,** ಮಾನ್ಯ ಕುಲಪತಿಗಳು, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ವಿಜಯಪುರ. |

## ವಿಷಯ ಮಂಡನೆ:

1. **ಕೃಷಿ ಬಿಕ್ಕಟ್ಟು ಮತ್ತು ಮಹಿಳೆ :**
   **ವಿ. ಗಾಯತ್ರಿ** ಸಂಪಾದಕರು, ಸಹಜ ಸಾಗುವಳಿ ದ್ವೈಮಾಸಿಕ, ಬೆಂಗಳೂರು
2. **ದೇವದಾಸಿ ಮಹಿಳೆಯರು/ಲೈಂಗಿಕ ಕಾರ್ಯಕರ್ತೆಯರು: ಅಪರಾಧೀಕರಣ**
   **ಆರ್. ಮೀರಾ,** ಸಾಮಾಜಿಕ ಕಾರ್ಯಕರ್ತೆ, ವಿನ್ಸ್ ಸಂಸ್ಥೆ, ತಿರುಪತಿ
3. **ಒಂಟಿ ಮಹಿಳೆಯರ ಸಾಮಾಜಿಕ ಸಮಸ್ಯೆ**
   **ಶಕುನ್ ಮೋಹಿನಿ,** ಮಹಿಳಾ ಹಕ್ಕುಗಳ ಹೋರಾಟಗಾರ್ತಿ, ಬೆಂಗಳೂರು
4. **ಬಾಲ್ಯ ವಿವಾಹ, ಮಕ್ಕಳ ಮೇಲಿನ ದೌರ್ಜನ್ಯ ಮತ್ತು ಮಕ್ಕಳ ಸಾಗಣೆ**
   **ದರ್ಶನ ಮಿತ್ರ,** ವಕೀಲರು, ಆಲ್ಟರ್‌ನೇಟಿವ್ ಲಾ ಫೋರಂ, ಬೆಂಗಳೂರು
5. **ಕೌಟುಂಬಿಕ ದೌರ್ಜನ್ಯ : ಸಾಮಾಜಿಕ ಆಯಾಮಗಳು**
   **ಬಿ.ಸಿ. ಮಂಜುಳಾ,** ಮುಖ್ಯಸ್ಥರು, ಕನ್ನಡ ವಿಭಾಗ, ಬಾಸುದೇವ ಸೋಮಾನಿ ಕಾಲೇಜು, ಮೈಸೂರು
6. **ಮಹಿಳೆ ಮತ್ತು ರಾಜಕೀಯ ಪ್ರಾತಿನಿಧ್ಯದ ಮಹತ್ವ**
   **ಡಾ. ಅನುಪಮಾ ಎಚ್. ಎಸ್.** ವೈದ್ಯೆ ಹಾಗೂ ಲೇಖಕಿ, ಕವಲಕ್ಕಿ.

## ಸಂವಾದದಲ್ಲಿ:

ಅಖಿಲಾ ವಿದ್ಯಾಸಂದ್ರ, ಬೆಂಗಳೂರು; ಲಲಿತ ಬಿಜ್ಜರಗಿ, ವಿಜಯಪುರ; ಶೈಲಾ ಕಟ್ಟಿ, ವಿಜಯಪುರ; ಸುನಂದಾ ತೋಳಬಂದಿ, ವಿಜಯಪುರ; ಸರೋಜಾ ಬಿರಾದಾರ, ವಿಜಯಪುರ; ಜ್ಯೋತಿ, ಕೊಪ್ಪಳ; ರಮೀಜಾ ಸಿಂದಗಿ, ವಿಜಯಪುರ; ಮದೀನಾ, ಗಾಟು, ಬೆಂಗಳೂರು; ರಜಿಯಾ ನದಾಫ್ ವಿಜಯಪುರ; ಮಂಜುಳಾ ಸಂಗನಾಳ, ವಿಜಯಪುರ; ಶಶಿಕಲಾ ರಾಠೋಡ, ವಿಜಯಪುರ; ಡಾ. ಮಲ್ಲಮ್ಮ ಯಾಳವಾರ, ವಿಜಯಪುರ; ಗೀತಾ ಅಥರ್ಗಾ, ವಿಜಯಪುರ; ಅಪ್ಸರಾಬೇಗಂ ಚಪ್ಪರಬಂದ, ವಿಜಯಪುರ; ದ್ರಾಕ್ಷಾಯಣಿ ಹುಡೇದ, ವಿಜಯಪುರ; ವಿದ್ಯಾವತಿ ಅಂಕಲಗಿ, ವಿಜಯಪುರ; ಸಂಪತ್‌ಕುಮಾರಿ, ಕೊಪ್ಪಳ; ಸವಿತಾ ಎ. ಬೆಂಗಳೂರು; ಸುಶೀಲಾ ಕಾಂಬಳೆ, ವಿಜಯಪುರ; ಬಸವಲಿಂಗಮ್ಮಾ, ವಿಜಯಪುರ



# ಪ್ರಸ್ತಾವನೆ

**(ವಿಚಾರ ಸಂಕಿರಣ ಮತ್ತು ಸಾರ್ವಜನಿಕ ಸಮಾವೇಶದಲ್ಲಿ)**

**ಪ್ರೊ. ಆರ್. ಸುನಂದಮ್ಮ**

ಎಲ್ಲರಿಗೂ ಮಹಿಳಾ ದಿನಾಚರಣೆಯ ಶುಭಾಶಯಗಳು. ಕಳೆದ ಮೂರು ವರ್ಷಗಳಿಂದ ಮಹಿಳಾ ಒಕ್ಕೂಟವು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಿಕೊಂಡು ಬರುತ್ತಿದೆ. ಮಹಿಳೆಯರ ಮೇಲಿನ ದೌರ್ಜನ್ಯಗಳಿಗೆ ತಡೆ ಒಡ್ಡಬೇಕೆಂಬ ಉದ್ದೇಶದಿಂದ ರಾಜ್ಯಾದಂತ ಮಹಿಳಾ ಹಾಗೂ ಸಮಾನ ಮನಸ್ಕ ಸಂಘಟನೆಗಳನ್ನು ಒಳಗೊಂಡ ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು 2013ರಲ್ಲಿ ಆರಂಭವಾಯಿತು. ಅಂದಿನಿಂದಲೂ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ರಾಜ್ಯಮಟ್ಟದಲ್ಲಿ ಒಟ್ಟಾಗಿ ಆಚರಿಸಲಾಗುತ್ತಿದೆ. ಹೋಂ ಸ್ಟೇ ದಾಳಿ, ಪಬ್ ದಾಳಿ ಯತಂಹ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು ಹೆಚ್ಚಾಗಿ ನಡೆಯುತ್ತಿದ್ದ ಮಂಗಳೂರಿನಲ್ಲಿ ಒಕ್ಕೂಟದ ವತಿಯಿಂದ ಮೊದಲ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು. ಹೀಗೆ ಪ್ರಾರಂಭವಾದದ್ದು, ಪ್ರತಿ ವರ್ಷವೂ ಸುಮಾರು ಐದು ಸಾವಿರ ಮಹಿಳೆಯರನ್ನು ಸೇರಿಸಿ ಒಂದು ದಿನದ ವಿಚಾರ ಸಂಕಿರಣ, ಕಪ್ಪು ಉಡುಪಿನಲ್ಲಿ ಮಹಿಳೆಯರು ಎಂಬ ಮೌನ ಪ್ರತಿಭಟನೆ ಹಾಗೂ ಬೃಹತ್ ರ್‍ಯಾಲಿಯನ್ನು ಹಮ್ಮಿಕೊಳ್ಳಲಾಗುತ್ತಿದೆ. ಸೇರುವ ಸಾವಿರಾರು ಮಹಿಳೆಯರ ಊಟ, ವಸತಿ, ವೇದಿಕೆ, ಕರಪತ್ರ, ಪೆಂಡಾಲ್, ಚೇರುಗಳು ಇತ್ಯಾದಿ ಖರ್ಚುವೆಚ್ಚಗಳಿಗೆ ಸಂಘಟನೆಗಳು ಹಾಗೂ ಸಾರ್ವಜನಿಕರಿಂದಲೇ ಹಣವನ್ನು ಸಂಗ್ರಹಿಸಲಾಗುತ್ತದೆ. ತರಕಾರಿ ಮಾರ್ಕೆಟು, ಮೀನಿನ ಮಾರ್ಕೆಟು, ಮಾಲ್‌ಗಳು ಇತ್ಯಾದಿ ಸಾರ್ವಜನಿಕ ಸ್ಥಳಗಳಿಗೆ ಹೋಗಿ ಸಾರ್ವಜನಿಕರಿಂದ ಹಾಗೂ ಸಂಘಟನೆಗಳು ಮತ್ತು ಸಹೃದಯರಿಂದ ದೇಣಿಗೆ ಸಂಗ್ರಹಿಸಲಾಗುತ್ತದೆ. ಅಲ್ಲದೆ ಕರವಸ್ತ್ರಗಳನ್ನು ತಯಾರಿಸಿ ಅದನ್ನು ಸಾರ್ವಜನಿಕರಿಗೆ ಮಾರಾಟ ಮಾಡುವ ಮೂಲಕವೂ ಹಣವನ್ನು ಸಂಗ್ರಹಿಸಲಾಗುತ್ತಿದೆ.

ಮಂಗಳೂರಿನ ಹಲವಾರು ಮಹಿಳಾ ಸಂಘಟನೆಗಳು ಅತ್ಯಂತ ಉತ್ಸಾಹ ಹಾಗೂ ಬದ್ಧತೆಯಿಂದ ಒಗ್ಗೂಡಿ 2013ರ ಮಹಿಳಾ ದಿನಾಚರಣೆಯನ್ನು ಯಶಸ್ವಿಗೊಳಿಸಿದವು. ರಾಜ್ಯದೆಲ್ಲೆಡೆಯಿಂದ ಬಂದು ಸೇರಿದ್ದ ಐದು ಸಾವಿರದಷ್ಟು ಮಹಿಳೆಯರು ಒಕ್ಕೊರಲಿನಿಂದ ಇನ್ನು ಹಿಂಸೆಯನ್ನು ನಿಲ್ಲಿಸಿ ಎಂದು ಘೋಷಣೆ ಕೂಗುತ್ತ ಮಂಗಳೂರಿನ ಬೀದಿಗಳಲ್ಲಿ ಸಾಲಾಗಿ ಸಾಗಿದ್ದು ಮಹಿಳಾ ಶಕ್ತಿಯ ಸಂಕೇತವಾಗಿತ್ತು. ಈ ನಾಡಿನ ದುಡಿಯುವ ಮಹಿಳೆಯರೆಲ್ಲರಿಗೂ ಕೆಲಸ ಮಾಡುವ ಸ್ಥಳದಲ್ಲಿ ಮಹಿಳೆಯರ ಮೇಲೆ ನಡೆಯುವ ಲೈಂಗಿಕ ಕಿರುಕುಳವು ಅಪರಾಧವೆಂಬ ಕಾನೂನಿಗೆ ಕಾರಣಕರ್ತಳಾದ ರಾಜಾಸ್ತಾನದ ಭಾವ್ರಿ ದೇವಿಯವರು ಮೆರವಣಿಗೆಯನ್ನು ಮುನ್ನಡೆಸಿದ್ದು, ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ್ದು ಎಲ್ಲರಲ್ಲಿಯೂ ಸಂಚಲನ ಮೂಡಿಸಿತ್ತು. ಆ ನಂತರ ಮಹಿಳಾ ದಿನಾಚರಣೆಯ ಆಚರಣೆಯು ಮಂಗಳೂರಿಗೆ ನಿಲ್ಲಲಿಲ್ಲ. ಮುಂದಿನ ಮಹಿಳಾ ದಿನಾಚರಣೆಯನ್ನು ಮೈಸೂರಿನ ಮಹಿಳಾ ಸಂಘಟನೆಗಳ ಸೋದರಿಯರು ಒಗ್ಗೂಡಿ ಮೈಸೂರಿನಲ್ಲಿ ಯಶಸ್ವಿಯಾಗಿ ಆಚರಿಸಿದರು. ಮುಂದೆ ಬೆಂಗಳೂರಿನ ಮಹಿಳಾ ಸಂಘಟನೆಗಳು ಒಟ್ಟುಸೇರಿ 2015ರಲ್ಲಿ ಯಶಸ್ವಿಯಾಗಿ ಮಹಿಳಾ ದಿನಾಚರಣೆಯನ್ನು ಆಚರಿಸಿದರು. ಈ ಸಲ ವಿಜಯಪುರದ ಮಹಿಳಾ ಹಾಗೂ ಸಮಾನ ಮನಸ್ಕ ಸಂಘಟನೆಗಳು ಸೇರಿ ಆಚರಿಸುತ್ತಿರುವುದು ಒಂದು ಐತಿಹಾಸಿಕ ಘಟನೆಯಾಗಿದೆ. ಕಳೆದ ಎರಡು ವರ್ಷಗಳಿಂದ ಕರವಸ್ತ್ರವನ್ನು ಹೊಲೆಸಿ ಮಾರಾಟ ಮಾಡಿ ಹಣ ಸಂಗ್ರಹಣೆ ಮಾಡಿದಂತೆ ಇಲ್ಲಿಯೂ ಸಹ ಮಾಡಲಾಯಿತು. ಇಲ್ಲಿನ ದಲಿತ ಜನಸೇನಾ ಮಹಿಳಾ ಸಂಘಟನೆಯ ಮಹಿಳೆಯರು ಐದು ಸಾವಿರಕ್ಕೂ ಹೆಚ್ಚಿನ ಕರವಸ್ತ್ರವನ್ನು ಕೇವಲ ಎರಡು ರೂಪಾಯಿಗೆ ಒಂದರಂತೆ ಹೊಲೆದು ಕೊಟ್ಟರು. ಕರವಸ್ತ್ರವನ್ನು ರೂ 25ಕ್ಕೆ ಮಾರಾಟ ಮಾಡಿ ಹಣವನ್ನು ಸಂಗ್ರಹಿಸಲಾಯಿತು. ವಿಜಯಪುರದ ಮಾರುಕಟ್ಟೆಯಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಕರಪತ್ರವನ್ನು ಹಂಚಿ ಒಂದೊಂದು ರೂಪಾಯಿಯನ್ನು ಸಂಗ್ರಹಿಸಲಾಯಿತು. ಮಂಗಳೂರಿನ, ಮೈಸೂರಿನ ಮತ್ತು ಬೆಂಗಳೂರಿನ ಮಹಿಳಾ ಸಂಘಟನೆಯವರು ಸಹ ಧನ ಸಹಾಯ ನೀಡಿದರು. ಒಕ್ಕೂಟದ ಭಾಗವಾಗಿರುವ ಪ್ರತಿಯೊಬ್ಬ ಮಹಿಳೆಯರು ಒಂದಲ್ಲ ಒಂದು ರೀತಿ ಕೈಜೋಡಿಸಿರುವ ಕಾರಣಕ್ಕೆ ಕಾರ್ಯಕ್ರಮ ಯಶಸ್ವಿಯಾಗಿ ನಡೆದುಕೊಂಡು ಬಂದಿದೆ. ಈ ಅರ್ಥದಲ್ಲಿ ಒಕ್ಕೂಟವು ಎಲ್ಲ ಮಹಿಳೆಯರ ಧ್ವನಿಯಾಗಿದೆ.

ಈ ಸಲದ ವಿಚಾರ ಸಂಕಿರಣದ ಮುಖ್ಯ ಭಾಷಣಕಾರರಾಗಿ ದೆಹಲಿಯ ಜವಹರ್‌ಲಾಲ್ ವಿಶ್ವವಿದ್ಯಾಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿರುವ, ಹಲವಾರು ವರ್ಷಗಳಿಂದಲೂ ಮಾನವ ಹಕ್ಕುಗಳ ಹೋರಾಟದಲ್ಲಿ ಅವಿರತವಾಗಿ ತೊಡಗಿಸಿಕೊಂಡಿರುವ ಉಮಾ ಚಕ್ರವರ್ತಿಯವರು ಬರುತ್ತಿದ್ದಾರೆ. ಅವರು ನಮ್ಮನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ನಾಳಿನ ರ್‍ಯಾಲಿ ಹಾಗೂ ಸಾರ್ವಜನಿಕ ಸಭೆಗೆ



ನರ್ಮದಾ ಬಚಾವೊ ಆಂದೋಲನ ಖ್ಯಾತಿಯ ಮೇಧಾ ಪಾಟ್ಕರ್ ಅವರು ಬರಲಿದ್ದಾರೆ. ನಾವೆಲ್ಲರೂ ಮಹಿಳೆಯರಾಗಿ ಚದುರಿಹೋಗಿರುವ ನಮ್ಮ ದನಿಗಳಿಗೆ ಹೊಸ ಹುರುಪು, ಹೊಸ ಚೈತನ್ಯ, ಹೊಸ ಶಕ್ತಿಯನ್ನು ತುಂಬಿಕೊಳ್ಳಬೇಕೆಂಬುದು ನಮ್ಮ ಆಶಯವಾಗಿದೆ.

ನಮ್ಮ ಹೋರಾಟಕ್ಕೆ ಒಂದು ತಾತ್ವಿಕ ಚೌಕಟ್ಟನ್ನು ನೀಡುವುದು ಅವಶ್ಯಕವಾಗಿರುವುದರಿಂದ ಆಯಾ ಪ್ರದೇಶದ ಮಹಿಳೆಯರಿಗೆ ಸಂಬಂಧಪಟ್ಟ ಮುಖ್ಯ ವಿಷಯಗಳ ಕುರಿತು ವಿಚಾರ ಸಂಕಿರಣವನ್ನು ನಡೆಸುತ್ತ ಬಂದಿದ್ದೇವೆ. ಚರ್ಚೆ, ಸಂವಾದಗಳು ಏರ್ಪಟ್ಟಾಗ ಮಾತ್ರವೇ ನಾವು ಸೈದ್ಧಾಂತಿಕ ನೆಲೆಯಲ್ಲಿ ಗಟ್ಟಿಗೊಳ್ಳಲು ಸಾಧ್ಯ. ವಿಜಯಪುರದಲ್ಲಿ ನೀರಾವರಿ ಕೃಷಿ ಕೇವಲ 18% ಆದರೆ ಉಳಿದ 82% ಮಳೆಯಾಧಾರಿತ ಕೃಷಿಯಾಗಿದೆ. ಇಲ್ಲಿ 633 ಮಿಮಿರಷ್ಟೇ ಮಳೆಯಾಗುವುದು. ಈ ಪ್ರದೇಶವು ಕೃಷಿ ಬಿಕ್ಕಟ್ಟನ್ನು ಎದುರಿಸುತ್ತಿದೆ. ಅಂತರ್ಜಲ ಮಟ್ಟವೂ ಕಡಿಮೆಯಿದೆ. ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಇದರ ಪರಿಣಾಮ ಮಹಿಳೆಯರ ಮೇಲಾಗುತ್ತಿದೆ. ಗಂಡನನ್ನು ಕಳೆದುಕೊಂಡು ವಿಧವೆಯಾಗುವುದರ ಜೊತೆಗೆ ಇಡೀ ಕುಟುಂಬದ ಜವಾಬ್ದಾರಿಯನ್ನು ಮಹಿಳೆಯರು ನಿರ್ವಹಿಸಬೇಕಾಗುತ್ತದೆ. ಇಂಥ ಸಂದರ್ಭದಲ್ಲಿ ರೈತ ಮಹಿಳೆಯರ ಸಮಸ್ಯೆಗಳನ್ನು ಅರ್ಥಮಾಡಿಕೊಂಡು, ಅವರನ್ನು ಬೆಂಬಲಿಸಿ, ಗಟ್ಟಿ ಮಾಡುವುದನ್ನು ಒಕ್ಕೂಟವು ಜವಾಬ್ದಾರಿ ಎಂದು ಭಾವಿಸುತ್ತದೆ. ಹಾಗಾಗಿ ಇಂದಿನ ವಿಚಾರ ಸಂಕಿರಣದಲ್ಲಿ ಕೃಷಿ ಬಿಕ್ಕಟ್ಟು ಮತ್ತು ರೈತ ಮಹಿಳೆ ಎಂಬ ವಿಷಯವನ್ನು ಚರ್ಚಿಸಲಾಗುತ್ತಿದೆ. ಈ ವಿಷಯದಲ್ಲಿ ಹಲವಾರು ವರ್ಷಗಳಿಂದ ಮಳೆಯಾಧಾರಿತ ಕೃಷಿಗೆ ಸಂಬಂಧಪಟ್ಟಂತೆ ರೈತರೊಂದಿಗೆ ಕೆಲಸ ಮಾಡುತ್ತಿರುವ, ಹಲವಾರು ವರ್ಷಗಳಿಂದ ವಿವಿಧ ಹೋರಾಟಗಳಲ್ಲಿ ತೊಡಗಿಸಿಕೊಂಡಿರುವ ಪಿ. ಸಾಯಿನಾಥ್ ಪ್ರಶಸ್ತಿ ಪಡೆದ, ಸಹಜ ಸಾಗುವಳಿ ದ್ವೈಮಾಸಿಕದ ಸಂಪಾದಕರಾದ ವಿ. ಗಾಯತ್ರಿಯವರು ಮಾತನಾಡಲಿದ್ದಾರೆ.

ಈ ಪ್ರದೇಶದಲ್ಲಿ ದೇವದಾಸಿ ಪದ್ಧತಿ ಇನ್ನೂ ಜೀವಂತವಾಗಿದೆ. ವಿಜಯಪುರದಲ್ಲಿ ದೇವದಾಸಿ ಮಹಿಳೆಯರ ಸಂಖ್ಯೆ ಹೆಚ್ಚಾಗಿರುವುದಲ್ಲದೆ ಅವರು ಎಚ್‌ಐವಿ ಸೋಂಕಿನಿಂದಲೂ ನರಳುತ್ತಿದ್ದಾರೆ. ಹೊಟ್ಟೆಪಾಡಿಗಾಗಿ ಲೈಂಗಿಕ ವೃತ್ತಿಯನ್ನು ಮಾಡಬೇಕಾಗಿರುವ ಈ ಮಹಿಳೆಯರು ಕಳಂಕ ಹಾಗೂ ಲೈಂಗಿಕ ದೌರ್ಜನ್ಯವನ್ನು ನಿರಂತರವಾಗಿ ಎದುರಿಸುತ್ತಾರೆ. ಈ ಮಹಿಳೆಯರ ಕುರಿತು ಚರ್ಚೆ ಮಾಡುವುದು ಮುಖ್ಯವೆನಿಸಿದ್ದರಿಂದ 'ದೇವದಾಸಿ ಮಹಿಳೆ/ಲೈಂಗಿಕ ಕಾರ್ಯಕರ್ತೆಯರು: ಅಪರಾಧೀಕರಣ' ಎಂಬ ವಿಷಯವನ್ನು ಚರ್ಚೆಯಲ್ಲಿ ಒಳಗೊಳ್ಳಲಾಗಿದೆ. ಈ ವಿಷಯ ಕುರಿತಂತೆ ಹಲವಾರು ವರ್ಷಗಳಿಂದ ಕೆಲಸ ಮಾಡುತ್ತಿರುವ ತಿರುಪತಿಯ ವಿನ್ಸ್ ಸಂಸ್ಥೆಯ ಆರ್. ಮೀರಾ ಅವರು ಮಾತನಾಡಲಿದ್ದಾರೆ.

ಮದುವೆಯಾಗದೆಯೋ ಅಥವಾ ಮದುವೆಯಾಗಿ ಗಂಡ ತೀರಿ ಹೋಗಿ ಅಥವಾ ಬಿಟ್ಟುಹೋಗಿರುವ ಕಾರಣಕ್ಕೆ ಅಥವಾ ಇನ್ಯಾವುದೋ ಕಾರಣಕ್ಕೆ

ಒಂಟಿಯಾಗಿ ಉಳಿದಿರುವ ಹಲವಾರು ಮಹಿಳೆಯರು ನಮ್ಮಲ್ಲಿದ್ದಾರೆ. ಈ ಮಹಿಳೆಯರು ತಮ್ಮ ಹಕ್ಕು, ಸವಲತ್ತುಗಳನ್ನು ಕಳೆದುಕೊಂಡು, ಕೌಟುಂಬಿಕ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. ಹಾಗಾಗಿ 'ಒಂಟಿ ಮಹಿಳೆಯರ ಸಾಮಾಜಿಕ ಸಮಸ್ಯೆಗಳು' ಎಂಬ ವಿಷಯವನ್ನು ಕುರಿತು ಇಂದು ಚರ್ಚಿಸಲು ಬೆಂಗಳೂರಿನ ಮಹಿಳಾ ಹಕ್ಕುಗಳ ಕಾರ್ಯಕರ್ತೆ ಶಕುನ್ ಮೋಹಿನಿಯವರು ಬಂದಿದ್ದಾರೆ.

ವಿಜಯಪುರದಲ್ಲಿ ಶೇ 25ರಷ್ಟು ಹೆಣ್ಣುಮಕ್ಕಳು ಬಾಲ್ಯವಿವಾಹಕ್ಕೆ ಒಳಗಾಗುತ್ತಿದ್ದಾರೆ. ಅದರಲ್ಲಿಯೂ ಶೇ. 60ರಷ್ಟು ಹೆಣ್ಣುಮಕ್ಕಳು ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ. ಮಹಿಳಾ ವಿಶ್ವವಿದ್ಯಾಲಯದಲ್ಲಿಯೂ ಮದ್ಯಮವರ್ಗದ ಹೆಣ್ಣು ಮಕ್ಕಳು ಅಪೌಷ್ಠಿಕತೆಗೆ ಒಳಗಾಗಿದ್ದಾರೆ. ಇದರಿಂದಾಗಿ ತಾಯಿಮರಣ ಪ್ರಮಾಣ ಹೆಚ್ಚಾಗಿದೆ. ಶಿಕ್ಷಣದ ಕೊರತೆ, ಬಡತನದ ಸಮಸ್ಯೆಯಿಂದಾಗಿ ಮಕ್ಕಳ ಮೇಲಿನ ದೌರ್ಜನ್ಯ ಮತ್ತು ಮಕ್ಕಳ ಸಾಗಾಣಿಕೆ ಹೆಚ್ಚಾಗುತ್ತಿದೆ. ಹಾಗಾಗಿ 'ಬಾಲ್ಯವಿವಾಹ/ ಮಕ್ಕಳ ಮೇಲಿನ ದೌರ್ಜನ್ಯ/ಮಕ್ಕಳ ಸಾಗಾಣಿಕೆ ಎಂಬ ವಿಷಯವನ್ನು ಚರ್ಚೆಗೆ ತೆಗೆದು ಕೊಳ್ಳಲಾಗಿದೆ. ಈ ವಿಷಯ ಕುರಿತು ಬೆಂಗಳೂರಿನಲ್ಲಿ ವಕೀಲರಾಗಿರುವ ದರ್ಶನ ಮಿತ್ರ ಅವರು ಮಾತನಾಡಲಿದ್ದಾರೆ.

ಕೌಟುಂಬಿಕ ದೌರ್ಜನ್ಯ ಕಾಯ್ದೆ ಬಂದಿದ್ದರೂ ಅದನ್ನು ಸಮರ್ಥವಾಗಿ ಬಳಸಲು ಸಾಧ್ಯವಾಗದಿರುವುದಕ್ಕೆ ಸಮಾಜದ ಮನಸ್ಥಿತಿ ಕಾರಣವಾಗಿದೆ. ಇಂತ ಮನಸ್ಥಿತಿಯನ್ನು ಅರ್ಥಮಾಡಿಕೊಳ್ಳುವುದು ಕೌಟುಂಬಿಕ ದೌರ್ಜನ್ಯವನ್ನು ತಡೆಯುವ ನಿಟ್ಟಿನಲ್ಲಿ ಮುಖ್ಯವಾದ್ದರಿಂದ 'ಕೌಟುಂಬಿಕ ದೌರ್ಜನ್ಯ ಸಾಮಾಜಿಕ ಆಯಾಮಗಳು' ಎಂಬ ವಿಷಯವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ವಿಷಯವನ್ನು ಕುರಿತು ಮೈಸೂರಿನ ಬಾಸುದೇವ ಸೋಮಾನಿ ಕಾಲೇಜಿನ ಕನ್ನಡ ವಿಭಾಗದ ಬಿ.ಸಿ. ಮಂಜುಳಾ ಅವರು ಮಾತನಾಡಲಿದ್ದಾರೆ.

ಮಹಿಳೆಯರಿಗೆ ರಾಜಕೀಯ ಪ್ರಾತಿನಿಧ್ಯ ನೀಡುವ ಉದ್ದೇಶದಿಂದ ಚರ್ಚೆಗೊಳ ಗಾಗಿರುವ ಶೇ. 33 ಮಹಿಳಾ ಮೀಸಲಾತಿಯು (ಲೋಕಸಭೆ ಮತ್ತು ವಿಧಾನ ಸಭೆಗಳಲ್ಲಿ) ಇನ್ನೂ ಕನಸಾಗಿಯೇ ಉಳಿದಿದೆ. ಈಗಾಗಲೇ ಜಾರಿಯಾಗಿರುವ ಗ್ರಾಮ ಮತ್ತು ಜಿಲ್ಲಾ ಪಂಚಾಯತಿಯಲ್ಲಿ ಮಹಿಳೆಯರು ತಮ್ಮ ಅಧಿಕಾರವನ್ನು ಸಮರ್ಥವಾಗಿ ಬಳಸಲು ಆಗುತ್ತಿಲ್ಲ. ಕಾಯ್ದೆ, ನೀತಿಗಳನ್ನು ರಚಿಸುವಂತಹ ಉನ್ನತ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಪ್ರಾತಿನಿಧ್ಯ ಸಿಗಬೇಕು. ಮಹಿಳಾ ವಿಶ್ವವಿದ್ಯಾಲಯ ದಲ್ಲಿಯೂ ಶೇ 50ರಷ್ಟು ಮೀಸಲಾತಿಯನ್ನು ಜಾರಿಗೊಳಿಸಲು ಆಗಿಲ್ಲ. ಇವುಗಳನ್ನು ಸಾಧಿಸಿಕೊಳ್ಳಲು ಅಗತ್ಯವಾದ ನಿರ್ಧರಿಸುವ ಹಕ್ಕನ್ನು ನೀಡುವ ರಾಜಕೀಯ ಪ್ರಾತಿನಿಧ್ಯವು ಮುಖ್ಯವಾಗುತ್ತದೆ. ಹಾಗಾಗಿ 'ಮಹಿಳೆ ಮತ್ತು ರಾಜಕೀಯ ಪ್ರಾತಿನಿಧ್ಯ' ಎಂಬ ವಿಷಯ ಕುರಿತು ಖ್ಯಾತ ಲೇಖಕರು ಮತ್ತು ವೈದ್ಯರು ಆದ ಎಚ್. ಎಸ್. ಅನುಪಮಾ ಅವರು ಮಾತನಾಡಲಿದ್ದಾರೆ.

**ಸಂಸ್ಕೃತಿ ಸಭ್ಯತೆ ನಮಗೆ ಮಾತ್ರವೇ? ಅಥವಾ ನಿಮಗೂ ಕೂಡಾ?**



ಹೆಣ್ಣುಮಕ್ಕಳು ಹೆಚ್ಚೆಚ್ಚು ಹಿಂಸೆಗೆ ಒಳಗಾಗುತ್ತಾರೆ. ಬೆಳಗಿನಿಂದ ರಾತ್ರಿಯವರೆಗೂ ಎರಡು ಕಾಲು ಒಂದು ಕಡೆ ಊರದೆ ದುಡಿಯುವ ಮಹಿಳೆಯರ ಸಂಖ್ಯೆ ಶೇ. 80ರಷ್ಟಿದೆ. ಆದರೆ ಕೇವಲ 1% ಆಸ್ತಿಯನ್ನು ಮಾತ್ರ ಹೊಂದಿರುತ್ತಾರೆ. ಪುರುಷರು 5–6 ಗಂಟೆಗಳ ಕಾಲ ದುಡಿದು ಶೇ. 99 ಆಸ್ತಿಯನ್ನು ಹೊಂದಿರುತ್ತಾರೆ. ಇಂತಹ ಪರಿಸ್ಥಿತಿಯಲ್ಲಿರುವ ಮಹಿಳೆಯರ ಮೇಲೆ ನಡೆಯುವ ಹಿಂಸೆಯನ್ನು ಪುರುಷರ ಮೇಲಿನ ಹಿಂಸೆಗೆ ಹೋಲಿಸಲಾಗದು. ಆಸ್ತಿಹಕ್ಕನ್ನು 1984ರಲ್ಲಿ ಮಹಿಳೆಯರಿಗೆ ನೀಡಲಾಯಿತು. ಹಾಗಾದರೂ ಹೆಣ್ಣು ಭ್ರೂಣ ಹತ್ಯೆ ಹೆಚ್ಚಾಗುತ್ತಿದೆ. ಎಲ್ಲಿ ದೊಡ್ಡ ಕಟ್ಟಡಗಳು, ಉತ್ತಮ ರಸ್ತೆಗಳು, ಕೈಗಾರಿಕೆಗಳಂಥ ಅಭಿವೃದ್ಧಿ ಹೆಚ್ಚಾಗಿರುವುದೋ; ಶಿಕ್ಷಣ ಪಡೆದ, ಹೆಚ್ಚು ಸಂಪಾದನೆ ಇರುವ ಜನ ಇರುವರೋ ಅಲ್ಲಿ ಹೆಣ್ಣು ಭ್ರೂಣ ಹತ್ಯೆ ಹೆಚ್ಚಾಗುತ್ತಿದೆ. ಇದು ಏನನ್ನು ಸೂಚಿಸುತ್ತದೆ? ನಗರಗಳಲ್ಲಿ ಮದುವೆ ಎಂಬುದು ವ್ಯಾಪಾರವಾಗಿದೆ. ಬೆಂಗಳೂರಿನಂಥ ನಗರದಲ್ಲಿ ಒಂದು ಮದುವೆಗೆ 50 ಲಕ್ಷದಿಂದ ಒಂದು ಕೋಟಿಯವರೆಗು ಖರ್ಚು ಮಾಡಲಾಗುತ್ತದೆ. ಹೈಟೆಕ್ ನಗರವಾದ ಬೆಂಗಳೂರಿನಲ್ಲಿ ಲಿಂಗಾನುಪಾತ 905, ವಿಜಯಪುರದಲ್ಲಿ 936 ಇದೆ. ಆದಿವಾಸಿಗಳಿರುವ ಪ್ರದೇಶಗಳಲ್ಲಿ 975ರಷ್ಟಿದೆ. ಇದು, ಇಂದಿನ ಅಭಿವೃದ್ಧಿಯಾಗಲಿ, ಆರ್ಥಿಕ ಶ್ರೀಮಂತಿಕೆಯಾಗಲಿ, ಶಿಕ್ಷಣವಾಗಲಿ ಮಹಿಳಾ ವಿರೋಧಿಯಾಗಿದೆ ಮತ್ತು ಪುರುಷ ಕೇಂದ್ರಿತವಾಗಿದೆ ಎಂಬುದನ್ನು ಸೂಚಿಸುತ್ತದೆ.

ವಿಜಯಪುರವನ್ನೇ ಉದಾಹರಣೆಗೆ ತೆಗೆದುಕೊಂಡರೆ ಇಲ್ಲಿ ಬಡತನ ಜಾಸ್ತಿ ಇದೆ, ಅಪೌಷ್ಟಿಕತೆ ಜಾಸ್ತಿ ಇದೆ. 16%ರಷ್ಟು ಮನೆಗಳಲ್ಲಿ ಮಾತ್ರ ಗ್ಯಾಸ್ ಸೌಲಭ್ಯವಿದೆ. ಸೌದೆಗಾಗಿ ಮಹಿಳೆಯರು ನಿತ್ಯವೂ ಮೈಲುಗಟ್ಟಲೆ ಹೋಗುತ್ತಾರೆ. ಶೇ.82ರಷ್ಟು ಮಹಿಳೆಯರು ಈಗಲೂ ಶೌಚಕ್ಕಾಗಿ ಬಯಲನ್ನೇ ಅವಲಂಬಿಸಿದ್ದಾರೆ. ಆದರೆ ಸರ್ಕಾರಿ ಸ್ಕೀಮುಗಳಲ್ಲಿ ಪ್ರತಿ ವರ್ಷ ಶೌಚಾಲಯಕ್ಕೆಂದು ಹಣವನ್ನು ಖರ್ಚು ಮಾಡಲಾಗುತ್ತದೆ. ಕುಡಿಯುವ ನೀರು ಸಹ ಲಭ್ಯವಿಲ್ಲ. ವಾರಕ್ಕೆ ಒಮ್ಮೆಯೋ ಎರಡು ಬಾರಿಯೋ ಬರುವ ನೀರಿಗಾಗಿ ಮಹಿಳೆಯರು ಕಾಯುವಂಥ ಪರಿಸ್ಥಿತಿ ಇದೆ.

ಶಿಕ್ಷಣದ ವಿಷಯಕ್ಕೆ ಬಂದರೆ ಅಲ್ಲಿಯೂ ಹೆಣ್ಣುಮಕ್ಕಳು ಹಿಂದೆ ಇದ್ದಾರೆ. ದುಡಿಮೆಗೆ ತಕ್ಕ ಕೂಲಿಯೂ ಇಲ್ಲ. ಎನ್‌ಎಸ್‌ಎಸ್ ಕ್ಯಾಂಪಿಗೆಂದು ಒಂದು ಗ್ರಾಮಕ್ಕೆ ಹೋದಾಗ ಅಲ್ಲಿರುವ 500 ಜನಸಂಖ್ಯೆಯಲ್ಲಿ 27 ಜನ ವಿಧವೆಯರು ಇದ್ದುದು ತಿಳಿಯಿತು. ವಿಜಯಪುರದಲ್ಲಿ ದೇವದಾಸಿಯರ ಸಂಖ್ಯೆಯೂ ಹೆಚ್ಚಿದ್ದು ಅವರಲ್ಲಿ ಎಚ್‌ಐವಿ ಸೋಂಕಿತ ಮಹಿಳೆಯರು ಇದ್ದಾರೆ. 1982ರ ನಂತರದಲ್ಲಿ ದೇವದಾಸಿಯರಾದ ಮಹಿಳೆಯರಿಗೆ ಯಾವ ಸೌಲಭ್ಯವೂ ಸಿಗುತ್ತಿಲ್ಲ. ಒಂದು ಬಿಪಿಎಲ್ ಕಾರ್ಡ್ ಮಾಡಿಸಿಕೊಳ್ಳಲು ಬಡವರು ಲಂಚ ಕೊಡಬೇಕಾದ ಪರಿಸ್ಥಿತಿಯಿದೆ.

ಶುದ್ಧ ಕುಡಿಯುವ ನೀರು, ತಲೆಯ ಮೇಲೊಂದು ಸೂರು, ದುಡಿಮೆಗೆ ತಕ್ಕ ಕೂಲಿ, ಆರೋಗ್ಯ, ಶೌಚ, ಶಿಕ್ಷಣ, ಸುರಕ್ಷಿತ ವಾತಾವರಣವನ್ನು ಅಭಿವೃದ್ಧಿಯಲ್ಲಿ

ಸೇರಿಸದೇ ಹೋದರೆ ಕೇವಲ ರಸ್ತೆ, ದೊಡ್ಡ ಕಟ್ಟಡಗಳಿಂದ ಹೆಣ್ಣುಮಕ್ಕಳ ಪರಿಸ್ಥಿತಿ ಬದಲಾಗುವುದಿಲ್ಲ. ಈ ಎಲ್ಲವನ್ನು ನೆನಪಿನಲ್ಲಿಟ್ಟುಕೊಂಡು ಮಹಿಳಾ ಹೋರಾಟದ ದಿಕ್ಕುದೆಸೆಯನ್ನು ನಿರ್ಧರಿಸಬೇಕಾಗಿದೆ.

ಸೌಹಾರ್ದತೆ, ಶಾಂತಿ, ಸಮಾನತೆ ಮತ್ತು ಹಿಂಸೆ ಮುಕ್ತ ಸಮಾಜವನ್ನು ಸ್ಥಾಪಿಸುವ ಸಾಮರ್ಥ್ಯ ಮತ್ತು ಶಕ್ತಿಯನ್ನು ಸೋದರಿತ್ವವು ನೀಡುತ್ತದೆ ಎಂಬ ನಂಬಿಕೆ ಒಕ್ಕೂಟದ್ದು. ಪುರುಷ ಪ್ರಧಾನ ಮೌಲ್ಯಗಳು ಹುಟ್ಟುಹಾಕುವ ಹಿಂಸೆಗೆ ಸೂಕ್ತ ಪ್ರತಿರೋಧ ಒಡ್ಡಲು ಬೇಕಾದ ಶಕ್ತಿಯನ್ನು ಒಕ್ಕೂಟವು ನೀಡುವುದೆಂಬ ಭರವಸೆ ನನಗಿದೆ. ಪುರುಷ ಪ್ರಧಾನ ಮೌಲ್ಯಗಳನ್ನು ಪುರುಷರಷ್ಟೇ ಅಲ್ಲದೇ ಮಹಿಳೆಯರೂ ಸಹ ಸಾಮಾಜೀಕರಣದ ಮೂಲಕ ಮೈಗೂಡಿಸಿಕೊಂಡಿರುತ್ತಾರೆ. ಅಲ್ಲದೆ ಪುರುಷ ಪ್ರಧಾನ ಮೌಲ್ಯಗಳು ಮಹಿಳೆಯರಿಗಷ್ಟೇ ಅಲ್ಲ ಪುರುಷರಿಗೂ ಮಾರಕ ಎಂಬುದನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಪುರುಷಪ್ರಧಾನ ಮೌಲ್ಯಗಳಿಗೆ ಪ್ರತಿರೋಧ ಒಡ್ಡುವುದೆಂದರೆ ಅಸಮಾನತೆಯ ವಿರುದ್ಧ ಒಡ್ಡುವ ಪ್ರತಿರೋಧವಾಗಿದೆ. ಹಿಂಸೆ ಮುಕ್ತ ಸಮಾನತೆಯ ಸಮಸಮಾಜವನ್ನು ಸ್ಥಾಪಿಸುವುದು ಅದರ ಗುರಿಯಾಗಿದೆ. ಈ ನಿಟ್ಟಿನಲ್ಲಿ ಸೋದರಿತ್ವದ ನೆಲೆಯಲ್ಲಿ ಮಹಿಳೆಯರನ್ನು ಒಗ್ಗೂಡಿಸುತ್ತಿರುವ ಒಕ್ಕೂಟದ ಪ್ರಯತ್ನವು ಅರ್ಥಪೂರ್ಣವೆಂದು ಭಾವಿಸುತ್ತೇನೆ.

ನಾವಿಲ್ಲದಿದ್ದರೆ ನೀವಿಲ್ಲ ನಾವಿಲ್ಲದಿದ್ದರೆ ಜಗತ್ತೇಇಲ್ಲ



# ಸಮ ಸಮಾಜಕ್ಕಾಗಿ ಸಂಘರ್ಷ

**ಪ್ರೊ. ಉಮಾ ಚಕ್ರವರ್ತಿ**

ಎಲ್ಲರಿಗೂ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭಾಶಯಗಳು.

ಹಲವಾರು ವರ್ಷಗಳಿಂದ ನಾವು ನಮ್ಮ ಹಕ್ಕುಗಳಿಗಾಗಿ ಹೋರಾಡುತ್ತಿರುವುದು ಎಲ್ಲರಿಗೂ ತಿಳಿದಿರುವ ವಿಚಾರವಾಗಿದೆ. ಸಮಾಜದಲ್ಲಿರುವ ತಾರತಮ್ಯಗಳನ್ನು ನಾವು ಒಪ್ಪುವುದಿಲ್ಲ ಹಾಗಾಗಿ ಸಮಾನತೆಯ ಸಮಾಜ ಕಟ್ಟಲು ಹೋರಾಡುತ್ತಿದ್ದೇವೆ. ಎಲ್ಲಿಯವರೆಗೆ ಸಮಾಜದಲ್ಲಿ ತಾರತಮ್ಯ ಕೊನೆಯಾಗಿ ಸಮಾನತೆ ಬರುವುದಿಲ್ಲವೋ, ಅಲ್ಲಿಯವರೆಗೂ ಬದಲಾವಣೆಗಾಗಿ ನಾವು ಮತ್ತು ಯುವಪೀಳಿಗೆಯವರು ಸೇರಿ ಹೋರಾಡಲೇಬೇಕಾಗಿದೆ.

ಸಮಾಜ ನಿರ್ಮಾಣವಾಗುವುದು ರಾಜಕೀಯ, ಆರ್ಥಿಕ ವ್ಯವಸ್ಥೆಯ ಆಧಾರದ ಮೇಲೆ. ಅದಕ್ಕನುಗುಣವಾಗಿ ರೀತಿನೀತಿಗಳು ನಿರ್ಮಾಣವಾಗುತ್ತವೆ. ರಾಜಕೀಯ, ಆರ್ಥಿಕ ವ್ಯವಸ್ಥೆ ಬದಲಾದಂತೆ ಈ ರೀತಿ ನೀತಿಗಳು ಬದಲಾಗುತ್ತವೆ. ನಾನು ಒಬ್ಬ ಇತಿಹಾಸಕಾರಳಾಗಿ ಈ ಬದಲಾವಣೆಯನ್ನು ಗುರುತಿಸುತ್ತೇನೆ. ನಾನು ಬೌದ್ಧಧರ್ಮವನ್ನು ಕುರಿತು ಸಂಶೋಧನೆ ಮಾಡಿದ್ದೇನೆ. ಕಾರಣ, ನಾನು ಚಿಕ್ಕ ವಯಸ್ಸಿನಲ್ಲಿರುವಾಗಲೇ ಅಂದರೆ ಹದಿನೈದು ವರ್ಷದವಳಾಗಿದ್ದಾಗ ಬೌದ್ಧಧರ್ಮದ ಬಗ್ಗೆ ಆಸಕ್ತಿ ಹುಟ್ಟಿತು. ಆಸಕ್ತಿಗೆ ಪ್ರೇರಣೆಯಾಗಿದ್ದು 1956ರಲ್ಲಿ ಬಾಬಾ ಸಾಹೇಬ್ ಅಂಬೇಡ್ಕರ್‌ರವರು ಬೌದ್ಧಧರ್ಮ ಸ್ವೀಕರಿಸಿದ ಘಟನೆ. ಆ ಘಟನೆಯ ಬಗ್ಗೆ ಮೇಲ್ಜಾತಿಯ ಜನರು ಕುಪಿತರಾಗಿದ್ದರು. ಬಾಬಾ ಸಾಹೇಬರು "ನಾನು ಯಾವ ಧರ್ಮದಲ್ಲಿ ಹುಟ್ಟಿದ್ದೇನೋ ಅದೇ ಧರ್ಮದಲ್ಲಿ ಸಾಯುವುದಿಲ್ಲ" ಎಂದು ಘೋಷಿಸಿದ್ದರು. ಹಾಗಾಗಿ ಅವರು ಅಪಾರ ಹುಡುಕಾಟ ನಡೆಸಿ ನೈತಿಕ ದಾರಿಯಾಗಿದ್ದ ಬೌದ್ಧಧರ್ಮವನ್ನು ಸ್ವೀಕರಿಸಿದ್ದರು. ಈ ವಿಷಯ ನನ್ನ ಮನಸ್ಸಿನಲ್ಲಿ

ಅಚ್ಚಳಿಯದೆ ಉಳಿದಿತ್ತು. ಆದ್ದರಿಂದಲೆ ನಾನು ಬೌದ್ಧಧರ್ಮದಲ್ಲಿ ಸಂಶೋಧನೆ ಮಾಡಿದೆ. ಎಂತಹ ವರ್ಗದ ಜನರನ್ನು ಈ ಧರ್ಮ ಆಕರ್ಷಿಸಿತು ಮತ್ತು ಯಾವ ಶಸ್ತ್ರಾಸ್ತ್ರಗಳೂ ಇಲ್ಲದೆ ಚೈನಾ, ಕೊರಿಯಾ, ಜಪಾನ್‌ವರೆಗೂ ಹಬ್ಬಿತು ಎಂಬ ಬಗ್ಗೆ ನನಗೆ ಕುತೂಹಲವಿತ್ತು. ಜಾತಿ ವಿರೋಧಿ ಧ್ವನಿಯನ್ನು ಹುಡುಕುವುದು ನನ್ನ ಆಸಕ್ತಿಯಾಗಿತ್ತು. ಬೌದ್ಧ ಧರ್ಮವು ಒಂದು ಹೊಸ ಸಮಾಜದ ಕನಸನ್ನು ಹೊಂದಿತ್ತು. ಅಂದಿನ ಜಾತಿ ವ್ಯವಸ್ಥೆಯ ಸ್ವರೂಪ ಇಂದಿನಂತಿರಲಿಲ್ಲ. ಬುದ್ಧ ಹೆಚ್ಚಾಗಿ ವಾದ ಮಾಡಿರುವುದು ಬ್ರಾಹ್ಮಣಶಾಹಿಯೊಂದಿಗೆ. ಬ್ರಾಹ್ಮಣರು ಹುಟ್ಟಿನಿಂದಲೆ ಭಿನ್ನವಾಗಿದ್ದಾರೆ, ಬುದ್ಧಿವಂತರಾಗಿದ್ದಾರೆ, ಉನ್ನತವಾಗಿದ್ದಾರೆ ಮತ್ತು ಉತ್ತಮರು ಎಂಬ ವಾದವನ್ನು ಬುದ್ಧ ನಿರಾಕರಿಸುತ್ತಿದ್ದನು.

ಜಾತಿ ಕುರಿತ ವಿಮರ್ಶೆ 6ನೇ ಶತಮಾನದಿಂದಲೇ ಆರಂಭವಾಯಿತು ಎಂಬುದು ಬೌದ್ಧ ಇತಿಹಾಸದಲ್ಲಿ ಕಂಡುಬರುತ್ತದೆ. ಸಮಾಜದಲ್ಲಿ ತುಳಿತಕ್ಕೊಳಗಾದ ವರ್ಗ ಒಂದಿದ್ದರೆ ಮತ್ತೊಂದು ಆಳುವ ವರ್ಗವಾಗಿರುತ್ತದೆ. ತಾರತಮ್ಯವನ್ನು ಆಚರಿಸುವ ಜಾತಿ ವ್ಯವಸ್ಥೆಯನ್ನು ಯಾರೂ ಮಾನ್ಯ ಮಾಡುವುದಿಲ್ಲ. ತುಳಿತಕ್ಕೊಳಪಡುವುದನ್ನು, ತಾವು ಹೀನ, ಕೀಳು ಎಂದು ಭಾವಿಸುವುದನ್ನು ಸಮಾಜದಲ್ಲಿ ಯಾರೂ ಇಚ್ಛಿಸು ವುದಿಲ್ಲ ಮತ್ತು ಒಪ್ಪಿಕೊಳ್ಳುವುದೂ ಇಲ್ಲ. ಅದನ್ನು ಅಧಿಕಾರದ ಬಲದಿಂದ ಜನರ ಮೇಲೆ ಹೇರಲಾಗಿದೆ, ಹಿಂಸೆಯ ಮೂಲಕ ಒಪ್ಪಿಸಲಾಗಿದೆ. ನಮ್ಮ ಸಮಾಜದಲ್ಲಿ ಅಧಿಕಾರ ಮತ್ತು ಬಲಪ್ರಯೋಗದಿಂದ ಅಮಾಯಕರನ್ನು ಹಿಂಸಿಸುವುದು ಕಾಲ ದಿಂದಲೂ ನಡೆದುಕೊಂಡೇ ಬಂದಿದೆ. ಜಾತಿಯ ವ್ಯವಸ್ಥೆಗೂ, ಪಿತೃ ಪ್ರಧಾನತೆಗೂ ಮತ್ತು ಲಿಂಗತಾರತಮ್ಯಕ್ಕೂ ಇರುವ ಸಂಬಂಧವನ್ನು ನಾನು ನನ್ನ ಸಂಶೋಧನಾ ಹುಡುಕಾಟದಲ್ಲಿ ಕಂಡುಕೊಂಡೆ. ಲಿಂಗತಾರತಮ್ಯಕ್ಕೆ ಜಾತೀಯತೆಯ ಮಾದರಿಯೇ ಕಾರಣವಾಗಿದೆ ಎಂಬುದನ್ನು ಸ್ತ್ರೀವಾದಿಗಳಾದ ನಾವು ಕಂಡುಕೊಂಡೆವು. ಜಾತಿ ಪ್ರಶ್ನೆಯನ್ನು ಪಿತೃಪ್ರಧಾನತೆಯ ಆಯಾಮದಲ್ಲಿ ಚರ್ಚೆ ಮಾಡಿದ್ದು, ಜಾತಿಕುರಿತ ಬೌದ್ಧಿಕ ಚರ್ಚೆಗೆ ನಾವು ಕೊಟ್ಟ ಬಹು ದೊಡ್ಡ ಕೊಡುಗೆಯಾಗಿದೆ.

ನಮ್ಮ ಸಮಾಜವು ಈಗಲೂ ಅಸಮಾನತೆಯಿಂದ ಕೂಡಿದೆ. ಎಲ್ಲಾ ಸಮಾಜ ಗಳಲ್ಲಿಯೂ ಮಹಿಳೆಯರ ಮೇಲೆ ಪಿತೃಪ್ರಧಾನತೆಯ ನಿಯಂತ್ರಣವಿತ್ತು. ಪಾಶ್ಚಿಮಾತ್ಯ ವರ್ಗಸಮಾಜವೂ ಇದಕ್ಕೆ ಹೊರತಾಗಿರಲ್ಲಿಲ್ಲ. ಈ ನಿಯಂತ್ರಣವು ಮಹಿಳೆಯರ ಪ್ರಜನನ ಸಾಮರ್ಥ್ಯದ ಮೇಲೆ ಹಿಡಿತ ಹೊಂದಿದೆ. ಪಿತೃಪ್ರಧಾನ ಸಮಾಜಕ್ಕೆ ಇಂತಹ ಹಿಡಿತ ಅವಶ್ಯಕವೂ ಆಗಿತ್ತು, ಹಾಗಾಗಿ ಜಾತಿ ಮತ್ತು ಲಿಂಗವನ್ನು ಒಂದುಗೂಡಿಸಿದ ರಚನೆಯನ್ನು ಮಾಡಿಕೊಳ್ಳಲಾಯಿತು. ಈ ರಚನೆಯು ಮಹಿಳೆಯರ ಮೇಲೆ ಅನೇಕ ಬಗೆಯ ನಿಯಂತ್ರಣಗಳನ್ನು ಸಾಧಿಸಿಕೊಳ್ಳಲು ಸಹಾಯಕವಾಯಿತು. ಈ ನಿಯಂತ್ರಣವು ಸಮಾಜದಲ್ಲಿ ಒಂದು ಮಾದರಿಯಾಗಿ ಬೆಳೆಯಿತು. ಬೆಳೆಯುತ್ತ ಮುಂದೆ ಜಾತಿ, ಲಿಂಗ, ವರ್ಗದ ಆಧಾರದ ಮೇಲೆ, ಸಂಪನ್ಮೂಲಗಳ ಮೇಲೆ ತನ್ನ ಹಿಡಿತ ಸಾಧಿಸಹತ್ತಿತು. ಜಾತಿವಾದಿ ಸಮಾಜದಲ್ಲಿ ಸಂಪನ್ಮೂಲಗಳು ಕೆಲವರ ಕೈಯಲ್ಲಿ



ಮಾತ್ರ ಕ್ರೋಢೀಕರಣಗೊಂಡವು. ಯಾರ ಕೈಯಲ್ಲಿ ಸಂಪತ್ತಿನ ಒಡೆತನವಿತ್ತೊ ಅವರು ಅಧಿಕಾರ ಚಲಾಯಿಸುತ್ತಿದ್ದರು. ಯಾರು ಸಂಪತ್ತನ್ನು ಹೊಂದಿರಲಿಲ್ಲವೋ ಅವರು ಅಧಿಕಾರಸ್ಥರಿಗೆ ಅಧೀನರಾಗಿ ದುಡಿಯಬೇಕಾಗಿತ್ತು. ಹಾಗಾಗಿ ನಮ್ಮ ವರ್ಗ ಸಮಾಜದಲ್ಲಿ ಧ್ರುವೀಕರಣವಿದೆ. ಅಲ್ಲದೆ ಇದು ಪೀಳಿಗೆಯಿಂದ ಪೀಳಿಗೆಗೆ ಮುಂದುವರೆದುಕೊಂಡು ಹೋಗುವಂತೆ ನಿರ್ದಿಷ್ಟ ಪಡಿಸಲಾಯಿತು. ಇದನ್ನು ಜಾತಿಯ ಹೆಸರಿನಲ್ಲಿ ಒಡೆತನ ಹೊಂದಿದವರು ಮುಂದುವರೆಸಿದರು. ಯಾವುದೇ ಅಧಿಕಾರವಾಗಲಿ, ಭೂಮಿಯ ಒಡೆತನವಾಗಲಿ ಇಲ್ಲದೆ ಭೂಮಿಯಲ್ಲಿ ದುಡಿಯಬೇಕಾದ ಜಾತಿಗಳಿಗೆ ಉತ್ಪಾದನಾ ಸಾಮಾಗ್ರಿಗಳ ಮೇಲೆ ಹಿಡಿತವಿರಲಿಲ್ಲ. ಅಧಿಕಾರ, ಭೂಮಿಯ ಒಡೆತನ, ಉತ್ಪಾದನಾ ಸಾಮಗ್ರಿಗಳ ಮೇಲಿನ ಹಿಡಿತ ಇಲ್ಲದವರು ಕೆಳವರ್ಗವಾಗಿ, ಕೆಳಜಾತಿಯಾಗಿ ಮೇಲ್ಜಾತಿಯ ಜನರ ಸೇವೆ ಮಾಡುವ ಗುಲಾಮರಾಗಿ, ದುಡಿಯುವ ವರ್ಗವಾಗಿ ಉಳಿಯುತ್ತವೆ. ಸಂಪನ್ಮೂಲಗಳ ಮೇಲೆ ಹಿಡಿತ ಸಾಧಿಸಿಕೊಂಡಂತಹ ಜಾತಿಯವರು ಒಡೆತನದ ಹಿನ್ನೆಲೆಯಲ್ಲಿ ರೂಪಿಸಿದ ನಿಯಮಗಳಿಗೆ ಸಂಪನ್ಮೂಲ ರಹಿತ ಜಾತಿಗಳು ಒಳಗಾಗುವಂತೆ ಮಾಡಲಾಯಿತು. ಸಂಪನ್ಮೂಲಗಳ ಮೇಲೆ ಹಿಡಿತ ಹೊಂದಿರುವವರು ನಿಯಮಗಳನ್ನು ರೂಪಿಸುಂತಹ ವ್ಯವಸ್ಥೆ ಪೀಳಿಗೆಯಿಂದ ಪೀಳಿಗೆಗೆ ಮುಂದುವರೆದುಕೊಂಡು ಬಂದಿದೆ.

ಜಾತಿ ವ್ಯವಸ್ಥೆಯಲ್ಲಿ ಮಹಿಳೆಯರ ಪಾತ್ರವೂ ತುಂಬಾ ಮಹತ್ವದ್ದಾಗಿದೆ. ಮಹಿಳೆಯರು ತಮ್ಮ ಜಾತಿಗನುಗುಣವಾಗಿ ಮದುವೆಯಾಗಿ, ಮಕ್ಕಳನ್ನು ಮಾಡಿ ಕೊಳ್ಳುವ ನಿಯಮಗಳನ್ನು ಮಾಡಲಾಯಿತು. ಹೆಣ್ಣುಮಕ್ಕಳು ಜಾತಿ ಬಿಟ್ಟು ಮದುವೆ ಯಾಗುವುದು, ಕೆಳವರ್ಗದ ಜನರುತಮ್ಮ ಹಕ್ಕುಗಳಿಗಾಗಿ ಹೋರಾಡುವುದನ್ನು ಕಲಿಯುಗವೆಂದು ಕರೆಯಲಾಗುತ್ತದೆ. ಮಹಿಳೆಯರು ಮತ್ತು ಕೆಳವರ್ಗದ ಜನರು ತಮ್ಮ ಹಕ್ಕುಗಳಿಗಾಗಿ, ಸಮಸಮಾಜದ ನಿರ್ಮಾಣಕ್ಕಾಗಿ ಹೋರಾಡಲು ಸಿದ್ಧರಾಗಿರುವ ಈ ಕಲಿಯುಗದಲ್ಲಿ ಅಂತಹ ಸಮಾಜ ನಿರ್ಮಾಣವಾದರೆ ಅಥವಾ ಅವರು ಪ್ರಬಲವಾಗಿ ಬೆಳೆದರೆ ಅದನ್ನು ಯಾವ ಧ್ವನಿಗಳು ವಿರೋಧಿಸುತ್ತವೆ ಎಂಬುದನ್ನು ಗಮನಿಸಬೇಕು. ಇಂತಹ ಕೆಳಜಾತಿಯ, ಮಹಿಳೆಯರ ಹೋರಾಟದ ಧ್ವನಿಗಳನ್ನು ಮುಖ್ಯವಾಹಿನಿಯ ವಿದ್ವಾಂಸರು, ಸಮಾಜ ಶಾಸ್ತ್ರಜ್ಞರು, ಚಿಂತಕರು, ಬರಹಗಾರರೆಲ್ಲರೂ ಗುರುತಿಸದೇ ಇರುವುದನ್ನು ನಾವು ಗಮನಿಸಬೇಕು. ನಾವು ಮಹಿಳಾವಾದಿಗಳು ಅಂತಹ ಧ್ವನಿಗಳನ್ನು ಎತ್ತಿಹಿಡಿಯಬೇಕು, ದಮನಿತರಿಗೆ ಧ್ವನಿ ನೀಡಬೇಕು. ನಮ್ಮ ಗ್ರಂಥಗಳಲ್ಲಿಯೂ ವಿರೋಧಿ ಧ್ವನಿಗಳಿವೆ, ಅವುಗಳನ್ನು ಗ್ರಂಥಗಳಲ್ಲಿಯೇ ಬಿಡಲಾಗಿದೆ.

ಒಂದು ವಿಷಯವನ್ನು ಕುರಿತಂತೆ ಸಂವಾದ ನಡೆಸುವ, ಯಾವುದೇ ವಿಷಯವನ್ನಾಗಲಿ ಚರ್ಚಿಸಿ ಅದಕ್ಕೆ ಎಲ್ಲರ ಸಮ್ಮತಿಯನ್ನು ಪಡೆಯುವ ಸಂಪ್ರದಾಯ ಬುದ್ಧನ ಕಾಲದಲ್ಲಿ ಇತ್ತು ಎಂಬುದನ್ನು ಬೌದ್ಧ ಗ್ರಂಥಗಳಲ್ಲಿ ಕಾಣಬಹುದು. ನಾನು

**ಧನ ಪಿಶಾಚಿಗಳೊಂದಿಗಿನ ಮದುವೆಯನ್ನು ತಿರಸ್ಕರಿಸಿ**

ಬೌದ್ಧಧರ್ಮ ಕುರಿತು ಹೆಚ್ಚು ಓದಿರುವುದರಿಂದ, ತಿಳಿದುಕೊಂಡಿರುವುದರಿಂದ ಅಲ್ಲಿಯ ಉದಾಹರಣೆಗಳನ್ನೆ ತೆಗೆದುಕೊಳ್ಳುತ್ತೇನೆ. ಪ್ರಾಚೀನ ಕಾಲದಲ್ಲಿ ಸಮಾನತೆ ಇತ್ತೆಂದು ಹೇಳುವುದು ಅರ್ಥಹೀನ. 6ನೇ ಶತಮಾನದಿಂದಲೇ ಮಹಿಳಾ ವಿರೋಧಿ ಧ್ವನಿಗಳು ಕೇಳಿಬಂದಿವೆ. ಹಾಗಾಗಿ ಮಹಿಳಾ ವಿರೋಧಿ ಧ್ವನಿ ಇವತ್ತಿನದಲ್ಲ ಅದಕ್ಕೆ ಪುರಾತನ ಇತಿಹಾಸವಿದೆ. ಈ ದಾಸ್ಯ ಪದ್ಧತಿ ಏಕಿದೆ? ಇದು ಏಕೆ ಭಿನ್ನವಾಗಿದೆ? ಎಂಬ ಪ್ರಶ್ನೆಗಳು ಮೊದಲಿನಿಂದಲೂ ಬಂದಿವೆ. ಮೈಲಿಗೆ ಮುಟ್ಟುವುದರಿಂದ ಮಾತ್ರ ಆಗುವುದಿಲ್ಲ. ಶೂದ್ರರು ತಮ್ಮನ್ನು ನೋಡಿದರು ಸಹ ಅಪವಿತ್ರರಾಗುತ್ತಾರೆಂದು ಬ್ರಾಹ್ಮಣರು ಭಾವಿಸುತ್ತಿದ್ದರು. ತಮ್ಮನ್ನು ತಾವು ಅತ್ಯಂತ ಜಾಣರೆಂದುಕೊಂಡ ಬ್ರಾಹ್ಮಣರು ಎಂತಹ ಮೂರ್ಖತನ ಮಾಡುತ್ತಾರೆಂದು ತಿಳಿಯಲು ಚಾಂಡಾಲನ ಕತೆಯನ್ನು ನೆನಪಿಸಿಕೊಳ್ಳಬಹುದು.

ಮತ್ತೊಂದು ಉದಾಹರಣೆಯನ್ನು ನೋಡಬಹುದು. ಒಬ್ಬ ದಾಸಿ ನೀರು ತುಂಬಲು ಬೆಳಗಿನ ಜಾವ ನದಿಗೆ ಹೋಗುತ್ತಿದ್ದಳು. ನದಿಯ ನೀರಿನಲ್ಲಿ ನಿತ್ಯವೂ ಒಬ್ಬ ಬ್ರಾಹ್ಮಣ ಮುಳುಗಿ ಸ್ನಾನ ಮಾಡುತ್ತಿದ್ದ. ಒಂದು ದಿನ ಆ ದಾಸಿ "ಏಕೆ ಈ ಬೆಳಗಿನ ಥಂಡಿಯಲ್ಲಿ ದಿನವೂ ನದಿಯಲ್ಲಿ ಸ್ನಾನ ಮಾಡುತ್ತಿ" ಎಂದು ಕೇಳಿದಳು. ಆಗ ಬ್ರಾಹ್ಮಣ 'ಪಾಪ ತೊಳೆದುಕೊಂಡು ಸ್ವರ್ಗಕ್ಕೆ ಹೋಗಲು' ಎಂದು ಉತ್ತರಿಸಿದ. ಅದಕ್ಕವಳು 'ಓಹೋ, ಪಾಪ ಯಾವುದು, ಪುಣ್ಯ ಯಾವುದು, ಪಾಪವನ್ನಷ್ಟೇ ತೊಳೆಯಬೇಕು ಪುಣ್ಯವನ್ನಲ್ಲ ಎಂಬುದನ್ನು ತಿಳಿಯುವಷ್ಟು ಚಾಣಾಕ್ಷವಾಗಿದೆ ನೀರು! ಹಾಗಾದರೆ ನೀರಿನಲ್ಲಿರುವ ಕಡ್ಡಿ–ಕಸ, ಜಲಚರಗಳೆಲ್ಲವೂ ಸೀದಾ ಸ್ವರ್ಗಕ್ಕೆ ಹೋಗುವವರಲ್ಲವೇ?' ಎಂದು ಕೇಳುತ್ತಾಳೆ.

ಆ ದಾಸಿಗೆ ಯಾರೂ ಏನನ್ನೂ ಹೇಳಿಕೊಟ್ಟಿರಲಿಲ್ಲ, ಅವಳೊಳಗಿನ ಸಾಮಾನ್ಯ ಜ್ಞಾನದಿಂದಲೇ ಪ್ರಶ್ನೆ ಮಾಡಿದ್ದಳು. ಅಂತಹ ಸಾಮಾನ್ಯಜ್ಞಾನ ನಮಗೆ ಸಿಕ್ಕ ಕೊಡುಗೆಯಾಗಿದೆ. ಜನ ಹೇಳುವುದನ್ನೆಲ್ಲ ನಾವು ಒಪ್ಪಬೇಕಾಗಿಲ್ಲ. ನಮಗೆ ಒಪ್ಪಿಗೆಯಾದರೆ ಮಾತ್ರ ಸ್ವೀಕರಿಸಬೇಕು. ನಾವೇ ಸ್ವಂತವಾಗಿ ಯೋಚಿಸುವ ಅಗತ್ಯವಿದೆ. ನಾನು ಹಿಂದೊಮ್ಮೆ ಸೂಫಿಗಳ ಕುರಿತು ಉಪನ್ಯಾಸ ನೀಡಿದ್ದೆ. 14ನೇ, 18ನೇ ಮತ್ತು 20ನೇ ಶತಮಾನಗಳಲ್ಲಿ ಸಂತರು ಮತ್ತು ಸೂಫಿಗಳು ಸಾಮಾನ್ಯಜನರಲ್ಲಿನ ತಿಳುವಳಿಕೆ/ ಜ್ಞಾನವನ್ನು ಬಳಸಿಕೊಂಡೇ ಬದಲಾವಣೆಯ ಬಗ್ಗೆ ಮಾತನಾಡಿದರು. ಜಾತಿತಾರತಮ್ಯವನ್ನು ಟೀಕೆ ಮಾಡಿದರು. 12 ನೇ ಶತಮಾನದಲ್ಲಿಯೂ ಅಕ್ಕಮಹಾದೇವಿ ಮತ್ತು ಇತರ ಶರಣರು ಜಾತಿ, ಲಿಂಗ ತಾರತಮ್ಯವನ್ನು ಕಟುವಾಗಿ ಟೀಕಿಸಿದರು. ಹಾಲನ್ನು ಶುದ್ಧವೆನ್ನುತ್ತೇವೆ, ಕೆಲವು ಆಹಾರವನ್ನು ಶುದ್ಧವೆನ್ನುತ್ತೇವೆ, ಕೆಲವು ಆಹಾರವನ್ನು ಅಶುದ್ಧವೆನ್ನುತ್ತೇವೆ. ಜಾತಿಆಧಾರದ ಮೇಲೆ ಕೆಲವು ಆಹಾರಕ್ಕೆ ಅಶುದ್ಧತೆಯನ್ನು ತಗುಲಿಸಲಾಗಿದೆ. ಪಿತೃ ಪ್ರಧಾನತೆಯೂ ಸಹ ಲಿಂಗಾಧಾರಿತ ಶ್ರಮವಿಭಜನೆಯನ್ನು ಮಾಡಿ ಮಹಿಳೆಯರು ಮನೆಯೊಳಗೆ ಕೆಲಸ ಮಾಡಬೇಕು ಪುರುಷರು ಹೊರಗೆಕೆಲಸ ಮಾಡಬೇಕೆಂದು ನಿರ್ಬಂಧ ಹೇರಿತು. ಇದನ್ನು



ವಿರೋಧಿಸುವ ಆಂದೋಲನ ಬುದ್ಧನ ಕಾಲದಿಂದಲೇ ಆರಂಭವಾಯಿತು.

ನಾಲ್ಕು ಗೋಡೆಗಳ ನಡುವೆ ಮಹಿಳೆಯರ ಧ್ವನಿಯನ್ನು ಬಂಧಿಸಬೇಡಿ, ಗಂಡಸರಿಂದಲೂ, ಕುಟುಂಬದಿಂದಲೂ ನಮಗೆ ಬಿಡುಗಡೆ ಬೇಕು ಎಂದು ಮಹಿಳೆಯರು ಬಹಳ ಹಿಂದಿನಿಂದಲೇ ಹೋರಾಟ ಆರಂಭಿಸಿದರು. ಒಂದು ಕತೆ ಇದೆ. ಒಬ್ಬ ಮಹಿಳೆ ಮರದ ಕೆಳಗೆ ಕೂತು ಧ್ಯಾನ ಮಾಡುತ್ತಿದ್ದಳು. ಮಾರಾ ಒಬ್ಬ ಪುರುಷನ ರೂಪದಲ್ಲಿ ಬಂದು ಅವಳನ್ನು ನೋಡಿ 'ಈ ಧ್ಯಾನವೆಲ್ಲಾ ನಿನಗೇಕೆ ಬೇಕು? ತುಂಬಾ ಬುದ್ದಿವಂತರು ಮಾಡುವ ಕೆಲಸವಿದು ನೀನೇಕೆ ಮಾಡಬೇಕು? ಅನ್ನದ ಅಗಳು ಬೆಂದಿದೆಯೋ ಅಥವಾ ಇಲ್ಲವೋ ಎಂದು ನೋಡಲು ಎರಡು ಬೆರಳಷ್ಟು ಜ್ಞಾನ ಸಾಕು'ಎಂದು ಕೇಳಿದನು. ಆಗ ಆಕೆ 'ನನಗೆ ಎರಡು ಬೆರಳಿನಷ್ಟು ಜ್ಞಾನ ಬೇಡ. ಆಕಾಶವನ್ನು ಹಿಡಿಯುವಷ್ಟು, ಮುಕ್ತಿ ಪಡೆಯುವ ಜ್ಞಾನಬೇಕು' ಎಂದು ಅಡುಗೆ ಮನೆಯಲ್ಲಿರು ಎಂದು ಹೇಳಿದ ಪುರುಷನಿಗೆ ಉತ್ತರ ನೀಡಿದಳು. ನಾವು ಪಡೆಯಬೇಕೆಂದಿರುವ ಸ್ವಾತಂತ್ರ್ಯವೆಂದರೆ, ಜಾತೀಯತೆಯಿಂದ ಸ್ವಾತಂತ್ರ್ಯ, ಲಿಂಗ ತಾರತಮ್ಯದಿಂದ ಸ್ಯಾತಂತ್ರ್ಯ, ಯೋಚಿಸುವ ಸ್ವಾತಂತ್ರ್ಯ ನಮಗೆ ಬೇಕು, ಪ್ರಶ್ನಿಸುವ ಸ್ವಾತಂತ್ರ್ಯ ಬೇಕು.

ಈ ರೀತಿಯ ಬಿಡುಗಡೆಯ ಹೋರಾಟವನ್ನು ಮಹಿಳೆ ತುಂಬಾ ಸಮಯದಿಂದ ಮಾಡುತ್ತಾ ಬರುತ್ತಿದ್ದಾಳೆ. ಈ ಜಾತಿ, ವರ್ಗ, ಧರ್ಮ ಮತ್ತು ಪಿತೃಪ್ರಧಾನತೆಯ ಬಂಧನಗಳಿಂದ ಮುಕ್ತಿ ಪಡೆಯಲು ಬಿಡುಗಡೆಯ ದಾರಿಯನ್ನು ಹುಡುಕುತ್ತಿದ್ದಾಳೆ. ಆದರೆ ಈ ಸಂಘರ್ಷವಿನ್ನೂ ಕೊನೆಗೊಂಡಿಲ್ಲ. ಸಾವಿತ್ರಿ ಬಾ ಫುಲೆಯವರು ಒಬ್ಬ ಅಪಾರ ತಿಳುವಳಿಕೆಯುಳ್ಳ ಮಹಿಳೆಯಾಗಿದ್ದರು. ಇವರು ಹೆಣ್ಣು ಮಕ್ಕಳಿಗಾಗಿ ಮೊಟ್ಟಮೊದಲ ಶಾಲೆಯನ್ನು ಪ್ರಾರಂಭಿಸಿದರು. ಮಹಿಳೆಯರಿಗೆ ಶಿಕ್ಷಣ ಕೊಡುವುದರ ಮೂಲಕ ಅವರ ವೈಚಾರಿಕ ಪ್ರಜ್ಞೆಯನ್ನು ಬೆಳೆಸಲು ಹೋರಾಡಿದರು. ಜ್ಯೋತಿ ಬಾ ಫುಲೆಯವರು ಶಿಕ್ಷಣವನ್ನು ಮೂರನೇ ಕಣ್ಣು ಎಂದು ಹೇಳುತ್ತಿದ್ದರು. ವಿವೇಚನೆಯ ಕಣ್ಣನ್ನು ನಾವು ತೆರೆಯಬೇಕಾಗಿದೆ. ಶಿಕ್ಷಣವೆಂದರೆ ಅಕ್ಷರಜ್ಞಾನವಲ್ಲ, ಅದು ವಿವೇಚನಾ ಶಕ್ತಿಯನ್ನು ಬೆಳೆಸುವಂತದ್ದಾಗಬೇಕು. ಮೂರನೆ ಕಣ್ಣು ಎಂದರೆ ಬೌದ್ಧಿಕ ಶಕ್ತಿ. ವಿಶ್ವವಿದ್ಯಾಲಯದ ವೇದಿಕೆಯಿಂದ ಮಾತನಾಡುತ್ತಿದ್ದೇನೆ. ಇಂಥ ವೇದಿಕೆ ನಮಗೆ ಬಿಡುಗಡೆಯ ಹಾದಿಯನ್ನು ಹುಡುಕಲು ಬೇಕಾದ ವೈಚಾರಿಕ ಶಕ್ತಿಯನ್ನು ಹೆಚ್ಚಿಸುತ್ತದೆ. ಬೌದ್ಧಿಕ ಶಕ್ತಿಯನ್ನು ಬೆಳೆಸಲು ಮುಕ್ತವಾದ ವೇದಿಕೆ ಬೇಕು. ನಮ್ಮ ತಿಳುವಳಿಕೆಯನ್ನು ಬೆಳಸಿಕೊಳ್ಳಲು ಚರ್ಚೆ, ಸಂವಾದ, ವಿಮರ್ಶೆ ಬೇಕು. ಆದ್ದರಿಂದಲೇ ಅಭಿವ್ಯಕ್ತಿ ಸ್ವಾತಂತ್ರ್ಯ ಮತ್ತು ಸಮಾನತೆಗಾಗಿ ಹೈದರಾಬಾದ್ ವಿಶ್ವವಿದ್ಯಾಲಯದಲ್ಲಿ, ಜವಹಾರ್‌ಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿ, ಅಲಹಾಬಾದ್ ವಿಶ್ವವಿದ್ಯಾಲಯಗಳಲ್ಲಿ ಕೋಲಾಹಲ ಹುಟ್ಟಿಕೊಂಡಿದೆ. ಸಮಾನತೆಯ ಸಮಾಜ ಕಟ್ಟಬೇಕಾಗಿದೆ. ಜಾತಿವಾದ, ಪಿತೃಪ್ರಧಾನತೆ, ಅಧಿಕಾರಶಾಹಿ ಇಲ್ಲದ

ಸಮಾಜಕ್ಕಾಗಿ ನಾವು ಸಂಘರ್ಷ ಮಾಡಬೇಕಿದೆ. ಎಲ್ಲ ದಮನಿತರನ್ನು ಮುಕ್ತಗೊಳಿಸಬೇಕು. ಅದಕ್ಕಾಗಿ ಒಂದುಗೂಡಿ ಮನ್ನಡೆಯಬೇಕಾಗಿದೆ. ಮಹಿಳಾ ದಿನಾಚರಣೆ ಪುರುಷಪ್ರಾಧಾನ್ಯತೆಯನ್ನಷ್ಟೇ ಅಲ್ಲ, ಎಲ್ಲಾ ಅಸಮಾನತೆಗಳನ್ನು ವಿರೋಧಿಸುತ್ತದೆ. ಆಗಲೇ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಗೆ ನಿಜವಾದ ಅರ್ಥಬರುವುದು.

ಕನ್ಹಯ್ಯಾನ ತಾಯಿ ಒಬ್ಬ ಅಂಗನವಾಡಿ ಕಾರ್ಯಕರ್ತೆ. ಆಕೆಯೂ ಹೋರಾಟ ಮಾಡುತ್ತಿದ್ದಾಳೆ, ಹೇಗಾದರೂ ಹೊಸ ಜೀವನಕ್ಕಾಗಿ, ಹೊಸ ಅವಕಾಶಕ್ಕಾಗಿ. ನಮ್ಮೆಲ್ಲರ ಹೋರಾಟ ನಾಳಿನ ಸಮಾಜವನ್ನು ಹೇಗೆ ಕಟ್ಟಬೇಕು, ಆ ಸಮಾಜದಲ್ಲಿ ನಾವು ತಲೆಎತ್ತಿ ಬದುಕುಬೇಕು ಎಂಬುದು. ಅದಕ್ಕಾಗಿ ನಾವೆಲ್ಲರೂ ಒಗ್ಗೂಡಿ ಸಂಘರ್ಷ ಮಾಡಬೇಕಾಗಿದೆ. ಇಂಥ ಭರವಸೆ, ಆಕಾಂಕ್ಷೆಯೊಂದಿಗೆ, ಸ್ತ್ರೀವಾದಿ ನೋಟ/ ದರ್ಶನದೊಂದಿಗೆ ಮುಂದೆ ಹೋಗೋಣ. ಆಗಲೇ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಗೆ ನಿಜವಾದ ಅರ್ಥಬರುವುದು ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

**(ಹಿಂದಿ ಭಾಷಣದ ಕನ್ನಡ ಬರಹ ರೂಪ: ಹಮೀದಾ ಬಾನು, ಅಥಣಿ)**



# ಮಹಿಳೆ ಮನೆಯ ನಡುಗಂಬ, ದೇಶದ ಭವಿಷ್ಯದ ಬೆನ್ನೆಲುಬು

**ಸರಸ್ವತಿ ಚಿಮ್ಮಲಗಿ**

ಸಮಾಜದ ಪ್ರತಿಯೊಂದು ಮನೆಯಲ್ಲೂ ಮಹಿಳೆಯಿದ್ದಾಳೆ. ಆ ಮಹಿಳೆ ಮನೆಯ ನಡುಗಂಬ, ಸಮಾಜದಕಣ್ಣು, ದೇಶದ ಭವಿಷ್ಯದ ಬೆನ್ನೆಲುಬೂ ಕೂಡ. ಆದರೆ ನಿಮ್ಮನೆಯವ್ರು ಏನು ಮಾಡ್ತಾರೆ ಅಂತ ಕೇಳಿದ್ರೆ, ನಮ್ಮನಿಯವರು ಏನು ಮಾಡಂಗಿಲ್ಲ ಮನಿಕೆಲಸ ಅಷ್ಟ ಮಾಡ್ತಾರೆ ಅಂತ ಗಂಡಸರು ಹೇಳ್ತಾರೆ. ಮನೆ ಕೆಲ್ಸ ಏನು ಸಾಮಾನ್ಯನಾ? ಸುಲಭವಾದದ್ದಾ? ಮಹಿಳೆಯರು ಮನ್ಯಾಗ ಇದ್ದುಕೊಂಡು ನಿಮ್ಮ ಹೊಟ್ಟೆ, ನೆತ್ತಿ ನೋಡಕೊಂಡಾರಂತ ನೀವು ಹೊರಗಡೆ ಬಂದು ಇಷ್ಟ ಹಾರ್‍ಯಾಡ್ತೀರಿ. ಆಕೆಯೇನಾದ್ರೂ ಆ ಕೆಲಸಾನ ಮುತುವರ್ಜಿಯಿಂದ ಮಾಡದೇ ಇದ್ರೇ, ಇವತ್ತು ಇವರೆಲ್ಲ ಶೂರಾಧಿಶೂರರು, ಇತಿಹಾಸ ನಿರ್ಮಾಣ ಮಾಡಿರತಕ್ಕಂತವರು ನಮಗೆಲ್ಲೂ ಸಿಗುತ್ತಿರಲಿಲ್ಲ. ಆದರೆ ದುರ್ದೈವ, ಇಷ್ಟೆಲ್ಲಾ ಮಾಡಿರತಕ್ಕಂತ ಮಹಿಳೆಯರ ಇತಿಹಾಸ ಅನ್ನೋದು ಎಲ್ಲೂಇಲ್ಲ. ಅದನ್ನು ನಿರ್ಮಾಣ ಮಾಡೋದಕ್ಕೆ, ಬರೆಯೋದಿಕ್ಕೆ ಗಂಡುಮಕ್ಕಳಿಗೆ ಪುರುಸೊತ್ತಿಲ್ಲ, ನಮಗೆ ಅವಕಾಶ ಸಿಕ್ಕಿಲ್ಲ. ನಮಗೆ ಶಿಕ್ಷಣ, ಅಕ್ಷರವನ್ನು ಬೋಧನೆ ಮಾಡಲಿಲ್ಲ. ಸಾಮರ್ಥ್ಯ ನಮಗೂ ಐತಿ ಅನ್ನೋದು ವಿಜ್ಞಾನ ಕೂಡಾ ಇವತ್ತು ಒಪ್ಪಿಕೊಂಡಿದೆ. ಪುರುಷರಂತೆ ಮಹಿಳೆ ಬುದ್ಧಿವಂತಳಿದ್ದಾಳೆ ಅನ್ನೋದನ್ನಾ ಯಾರೂ ಕೂಡಾ ಸಂಶಯಪಡಬೇಕಾಗಿಲ್ಲ.

ಹಿಂಗಿದ್ರು ಕೂಡಾ ನಮ್ಮ ಮಹಿಳೆಯರಿಗೆ ಶಿಕ್ಷಣ ಕೊಡುವಲ್ಲಿ ಏಂತೆಂಥಾ ಅವಘಡಗಳನ್ನು ಮಾಡಿದ್ರು ಅಂತಂದ್ರೆ, “ಹೆಣ್ಮಕ್ಕಳ ಬುದ್ದಿ ಮೊಣಕಾಲಕೆಳಗೆ” ಅನ್ನುವಂತ ದೊಡ್ಡದೊಡ್ಡ ನಾಣ್ಣುಡಿಗಳು ಇವತ್ತೂ ಜೀವಂತ ಅದಾವು. ಬುದ್ದಿ

ಮೊಳಕಾಲು ಕೆಳಗೆ ಇರೋದಾಗಿದ್ರೆ, ಇವತ್ತು ಎಲ್ಲ ರಂಗದಲ್ಲೂ ಅವಳು ಮುಂದೆ ಹೇಗೆ ಇದ್ದಾಳೆ? ಯಾವುದೇ ರಂಗ ತಗೊಂಡ್ರು ಬಾಲಕಿಯರದೇ ಮೇಲುಗೈ ಅನೋದನ್ನ ನಾವು ನೋಡಿದಾಗ ಅವಳ ಬುದ್ದಿ ಬಗ್ಗೆ ಇವರು ಯಾಕೆ ಹೀಗೆ ಯೋಚನೆಯನ್ನು ಮಾಡಿದ್ರು? ಅನ್ನಿಸ್ತದ, ಯಾರಾದ್ರು ಒಬ್ಬರನ್ನು ಡಿಸ್ಕರೇಜ್ ಮಾಡಬೇಕು ಅಥವಾ ಹಿಂದೆ ತಳ್ಳಬೇಕು ಅಂತಂದ್ರ, ಎರಡು ವಿಷಯದಲ್ಲಿ ಸಾಧ್ಯ ಆಗ್ತದ, ಏನಂದ್ರ ನೀ ಶ್ಯಾಣೆಯಿಲ್ಲ ದಡ್ಡಿ ಇದ್ದೀ, ದಡ್ಡಿ ಇದ್ದೀ ಅಂದಾಗ ಅವ್ರು ಹೌದೇನೋ ಅಂತ ಹಾಗೆ ಒಪ್ಕೊತಾರೆ. ಪ್ಲೇಟೋನಂತಹ ದಾರ್ಶನಿಕ ಹೆಣ್ಣು ಮಕ್ಕಳ ಬಾಯಿಗೆ ಏನೇ ಹಾಕಿದ್ರೂ ಕಡಿಮೆ, ಅವಳಷ್ಟು ಬುದ್ದಿವಂತೆಯಲ್ಲ ಎಂದು ಹೇಳಿದ. ಏನು ಗೊತ್ತಿತ್ತೋ? ಏನು ಕಥೆಯೋ? ಗೊತ್ತಿಲ್ಲ ಆದ್ರೆ ಆ ಹೇಳಿಕೆ ಇವತ್ತಿಗೂ ಉಳಕೊಂಡುಬಿಡ್ತು. ಹಾಗೆಯೇ ಫ್ರಾನ್ಸಿನ ಒಬ್ಬ ವಿಜ್ಞಾನಿ ಹತ್ತುಹನ್ನೆರಡುವರ್ಷಗಳ ಹಿಂದೆ ಒಂದು ಥೀಸಿಸ್ ಸಬ್‌ಮಿಟ್ ಮಾಡಿದ್ದ. ಅದರಲ್ಲಿ ಏನು ಬರೆದಿದ್ದಾನೆ ಅಂದ್ರೆ ಹೆಣ್ಣುಮಕ್ಕಳ ಮೆದುಳಿನ ತೂಕ ಗಂಡು ಮಕ್ಕಳ ಮೆದುಳಿನ ತೂಕಕ್ಕಿಂತ 200. ಗ್ರಾಂ ಕಡಿಮೆ ಇದೆ. ಅದಕ್ಕಾಗಿ ಅವಳು ಬುದ್ದಿವಂತೆಯಲ್ಲ ಅನ್ನೋ ಮಾತನ್ನು ಹೇಳಿದ್ದಾನೆ. ಬುದ್ಧಿ ಎಲ್ಲಿರಬಹುದು ಅಂತ ಯೋಚನೆಮಾಡಿ ಗಂಡು ಮಕ್ಕಳ ಹಣೆ ಅಗಲವಾಗಿ ರುತ್ತದೆ, ಹೆಣ್ಣು ಮಕ್ಕಳ ಹಣೆ ಸಣ್ಣದಿರುತ್ತದೆ ಬುದ್ಧಿ ಎನ್ನುವುದು ಮುಂದೆಇರಬೇಕು ಅಂದನಂತೆ. ತಲೆಹೊಡೆದು ನೋಡಿದ್ರೆ, ಹೆಣ್ಣು ಮಕ್ಕಳ ಹಣೆಯ ಮುಂದಿನ ಭಾಗ ದೊಡ್ಡದಿತ್ತಂತೆ, ಆಗ ಅವಳು ಬುದ್ದಿವಂತೆ ಅಂತ ಒಪ್ಪಿಕೊಳ್ಳಬೇಕಲ್ಲ. ಅಯ್ಯೋ ಇಲ್ಲ ಬುದ್ಧಿ ಇನ್ನೆಲ್ಲೋ ಇರಬೇಕು ಅಂದನಂತೆ, ನೋಡಿ ಎಂತಹ ಅವಾಂತರಗಳಿವೆಲ್ಲಾ! ಆಮೇಲೆ ಹೆಣ್ಣು ಮಕ್ಕಳಿಗೆ ಮುಂದು ಹೋಗಲು ಯಾವುದಕ್ಕೂ ಅವಕಾಶಗಳಿಲ್ಲ. ಎಲ್ಲಾಕಡೆ ಮುಳ್ಳು ಬೇಲಿಗಳನ್ನು ಹಚ್ಚಿಬಿಟ್ಟಿದ್ದಾರೆ. ಯಾವಕ್ಷೇತ್ರಕ್ಕೆ ಹೋಗೊಕೆ ನೋಡಿದರೂ ಅಡ್ಡಿ ಆತಂಕಗಳನ್ನು ನೋಡುತ್ತೇವೆ. ಮುಳ್ಳು ಬೇಲಿ ಅನ್ನುವಂತ ಒಂದು ಕವಿತೆಯನ್ನು ಹೇಳತೀನಿ.

**ನೀನು ಹೆಣ್ಣು, ನೀನು ಹೆಣ್ಣು**
**ಅಲ್ಲಿಇಲ್ಲಿ ಹೋಗಬೇಡ ಬಾ ಎಂದು**
**ಹೆದರಿಸುವ ತಂದೆ–ತಾಯಿಗಳು**
**ರೇಷಿಮೆಯ ಮುಳ್ಳು**

**ಓ ಹೆಣ್ಣು, ಓ ಹೆಣ್ಣು**
**ಎಂದು ಜೊಲ್ಲು ಸುರಿಸುವಗಂಡು**
**ಅಯ್ಯೋ, ಅಪ್ಪ ಎಂದು ರಂಪ ಮಾಡುವ**
**ಕುಲಬಾಂಧವರೆಲ್ಲ ಕರಿಜಾಲಿಯ ಮುಳ್ಳು**
**ಅಲ್ಲೇನು ನೋಡಿದೆ, ಅಲ್ಲೇನು ನೋಡಿದೆ**

**ಗುಲಾಮಗಿರಿಯ ಕಾಲ ಮುಗಿದು ಸಮಾನತೆಯ ಕಾಲ ಬಂದೆ ಬಂದಿತು**



**ಅವನೇಕೇ ನಿನ್ನಕಂಡು ನಕ್ಕ**
**ಎಂದು ಸಂಶಯಿಸುವ ಕಟ್ಟಿಕೊಂಡ ಗಂಡ**
**ಪಿರಂಗಿ ಜಾಲಿ ಮುಳ್ಳು.**

**ಮುಪ್ಪಿನಲ್ಲಿ ತಾಯ ಜೋಪಾನ ಮಾಡದ**
**ತಾಯಿ ಪ್ರೀತಿ ಮರೆತು ಮೆರೆವ**
**ಅಡನಾಡಿ ಮಗನೊಂದು ಕಣ್ಣಿಗೆ ಕಾಣದ**
**ಸೂಕ್ಷ್ಮಕ್ಯಾಕ್ಟಸ್ಟ ಮುಳ್ಳು.**

**ಮಗನಿಂದಲೇ ಮೋಕ್ಷ,**
**ಹೆಣ್ಣು ಪರರೊಡವೆ, ಗಂಡನೇ ದೇವರು**
**ಎಂದೆಲ್ಲಾ ಹುಸಿ ಸತ್ಯಉಚ್ಚರಿಸುವ**
**ಧರ್ಮಶಾಸ್ತ್ರವೊಂದು ನೆಗ್ಗಿನ ಮುಳ್ಳು.**

**ಇಂತಿ ಮುಳ್ಳು ಬೇಲಿಯಮಧ್ಯೆ**
**ನಾವಿಂದು ಬೆಳೆದು ಬೆಳಗಲೇಬೇಕು**
**ನಾವಿಂದು ಬೆಳಗಲೇಬೇಕು**

ಹೀಗೆ ಯಾವ ಮಹಿಳೆ ಬದುಕನ್ನು ಚಾಲೆಂಜ್ ಆಗಿ ತಗೋತಾಳೊ ಅವಳು ಮುಂದೆ ಹೋಗ್ತಾಳೆ. ನಮ್ಮಕಾಲದಲ್ಲಿ ಬಹಳ ಜನ ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡುತ್ತಿರಲಿಲ್ಲ, ಈಗ ನನ್ನ ಮಕ್ಕಳೆಲ್ಲ ಎಂ.ಡಿ ಮಾಡಿದ್ದಾರೆ, ಖುಷಿಯಾಗುತ್ತೆ. ನನ್ನದು 7ನೇತರಗತಿ ಆದ ಕೂಡ್ಲೆ ನಮ್ಮಜ್ಜ ನಮ್ಮಪ್ಪಗ ಹೇಳಿದ್ದು, ಸಾಕು ಸಾಲಿ ಬಿಡ್ಸು ಅಂತ. ಆದ್ರ ನಾನು ಯಾಕ ಸಾಲಿ ಬಿಡಿಸ್ತೀರಿ ಅಂತ ಕೇಳಿದೆ, ಜಾಸ್ತಿ ಕಲಿಬಾರದು ನಮ್ಮಂದ್ಯಾಗ ಕಲ್ತರಗಂಡು ಸಿಗಂಗಿಲ್ಲ ಅಂತಂದ್ರು, ಆಮೇಲೆ ಅತ್ತುಕರೆದು ಮಾಡಿ ಮುಂದೆ 8ನೇತಿ ಮುಗಿಸಿಕೊಂಡೆ. ಎಸ್ಸೆಲ್ಸಿಗೆ ಬಂದೆ. ಆವಾಗ ಮತ್ತದೇ ಮಾತು, ಆವಾಗೂ ನಾನು ಯಾಕ ಸಾಲಿ ಕಲಿಬಾರ್ದು ಅಂತ ಕೇಳಿದೆ, ಮತ್ತದೇ ಉತ್ತರ. ಅಷ್ಟೊತ್ತಿಗೆ ಪ್ರೈಮರಿ ಸ್ಕೂಲ್ ಟೀಚರ ಇಂಟರವ್ಯೂ ಕರೆದಿದ್ರು ನಾನು ಅರ್ಜಿ ಹಾಕಿದ್ದೆ. ಅಪಾಯಿಂಟ್‌ಮೆಂಟ್ ಆಯ್ತು, ಆದಮೇಲೆ ನನಗೆ ಅದೆಷ್ಟು ಖುಷಿಯಾಯ್ತು, ಯಾಕೆಂದ್ರೆ ನನಗೆ ನನ್ನ ಕಾಲಮೇಲೆ ನಿಲ್ಲುವಂತಹ ಅವಕಾಶ ಸಿಕ್ತು. ನನಗೆ ಓದೊದು ಅಂದ್ರೆ ಎಷ್ಟು ಹುಚ್ಚಿತ್ತು ಅಂತಂದ್ರೆ, ನನ್ನನ್ನು ಅಜ್ಜ–ಅಜ್ಜಿ ಊರಾಗ ಬಿಟ್ಟಿದ್ರು, ಅಲ್ಲಿ ಒಂದು ಪ್ರೈಮರಿ ಸ್ಕೂಲೂ ಇರಲಿಲ್ಲ. ಪಕ್ಕದ ಹಳ್ಳಿಗೆ ಹೋಗಿ ಓದಬೇಕಿತ್ತು. ಅಂತ ಹಳ್ಳಿ ಒಳಗ ಒಕ್ಕಲತನದ ಮನಿ ನಮ್ದು. ಅಂದಕೂಡ್ಲೆ, ಏನಂತಿದ್ರೂ ಅಂದ್ರೆ ಏ ಏನ್ ಸಾಲಿ ಓದ್ತಿ, ನಡಿ ಹೊಲದಾಗ ಹಕ್ಕಿ ಹೊಡಿ, ದನ ಮೇಯಿಸಿಕೊಂಡು ಬಾ ಅಂತ ಹೇಳೋರು. ಆ ಕೆಲ್ಸನೂ ಮಾಡಿ, ಹತ್ತಕ್ಕ ಬಂದು ಓಡಿಕೋತ ಸಾಲಿಗೆ ಹೋಗ್ತಿದ್ದೆ. ಹುಚ್ಚಿರತಕ್ಕಂತ ವ್ಯಕ್ತಿನೇ ಸಾಧನೆ ಮಾಡೊಕೆ ಸಾಧ್ಯ. ಹುಚ್ಚಿರಬೇಕು, ಹುಚ್ಚು ಹಿಡಿಸಬೇಕು. ನಾನು ಕೆಲಸ ಮಾಡುವ ಕಾಲೇಜಿನಲ್ಲಿ ಇದ್ದಕ್ಕಿದ್ದಂಗೆ ಹುಡುಗಿಯರು

ಕಾಲೇಜಿಗೆ ಬರೋದನ್ನು ನಿಲ್ಲಿಸಿದ ಉದಾಹರಣೆಗಳಿವೆ. ಆಗ ಯಾಕ ಆ ಹುಡಿಗಿ ಶ್ಯಾಣೆ ಇದ್ಲು ಬರ್ತಾಯಿಲ್ಲ ಅಂತ ಕೇಳಿದ್ರೆ, ಆಕಿದು ಮದಿವಿ ಆಯ್ತು, ಅಥವಾ ಮನ್ಯಾಗ ಬೇಡಾ ಅಂದ್ರು ಅಂತ ಹೇಳ್ತಾರೆ. ಹೆಣ್ಣು ಮಕ್ಕಳು ಸೆಕೆಂಡ್ ಇಯರ್ ಇರೋವಾಗ್ಲೇ ಮದಿವಿ ಮಾಡಿಬಿಡ್ತಾರೆ. ಎಷ್ಟೋ ಮಂದಿ ಪಿಯುಸಿನೂ ಮುಗಿಸೊಲ್ಲ. ಬಿಎನೂ ಮುಗಿಸೊಂಗಿಲ್ಲ, ಅಯ್ಯೋ ಏನು ಕಥೆ ಇದು ಅಂತ ಏಷ್ಟೋ ಸಲ ಬೇಜಾರಾಗತಿತ್ತು. ಶಿಕ್ಷಣವನ್ನು ಕಲಿಯುವಲ್ಲಿ ನಾವೆಷ್ಟು ಮುತುವರ್ಜಿ ಮಾಡಿದ್ರೆ, ಶಿಕ್ಷಣ ಅನ್ನೋ ಅರಿವಿನ ಅಸ್ತ್ರ ನಮ್ಮ ಕೈಯಲ್ಲಿದ್ದರೆ ನಮಗೊಂದು ರೀತಿಯ ಧೈರ್ಯ ಇರ್ತದೆ. ಮನೋಬಲ ಇರ್ತದೆ. ಆತ್ಮವಿಶ್ವಾಸ ಬೆಳಿತದೆ, ಅದಕ್ಕಾಗಿ ಆ ಕೆಲಸವನ್ನು ನಾವು ನಮ್ಮ ಮಕ್ಕಳಿಗೆ, ಸಮಾಜದಲ್ಲಿರತಕ್ಕಂತ ಎಲ್ಲರಿಗೂ ಬಡವರಿಗೂ, ಅಕ್ಕಪಕ್ಕದವರಿಗೂ, ಮನೆಕೆಲಸದವರಿಗೆಲ್ಲಾ ಓದಿಸುವ ಕೆಲಸವನ್ನು ಬಹಳ ಪ್ರಾಮಾಣಿಕತೆಯಿಂದ ಮಾಡಿದಾಗ ಮಾತ್ರ ಧೈರ್ಯವಾಗಿ ಇರತಕ್ಕಂತ ಸಮಾಜವನ್ನು ನಿರ್ಮಾಣಮಾಡಲು ಸಾಧ್ಯವಾಗುತ್ತೆ. ನಮಗೆಲ್ಲಾ ಊರಿಗೆ ಅಥವಾ ಮನೆಯಿಂದ ಹೊರಗೆ ಹೋಗಬೇಕಂದ್ರ ಅಂದ್ರೆ, ಒಬ್ಬಾಕಿ ಹೊರಗೆ ಹೋಗ್ಬೇಡ ತಮ್ಮನ್ನ ಕರ್ಕೊಂಡು ಹೋಗು ಅಪ್ಪನ್ನ, ಅಮ್ಮನ್ನ ಯಾರನ್ನಾದ್ರೂ ಜೊತೆಗೆ ಕರಕೊಂಡುಹೋಗು ಅಂತ ಹೇಳ್ತಿದ್ರು. ಯಾಕಷ್ಟು ಭಯ? ಅಲ್ಲೇನು ಹುಲಿ, ಸಿಂಹ ಇಲ್ಲ. ಆದ್ರ ನಮ್ಮಂತಹ ಮನುಷ್ಯರ ಭಯ, ಅಂತಹ ಯಾವ ಕರ್ಮ ಇರಬೇಕು? ಅದು ನಾವು ಹೆತ್ತದ್ದು, ನಾವು ಬೆಳಿಸಿದ್ದು. ಅಯ್ಯೋ ಮಗ ಹುಟ್ಟಿದಾಗ ಎಷ್ಟು ಪ್ರೀತಿಯಿಂದ ತಾಯಿ ಆದಾಕಿ ಎಂತೆಂಥಾ ಮಾತು ಹೇಳ್ತಾಳ ಅಂದ್ರ ಸಾವಿರಕುದುರೆ ಸರದಾರ ಆಗು, ಇಂದ್ರ ಆಗು, ಚಂದ್ರ ಆಗು, ಮಗನೆ ಅಂತ. ಹಿಂಗ ತನ್ನ ಕಣ್ಣಾಗಿನ ನಿದ್ದಿ ಕಳಕೊಂಡು ಜೋಪಾನ ಮಾಡಿದಾಗ್ಯೂ ಅವನು ಮಾಡೋ ಅವಾಂತರಗಳನ್ನ ನಾವೆಲ್ಲಾ ಎಷ್ಟು ನೋಡ್ತೀವಿ, ಇವತ್ತು ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರು ನಮಗಿರೋ ಹಕ್ಕು ಸಿಕ್ತಾವೆ ಆದ್ರೆ ಅವುಗಳನ್ನು ಬಳಸಿಕೊಳ್ಳೊಕೆ ಹೋದಾಗ ಎಷ್ಟೆಲ್ಲಾ ತೊಡಕುಗಳಗ್ತಾವೆ ಅನ್ನೊದನ್ನಾ ಸಾಕಷ್ಟು ನೋಡ್ತೀವಿ. ಎಲ್ಲಿ ನೋಡಿದ್ರೂ ಇವತ್ತು ಲೈಂಗಿಕ ದೌರ್ಜನ್ಯ ನಡಿತಾಯಿದೆ. ಹೆಣ್ಣು ಅಂದ್ರೆ ಯಾರು? ತಾಯಿ, ಹೆತ್ತವಳು ಆ ಮನೆಯ ನಡುಗಂಬ, ದೇಶಕ್ಕೆ ಬೇಕಾಗಿರುವ ಒಳ್ಳೆಯ ಪ್ರಜೆಗಳನ್ನು ಉತ್ಪಾದನೆ ಮಾಡಿಕೊಡುವಂತಹ ಶ್ರೇಷ್ಠ ವ್ಯಕ್ತಿ. ತಾಯಿ ಅಂತಂದ್ರೆ ಎಂಥಾ ದೇವರು ಮುಂತಾದ ನೂರಾ ಒಂದು ಹೇಳಿಕೆಗಳು ಇರೋದರ ಮಧ್ಯದಲ್ಲಿ ಕೂಡಾ, ಏನೂ ಬಹಳ ಗೌರವ ಕೊಡುವಂತಹ ಮಾತುಗಳ ನಡುವೆ ಕೂಡಾ, ಅವರ ಶೀಲದ ಬಗ್ಗೆ ದ್ವಂದ್ವ ನಿಲುವುಗಳಿವೆ. ಗಂಡಸು ತಾನು ಮಾಡಿಕೊಳ್ಳುವ ಹೆಣ್ಣು ಶೀಲವತಿಯಾಗಿರಬೇಕು ಅಂತಾನ. ಆದ್ರೆ ಅದೇ ಗಂಡು ತಾನು ಇನ್ನೊಬರ ಶೀಲ ಕೆಡಸಾಕ ಬಹಳ ಆತುರನಾಗಿರುತ್ತಾನೆ. ತನಗೆಂತ ಹೆಂಡ್ತಿ ಇರಬೇಕು ಗರತಿಯಾಗಿರಬೇಕು ಅನ್ನೋ ಮನೋ ಭೂಮಿಕೆ ನಮ್ಮ ಸಮಾಜದಲ್ಲಿ ಇರೋದನ್ನಾ ನೋಡ್ತೇವೆ. ಸಮಾಜ ಈ ತಾರ್ರತಮ್ಯ ಭಾವದಿಂದ ಕೂಡಿದೆ. ಈ ಸಮಾಜದಲ್ಲಿ



ಗಂಡು ಮಕ್ಕಳು ನೆಮ್ಮದಿಯಿಂದಿದ್ದಾರೆಯೇ? ಅಂತ ನೋಡಿದ್ರೆ ಅವರೂ ನೆಮ್ಮದಿಯಿಂದಿಲ್ಲ. ಯಾಕಂದ್ರೆ ಹೆಂಡ್ತೀ ಜೊತೆ ಹೋದ ಎಷ್ಟೋ ಗಂಡು ಮಕ್ಕಳು ಏನೇನೋ ಪಾಡುಗಳನ್ನು ಪಟ್ಟು, ಹೆಂಡತಿಯರ ಶೀಲ ಹಾಳಾಗೋದನ್ನಾ ಎದುರಿಗೆ ಅಂದ್ರೆ ಪ್ರತ್ಯಕ್ಷವಾಗಿ ನೋಡಿರುವಂತಹ ಎಷ್ಟೋ ಸುದ್ದಿಗಳನ್ನು ಕೇಳಿದಿವಿ, ಓದಿದ್ದೀವಿ, ನೊಂದಿದ್ದೀವಿ. ಆಮೇಲೆ ದೆಹಲಿಯ ನಿರ್ಭಯ ಸಂದರ್ಭವನ್ನು ನೋಡಿದ್ರೆ ಇಡೀ ದೇಶವಲ್ಲ ವಿಶ್ವವೇ ಅದರ ಬಗ್ಗೆ ಎಷ್ಟು ಮರುಗಿತು. ಮಕ್ಕಳಾದಿಯಾಗಿ ಎಷ್ಟು ಪ್ರೊಟೆಸ್ಟ್ ನಡೆದವು. ಯಾಕೆಂದರೆ ಅವಳ ಒಂದು ಕರುಳು ಕೂಡಾ ಉಳಿಲಾರದಂತೆ ಕೆಟ್ಟ ಕ್ರೂರಕೃತ್ಯವನ್ನು ಮಾಡಿದ್ರು. ಅಂದಾಗ ಮನುಷ್ಯ ಮನುಷ್ಯನಾಗಿದ್ದಾನೊ? ಮೃಗವಾಗಿದ್ದಾನೊ? ಅಂತಕ್ಕಂತದು. ಈ ಮೃಗವಾಗಿರುವಂತಹ ಮನುಷ್ಯನನ್ನು ನಾವು ಮತ್ತೆ ಮನುಷ್ಯನನ್ನಾಗಿ ಮಾಡಬೇಕು ಅಂದ್ರೆ ಏನ ಮಾಡಬೇಕು ಅನ್ನೊದನ್ನ ಯೋಚಿಸಿ ಮಾಡಬೇಕಾಗಿದೆ. ಕಾನೂನುಗಳು ಬೇಕಾದಷ್ಟಿದಾವು. ಈ ಕಾನೂನುಗಳು ಹೇಗಿದಾವಂದ್ರ ನಾವು ಕೈಗೆ ತೊಗೊಂಡಾಗ ಮಾತ್ರ ಕಾನೂನುಗಳಾಗತವ. ನಮ್ಮಲ್ಲಿ ಏನ ವ್ಯತ್ಯಾಸಗಳಾಗಿವೆ ಅಂತಂದ್ರೆ, ಪಕ್ಕದ ಮನೆಯ ಹೆಣ್ಣು ಮಕ್ಕಳಿಗೆ ತೊಂದರೆ ಆದ್ರೆ ಸುಮ್ಮನಿರ್ತೀವಿ. ಇನ್ನೊಬ್ಬರ ಮನೆಯ ಉಸಾಬರಿ ನಮಗ್ಯಾಕ ಅಂತ ಇನ್ನೊಬ್ಬರ ಮನೆಯಲ್ಲಿರುವವರು ಯಾರು? ಮನುಷ್ಯರು ತಾನೆ? ಮನುಷ್ಯ ಮನುಷ್ಯನ ಬಗ್ಗೆ ಕಾಳಜಿ ವಹಿಸದಿದ್ದರೆ ಇನ್ಯಾರು ಬಂದು ಕಾಳಜಿ ವಹಿಸ್ತಾರೆ?

ಸಮಾಜ ಇಷ್ಟೆಲ್ಲಾ ಕೆಡೋದಕ್ಕೆ ಏನು ಕಾರಣ? ಮೀಡಿಯಾಗಳು ತಪ್ಪಿತಸ್ಥರನ್ನ ಹೆಚ್ಚು ತೋರಿಸದೇ ದೌರ್ಜನ್ಯಕ್ಕೊಳಗಾದವರನ್ನೇ ಹೆಚ್ಚಿಗೆ ತೋರಿಸುತ್ತವೆ. ದೌರ್ಜನ್ಯ ನಡೆಸಿದ ಕೆಲವರ ಮುಸುಡಿಯನ್ನ ಹೆಚ್ಚು ಹೆಚ್ಚು ತೋರಿಸಬೇಕು. ಆಗ ಅವರಿಗೆ ಎಚ್ಚರಿಕೆಯನ್ನು ಕೊಟ್ಟಂಗಾಗ್ತದ. ಒಬ್ಬ ಗಂಡುಮಗ ಒಂದು ಹುಡುಗಿಯನ್ನ ಚುಡಾಯಿಸ್ತಾನೆ ಅಂದರೆ ಪಕ್ಕದಲ್ಲಿರುವ ಮತ್ತೊಬ್ಬ ಗಂಡಸು ತನಗೆ ಸಂಬಂಧ ಇಲ್ಲ ಅನ್ನೊ ಹಾಗೆ ಹೋಗಿಬಿಡ್ತಾನೆ. ಆದರೆ ಯಾಕೆ ಅಂತ ಗಟ್ಟಿಸಿ ಕೇಳೋಕೆ ಆಗೋದಿಲ್ವಾ? ಯಾಕೆ ಕೇಳಬಾರ್ದು? ಯಾಕೆಂದರೆ ಅವರು ನಮಗೆ ಸಂಬಂಧಿಲ್ಲ. ನನ್ನ ಹೆಂಡ್ತಿ ಮಕ್ಕಳು ಅಂದಾಗ ಮಾತ್ರ ನಾವು ಅಲರ್ಟ ಆಗ್ತೀವಿ. ಇನ್ನೊಬ್ಬರ ಹೆಂಡ್ತಿ ಮಕ್ಕಳ ಬಗ್ಗೆ ನಮಗೆ ಆ ಕಾಳಜಿ ಇರೋದಿಲ್ಲ. ಆ ಕಾಳಜಿ ಬರಬೇಕು. ಸಮಾಜದಲ್ಲಿರುವಂತಹ ಪ್ರತಿಯೊಬ್ಬ ಜೀವಿ ನನ್ನದು, ನನ್ನ ಮಾನವ ಕುಲ ಅದು. ಚೆನ್ನಾಗಿರಬೇಕು ಅನ್ನುವಂತಹ ಭಾವನೆ ಎಲ್ಲಿವರೆಗೂ ಬರೋದಿಲ್ವೊ ಅಲ್ಲಿವರೆಗೂ ಯಾವ ಕಾನೂನೂ ಏನೂ ಮಾಡೋಕಾಗಲ್ಲ.

ಯಾವ ಹೆಣ್ಣುಮಕ್ಕಳೂ ಅಬಲೆಯರಲ್ಲ, ಎಲ್ಲಿದ್ದಾಳೆ ಅಬಲೆ? ಸೃಷ್ಟಿ ಕ್ರಿಯೆಯ ಅದ್ಭುತ ಕೆಲಸ ಮಾಡುವಂತ ಮಹಿಳೆ ಅಬಲೆಯಾಗೋಕೆ ಹೇಗೆ ಸಾಧ್ಯ? ನಾವು ಅವಳನ್ನ ಅಬಲೆಯಾಗಿ ಮಾಡಿದ್ದೇವೆ. ಹಾಗೆ ಒಂದು ಮಾತನ್ನು ಹತ್ತು, ನೂರು ಸಲ ಅಂದು ಮನವರಿಕೆ ಮಾಡಿಸಲಾಗಿದೆ. ಯಾರೂ ಯಾರನ್ನೂ ರಕ್ಷಣೆ ಮಾಡುವ ಸಲುವಾಗಿ ಕಾಯುವ ಗೋಜಿಗೆ ಹೋಗುವ ಅಗತ್ಯವಿಲ್ಲ. ನಮಗೆ ಶಕ್ತಿಯಿದೆ, ನಾನು

ನನ್ನನ್ನು ರಕ್ಷಣೆ ಮಾಡಿಕೊಳ್ಳಬಲ್ಲೆ ಎಂಬ ಆತ್ಮವಿಶ್ವಾಸವನ್ನು ಮೂಡಿಸುವ ಅಗತ್ಯವಿದೆ. ನಾನು ಒಂದು ಸಿನಿಮಾ ಉದಾಹರಣೆ ಕೊಡ್ತೀನಿ, ಅದರಲ್ಲಿ ಏನಿತ್ತು ಅಂದ್ರೆ ನಾಲ್ಕು ಜನ ರೌಡಿಗಳು ಒಬ್ಬ ಹೆಣ್ಣು ಮಗಳಿಗೆ ಬೆನ್ನಹತ್ತಿದ್ರು ಆಕೆ ಓಡಿ–ಓಡಿ ಬಂದು ಅಲ್ಲಿ ಒಬ್ಬ ಹುಡುಗ ನಿಂತಿದ್ದಾ ಅವನಿಗೆ ಅಯ್ಯೋ ಅಣ್ಣಾ ನನ್ನ ರಕ್ಷಣೆ ಮಾಡು ಅಂತ ಕೇಳಿದ್ಲು. ಅವನು ಆಕಿನ ಓರೆಗಣ್ಣಿನಿಂದ ನೋಡಿ ಆಕಿನ್ನ ಅವರಕಡೆ ದೂಕಿದ. ಆವಾಗ ಅಲ್ಲೇ ಬಿದ್ದಿದ್ದ ಒಂದು ಕಬ್ಬಿಣದ ತುಂಡಿನಂತಹದ್ದು (ರಾಡ್) ತಗೊಂಡು ಆ ನಾಲ್ಕು ಜನಾನ್ನ ಹೊಡಿತ್ತಾಳೆ. ಅಂದ್ರೆ ಯಾರೂ ರಕ್ಷಣೆಗಿಲ್ಲ ಅಂದಾಗ ಅವಳಲ್ಲಿದ್ದ ಶಕ್ತಿ ಹೊರಗೆ ಬರ್ತದೆ. ಅದನ್ನಾ ಉಪಯೋಗ ಮಾಡ್ಕೋಬೇಕು. ನಾವು ಯಾರಿಗಾಗಿಯೂ ಕಾಯಬಾರ್ದು, ಅಪ್ಪ ಆಗಲಿ, ಗಂಡ ಆಗ್ಲಿ ಅವರಿಗಾಗಿ ನಾವು ಹುಟ್ಟಿದ್ದಿವಾ? ನಮಗಾಗಿ ನಾವು ಹುಟ್ಟಿದ್ದಿವಿ, ಅನ್ನುವುದನ್ನು ತಿಳಕೊಳ್ಳಬೇಕು. ಆ ಧೈರ್ಯ ನಿಮ್ಮಲ್ಲಿದೆ. ಸರ್ವಶಕ್ತಿಯಿದೆ. ಆದಿಶಕ್ತಿ ನೀವು. ಎಲ್ಲಾಗಂಡಸರು ಕೊನೆಗೆ ದೇವರ ಮುಂದೆ ನಿಂತ್ಕೊಂಡು ಅಮ್ಮಾ ಚಾಮುಂಡಿ ನನಗೆ ಶಕ್ತಿಕೊಡು, ನನಗೆಲ್ಲಾ ಕೊಡು ಅಂತಾ ಕೇಳ್ತಾರೆ. ಲಕ್ಷ್ಮಿ ಮುಂದೆ ನಿಂತ್ಕೊಂಡು ರೊಕ್ಕಾಕೊಡು, ಸರಸ್ವತಿ ಮುಂದೆ ನಿಂತ್ಕೊಡು ವಿದ್ಯೆ ಕೊಡು ಅಂತ ಬಯಸುತ್ತಾರೆ. ಅದೆಲ್ಲವೂ ಇರ್ತಕ್ಕಂತ ನಿಮ್ಮಗಳಿಗೇನಾಗಿದೆ? ಎಲ್ಲಾ ನೀವೇ ಇದ್ದೀರಿ ಅಂದಾಗ ನೀವು ಅದನ್ನ ಸ್ವಲ್ಪ ತಿಳಕೋಬೇಕು. ನಾವು ಸಬಲರು ಅಂತ ಅರಿತ್ಕೋಬೇಕು. ಸಕ್ಪಾಲ್ ಹೇಗೆ ಗುಲಾಬಿ ಗ್ಯಾಂಗ್ ಕಟ್ಟಿದ್ಲು. ಅಂತಹ ಗ್ಯಾಂಗ್ ಕಟ್ಟಿ ಯಾರನ್ನೂ ಹೊಡಿಯೋದು ಬೇಡ. ನಿಮ್ಮ ಕೈಯಾಗ ಒಂದು ಆಯುಧ ನೋಡಿದ್ರೆ ನಾಲ್ಕೈದು ಗಂಡಸರಾದ್ರ ಹೆದರ್ತಾರಾ. ಗಂಡು ಬಹಳ ಪುಕ್ಕಲ, ಧೈರ್ಯ ಇರೋದು ಹೆಣ್ಣುಕ್ಕಳಿಗೇ. ಈ ಮಾತನ್ನ ಗ್ಯಾರಂಟಿ ಹೇಳ್ತೀನಿ. ಅಂತಹ ಕೆಲಸವನ್ನು ಮಾಡಿದಾಗ ಅದರಲ್ಲಿ ಗಂಡು ಮಕ್ಕಳೂ ಬರ್ತಾರ ಆಗ ಒಂದು ಆರೋಗ್ಯವಂತ ಸಮಾಜದ ನಿರ್ಮಾಣ ಸಾಧ್ಯವಾಗುತ್ತೆ.

ಕೊನೆಗೊಂದು ಸಣ್ಣ ಕವಿತೆ–

**ನಾನೂ ನಿನ್ನಂತೆ ಓದಬೇಕೆಂದರೆ,**
**ನನಗೆ ನನ್ನ ಗುರುಕುಲ ಎಲ್ಲಿತ್ತಯ್ಯಾ**
**ನಾನೂ ನಿನ್ನಂತೆ ಮಹಾ ಕಾವ್ಯ ಬರೆಯಬೇಕೆಂದರೆ**
**ಗಂಡ– ಮಕ್ಕಳ ಉರುಸ್‌ನಲ್ಲಿ ನನಗೆ ಪುರುಸೊತ್ತೆಲ್ಲಿತ್ತಯ್ಯಾ**
**ನಾನೂ ನಿನ್ನಂತೆ ವಿಜ್ಞಾನಿಯಾಗಬೇಕೆಂದರೆ,**
**ನಾಲ್ಕು ಗೋಡೆಗಳ ಮಧ್ಯೆ ಬೆಳಕು ಎಲ್ಲಿಂದ ಬಂದೀತಯ್ಯಾ.**
**ಕೊನೆಯ ಪಕ್ಷ ನಾನೂ ನಿನ್ನಂತೆ ಸನ್ಯಾಸಿಯಾಗಬೇಕೆಂದರೆ**
**ಮಕ್ಕಳ ಮಮತೆಯ ಕರುಳ ಬಳ್ಳಿ ಕತ್ತರಿಸಲಾಗದಯ್ಯಾ.**
**ಕೊನೆಯ ಪಕ್ಷ ನಾನೂ ನಿನ್ನಂತೆ ರಾಜಕಾರಣಿಯಾಗಬೇಕಾದರೆ**
**ನಿನ್ನಂತಹ ತಂತ್ರ– ಕುತಂತ್ರ ಬುದ್ಧಿ ನನಗೆಲ್ಲಿದೆ ಹೇಳಯ್ಯಾ**

ಅವಕಾಶ ಕೊಟ್ಟಂತಹ ಎಲ್ಲ ಮಹನೀಯರಿಗೆ ನನ್ನ ಧನ್ಯವಾದಗಳು.

**ಸಮಾನತೆಯೇ ಸ್ವರ್ಗ ಅಸಮಾನತೆಯೇ ನರಕ.**



# ಪ್ರತಿದಿನವೂ ಮಹಿಳಾ ದಿನಾಚರಣೆಯಾಗಬೇಕು

**ಪ್ರೊ. ಮೀನಾ. ಆರ್. ಚಂದಾವರಕರ**

**ಚಿರಾಯುವಾಗಲಿ ಚಿರಾಯುವಾಗಲಿ ಮಹಿಳಾ ಒಕ್ಕೂಟ ಚಿರಾಯುವಾಗಲಿ.**

ಮಹಿಳಾ ದಿನಾಚರಣೆ ಇವತ್ತು ಒಂದು ದಿನಕ್ಕಷ್ಟೆ ಸೀಮಿತವಲ್ಲ. ಪ್ರತಿಯೊಂದು ದಿನವೂ ಮಹಿಳಾ ದಿನಾಚರಣೆಯೇ ಎಂಬ ಭಾವನೆ ನಮ್ಮಲ್ಲಿ ಇರಬೇಕು. ಆಗ ಮಾತ್ರ ಮಹಿಳಾ ಸಶಕ್ತೀಕರಣ ಸಾಧ್ಯ. ಹಾಗೆಯೇ ಮಹಿಳೆಯರ ಮೇಲಿನ ದೌರ್ಜನ್ಯ, ಅತ್ಯಾಚಾರದಂತಹ ಅಂಶಗಳು ತಡೆಯಲು ಸಹಕಾರಿಯಾಗುತ್ತದೆ. ಪ್ರೊ. ಉಮಾ ಚಕ್ರವರ್ತಿಯವರು ತಮ್ಮ ಮಾತುಗಳಲ್ಲಿ ನಾವು ಸ್ವತಂತ್ರವಾಗಿ ಆಲೋಚಿಸಲು ಶಿಕ್ಷಣವು ಸಹಕಾರಿಯಾಗಬೇಕು ಎಂದು ಹೇಳಿದರು. ಸ್ವತಂತ್ರವಾಗಿ ವಿಚಾರಮಾಡುವ ಸಾಮರ್ಥ್ಯ ನಮ್ಮೆಲ್ಲರಲ್ಲೂ ಇದೆ, ಶಿಕ್ಷಣದ ಮೂಲಕ ಅದರ ಸದುಪಯೋಗ ಮಾಡಿಕೊಳ್ಳುವುದು ಮಹತ್ವದ್ದು. ಈ ಸಂದರ್ಭದಲ್ಲಿ ನನಗೆ ರವೀಂದ್ರನಾಥ ಟಾಗೋರರ ಮಾತು ನೆನಪಾಗುತ್ತಿದೆ. ಯಾರೋ ಒಬ್ಬರು 'ಸಂಸ್ಕೃತಿ ಮತ್ತು ಶಿಕ್ಷಣದಲ್ಲಿ ವ್ಯತ್ಯಾಸ ಏನು?' ಎಂದು ಅವರನ್ನು ಕೇಳಿದಾಗ ಅವರು 'ಶಿಕ್ಷಣ ಒಂದು ಅಮೂಲ್ಯವಾದ ವಜ್ರ ಇದ್ದ ಹಾಗೆ. ಸಂಸ್ಕೃತಿ ಆ ವಜ್ರದ ಹೊಳಪು' ಎಂದು ಹೇಳಿದರಂತೆ. ನಮ್ಮ ಸಂಸ್ಕೃತಿಯ ಇತಿಹಾಸದಲ್ಲಿ ಹೆಣ್ಣು ಮಕ್ಕಳಿಗೆ ಶಿಕ್ಷಣದಲ್ಲಿ ಮುಂದುವರೆಯಲು ಸಾಕಷ್ಟು ಪ್ರೋತ್ಸಾಹ ಇದ್ದುದು ಕಂಡುಬರುತ್ತದೆ. ಆಕ್ಸಫರ್ಡ್ ಯೂನಿವರ್ಸಿಟಿಯಲ್ಲಿ 1928ರಲ್ಲಿ ಮಹಿಳೆ ಪ್ರಥಮ ಬಾರಿಗೆ ಪದವೀಧರೆಯಾದರೆ, ಕೆಂಬ್ರಿಡ್ಜ್ ವಿ.ವಿಯಲ್ಲಿ 1948ರಲ್ಲಿ ಮಹಿಳೆ ಪದವೀಧರೆಯಾಗಿದ್ದಾಳೆ. ಆದರೆ ನಮ್ಮ ದೇಶದಲ್ಲಿ 1872ರಲ್ಲಿಯೇ ಮದ್ರಾಸ ವಿಶ್ವವಿದ್ಯಾಲಯದಲ್ಲಿ ಮಹಿಳೆಯೊಬ್ಬಳು ಪ್ರಥಮ

ಬಾರಿಗೆ ಪದವೀಧರೆಯಾಗಿದ್ದಳು. ಬಾಂಬೆ ವಿಶ್ವವಿದ್ಯಾಲಯದಲ್ಲಿ 1873ರಲ್ಲಿ ಮೊದಲ ಪದವೀಧರೆ ಕಂಡುಬರುತ್ತಾರೆ. ಇತರೆ ದೇಶಗಳಿಗೆ ಹೋಲಿಸಿದರೆ 50 ವರ್ಷಗಳಿಗಿಂತ ಮುಂಚಿತವಾಗಿಯೇ ನಮ್ಮ ದೇಶದಲ್ಲಿ ಮಹಿಳೆಯರಿಗೆ ಶಿಕ್ಷಣ ದೊರೆತಿತ್ತು.

ಚರಿತ್ರೆಯಲ್ಲಿ ಮಹಿಳೆಯರ ಶಿಕ್ಷಣಕ್ಕೆ ಸಾಕಷ್ಟು ಅವಕಾಶಗಳಿದ್ದದ್ದು ಕಂಡು ಬರುತ್ತದೆ. 'ಮಹಿಳೆ ಪ್ರಕೃತಿ, ತಾಯಿ ಸಂಸ್ಕೃತಿ' ಎಂದು ಹೇಳುವ ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಯರ ಪಾತ್ರ ಬಹಳ ಮಹತ್ವದ್ದು, ಉಮಾ ಚಕ್ರವರ್ತಿಯವರು ಸಮತೆಗಾಗಿ ಸತತ ಹೋರಾಟ ಮಾಡಬೇಕು ಎಂದು ಹೇಳಿದರು. ಸತತ ಹೋರಾಟ ದಿಂದಲೇ ನಾವು ಮುಂದೆ ಬಂದಿರುವುದು ಶ್ಲಾಘನೀಯ. 21ನೇ ಶತಮಾನದಲ್ಲಿ ಇನ್ನೂ ಮುಂದೆ ಬರಬೇಕಾದರೆ, ನಮ್ಮ ಮೇಲೆ ನಡೆಯುವ ದೌರ್ಜನ್ಯ, ಅತ್ಯಾಚಾರ ಕಡಿಮೆಯಾಗಬೇಕಾದರೆ ನಮ್ಮಲ್ಲಿ ಆತ್ಮ ವಿಶ್ವಾಸ ಹಾಗೂ ಒಂದು ಆಶಾ ಭಾವನೆ ಇದ್ದಾಗ ಮಾತ್ರ ಸಾಧ್ಯ. ಅದಕ್ಕೆ ಪ್ರೊ.ಚಕ್ರವರ್ತಿ ಹೇಳಿದಂತೆ, ನಮ್ಮೆಲ್ಲ ವಿದ್ಯಾರ್ಥಿನಿಯರಲ್ಲಿ, ಯುವತಿಯರಲ್ಲಿ ನಾನು ಹೇಳುವುದೇನೆಂದರೆ,

**ಮಂಜಿಲೆ ಉನ್ ಕೆ ಹೋತಿ ಹೈ**
**ಜಿನ್‌ಕೆ ಸಪ್ನೋ ಮೆ ಜಾನ್ ರೆಹತಿ ಹೈ**
**ಪಂಕ್ ಸೆ ಕುಛ್ ನಹಿ ಹೋತಾ ಮೇರಿ ಬೆಹನೋ**
**ಹೋಸ್‌ಲೋಮೆ ಉಡಾನ್ ಹೋತಿ ಹೈ**
**ಇಸ್ ಲಿಯೇ ಚಕ್ರವರ್ತಿಜೀಯೇ ಹೋಸ್ಲಾಹೈ ಹಮ್‌ಮೇ, ಔರ್ ಹಮ್ ಡೆಫಿನೆಟ್ಲಿ ಆಗೇ ಜಾಯೇಂಗೆ.**

ಸರಸ್ವತಿ ಚಿಮ್ಮಲಗಿಯವರು ನಮ್ಮಲ್ಲಿರುವ ಶಕ್ತಿ ಸಾಮರ್ಥ್ಯವನ್ನು ಮತ್ತೊಮ್ಮೆ ನಮ್ಮೆಲ್ಲರಿಗೆ ನೆನಪಿಸಿಕೊಟ್ರು. ಸಮುದ್ರದ ಆಳವನ್ನು, ಪರ್ವತದ ಗಾತ್ರವನ್ನು, ಅದೇರೀತಿ ಮಹಿಳೆಯರಿಗಿರುವ ಶಕ್ತಿಯನ್ನು ಊಹಿಸಲು ಅಥವಾ ಲೆಕ್ಕ ಹಾಕಲು ಸಾಧ್ಯವೇ ಇಲ್ಲ. ಹಾಗೆಯೇ ಅವರು ಹೇಳಿದ 'ನಿಮ್ಮ ಮನೆಯವರು ಏನು ಮಾಡ್ತಾರೆ ಅಂದ್ರೆ ಏನು ಇಲ್ಲ ಮನೆಯಲ್ಲಿರುತ್ತಾರಷ್ಟೆ' ಅಂತ ಹೇಳಿದ್ದು ಸಾಮಾನ್ಯ ಮಾತಲ್ಲ. ಯಾವುದೇ ವೃತ್ತಿಯಲ್ಲಿದ್ದರೂ ಸಹ ಮನೆಯನ್ನು ನಿರ್ವಹಿಸಿಕೊಂಡು ಹೋಗುವುದು ನಮ್ಮಲ್ಲಿರುವ ಅದ್ಭುತವಾದ ಸಾಮರ್ಥ್ಯ. ಇದಕ್ಕೆ ಪೂರಕವಾಗಿ ಒಂದು ನಿದರ್ಶನವನ್ನು ನಾನಿಲ್ಲಿ ಹೇಳ್ತೀನಿ–ಒಂದು ಮನೆಯಲ್ಲಿ ಮಕ್ಕಳು ಆಡ್ತಾ ಇದ್ದಾರೆ. ಕೆಲವರು ನೀರಲ್ಲಿ ಆಟ ಆಡ್ತಾ ಇದ್ದಾರೆ. ಮನೆಯಲ್ಲಿ ಎಲ್ಲಾ ಅಸ್ತವ್ಯಸ್ತ ಇದೆ. ಅದನ್ನು ನೋಡಿದ ಆಕೆಯ ಗಂಡ ಕಮಲ, ಕಮಲ ಎಲ್ಲಿ ಇದಿ ಅಂತ ಕೂಗ್ತಾ ಬರ್ತಾನ. ಕಮಲ ಎಲ್ಲೂ ಇರೊದಿಲ್ಲ, ರೂಮ್‌ನಲ್ಲಿ ಫ್ಯಾನ್ ಚಾಲು ಇದೆ. ಗ್ಯಾಸ್ ಮೇಲೆ ಒಂದು ಪಾತ್ರೆ ಸುಟ್ಟು ಹೋಗಿದೆ, ಟೇಬಲ್ ಮೇಲೆ ಎಲ್ಲಾ ಚೆಲ್ಲಾಪಿಲ್ಲಿಯಾಗಿದೆ ಮತ್ತೆ ಕಮಲ, ಕಮಲ ಅಂತ ಕೂಗ್ತಾನೆ, ಕಮಲ ಪತ್ತೆಇಲ್ಲ, ಆಮೇಲೆ ಮಹಡಿ ಮೇಲೆ ರೂಮ್‌ನ ಬಾಗಿಲ ತೆಗೆದರೆ ಅಲ್ಲಿ ಕಮಲ ಮಂಚದ ಮೇಲೆ ಕೈನಲ್ಲಿ ಜ್ಯೂಸ್‌ಗ್ಲಾಸ್ ಹಿಡಿದು, ಟಿ.ವಿ

**ಹೇಗೆ ಹೇಳಲಿ ಮನುಷ್ಯರೆಂದು ನಿಮ್ಮನ್ನು? ಮಗು, ಮುದುಕಿ ಭೇದ ತಿಳಿಯದವರನ್ನು..!?**



ನೋಡ್ಕೊತ್ತ ಕುಳಿತಿದ್ದಾಳೆ. ಆಗ ಆಕೆಯ ಗಂಡ ಕಮಲ ಕೆಳಗಡೆ ಮಕ್ಕಳು ಎಲ್ಲಾ ಅಸ್ತವ್ಯಸ್ತ ಮಾಡಿದ್ದಾರೆ, ನೀ ಏನ್ ಮಾಡ್ತಿದ್ದೀ ಅಂತ ಕೇಳಿದ. ಅದಕ್ಕೆ ಕಮಲ ಹೇಳುತ್ತಾಳೆ, 'ಇಡೀ ದಿನಾ ಏನ್ ಕೆಲ್ಸ ಇರ್ತದ ಅಂತ ಕೇಳ್ತಿದ್ರಲ್ಲಾ ಅದಕ್ಕೆ ಇಡೀ ದಿನಾ ನನಗೇನು ಕೆಲ್ಸಾ ಇರ್ತದ ಅಂತ ಇವತ್ತು ತೋರ್ಸ್ಸಿ ಬಿಡಾಕಾ ಹಿಂಗ ಮಾಡಿದೆ' ಅಂತ ಹೇಳ್ತಾಳೆ. ಇವಳು ಹೋಮ್ ಮೇಕರ್. ಇವೆಲ್ಲ ಕೆಲಸಗಳ ಜೊತೆಗೆ ನಮ್ಮ ವೃತ್ತಿ ಯಲ್ಲಿಯೂ ಮುಂದೆ ಬರುವುದಕ್ಕೆ ನಾವು ಆರಂಭಮಾಡಿದ್ದೇವೆ, ಮಾಡ್ತಾಯಿದ್ದೇವೆ. ನಮ್ಮಲ್ಲಿರುವ ತಾಳ್ಮೆ, ಕರ್ತೃತ್ವ ಶಕ್ತಿ, ನೇತೃತ್ವ ಶಕ್ತಿ ಮತ್ತು ಮಾತೃತ್ವ ಶಕ್ತಿ ಇದನ್ನು ಯಾವುದೇ ಶಕ್ತಿಯ ಜೊತೆಗೆ ಹೋಲಿಸಲು ಸಾಧ್ಯವಿಲ್ಲ. ಆ ಶಕ್ತಿಯನ್ನು ನಾವು ಬಳಕೆ ಮಾಡಿಕೊಳ್ಳಬೇಕು. If one can do it, you too can do it. ಒಬ್ಬರಿಗೆ ಸಾಧ್ಯವಾದರೆ ನಿಮಗೂ ಕೂಡಾ ಅದನ್ನು ಮಾಡಲಿಕ್ಕೆ ಸಾಧ್ಯ. If none can do it, you must do it .'ಯಾರಿಗೂ ಮಾಡಲು ಸಾಧ್ಯವಾಗದಿದ್ದರೆ ನೀವು ಮಾಡಲೇ ಬೇಕು' ನಮ್ಮ ಇಂಡಿಯನ್ ವರ್ಷನ್‌ನಲ್ಲಿ ನೋಡಿದ್ರೆ, If one can do it, let her do it, if none can do it, how can I do it?. ಅಂದರೆ ಯಾರಿಗಾದರೂ ಮಾಡಲು ಆದರೆ ಅವರೇ ಮಾಡಲಿ, ಯಾರಿಗೂ ಮಾಡಲು ಸಾಧ್ಯವಾಗದಿದ್ದರೆ ನಾನು ಹೇಗೆ ಮಾಡಲಿ? ಎಂದು.

ಇದು ಭಾರತೀಯ ಮಹಿಳೆಗೆ ಅನ್ವಯಿಸುವುದಿಲ್ಲ. ಬಹಳ ಹೆಮ್ಮೆಯ ವಿಷಯ ಸರಸ್ವತಿಯವರು ಹೇಳಿದ್ರು ಮಹಿಳೆಯರನ್ನು ಎರಡನೇ ದರ್ಜೆಯವರು ಎಂದು ಗುರುತಿಸಿದರೂ ಸಹ ಎಷ್ಟೋ ರಂಗದಲ್ಲಿ ಪ್ರಗತಿ ಸಾಧಿಸಿದ್ದಾಳೆ. ಇವತ್ತು ಅಂತಾರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸುವ ಸಂದರ್ಭದಲ್ಲಿ ನಾವು ನಮ್ಮಲ್ಲಿರುವ ಶಕ್ತಿ ಸಾಮರ್ಥ್ಯದ ಸದ್ಬಳಕೆ ಮಾಡುವ ಬಗ್ಗೆ ನಿಶ್ಚಯಿಸಿಕೊಳ್ಳಬೇಕು. ಆಗ ಮಾತ್ರ ನಾವು ಅಬಲೆ ಅಲ್ಲ ಸಬಲೆ ಎಂದು ಸಾಬೀತು ಪಡಿಸಲಿಕ್ಕೆ ಸಾಧ್ಯ. ಕೊನೆಗೆ ಒಂದು ನೈಜಘಟನೆ ಹೇಳಲಿಕ್ಕೆ ಬಯಸ್ತೀನಿ. ಒಬ್ಬ ಮಹಿಳೆಗೆ ಎರಡು ಹೆಣ್ಣು ಮಕ್ಕಳು ಇರ್ತಾರೆ. ಮೂರನೆ ಬಾರಿ ಅವಳು ಗರ್ಭಿಣಿಯಾದಾಗ ಗಂಡನ ಮನೆಯವರು ಹೇಳ್ತಾರಂತೆ 'ಮೂರನೇ ಮಗುವೂ ಹೆಣ್ಣಾದ್ರೆ ನೀನು ಮನೆಗೆ ವಾಪಸ್ಸು ಬರಬೇಡ' ಅಂತ. ಅವಳಿಗೆ ಏನು ಮಾಡಬೇಕು ಅಂತ ಗೊತ್ತಾಗಲಿಲ್ಲ, ಮನಸ್ಸಿಗೆ ಬಹಳ ಬೇಜಾರಾಯಿತು. ತವರು ಮನೆಗೆ ಹೋಗ್ತಾಳೆ. ಅಣ್ಣನಿಗೆ ಗಂಡನ ಮನೆಯವರು ಹೀಗಂದ್ರು ಅಂತ ಹೇಳ್ತಾಳೆ. ಅಣ್ಣ ಅವಳಿಗೆ ಧೈರ್ಯ ತುಂಬಿದ. ಡೆಲಿವರಿ ಆಗ್ತದೆ, ಮೂರನೆಯ ಮಗುವೂ ಹೆಣ್ಣಾಗುತ್ತದೆ. ಗಂಡನ ಮನೆಯವರು ನೋಡ್ಲಿಕ್ಕೂ ಹೋಗಲಿಲ್ಲ. ಆಗ ಆಕೆಯ ಅಣ್ಣನೂ 'ಹೆಣ್ಣಿನ ಸ್ಥಾನ ಗಂಡನ ಮನೆಯಲ್ಲಿರಬೇಕಾದುದು, ಆಕೆ ವಾಪಸ್ಸು ಗಂಡನ ಮನೆಗೆ ಹೋಗಬೇಕು, ಆದರೆ ಅವರು ಸ್ವೀಕಾರ ಮಾಡಲು ತಯಾರಿಲ್ಲ ಆದ್ರೆ ಮೂರನೇ ಮಗು ಇಲ್ಲದೆ ಆಕೆ ಹೋಗಬಹುದಲ್ಲ' ಅಂತ ತಂಗಿಗೆ ಹೇಳ್ತಾನೆ. ಆಕೆಯು ಅಣ್ಣನ ಮಾತು ಕೇಳಿ ನಾಲ್ಕೈದು ದಿನದ ಕೂಸಿಗೆ ಏನೂ ಆಹಾರ ನೀಡದೆ ವಿಪರೀತ ಚಳಿಯಿದ್ದರೂ

ಮನೆಯ ಹೊರಗಿನ ಕಾಂಪೌಂಡ್ ಗೋಡೆಯ ಮೇಲೆ ಮಲಗಿಸಿಬಿಡ್ತಾಳೆ. ಇಡೀ ರಾತ್ರಿ ತಾಯಿಗೆ ನಿದ್ದೆ ಇರೋದಿಲ್ಲ. ಬೆಳಗಿನ ಜಾವ ಇನ್ನೂ 5 ಗಂಟೆಯ ಹೊತ್ತಿಗೆ ಮಗು ಸತ್ತಿರಬೇಕು ಎಂಬ ನೋವಿನಲ್ಲಿ ಓಡಿ ಹೋಗಿ ನೋಡಿದ್ರೆ, ದೇವರ ಕೃಪೆಯಿಂದ ಆ ಮಗುವಿನ್ನೂ ಬದುಕಿರುತ್ತದೆ, ಆದ್ರೆ ಚಳಿಯಿಂದ ಪೂರ್ತಿ ನೀಲಿಗಟ್ಟಿ ಅಳೋಕೆ, ಕೈ–ಕಾಲು ಆಡಿಸೋಕೆ ಶಕ್ತಿಯಿಲ್ಲದೆ ಇರುತ್ತದೆ. ಅದನ್ನು ನೋಡಿ ಆ ತಾಯಿಯ ಹೃದಯಕ್ಕೆ 'ನಾಲ್ಕು ದಿವಸದ ಕೂಸಿಗೆ ಇಷ್ಟೆಲ್ಲ ತೊಂದರೆ ಕೊಟ್ರೂನೂ ಬದುಬೇಕು ಎಂಬ ಛಲ ಇರಬೇಕಾದರೆ ತಾಯಿಯಾಗಿ ನನಗೇಕೆ ಆ ಛಲವಿಲ್ಲ? ಮಗುವನ್ನು ಯಾಕೆ ಉಳಿಸಬಾರದು?' ಎನಿಸಿ, ಆ ಮಗುವನ್ನು ಅಪ್ಪಿಕೊಂಡು ಮನೆಯೊಳಗೆ ಹೋಗಿ ಅಣ್ಣನಿಗೆ ಹೇಳ್ತಾಳೆ, 'ನಾನು ನನ್ನ ಗಂಡನ ಮನೆಗೆ ಹೋಗೋದಿಲ್ಲ ಆದ್ರೆ ಈ ಹೆಣ್ಣು ಮಗೂನ ಬೆಳಸ್ತಿನಿ' ಅಂತ. ಮುಂದೆ ಆ ಮಗು ದೊಡ್ಡ ಅಧಿಕಾರಿ ಆಗಿ ಆತ್ಮವಿಶ್ವಾಸದಿಂದ ತನ್ನ ಸೇವೆಯನ್ನು ಸಲ್ಲಿಸುತ್ತಾ ಇದ್ದಾಳೆ. ಇಂಥ ಉದಾಹರಣೆಯಿಂದ ನಾವು ಕಲಿಯಬೇಕು.

ತೊಂದರೆಗಳು ಬೇಕಾದ್ದು ಬರಲಿ, ಬರುವುದು ಸಹಜ, ಆದ್ರೆ ಎಂದೂ ಬೀಳೋದಿಲ್ಲ. ಬಿದ್ರೂ ಸಹ ನಾನು ಧೈರ್ಯದಿಂದ ಎದ್ದು ನಿಂತು ಓಡಬಲ್ಲೆ ಎನ್ನುವುದರಲ್ಲೇ ನಿಜವಾದ ಯಶಸ್ಸು ಇರೋದು. ಇದನ್ನು ನಾವು ಮಹಿಳೆಯ ರೆಲ್ಲರೂ ಕಲಿಯಬೇಕಾಗಿದೆ. ಆತ್ಮವಿಶ್ವಾಸದಿಂದ, ಪ್ರಾಮಾಣಿಕವಾಗಿ ನಮ್ಮ ಕೆಲಸವನ್ನು ಮಾಡಿದ ತೃಪ್ತಿಯಿರಬೇಕು. ಭಗವಂತ ನಮಗೆ ಅಪೂರ್ವವಾದ ಶಕ್ತಿ ಕೊಟ್ಟಿದ್ದಾನೆ. ಸಾಮಾನ್ಯವಾಗಿ ಮಹಿಳೆ ಪುರುಷರಿಗಿಂತ ಎರಡು ಪಟ್ಟು ಮಾತಾಡುವವಳಂತೆ, ನಾಲ್ಕು ಪಟ್ಟು ಆಹಾರ ಸೇವಿಸುವವಳಂತೆ, ಆದ್ರೆ ಪುರುಷರಿಗಿಂತ ಎಂಟು ಪಟ್ಟು ಕೆಲಸವನ್ನು ಮಾಡುವವಳಂತೆ, ಆ ಸಾಮರ್ಥ್ಯ ನಮ್ಮಲ್ಲಿದೆ. ಈ ಶಕ್ತಿಯನ್ನು ಸದುಪಯೋಗ ಮಾಡೋಣ. ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಭಾವ ಮೂರುನೂರ ಅರವತ್ತೈದು ದಿನಗಳೂ ನಮ್ಮಲ್ಲಿರಬೇಕು. ಖುಷಿಯಿಂದ ಆಚರಿಸಬೇಕು. ನಾಲ್ಕು ವರ್ಷದ ಹಿಂದೆ ಅಂತರಾಷ್ಟ್ರೀಯ ಮಹಿಳಾ ದಿನದಂದು ನಾನು ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಕುಲಪತಿಯಾಗಿ ಅಧಿಕಾರವನ್ನು ಸ್ವೀಕರಿಸಿದ್ದೆ. ನಾಲ್ಕು ವರ್ಷದ ನಂತರ ಅದೇ ದಿನದಂದು ಇವತ್ತು ಮಧ್ಯಾಹ್ನ ನಾನು ನನ್ನ ಅಧಿಕಾರವನ್ನು ಬಿಟ್ಟುಕೊಡ್ತಾ ಇದ್ದೀನಿ. ಇದು ನನ್ನ ಅದೃಷ್ಟ ಅಂತ ತಿಳಕೊಂಡಿನಿ ಯಾಕಂದ್ರೆ ಎರಡೂ ದಿನ ಅಂದ್ರೆ accepting power and handing over power ಆಗ್ತಾ ಇದೆ. ಆ ಸಂದರ್ಭದಲ್ಲಿ ನಮ್ಮ ವಿಶ್ವವಿದ್ಯಾಲಯದಲ್ಲಿ, ನಮ್ಮೂರಿನಲ್ಲಿ, ಈ ವಿಜಯಪುರದಲ್ಲಿ ಎಲ್ಲ ಭಗಿನಿಯರು ನನಗೆ ಸಾಕಷ್ಟು ಸಹಾಯ, ಸ್ಫೂರ್ತಿ ನೀಡಿದ್ದಾರೆ. ನಾನು ಎಲ್ಲರಿಗೂ ಚಿರಋಣಿ ಎಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಸಂವಿಧಾನದ ಮುಂದೆ ಎಲ್ಲರೂ ಸಮಾನರು. ನಮಗೂ ಇದೆ ನಿಮಗಿರುವಂತಹದ್ದೇ ಹಕ್ಕುಗಳು**



# ರೈತರ ಆತ್ಮಹತ್ಯೆ ಕೃಷಿ ಬಿಕ್ಕಟ್ಟಿನ ಒಂದು ಲಕ್ಷಣ

**ವಿ. ಗಾಯತ್ರಿ**

ನಾವು ಹಿಂದೆ 'ಮಾನಸ' ಪತ್ರಿಕೆಯನ್ನು ತರುತ್ತಿದ್ದಾಗ ಒಂದೊಂದು ಲೇಖನವನ್ನು ತರಿಸಲು ಪರದಾಡುತ್ತಿದ್ದೆವು. ಆದರೆ ಈಗ ವಿಶ್ವವಿದ್ಯಾಲಯಗಳಲ್ಲಿ ಮಹಿಳಾ ಅಧ್ಯಯನ ವಿಭಾಗಗಳು ಇರುವುದರಿಂದ ನಾವು ತರುತ್ತಿದ್ದಂತಹ ಹತ್ತು ಪತ್ರಿಕೆಗಳನ್ನು ತರಬಹುದಾದ ಪರಿಸ್ಥಿತಿ ಇದೆ. ಕೃಷಿ ಬಿಕ್ಕಟ್ಟು ಎಂದು ಹೇಳುವಾಗ ಮೊದಲು ಕೃಷಿಬಿಕ್ಕಟ್ಟು ಎಂದರೇನು? ಎಂದು ಮೊದಲು ನೋಡಬೇಕು. ರೈತರ ಆತ್ಮಹತ್ಯೆಗಳು ನಿರಂತರವಾಗಿ ನಡೆಯುತ್ತಿರುವುದರ ಹಿನ್ನೆಲೆಯಲ್ಲಿ ಮಹಿಳೆಯರ ಪರಿಸ್ಥಿತಿಯನ್ನು ಕುರಿತು ಮಾತನಾಡಲು ನನಗೆ ಹೇಳಿದ್ದಾರೆ. ಆತ್ಮಹತ್ಯೆ ಎಂಬುದು ಕೃಷಿಬಿಕ್ಕಟ್ಟಿನ ಒಂದು ಲಕ್ಷಣವಷ್ಟೇ. ಬಿಕ್ಕಟ್ಟು ಕೃಷಿಯಲ್ಲಿ ಯಾವೊತ್ತೂ ಇತ್ತು. ಹಿಂದೆಲ್ಲ ಹಿರಿಯರು ಹೇಳುತ್ತಿದ್ದರು, 'ಪ್ರತಿ ವರ್ಷವೂ ಭೂಮಿ ತಾಯಿ ನಿನಗೆ ತುಂಬಿ ಕೊಟ್‌ಬಿಡೋದಿಲ್ಲ. ನಾಕ್ ವರ್ಷ ಭೂಮಿಗೆ ದುಡಿ ಮುಂದಿನ ನಾಲ್ಕು ವರ್ಷಕ್ಕೆ ಬೆಳೆಸೋಕೆ ಆಗುವಷ್ಟು ನಿನಗೆ ಕೊಡುತ್ತಾಳೆ'. ಈ ಮಾತು ಬರ, ನಷ್ಟಗಳು ನಿರಂತರವಾಗಿ ನಡೆದುಕೊಂಡೇ ಬಂದಿದೆ ಎನ್ನುವುದನ್ನು ತಿಳಿಸುತ್ತದೆ. ಆದರೆ ನಾವು ಯಾಕೆ ಕೃಷಿಬಿಕ್ಕಟ್ಟಿನ ಬಗ್ಗೆ ಮಾತನಾಡುವ ಸಂದರ್ಭ ಬಂದಿದೆ ಎಂದರೆ, ಕೃಷಿಯ ಹೊಸ ಅಲೆಯಲ್ಲಿ ಹುಟ್ಟಿರುವಂತಹ ಹೊಸ ಬಿಕ್ಕಟ್ಟು ಇದು. ಈ ಬಿಕ್ಕಟ್ಟು ರೈತರ ಆತ್ಮಹತ್ಯೆಯ ರೂಪದಲ್ಲಿ ಕಾಣಿಸಿಕೊಂಡಿದೆ. ಇದು ಎಲ್ಲಿಂದ ಪ್ರಾರಂಭವಾಯಿತು? ಕೃಷಿಕರಾಗಿ ಬಿಕ್ಕಟ್ಟಿನಲ್ಲಿ ಏಕೆ ಸಿಲುಕಿಕೊಂಡಿದ್ದೇವೆ? ಏಕೆ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ? ಎಂದು ಯೋಚಿಸುವಾಗ, ಎರಡು ವಿಷಯಗಳನ್ನು ಗಮನಿಸಬಹುದು. ಒಂದು ವರ್ಷಾನುವರ್ಷ ಬೆಳೆ ನಷ್ಟವಾಗುತ್ತಿರುವುದು, ಇನ್ನೊಂದು ರೈತರು ಬೆಳೆಗೋಸ್ಕರ

ಮಾಡಿರುವ ಸಾಲ. ಸಾಲ ಯಾಕೆ ಎಂದರೆ ಬೆಳೆ ಬೆಳೆಯಲು ಹೆಚ್ಚೆಚ್ಚು ಖರ್ಚು ಮಾಡಬೇಕಾಗಿದೆ. ಖರ್ಚು ಮಾಡುವ ಸಲುವಾಗಿ ಮಾಡಿದ ಸಾಲವನ್ನು ಸಾಲ ತೀರಿಸೋಕೆ ಆಗದೆ ರೈತರು ಇಂದು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಯಾತಕ್ಕೋಸ್ಕರ ಇಷ್ಟೊಂದು ಖರ್ಚು ಮಾಡಬೇಕಾಗಿದೆ ಎಂದು ನೋಡಿದಾಗ ಭೂಮಿ ಫಲವತ್ತತೆಯನ್ನು ಸಂಪೂರ್ಣವಾಗಿ ಕಳೆದುಕೊಂಡಿರುವುದರಿಂದ ಎಷ್ಟೇ ಒಳಸುರಿಗಳನ್ನು ಹಾಕಿ, ಏನೇ ಮಾಡಿದರೂ ಏನನ್ನೂ ಉತ್ಪಾದಿಸಿ ಕೊಡುವ ಪರಿಸ್ಥಿತಿ ಇಲ್ಲ. ಹಾಗಾಗಿ ಬೆಳೆ ನಷ್ಟ ನಿರಂತರವಾಗಿ ನಡೆಯುತ್ತಿದೆ. ಹೆಚ್ಚಾನುಹೆಚ್ಚು ರೈತರು ಒಂದೇ ಬೆಳೆಯನ್ನು ವರ್ಷಾನುವರ್ಷ ಬೆಳೆಯುತ್ತಿರೋ ಸಂದರ್ಭದಲ್ಲಿ ಬೆಳೆದ ಬೆಳೆಗಳಿಗೆ ಬೆಲೆಯೂ ಸಿಗುತ್ತಿಲ್ಲ. ಇದು ಸಂಪೂರ್ಣ ರಾಜಕೀಯ ವಿಷಯವಾಗಿದ್ದು ಅದರಲ್ಲಿ ಸಿಕ್ಕಿ ಹಾಕಿಕೊಂಡು ರೈತರು ಆತ್ಮ ಹತ್ಯೆ ಮಾಡಿಕೊಳ್ಳುತ್ತಿದ್ದಾರೆ.

ಹಿಂದೆ ಯಾಕೆ ಈ ಪರಿಸ್ಥಿತಿ ಇರಲಿಲ್ಲ ಎಂದರೆ, ಕೃಷಿಯಲ್ಲಿ ಇರುತ್ತಿದ್ದ ಪರಿಸರದ ಚಕ್ರ ಇಂದು ಇಲ್ಲ. ಪೋಷಕಾಂಶ ಚಕ್ರ, ಪರಿಸರ ಚಕ್ರ, ನೀರಿನ ಚಕ್ರ, ಬೆಳೆಯ ಚಕ್ರ ಏನಿತ್ತು ಅವೆಲ್ಲವೂ ಇಂದು ಛಿದ್ರಛಿದ್ರವಾಗಿವೆ. ಕೃಷಿಯಲ್ಲಿ ಇದ್ದಂತಹ ಅದ್ಭುತವಾದ ವ್ಯವಸ್ಥೆ ಇಂದು ನಾಶವಾಗಿದೆ. ಅಂಥದ್ದನ್ನು ಪಳೆಯುಳಿಕೆಯ ರೂಪದಲ್ಲಿ ನೋಡಲಿಕ್ಕೆ ಸಾಧ್ಯ ಇದೆ. ನಮ್ಮಲ್ಲಿ ಕೃಷಿ ಎಂದರೆ ಸ್ವಾವಲಂಬನೆ ಎಂಬ ನಂಬಿಕೆ ಇತ್ತು. ಪರಿಸರದ ದೃಷ್ಟಿಯಲ್ಲಿ ಒಂದು ಅದ್ಭುತವಾದ ವ್ಯವಸ್ಥೆ ಇತ್ತು. ಊರಿಗೊಂದು ಕೆರೆ, ಒಂದು ಗುಂಡು ತೋಪು, ಗೋಮಾಳ ಇರುತ್ತಿತ್ತು. ಈ ಕೆರೆಯ ಸುತ್ತಲೂ ಒಂದು ನೀರಿನ ವ್ಯವಸ್ಥೆ ಇತ್ತು, ಅದನ್ನು ಕೃಷಿಗೆ ಬಳಕೆ ಮಾಡಲಾಗುತ್ತಿತ್ತು. ಇತ್ತೀಚೆಗೆ ರಾಜಸ್ಥಾನದ ರಾಜೇಂದ್ರ ಸಿಂಗ್ ಅವರು ಕೋಲಾರಕ್ಕೆ ಭೇಟಿ ನೀಡಿದ್ದರು 'ನಾನು ಭಾರತದಾದ್ಯಂತ 25 ವರ್ಷ ಪ್ರವಾಸ ಮಾಡಿದ್ದೇನೆ ಆದರೆ ಕೋಲಾರದ ಸರಣಿ ಕೆರೆ ವ್ಯವಸ್ಥೆ ತುಂಬಾ ಅದ್ಭುತವಾದದ್ದು, ನಾನು ಎಲ್ಲೂ ನೋಡಿಲ್ಲ' ಎಂದು ಹೇಳಿದರು. ಕರ್ನಾಟಕದಲ್ಲಿ ಅಂತಹ ಅದ್ಭುತವಾದ ನೀರಿನ ಹಂಚಿಕೆಯ, ನೀರಿನ ಸಂಗ್ರಹಣೆಯ ವ್ಯವಸ್ಥೆ ಇತ್ತು. ಕೃಷಿಗೆ ಹೊಂದಿಕೊಂಡಿದ್ದ ಗುಂಡು ತೋಪುಗಳಿಂದ ಜೇನುಗಳು ಬಂದು ನಮ್ಮ ಬೆಳೆಗಳಿಗೆ ಪರಾಗ ಸ್ಪರ್ಶ ಮಾಡುವುದು ನಮಗೆ ಹೆಚ್ಚು ಇಳುವರಿಯನ್ನು ಕೊಡುತ್ತಿತ್ತು. ಕೃಷಿಯ ಭಾಗವಾಗಿದ್ದಂಥ ಗೋಮಾಳ ವ್ಯವಸ್ಥೆ ಜಾನುವಾರಗಳ ಆಹಾರ ಅಗತ್ಯವನ್ನು ಪೂರೈಸುತ್ತಿತ್ತು. ಭೂಮಿಯನ್ನು ಹೇಗೆ ಭಾಗ ಮಾಡ್ತ ಇದ್ದರು ಅಂದರೆ, ಕೆರೆಯ ಹಿಂದೆ ಇರುವ ಭೂಮಿಯನ್ನು ಬಾಗಾಯತ ಎನ್ನುತ್ತಿದ್ದರು. ಬಾಗಾಯತ ಅಂದರೆ ತೋಟ, ತೋಟವೆಂದರೆ ನೀರಾವರಿ. ಕೆರೆಯ ಹಿಂದೆ ಇರುವ ಜನ ಮಾತ್ರ ಬಾಗಾಯತವನ್ನು ಮಾಡಬೇಕೆಂಬ ಶಾಸ್ತ್ರವನ್ನೇ ಮಾಡಿದ್ದರು. ಖುಷ್ಕಿ ಜಮೀನಿನವರು ಕಡ್ಡಾಯವಾಗಿ ಧಾನ್ಯಗಳನ್ನು ಬೆಳೆದುಕೊಡಲೇಬೇಕಾಗಿತ್ತು. ಇಂಥ ಪದ್ಧತಿ ಪಾರಂಪಾರಿಕವಾಗಿ ಜಾರಿಯಲ್ಲಿತ್ತು.

ಇನ್ನು ಸಾಮಾಜಿಕವಾಗಿ ನಾವು ನೋಡುವುದಾದರೆ ರೈತ ಮತ್ತು ಎಲ್ಲ ಕುಶಲ ಕರ್ಮಿಗಳು ನಡುವೆ ಇರುವ ಸಂಬಂಧವನ್ನು ಫ್ಯೂಡಲ್ ಆಗಿ ನೋಡಲಾಯಿತು.



ಇದರಲ್ಲಿ ತಪ್ಪಿದ್ದರೆ ನನ್ನನ್ನು ತಿದ್ದಬಹುದು. ಕೇವಲ ನನ್ನ ಅನುಭವದಿಂದ ಹೇಳುತ್ತಿದ್ದೇನೆ. ನೀವೂ ಇದನ್ನು ಪರಿಶೀಲಿಸಿ ನೋಡಬಹುದು. ಕೃಷಿಯ ಸಂಸ್ಕೃತಿಯನ್ನ, ಕೃಷಿಯ ಸಾಮಾಜಿಕ ಸಂಬಂಧಗಳನ್ನ ಕೇವಲ ಫ್ಯೂಡಲ್ ಚೌಕಟ್ಟಿನಲ್ಲಿ ನೋಡಿಬಿಡಲಾಗುತ್ತೆ. ಕೇವಲ ಫ್ಯೂಡಲ್ ದುರ್ಬೀನಿನಿಂದ ನೋಡಿದ್ದಕ್ಕೆ ಕೃಷಿಯ ಸುತ್ತವಿದ್ದ ಸಾಮಾಜಿಕ ಸಂಬಂಧಗಳು, ಸಾಂಸ್ಕೃತಿಕ ಸಂಬಂಧಗಳನ್ನು ನೋಡುವಂಥ ಪ್ರಯತ್ನ ನಡೆದಿಲ್ಲವೇನೋ. ಉದಾಹರಣೆಗೆ ರೈತ ತಾನು ಬೆಳೆದ ಬೆಳೆಯನ್ನು ಕೇವಲ ತನಗೆ ಮಾತ್ರ ಬಳಕೆ ಮಾಡುತ್ತಿರಲಿಲ್ಲ, ಬೆಳೆದ ಬೆಳೆ ಎಲ್ಲ ಕುಶಲಕರ್ಮಿಗಳ ಮನೆಗೂ ಹಂಚಿಕೆಯಾಗುತ್ತಿತ್ತು. ರೈತರು ನಾಲ್ಕು ಭಾಗ ಬೆಳೆದರೆ ಅದರಲ್ಲಿ ಮೂರು ಭಾಗ ಬೇರೆ ಕುಶಲ ಕರ್ಮಿಗಳಿಗೆ ಹೋಗುತ್ತಿತ್ತು, ಒಂದು ಭಾಗ ರೈತನಿಗೆ ಉಳಿಯುತ್ತಿತ್ತು. ಉದಾಹರಣೆಗೆ ಕಮ್ಮಾರ ವರ್ಷದ ಪ್ರಾರಂಭದಲ್ಲಿ ಒಂದು ಜೋಳಿಗೆಯಲ್ಲಿ ಒಂದು ಚಕ್ಕೆ ಮತ್ತು ಕೊಡಲಿ ಇಟ್ಟುಕೊಂಡು ಎಲ್ಲ ರೈತರ ಹೊಲಕ್ಕೆ, ಹೋಗಿ ನೇಗಿಲು/ಕುಂಟೆಯ ಪರಿಸ್ಥಿತಿಯನ್ನು ಪರೀಕ್ಷೆ ಮಾಡಿ, ಆ ನೇಗಿಲು ಎತ್ತಿಗೆ ಸರಿಹೊಂದುವುದೊ ಇಲ್ಲವೋ ನೋಡಿ ಒಂದು ವೇಳೆ ಅದು ಸರಿಯಿಲ್ಲದಿದ್ದರೆ, ಆ ಸ್ಥಳದಲ್ಲಿಯೇ ಸರಿ ಮಾಡಿ ಬರುತ್ತಿದ್ದ. ನಂತರ ಮುಂದಿನ ಹೊಲಕ್ಕೆ ಹೋಗುತ್ತಿದ್ದ. ಅದರ ಬದಲಿಗೆ ಕಣ ಮಾಡುವಾಗ ಅವರು ಕಾಳು ಕಡಿ ಪಡೆಯುತ್ತಿದ್ದ. ಅದೇ ರೀತಿ ಉತ್ತರ ಕರ್ನಾಟಕದಲ್ಲಿರಬಹುದು ಅಥವಾ ಹಳೇ ಮೈಸೂರಿನ ಭಾಗದಲ್ಲಿ ಇರಬಹುದು ಕುರುಬರು ಮತ್ತು ರೈತರ ಸಂಬಂಧ ಚೆನ್ನಾಗಿ ಉಳಿದುಕೊಂಡು ಬಂದಿದೆ. ಪೂರ್ತಿ ಬಿತ್ತನೆ ಆಗುವವರೆಗೂ ಕೇಳಲಿ, ಕೇಳದಿರಲಿ ಯಾವ ತಾರತಮ್ಯವೂ ಇಲ್ಲದೆ ಪ್ರತಿಯೊಬ್ಬ ರೈತರ ಹೊಲದಲ್ಲಿ ಕುರುಬರು ತಮ್ಮ ಕುರಿಮಂದೆಯನು ನಿಲ್ಲಿಸಿಕೊಂಡು ಹೋಗುತ್ತಿದ್ದರು. ನಾನಿಲ್ಲಿ ಹೇಳಿರುವುದು ಎರಡು ಉದಾಹರಣೆ ಮಾತ್ರ. ಇನ್ನೂ ಕ್ಷೌರಿಕರಿದ್ದಾರೆ, ಹೂಗಾರ, ಕುಂಬಾರರಿದ್ದಾರೆ. ಹೀಗೆ ಪ್ರತಿಯೊಬ್ಬ ರೈತರಿಗೂ ಕುಶಲ ಕರ್ಮಿಗಳಿಗೂ ಇದ್ದಂಥ ಸಂಬಂಧ ಹಾಸುಹೊಕ್ಕಿನ ಸಂಬಂಧ. ಜಮೀನುದಾರರಿಗೂ ಮತ್ತು ಕಾರ್ಮಿಕರಿಗೂ ಇದ್ದಂಥ ಸಂಬಂಧವಲ್ಲ.

ಇದೇ ರೀತಿ ಸಾಂಸ್ಕೃತಿಕವಾದಂಥ ಸಂಬಂಧಗಳನ್ನ ತೆಗೆದುಕೊಂಡರೆ, ಹಬ್ಬ–ಹರಿದಿನಗಳು, ಜಾತ್ರೆಗಳನ್ನು ಕುರಿ, ಕೋಳಿ ಕಡಿತಾರೆ, ಮೂಢನಂಬಿಕೆ ಅನ್ನೋ ಮಟ್ಟಕ್ಕೆ ಇಳಿಸಲಾಗಿದೆ. ಹರಿಹರದ ಆಚೆ ಉಕ್ಕಡಗಾತ್ರಿ ಅಂತ ಊರಿದೆ, ನಿನ್ನೆ ಶಿವರಾತ್ರಿ ದಿನ ಅಲ್ಲಿ ಅಥಣಿ ಬಸವೇಶ್ವರ ಅನ್ನೊ ದೇವರ ಹೆಸರಿನಲ್ಲಿ ಜಾತ್ರೆ ಆಯಿತು. ಆ ಜಾತ್ರೆ ವಿಶೇಷ ಏನೂ ಅಂತ ಕೇಳಿದ್ರೆ 'ಅಯ್ಯೋ ಅದೇನ್ ಬಿಡ್ರಿ ದೆವ್ವ ಬಿಡಿಸುತ್ತಾರೆ' ಅಂತಾರೆ. ಅದನ್ನು ದೆವ್ವ ಬಿಡಿಸೋ ಜಾತ್ರೆಗೆ ತಂದು ನಿಲ್ಲಿಸಿದ್ದೇವೆ. ಆದರೆ ಅಲ್ಲಿ ನೂರಾರು ಊರುಗಳಿಂದ ಲಕ್ಷಲಕ್ಷ ಜನ ಸೇರ್ತಾರೆ, ತಾವು ಬೆಳೆದ ಅತ್ಯುತ್ತಮ ಬೀಜಗಳನ್ನ ತಂದು ತೇರು ಸಾಗುವ ಸಂದರ್ಭದಲ್ಲಿ ಹೂವು, ಹಣ್ಣು ಎಸೆಯುವ ಹಾಗೆ ಎಸೆಯುತ್ತಾರೆ. ಆಗ ಪಟಪಟ ಆಲಿಕಲ್ಲು ಬಿದ್ದವೇನೋ ಅನಿಸುತ್ತೆ. ಬಿದ್ದ ಬೀಜಗಳನ್ನು ಎಲ್ಲರೂ

**ಗರ್ಭದಲ್ಲೇ ಹೊಸಕಿ ಹಾಕುವಷ್ಟು ಕ್ರೂರಿಗಳಾಗಬೇಡಿ ನಮ್ಮನ್ನು ಭೂಮಿಗೆ ಬರಲು ಬಿಡಿ**

ಮುಗಿಬಿದ್ದು ಹೋಗಿ ಆರಿಸಿಕೊಂಡು ತಮ್ಮ ಜಮೀನಿನಲ್ಲಿ ಬಿತ್ತುವುದು ಒಂದು ವಾಡಿಕೆ. ಈ ಜಾತ್ರೆಯಲ್ಲಿ ದೇವರಿಗೆ ಅಂತ ಅತ್ಯುತ್ತಮವಾದ, ವಿವಿಧ ಬೀಜಗಳನ್ನು ತಂದು ಎಸೆಯುತ್ತಾರೆ. ಹತ್ತಾರು ನೂರಾರು ಹಳ್ಳಿ ಜನಗಳ ನಡುವೆ ಅವರ ಹತ್ತಿರ ಇಲ್ಲದಿರುವಂಥ ಉತ್ತಮವಾದ ದೇಸಿ ಬೀಜಗಳು ಐದೇ ನಿಮಿಷದಲ್ಲಿ ವಿನಿಮಯವಾಗುತ್ತವೆ. ಇಂಥ ಅದ್ಭುತವಾದ ವ್ಯವಸ್ಥೆ ನಮ್ಮಲ್ಲಿ ಸಾಂಸ್ಕೃತಿಕವಾಗಿ ನಡೆಯುತ್ತಿತ್ತು. ಇಂಥವು ಅದೆಷ್ಟು ನಡೆಯುತ್ತವೆ ಎಂದರೆ ಅದಕ್ಕೆ ಕೊನೆ, ಮೊದಲಿಲ್ಲ. ಅದು ಅಷ್ಟು ಹಾಸುಹೊಕ್ಕಿನ ಸಂಬಂಧ.

ಇನ್ನು ಬೀಜಗಳ ಸಂರಕ್ಷಣೆಯ ಬಗ್ಗೆ ಹೇಳೋದಾದ್ರೆ, ಇವತ್ತು ನಮ್ಮಲ್ಲಿ ಮೋನೋ ಕ್ರಾಪಿಂಗ್ (ಏಕ ಬೆಳೆ ಪದ್ಧತಿ) ಬಂದಿದೆ. ಆದ್ರೆ ನಮ್ಮಲ್ಲಿ ಏನು ನಡೀತಿತ್ತು ಅಂದ್ರೆ ಒಂದು ಬೆಳೆ ಬಿತ್ತಿದರೆ ಅದರ ಜೊತೆ ಮಿಕ್ಸ್ ಮಾಡಿಕೊಂಡು ಏನೇನು ಬೆಳೆ ಬಿತ್ತಬೇಕು, ಅಕ್ಕಡಿ ಸಾಲಲ್ಲಿ ಏನು ಬಿತ್ತಬೇಕು? ತರಕಾರಿಯನ್ನು ಎಲ್ಲೆಲ್ಲಿ ಹಾಕಬೇಕು? ಎಂದು ಮೊದಲೇ ನಿರ್ಧರಿಸುತ್ತಿದ್ದರು. ಒಂದು ಬೆಳೆ ಬಿತ್ತು ಅಂದ್ರೆ ಭೂಮಿಗೆ ಅದರ ಸುತ್ತ 25 ರಿಂದ 30 ಬೆಳೆ ಬೀಳೋದಂತು ಖಂಡಿತ. ಅಂತಹ ಅದ್ಭುತ ಜ್ಞಾನದ ಮೇಲೆ 100% ಹಿಡಿತ ಇದ್ದದ್ದು ನಮ್ಮ ಮಹಿಳೆಯರಿಗೆ. ಲಿಂಗಾಧಾರಿತ ಶ್ರಮವಿಭಜನೆ ಅಂತ ಹೇಳ್ತಾರೆ, ಮಹಿಳೆಯರ ಜೊತೆ ಕೆಲಸ ಮಾಡ್ತ ನನಗೆ ಅನ್ನಿಸಿದ್ದು ವಿಭಜನೆನೇ ಇಲ್ಲ, ಎಲ್ಲ ಕೆಲಸವನ್ನು ಮಹಿಳೆಯರೇ ಮಾಡುತ್ತಾರೆ ಎಂದು. ನೇಗಿಲು ಹಿಡಿಯೋದರಿಂದ ಹಿಡಿದು ಪ್ರತಿಯೊಂದು ಕೆಲಸವನ್ನೂ ಮಹಿಳೆಯರು ಮಾಡುತ್ತಾರೆ. ಅಂತ ಒಂದು ಅದ್ಭುತವಾದ ಜ್ಞಾನ ಮಹಿಳೆಯರಲ್ಲಿ ಇತ್ತು. ಮಿಶ್ರ ಬೆಳೆಯನ್ನ ಯಾಕೆ ಬೆಳೆಯುತ್ತೇವೆ ಅನ್ನೋದನ್ನ ಪುಟ್ಟೀರಮ್ಮನ ಪುರಾಣವೆಂದು ನಾವು ರೆಕಾರ್ಡ್ ಮಾಡಿದೀವಿ. ಮಿಶ್ರ ಬೆಳೆಯ ಸುತ್ತ ಇರುವ ಕಲೆ, ಜ್ಞಾನ, ಆರೋಗ್ಯದ ದೃಷ್ಟಿಕೋನ, ಭೂಮಿಯ ಫಲವತ್ತತೆ ಎಲ್ಲವೂ ಮಿಶ್ರ ಬೆಳೆಯ ಒಳಗೆ ಇದ್ದಂತವು. ಇದು ಎಲ್ಲಿ ನಾಶ ಆಯಿತು? ಅವು ನಮ್ಮ ಕೃಷಿಯಲ್ಲಿ ಇದ್ದಾಗ, 'ಎಲ್ಲವೂ ನಷ್ಟ ಆಗೋಯ್ತು, ಆತ್ಮಹತ್ಯೆ ಮಾಡ್ಕೊಬೇಕು, ಬಯಲಿಗೆ ಬಂದು ನಿಂತಿದ್ದೀನಿ' ಅನ್ನೋ ಪರಿಸ್ಥಿತಿ ಯಾವತ್ತು ಇರಲ್ಲಿಲ್ಲ. ಇವತ್ತಿಗೂ ಇಲ್ಲ. ನಮ್ಮಲ್ಲಿ ಒಣ ಬೇಸಾಯ ಶೇ80ರಷ್ಟಿದ್ರೆ, ನೀರಾವರಿ ಬೇಸಾಯ ಕೇವಲ ಶೇ 20ರಷ್ಟು ಮಾತ್ರ ಅಂತ ಮೇಡಂ ಹೇಳ್ತಾ ಇದ್ರು, ಒಣ ಬೇಸಾಯ ತುಂಬಾ ಒಳ್ಳೆಯದು, ನಾನು ಒಣ ಬೇಸಾಯದ ರೈತರೊಂದಿಗೆ ಕೆಲಸ ಮಾಡುತ್ತಿದ್ದೇನೆ. ಇವತ್ತು ಆತ್ಮಹತ್ಯೆ ಮಾಡಿಕೊಂಡವರಲ್ಲಿ ಶೇಕಡಾ 99 ರಷ್ಟು ರೈತರು ನೀರಾವರಿ ಬೇಸಾಯ ಮಾಡುತ್ತಿದ್ದವರು. ಆತ್ಮಹತ್ಯೆ ಮಾಡಿಕೊಂಡವರಲ್ಲಿ ಶೇಕಡಾ 1 ರಷ್ಟು ಮಾತ್ರ ಒಣ ಬೇಸಾಯದ ರೈತರು. ಅವರೂ ಸಹ ಬಿ.ಟಿ ಹತ್ತಿ ಬೆಳೆದವರು. ದರಿದ್ರ ಬಿ.ಟಿ ಹತ್ತಿ ಅನ್ನೋದು ಮ್ಯಾನ್‌ಸಾಂಟ್ಯೋ ಎನ್ನುವ ಬೀಜ ಕಂಪನಿಯದು. ಅದು ಇವತ್ತು ಇಡೀ ಪ್ರಪಂಚವನ್ನು ಆಳ್ತ ಇದೆ. ಅದರ ಕಳಪೆ ಬೀಜಗಳಿಗೆ 25 ಸಾವಿರ ಖರ್ಚಾಗುತ್ತೆ. ಅಂಥ ಬೀಜ ಹಾಕಿ ನಷ್ಟ ಆಯ್ತು ಅಂದ್ರೆ ಯಾರು ನಷ್ಟ ತುಂಬಿ ಕೊಡ್ತಾರೆ? ಎಷ್ಟೋ ದಿನಗಳ ನಂತರ ಬೆಳೆ ನಷ್ಟದ ಪರಿಹಾರ ಎಂದು ಒಂದು,



ಒಂದೂವರೆ ಸಾವಿರವನ್ನೊ ಕೊಡ್ತಾರೆ. ಯಾವ ರೈತರಿಗೆ ಈ ಪರಿಹಾರ ಸಾಲುತ್ತೆ ಹೇಳಿ?

ಹಿಂದಿದ್ದ ವ್ಯವಸ್ಥೆ, ಪರಿಸರ ಚಕ್ರಗಳ ನಾಶ ಅರವತ್ತನೇ ದಶಕದಲ್ಲಿ ಆರಂಭ ವಾಯಿತು. ಆಗ ನಗರಗಳು ಬೆಳೆಯುತ್ತಿದ್ದವು, ನಗರದ ಜನರಿಗೆ ಊಟ ಇಲ್ಲದಿರುವು ದರಿಂದ, ಒದಗಿಸಿಕೊಡಲು ನಾವು ಉತ್ಪಾದನೆಯನ್ನು ಜಾಸ್ತಿ ಮಾಡಬೇಕು ಎಂದು ಹೇಳಿ ಹಸಿರುಕ್ರಾಂತಿ ತಂದರು. ಈ ಹಸಿರುಕ್ರಾಂತಿ ಖಂಡಿತ ಹಳ್ಳಿಗರಿಗಲ್ಲ ಬಂದಿದ್ದು. ನಗರೀಕರಣ, ಕೈಗಾರಿಕೀಕರಣದಿಂದ ಆಗ್ತಾ ಇರುವಂಥ ಬದಲಾವಣೆಗಳಿಗೆ ರೈತರು ತ್ಯಾಗ ಮಾಡಬೇಕಾದಂತ ಪರಿಸ್ಥಿತಿ ಅದು. ಆಗ ಹೆಚ್ಚೆಚ್ಚು ಬೆಳಿಬೇಕು ಅನ್ನೊವಂತದ್ದು ಆರಂಭವಾಯಿತು. ಹಸಿರುಕ್ರಾಂತಿಯ ಜೊತೆಗೆ ಬೀಜದ ಕಾಯ್ದೆಯನ್ನು ತಂದ್ರು. ಅದರಲ್ಲಿ ಮೊದಲನೆಯದಾಗಿ ಅವರು ರೈತರಿಗೆ ಹೇಳಿದ್ದು 'ನೀವು ನಿಮ್ಮ ಬೀಜವನ್ನು ಹಾಕಬೇಡಿ. ಅದರಲ್ಲಿ ಹೆಚ್ಚು ಉತ್ಪಾದನೆ ಮಾಡಲು ಸಾಧ್ಯವಿಲ್ಲ. ನೀವು ಯಾವುದಾದರೂ ಒಂದೇ ಒಂದು ಬೆಳೆಯನ್ನು ಹಾಕಿ ಉತ್ಪಾದನೆ ಮಾಡಿ, ಗೋಧಿಯನ್ನೇ ಹಾಕಿ, ಅಕ್ಕಿಯನ್ನೇ ಹಾಕಿ, ನೀವು ಹಾಕ್ತಾ ಇರೋದಕ್ಕೆ ಉತ್ಪಾದನೆ ಇಲ್ಲ, ಆದ್ದರಿಂದ ನಾವು ಹೇಳೊದನ್ನ ಹಾಕಿ, ಅದನ್ನ ನಾವು ಮಾರಿಕೊಡ್ತೀವಿ' ಎಂದರು. ಒಂದು ರಾಗಿ, ಒಂದು ಜೋಳ ಅಂದ್ರೆ ಅದು ಕೇವಲ ಧಾನ್ಯವಲ್ಲ ಅದರ ಸುತ್ತಲೂ ಇನ್ನು ಅನೇಕ ಧಾನ್ಯಗಳ ಒಂದು ಪರಿಸರ ವ್ಯವಸ್ಥೆಯೇ ಇದೆ. ಅದರ ಜೊತೆಗೆ ನಮ್ಮ ಜಾನುವಾರುಗಳ ಮೇವೂ ಇದೆ. ಅದನ್ನೆಲ್ಲ ಸಂಪೂರ್ಣವಾಗಿ ರೈತರು ಮರೆತರು. ಸುಧಾರಿತ ತಳಿಗಳು ಎಂದು ಹೈಬ್ರಿಡ್ ತಳಿಗಳನ್ನು ತಂದರು. ಅದರಲ್ಲಿ ಕೇವಲ ಧಾನ್ಯಕ್ಕೆ ಮಾತ್ರ ಅವಕಾಶ, ಮೇವಿಗೆ ಅವಕಾಶವಿಲ್ಲ. ಇಳುವರಿ ಜಾಸ್ತಿ ಆಯಿತು. 'ನಿಮ್ಮ ಮುಖ್ಯ ಬೆಳೆಗಳ ಜೊತೆಗೆ ಏನಾದ್ರು ಬೆಳೆಗಳನ್ನ ಹಾಕ್ತ ಇದ್ರೆ ಅದನ್ನು ಕಳೆ ಅಂತ ತಿಳ್ಕೊಳಿ' ಎಂದು ಹೇಳಿದರು. ಇದೆಂಥ ದುರಂತ ನೋಡಿ, ನಮ್ಮ ಮಹಿಳೆಯರು ಮಿಶ್ರ ಬೆಳೆಯಲ್ಲಿ ಇಡೀ ಕುಟುಂಬವನ್ನೆ ನಿಭಾಯಿಸುತ್ತಿದ್ದರು, ಅದನ್ನ ಕಳೆ ಅಂತ ತಿಳ್ಕೊಳಿ ಅಂತ ಅಂದಾಗ ಏನಾಯಿತು? ನಮ್ಮ ರೈತರು ಭೂಮಿಯನ್ನ ಅದ್ಭುತವಾಗಿ ಇಟ್ಟುಕೊಂಡಿದ್ದರು, ಎಷ್ಟೋ ಸಾವಯವ ಪದಾರ್ಥವನ್ನು ಸೇರಿಸೋರು, ಕುರಿಮಂದೆಗಳನ್ನ ನಿಲ್ಲಿಸೋರು, ಮಿಶ್ರ ಬೆಳೆಗಳನ್ನ ಹಾಕಿ, ಅವುಗಳ ಪ್ರತಿಯೊಂದು ತ್ಯಾಜ್ಯ ಭೂಮಿಗೆ ಬೀಳುತ್ತಿತ್ತು. ಹಾಗಾಗಿ ಅದ್ಭುತವಾದ ಫಲವತ್ತತೆಯನ್ನ ಭೂಮಿ ಹೊಂದಿತ್ತು. ಹೊಸ ಬೀಜಗಳನ್ನ ತಂದಾಗ ನಮ್ಮ ಭೂಮಿಯ ಫಲವತ್ತತೆಯಿಂದಾಗಿ 4–5 ವರ್ಷ ಚೆನ್ನಾಗೇ ಬೆಳೆ ಬಂತು. ಆಗ ರೈತರೆಲ್ಲ ಹಸಿರು ಕ್ರಾಂತಿ ನಿಜವಾದ ಕ್ರಾಂತಿ ಅಂದ್ಕೊಂಡ್ರು. 4–5 ವರ್ಷ ಒಂದೇ ಬೆಳೆಯನ್ನ ಬೆಳೆಯೋದರೊಳಗೆ ಏನೋ ನಡೆದುಹೋಗಿಬಿಡುತ್ತೆ ಅಂತ ಅದನ್ನ ಅಪ್ಪಿಕೊಂಡ್ರು. ಆರನೇ ವರ್ಷಕ್ಕೆ ಅದೆಲ್ಲ ಮುಗಿದು ಹೋಯಿತು. ಗಣಿಗಾರಿಕೆಯಲ್ಲಿ ಮಾಡುವ ಹಾಗೆ ಭೂಮಿಯ ಫಲವತ್ತತೆಯನ್ನು ಮುಗಿಸಿ ಎಸೆದರು.

## ಹೆಣ್ಣಿನ ದೇಹದ ಮೇಲೆ ಆಕೆಗೆ ಮಾತ್ರ ಹಕ್ಕು

ಇದೆಲ್ಲವೂ ನಮ್ಮನ್ನು ಇವತ್ತು ಈ ಪರಿಸ್ಥಿತಿಗೆ ತಂದಿದೆ. ಇಂದು ಭೂಮಿಯಲ್ಲಿ ಏನೂ ಉಳಿದಿಲ್ಲ. ಕಳೆದ 40 ವರ್ಷಗಳಲ್ಲಿ ನಡೆದ ನಮ್ಮ ಭೂಮಿಯ ಫಲವತ್ತತೆಯ ಗಣಿಗಾರಿಕೆ, ನಮ್ಮ ಅಂತರ್‌ಜಲದ ಗಣಿಗಾರಿಕೆ ಎಲ್ಲವೂ ಸೇರಿಕೊಂಡು ನಮ್ಮನ್ನು ಇಲ್ಲಿಗೆ ತಂದು ನಿಲ್ಲಿಸಿದೆ. ನಮ್ಮ ಬೀಜಗಳನ್ನ ಯಾವಾಗ ಕಳೆ ಅಂದರೋ ಆಗ ಅವುಗಳ ಸುತ್ತಲೂ ಇದ್ದಂಥ ಪ್ರಪಂಚವೇ ನಾಶವಾಗಿ, ಇವತ್ತು ಆ ಬೀಜಗಳ ಜಾಗದಲ್ಲಿ ಐದಾರು ಕಂಪನಿಗಳು ನಮ್ಮನ್ನು ನಡೆಸ್ತ ಇದಾವೆ. ಇದು ಇವತ್ತಿನ ಪರಿಸ್ಥಿತಿ, ಈ ರೀತಿಯ ಪರಿಸ್ಥಿತಿ ಒಳಗಡೆ, ನಮ್ಮ ಮಹಿಳೆಯರಿಗೆ ಏನಾಗಿದೆ ನಿಜವಾಗಿ? ಗಂಡಸರ ಆತ್ಮಹತ್ಯೆಯಿಂದ ಬಿಕ್ಕಟ್ಟಿಗೆ ಒಳಗಾಗಿರೋ ಮಹಿಳೆಯರಿಗೆ 2 ಲಕ್ಷ ಪರಿಹಾರ ಕೊಡ್ತಾರೆ, ಏನಾದ್ರು ಮಾಡಬಹುದಾ ಅಂತ. ಇಂಥ ಪರಿಸ್ಥಿತಿಯೊಳಗೆ ನಾವು ಕರ್ನಾಟಕದ ಅನೇಕ ಭಾಗಗಳಲ್ಲಿ ಕೆಲಸ ಮಾಡೋಕೆ ಕಾಲಿಟ್ವಿ, ಮೊದಲು ರಾಸಾಯನಿಕ ಕೃಷಿಯನ್ನು ನಿಲ್ಲಿಸಿ, ನಂತರ ಭೂಮಿ ಕಳೆದುಕೊಂಡಿರುವ ಫಲವತ್ತತೆಯನ್ನ ವಾಪಸ್ಸು ತರೋದು ಹೇಗೆ ಎಂಬ ಬಗ್ಗೆ ಕೆಲಸ ಮಾಡಿದೆವು. ಬಿಜಾಪುರದಲ್ಲಿ 630ಎಂ.ಎಂ ಮಳೆಯಷ್ಟೇ ಆಗುವುದೆಂದು ಇಲ್ಲಿ ಹೇಳಲಾಯಿತು, ಆದ್ರೆ ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿ, ಕೂಡ್ಲಿಗಿಯಲ್ಲಿ 400 ಎಂ.ಎಂ ಮಳೆ ಕೂಡ ಒಂದು ವರ್ಷಕ್ಕೆ ನೆಟ್ಟಗೆ ಬರೋದಿಲ್ಲ. ಇಂತಹ ಸ್ಥಿತಿಯಲ್ಲಿ ದಲಿತ ಮಹಿಳೆ ಪುರುಷರು ಎಲ್ಲರೂ ಸಂಡೂರು ಮೈನ್ಸ್‌ಗೆ ವರ್ಷದಲ್ಲಿ ಎಂಟು ತಿಂಗಳು ವಲಸೆ ಹೋಗೋರು. ಒಂದು ಭೂಮಿಯಲ್ಲಿ ಜಾಲಿ ಬೆಳೆದಿತ್ತು. ಒಂದು ಐದುನೂರು ರೂಪಾಯಿ ಕೊಟ್ಟು ಆ ಜಾಲಿಯನ್ನು ತೆಗೆಸೋ ಸ್ಥಿತಿ ಇರಲಿಲ್ಲ. ದಲಿತ ಚಳುವಳಿ ಭೂಮಿಗಾಗಿ ಹೋರಾಟ ಮಾಡ್ತೆ ಏನ: ಭೂಮಿ ಪಡೆಕೊಂಡ ಮೇಲೆ ಅದನ್ನ ಹೇಗೆ ಫಲವತ್ತಗೊಳಿಸಬೇಕು, ಆ ಭೂಮಿಯಿಂದ ಹೇಗೆ ಸ್ವಾವಲಂಬನೆಯನ್ನ ಪಡ್ಕೋಬೇಕು ಅನ್ನೋದನ್ನ ಪ್ರಾಯಶಃ ದಲಿತ ಚಳುವಳಿ ಮಾಡಿಲ್ಲ ಅಂತ ನಾನು ಅಂದ್ಕೋತೀನಿ. ಅಂತಹ ಪರಿಸ್ಥಿತಿಯಲ್ಲಿ ನಾವು ಸಂಘಟನೆ ಮಾಡಿ ಮೊದಲನೇ ವರ್ಷದಿಂದ ಅಲ್ಲಿದ್ದಂತಹ ಎಲ್ಲಾ ಮಿಶ್ರ ಬೆಳೆಗಳನ್ನು ವಾಪಸ್ಸು ತಂದ ಮೇಲೆ ವಲಸೆ ಹೋಗುವುದು ತಪ್ಪಿದೆ. ಆ ಭೂಮಿ ಇಡೀ ವರ್ಷ ಇಪ್ಪತ್ತು ಮೂವತ್ತು ಬೆಳೆಗಳನ್ನ ಅವರಿಗೆ ಬೆಳೆದು ಕೊಡ್ತಾ ಇರುವಂತ ಪರಿಸ್ಥಿತಿ ಈಗ ಇದೆ. ಹಾಗಾಗಿ ನನಗನ್ನಿಸೋದೇನಂದ್ರೆ ಆತ್ಮಹತ್ಯೆಗೆ ಮೂಲ ಕಾರಣ ನಮ್ಮ ಭೂಮಿ ಫಲವತ್ತತೆಯನ್ನು ಕಳಕೊಂಡಿರುವುದು. ಆ ಮೂಲ ಕಾರಣವನ್ನು ಹಿಡಿದು ಭೂಮಿಯ ಫಲವತ್ತತೆಯನ್ನು ವಾಪಸ್ಸು ತರಲು ನಾವೇನು ಮಾಡಬೇಕು ಎಂದು ಯೋಚಿಸಿ, ಫಲವತ್ತತೆಯನ್ನು ವಾಪಸ್ಸು ತಂದರೆ ಅದಕ್ಕಿಂತ ದೊಡ್ಡ ಕೊಡುಗೆ ಈ ಮಹಿಳೆಯರಿಗೆ ಯಾವುದೂ ಇಲ್ಲ ಅಂತ ನಾನಿಲ್ಲಿ ಹೇಳೊಕೆ ಇಷ್ಟಪಡ್ತೀನಿ.

ಸಣ್ಣ ಹಿಡುವಳಿಗಾರರು, ಮಳೆಯಾಶ್ರಿತ ರೈತರಿಗೆ 'ನೀವು ಜಮೀನನ್ನು ಬಿಡಿ ಅದರಿಂದ ನಿಮಗೆ ಯಾವುದೇ ರೀತಿಯ ಉಪಯೋಗ ಇಲ್ಲ, ಅದು ಯಾವುದೇ ಉತ್ಪಾದನೆ ಕೊಡೋದಿಲ್ಲ, ನೀವದನ್ನು ಬಿಟ್ಟು ಬೇರೆ ಕಡೆ ಹೋಗಿ ನಾವು ಕೃಷಿಯನ್ನ ಮಾಡ್ತೀವಿ' ಎಂದು ಕಾರ್ಪೋರೇಟ್ ಪ್ರಪಂಚ ಹೇಳ್ತಾಯಿದೆ. ಇಂದು ಮಳೆಯಾಶ್ರಿತ ಕೃಷಿಯಲ್ಲಿ ಸಣ್ಣ ಹಿಡುವಳಿಗಳೇ ಹೆಚ್ಚು ಉತ್ಪಾದನಾಶೀಲವಾದಂತಹ ಹಿಡುವಳಿಗಳು. ಅವುಗಳನ್ನ ಮತ್ತೆ ಉತ್ಪಾದನಾಶೀಲವಾಗಿ ಮಾಡುವಂಥ ಜ್ಞಾನ ಮಹಿಳೆಯರಿಗಿದೆ. ಕಳೆದು ಹೋದದ್ದನ್ನ ಮರಳಿ ಪಡೆಯುವುದೆಂದರೆ ಎಲ್ಲವನ್ನೂ ಮರು ಸೃಷ್ಟಿ ಮಾಡಲಾಗುತ್ತದೆ ಎಂದಲ್ಲ, ಆ ಸಾಮರ್ಥ್ಯ ನಮಗಿಲ್ಲ. ಅವುಗಳಿಗೆ ಉತ್ತೇಜನವನ್ನು ಕೊಟ್ಟು ಆ ದಿಕ್ಕಿನಲ್ಲಿ ತೆಗೆದುಕೊಂಡು ಹೋದರೆ ಇವತ್ತು ನಾವು ಎದುರಿಸುತ್ತಿರುವ ಕೃಷಿಬಿಕ್ಕಟ್ಟುಗಳಿಗೆ ಒಂದು ಉತ್ತರವನ್ನು ಕಂಡುಕೊಳ್ಳುವುದು ಸಾಧ್ಯವಾಗುತ್ತದೆ.

**ಮಾನವೀಯ ಸಂಬಂಧಗಳನ್ನು ಬೆಳೆಸೋಣ;**
**ಪ್ರೀತಿ – ಕರುಣೆ ಬಾಳಿನ ಬೆಳೆ, ದ್ವೇಷ – ಕ್ರೌರ್ಯ ಬಾಳಿನ ಕೊಳೆ**

# ಅಪರಾಧೀಕರಣ: ದೇವದಾಸಿಯರು ಹಾಗೂ ಲೈಂಗಿಕ ಕಾರ್ಯಕರ್ತೆಯರು

**ಆರ್. ಮೀರಾ,** ಡಬ್ಲ್ಯೂಐಎನ್‌ಎಸ್, ತಿರುಪತಿ

ನಮ್ಮ ಸಂವಿಧಾನವು ಖಾತ್ರಿಪಡಿಸಿರುವ ಮೂಲಭೂತ ಹಕ್ಕುಗಳು ಮತ್ತು ನಾಗರಿಕ ಸ್ವಾತಂತ್ರ್ಯಗಳನ್ನು ದೇಶಾದ್ಯಂತ ಬಹುಪಾಲು ಜನರಿಗೆ ನಿರಾಕರಿಸಲಾಗಿದೆ. ಆ ವರ್ಗದವರಲ್ಲಿ ಅತ್ಯಂತ ಹೀನಾಯವಾಗಿ ದಮನಿತರಾದವರೆಂದರೆ ಮಹಿಳೆಯರು. ಈ ದಮನಿತ ವರ್ಗದಲ್ಲಿಯೂ ದಾರುಣ ಪರಿಸ್ಥಿತಿಯಲ್ಲಿರುವವರೆಂದರೆ ಸಾಮಾಜಿಕ ಶ್ರೇಣೀಕರಣದ ಕಟ್ಟಕಡೆಯಲ್ಲಿರುವವರು. ಅನಕ್ಷರಸ್ಥರು, ದಮನಿತರೂ ಆಗಿರುವ ವರ್ಗವು ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಸೌಲಭ್ಯಗಳಿಂದಲೂ ವಂಚಿತವಾಗಿದೆ.

ಎಲ್ಲ ಶ್ರೇಣೀಕೃತ ಸಮಾಜದಲ್ಲಿಯೂ, ಸೌಲಭ್ಯಗಳಿರುವ ಸ್ಥಾನಮಾನಗಳನ್ನೆಲ್ಲ ಪುರುಷರೇ ಆಕ್ರಮಿಸಿಕೊಂಡಿದ್ದಾರೆ. ಹಾಗೂ ಆ ಸ್ಥಾನಗಳನ್ನೆಲ್ಲ ಪುರುಷರಿಗೆ ಶೋಭೆ ತರುವವೆಂದೇ ಗುರುತಿಸಲಾಗುತ್ತದೆ. ಪಿತೃಪ್ರಧಾನ ಕುಟುಂಬಗಳಲ್ಲಿ ಪಾವಿತ್ರ್ಯ, ವಿಧೇಯತೆ, ಪ್ರಾಮಾಣಿಕತೆ, ಅಧೀನತೆ, ನಿಷ್ಠೆ ಹಾಗೂ ಸಂಯಮಗಳಂತಹ ಲಕ್ಷಣಗಳನ್ನು ಮಹಿಳೆಯರ ಲೈಂಗಿಕತೆಯ ಮೇಲೆ ಹೇರಲಾಗಿದೆ. ಅದೇ ಹೊತ್ತಿನಲ್ಲಿ ಅತೀ ಹೆಚ್ಚಿನ ಕೌಟುಂಬಿಕ ಸಂತೃಪ್ತಿಯನ್ನು ನೀಡುವಂತಹ ಮಹಿಳೆಯರಿಗೆ ದೇವಿಯ ಸ್ಥಾನಮಾನವನ್ನು ನೀಡಲಾಗುತ್ತದೆ.

ದೈವೀಕತೆ ಮತ್ತು ಹೆಚ್ಚುವರಿ ಕೌಟುಂಬಿಕ ಲೈಂಗಿಕ ಸಂತೃಪ್ತಿಯ ನಡುವೆ ಸಂಪರ್ಕ ಕಲ್ಪಿಸುವ ಮೂಲಕ ಪಿತೃಪ್ರಧಾನತೆಯು "ಪವಿತ್ರ" ಕೌಟುಂಬಿಕ ಆವರಣಗಳೊಂದಿಗೆ ತನ್ನ ನಿಯಮಗಳನ್ನು ಅಧಿಕೃತಗೊಳಿಸಿತು ಮತ್ತು ಗಟ್ಟಿಗೊಳಿಸಿತು. ಅದೇ



ಸಮಯದಲ್ಲಿ ದೈವಿಕತೆಯನ್ನು ಹೊರಿಸುವ ಮೂಲಕ ಆಯ್ಕೆ ಮಾಡಿಕೊಳ್ಳಲಾದ ಮಹಿಳೆಯರನ್ನು ಸಹ ನಿರ್ದಿಷ್ಟ ವಿಧಾನಗಳಲ್ಲಿ ನಿಯಂತ್ರಿಸಲಾಗುತ್ತಿತ್ತು. ಆ ವಿಧಾನಗಳಿಗೆ ಸಾಮಾಜಿಕ ಸಮ್ಮತಿಯೂ ಇತ್ತು. ಒಟ್ಟಾರೆಯಾಗಿ ಜಾತಿ ಸಮುದಾಯಗಳಲ್ಲಿ ಈ ಸಂಪ್ರದಾಯಗಳಿಗೆ ಸಾಂಸ್ಕೃತಿಕ ಮಹತ್ವವಿದೆ. ಗ್ರಾಮೀಣ ಸಮುದಾಯದಲ್ಲಿ ಪ್ರಚಲಿತವಿದ್ದ ಇಡೀ ಜಾತಿ ವ್ಯವಸ್ಥೆಯು ಅಧಿಕಾರ ಸಂರಚನೆಯೊಳಗೆ ಜಾತಿ ಗುಂಪುಗಳನ್ನು ಸಿಕ್ಕಿಸಲಾಗಿದೆ.

ಖಾಸಗಿ ಆಸ್ತಿಯ ಪರಿಕಲ್ಪನೆಯೊಂದಿಗೆ ಮಹಿಳೆಯು ತನ್ನ ಮಹತ್ವವನ್ನು ಕಳೆದುಕೊಂಡಳೆಂದು ಇತಿಹಾಸವು ಹೇಳುತ್ತದೆ. ಹಾಗಾಗಿ ಸಾಮಾಜಿಕ ಸುಧಾರಣೆಯಲ್ಲಿ ಮಹಿಳೆಯ ಬಿಡುಗಡೆಯು ಪ್ರಮುಖ ಸ್ಥಾನವನ್ನು ಪಡೆದುಕೊಂಡಿದೆ. ಹಾಗಾಗಿ ಸಾಮಾಜಿಕ ಸುಧಾರಣೆಯಲ್ಲಿ ಮಹಿಳೆಯ ವಿಮೋಚನೆಯು ಮಹತ್ವದ ಸ್ಥಾನವನ್ನು ಪಡೆದುಕೊಂಡಿತು. ಅವಳ ಅಧೀನತೆಗಿರುವ ಕಾರಣಗಳೆಂದರೆ; 1. ಸಾಮಾಜಿಕ ಸ್ವಾತಂತ್ರ್ಯದ ಕೊರತೆ 2. ಬಾಲ್ಯವಿವಾಹ 3. ಬಹುಪತ್ನಿತ್ವ 4. ಬಲವಂತದ ವೈಧವ್ಯ 5. ಶಿಕ್ಷಣದ ಕೊರತೆ. ಇವೆಲ್ಲವೂ ಮಹಿಳೆಯರನ್ನು ಮೌಢ್ಯದಲ್ಲಿ ಮುಳುಗಿಸಿ, ಸಂಪ್ರದಾಯಗಳಲ್ಲಿ ಬಂಧಿಸಿ ಅವಳನ್ನು ಗುಲಾಮಳಂತೆ ನಡೆಸಿಕೊಳ್ಳಲಾಯಿತು. ನೃತ್ಯ ವಿರೋಧಿ ಆಂದೋಲನದ ಭಾಗವಾಗಿ 'ಪಾವಿತ್ರ್ಯ ಚಳುವಳಿ'ಯು ಪ್ರಾರಂಭಗೊಂಡಿತು. ಈ ಆಂದೋಲನವು 3 ಉದ್ದೇಶಗಳನ್ನಿಟ್ಟುಕೊಂಡು ಹೋರಾಟವನ್ನು ಮಾಡಿತು. 1) ಸಾಮಾಜಿಕತೆ ಹಾಗೂ ನೈತಿಕತೆಯ ಸುಧಾರಣೆ 2) ಮಹಿಳೆಯ ಉನ್ನತಿ 3) ಸಂಗೀತ ಹಾಗೂ ನೃತ್ಯದಂತಹ ಕಲೆಗಳಿಗೆ ಅಂಟಿಕೊಂಡು ಬಂದಿರುವ ಕಳಂಕವನ್ನು ತೊಡೆದು ಹಾಕುವುದು.

ಉಪಪತ್ನಿಯನ್ನು ಹೊಂದುವುದು ಪ್ರತಿಷ್ಠೆಯ ವಿಷಯವಾಗಿದ್ದರಿಂದ ಸಮಾಜದ ಗಣ್ಯರು ದೇವದಾಸಿಯರನ್ನು ಪ್ರೋತ್ಸಾಹಿಸುತ್ತಿದ್ದರು. ವಿದ್ವಾಂಸ ಹಾಗೂ ಸಮಾಜ ಸುಧಾರಕರಾದ ಶ್ರೀ ರಘುಪತಿ ವೆಂಕಟರತ್ನಂ ನಾಯ್ಡು ಅವರು ಈ ದೇವದಾಸಿ ಪದ್ಧತಿಯನ್ನು ತೊಡೆದುಹಾಕುವಲ್ಲಿ ಅನೇಕ ಜನರು ಸುಧಾರಕರೊಂದಿಗೆ ಕೈಜೋಡಿಸಿದ್ದರು.

ದೇವದಾಸಿ ಪದ್ದತಿಯನ್ನು ಉಪಯುಕ್ತತೆಯ ಆಯಾಮದಲ್ಲಿ ಗ್ರಹಿಸಿದ ಜಾಕಿ ಅಸ್ಸಿಯಾಗ ಅವರು ಹೀಗೆ ಹೇಳುತ್ತಾರೆ, "ನಿರ್ಲಕ್ಷ್ಯ ಮತ್ತು ಬಡತನದ ಸಂಗತಿಗಳಿಗೆ ಚೌಕಟ್ಟನ್ನು ನೀಡಿ ಸಾಮಾಜಿಕ ಹೀನಾಯ ಸ್ಥಿತಿಯಿಂದ ಭಕ್ತರನ್ನು ಪಾರಾಗಿಸುವ ಕೀಲಿಕೈ ನೀಡಲಾಯಿತು. ಹೆಣ್ಣಿನಂತೆ ವೇಷಧರಿಸುವವರು ಜೋಗಪ್ಪಗಳು, ಹಿಜಡಾಗಳ ಹೆಣ್ತನದ ಆಚರಣೆಯು ಹಿಂದು ಲಿಂಗತ್ವ ಗುಂಪುಗಳ ನಡುವಿರುವ ಸೌಹಾರ್ದ ಸಂಬಂಧಗಳನ್ನು ಅಡ್ಡಿಪಡಿಸುತ್ತವೆಯಾದರೂ ಸಾಮಾಜಿಕ ನಿಯಮಕ್ಕೆ ಬದ್ಧವಾಗಿರುತ್ತವೆ."

ಈ ಚರ್ಚೆಯಲ್ಲಿ ಮುಖ್ಯವಾಗುವ ವಿಷಯವೆಂದರೆ ಲೈಂಗಿಕ ತೃಪ್ತಿಯನ್ನೂ ನೀಡುವ "ದೈವೀಕ ಮಹಿಳೆಯರು" ಲೈಂಗಿಕ ಕಾರ್ಯಕರ್ತೆಯರೇ?

ವಸಾಹತುಶಾಹಿ ಆಳ್ವಿಕೆಯಲ್ಲಿಯೂ ಈ ಸಂಪ್ರದಾಯಗಳು ಹಾಗೂ ಲೈಂಗಿಕ ಕೆಲಸಗಳ ನಡುವಿನ ಸಾಮ್ಯತೆಯು ಬಹುಚರ್ಚಿತ ವಿಷಯವಾಗಿತ್ತು. ಕ್ರಿ.ಪೂ 3ನೆಯ ಶತಮಾನದಿಂದಲೂ ಕೂಡ ದೇವಸ್ಥಾನದ ನರ್ತಕಿಯರಿದ್ದರು. ತಮಗೆ ಲೌಕಿಕ ಸುಖಗಳು ದೊರಕಲಿ ಎಂದುದೇವಸ್ಥಾನದ ನರ್ತಕಿಯರನ್ನು ದೇವರು ಹಾಗೂ ದೇವತೆಗಳಿಗೆ ಅರ್ಪಿಸಲಾಗುತ್ತಿತ್ತು. ದೇವದಾಸಿ ಪದ್ಧತಿಯಲ್ಲಿ ಮೇಲುಜಾತಿಯವರು ಕೆಳಜಾತಿಯ ಹೆಣ್ಣು ಮಕ್ಕಳನ್ನು ಖರೀದಿಸಿ ದೇವರಿಗೆ ಅರ್ಪಿಸುತ್ತಿದ್ದರು.

ಭಕ್ತಿಪಂಥದ ಚಳುವಳಿ ಕುಸಿದ ಪರಿಣಾಮವಾಗಿ 14 ಮತ್ತು 15ನೇ ಶತಮಾನಗಳಲ್ಲಿ ಹಳ್ಳಿಗಳಿಂದ ಹೊರದೂಡಲ್ಪಟ್ಟ ಪರಿಶಿಷ್ಠ ಜಾತಿಯವರು ತಮ್ಮದೇ ದೇವಾಲಯಗಳನ್ನು ನಿರ್ಮಿಸಿಕೊಂಡರು. ತೆಲಂಗಾಣ, ಆಂಧ್ರಪ್ರದೇಶ, ಮಹಾರಾಷ್ಟ್ರ ಹಾಗೂ ಕರ್ನಾಟಕದ ಅನೇಕ ಭಾಗಗಳಲ್ಲಿ ದೇವರಿಗೆ ಹುಡುಗಿಯರನ್ನು ಅರ್ಪಿಸುವುದು ಪ್ರಚಲಿತದಲ್ಲಿದೆ.

ಧರ್ಮ ಮತ್ತು ಸಂಪ್ರದಾಯದ ಮುಸುಕಿನಲ್ಲಿ ಸಾಮಾಜಿಕ ಸಮ್ಮತಿಯೊಂದಿಗೆ ವೇಶ್ಯಾವಾಟಿಕೆಗೆ ದೂಡಲ್ಪಟ್ಟ ಜೋಗಿನ್‌ಗಳಿರುವ ಈ ಇಡೀ ವ್ಯವಸ್ಥೆಯೇ ಮೂಲಭೂತವಾಗಿ ಮೌಢ್ಯದಿಂದ ಕೂಡಿದೆ. ಈ ದೇವತೆಗಳ ಹೆಸರಿನಲ್ಲಿ ಮುಗ್ಧ ಮಕ್ಕಳ ಜೀವನವನ್ನು ವೇಶ್ಯಾವೃತ್ತಿಗೆ, ಗುಲಾಮಗಿರಿಗೆ, ಶೋಷಣೆಗೆ ತಳ್ಳಲಾಗಿದೆ.

ದೇವದಾಸಿ ಪದ್ಧತಿಯಲ್ಲಿ ಅರ್ಪಣೆಯ ಆಚರಣೆಯು ದೇಹ, ಆತ್ಮ ಹಾಗೂ ಚೈತನ್ಯಗಳು ದೇವತೆಯ ಅದೃಶ್ಯ ಅಸ್ತಿತ್ವದೊಂದಿಗೆ ಸೇರುವುದಾಗಿದೆ. ದಕ್ಷಿಣ ಭಾರತದ ಪ್ರತಿಯೊಂದು ಹಳ್ಳಿಯಲ್ಲಿಯೂ ಗ್ರಾಮದೇವತೆಯನ್ನು ಪೂಜಿಸ ಲಾಗುತ್ತದೆ. ಈ ಹಳ್ಳಿಗಳಲ್ಲಿ ಗ್ರಾಮಸ್ಥರು ತಮ್ಮನ್ನು ತಾವು ಪರಕೀಯ ದಾಳಿಗಳಿಂದ, ದರೋಡೆಕೋರರ ದಾಳಿಗಳಿಂದ, ಜಾನುವಾರುಗಳ ಕಳವು ಮತ್ತು ಇನ್ನೂ ಅನೇಕ ರೀತಿಯ ನೈಸರ್ಗಿಕ ವಿಕೋಪಗಳಿಂದ, ಬರಗಾಲ ಮುಂತಾದವುಗಳಿಂದ ರಕ್ಷಿಸಿಕೊಳ್ಳಲು ತಮ್ಮ ಗ್ರಾಮದೇವತೆಗಳನ್ನು ಪೂಜಿಸುತ್ತಿದ್ದರು.

ಗ್ರಾಮದೇವತೆಗಳು ಹೆಣ್ಣುಗಳಾಗಿದ್ದು, ಸ್ಥಳೀಯ ಇತಿಹಾಸವನ್ನು ಸಂಕೇತಿಸುತ್ತವೆ. ಈ ದೇವತೆಗಳನ್ನು ಪ್ರಾಣಿ ಬಲಿಯೊಂದಿಗೆ ಪೂಜಿಸಲಾಗುತ್ತದೆ. ಎಮ್ಮೆ, ಕುರಿ, ಮೇಕೆ, ಹಂದಿ ಮತ್ತು ಕೋಳಿಗಳನ್ನು ಸಾಮಾನ್ಯವಾಗಿ ಅರ್ಪಿಸಲಾಗುತ್ತದೆ. ಗ್ರಾಮದೇವತೆಯ ಪೂಜಾರಿಗಳು ಪರಿಶಿಷ್ಟ ಜಾತಿಯವರಾಗಿದ್ದು, ಗ್ರಾಮದೇವತೆಯ ಆರಾಧನೆಯ ಮೂಲಕ ಮೇಲ್ಜಾತಿಗಳಿಗೆದುರಾಗಿ ತಮ್ಮ ಸಾಂಸ್ಕೃತಿಕ ಸ್ವಾಯತ್ತತೆಯನ್ನು ಕಾಪಾಡಿ ಕೊಳ್ಳುತ್ತಿದ್ದರು. ಪರ್ಯಾಯ ಜೀವನಾಧಾರಗಳ ಕುರಿತಂತೆ ವೈಜ್ಞಾನಿಕ ದೃಷ್ಟಿಕೋನದ ಮತ್ತು ವಿಷಯ ಕುರಿತ ಆಳವಾದ ಗ್ರಹಿಕೆಯ ಕೊರತೆಯಿಂದಾಗಿ ಇಂದಿಗೂ ಹಿಂದಿನ ಜೀವಾನಾಧಾರಗಳೇ ಮುಂದುವರೆದುಕೊಂಡು ಬಂದಿವೆ. ಜೋಗಿನ್‌ಗಳ ಪದ್ಧತಿಯೊಳಗಡೆಯೇ ಆರ್ಥಿಕ ಭದ್ರತಾ ವ್ಯವಸ್ಥೆಯು ರೂಪುಗೊಂಡಿರಬಹು ದಾದ್ದರಿಂದ ಸರ್ಕಾರ ಅಥವಾ ಸ್ವಯಂಸೇವಾ ಸಂಸ್ಥೆಗಳ ಪುನರ್‌ವಸತಿ ವಿಧಾನಗಳು

**ದೇವತೆಯೆಂದು ಆರಾಧಿಸಬೇಡಿ ನಿಮ್ಮಂತಹುದೇ ಮನುಷ್ಯ ಜೀವಿಯೆಂದು ನೋಡಿ ಅಷ್ಟೇ ಸಾಕು**



ಅವರ ಹಿಂದಿನ ಜೀವನಾಧಾರ ವ್ಯವಸ್ಥೆಗಳಿಗೆ ಸಮನಾಗಿರಲಿಲ್ಲ.

ಈಗ ನಮ್ಮ ಮುಂದಿರುವ ಚರ್ಚೆ ಎಂದರೆ ಲೈಂಗಿಕ ಚಟುವಟಿಕೆಯು ಹಣ ಅಥವಾ ವಸ್ತುಗಳಿಗಾಗಿ ನಡೆಯಬಹುದೇ? ಎಂದು. ಇದು ಸಾಧ್ಯವಾಗುವುದು ಘರ್ಷಣೆ ಇರುವ ರಚನೆಗಳಲ್ಲಿ, ಎಂದರೆ ಆಯ್ಕೆ ಇದ್ದ ಪಕ್ಷದಲ್ಲಿ ಯಾವ ಮಹಿಳೆಯೂ ಲೈಂಗಿಕ ವೃತ್ತಿಗೆ ಬರುತ್ತಿರಲಿಲ್ಲವೇ?

ಲೈಂಗಿಕ ಕಾರ್ಯಕರ್ತೆಯರು ಪ್ರೌಢರಾಗಿದ್ದು, ನಿಯಮಿತವಾಗಿ ಅಥವಾ ಆಗಾಗ ಲೈಂಗಿಕ ಸೇವೆಗಳ ವಿನಿಮಯಕ್ಕೆ ಹಣ ಅಥವಾ ವಸ್ತುಗಳನ್ನು ಪಡೆದುಕೊಳ್ಳುತ್ತಾರೆ. ಲೈಂಗಿಕ ಕಾರ್ಯಕರ್ತರು ಮಹಿಳೆಯರು, ಪುರುಷರು ಅಥವಾ ಲಿಂಗಾಂತರಿಗಳೂ ಆಗಿರಬಹುದು. ಬಹಳಷ್ಟು ದೇಶಗಳಲ್ಲಿ, ಲೈಂಗಿಕ ವೃತ್ತಿ ಮತ್ತು ಚಟುವಟಿಕೆಗಳನ್ನು ಅಪರಾಧ ಚಟುವಟಿಕೆಗಳೊಂದಿಗೆ ನೋಡಲಾಗುತ್ತದೆ. ಅಪರಾಧ ಕಾನೂನುಗಳು ಸಾಮಾನ್ಯವಾಗಿ ಒಂದು ಕ್ರಿಯೆಯನ್ನು ಕುರಿತ ಸಮಾಜದ ಅಸಮ್ಮತಿಯ ಬಲವಾದ ಅಭಿವ್ಯಕ್ತಿಯಾಗಿರುತ್ತದೆ. ಇಂತಹ ಅಸಮ್ಮತಿಯನ್ನು ಅಮಾನುಷವಾದ ದುರ್ವರ್ತನೆಗಳಿಗೆ ಮೀಸಲಾಗಿಡಲಾಗುತ್ತದೆ.

ಎ) ಖಾಸಗಿತನದ ಹಕ್ಕು, ಬಿ) ಸಂಘ ಕಟ್ಟಿಕೊಳ್ಳುವ ಹಕ್ಕು, ಸಿ)ತಾರತಮ್ಯದಿಂದ, ನಿಂದನೆ ಮತ್ತು ಹಿಂಸೆಯಿಂದ ಮುಕ್ತಿ ಪಡೆಯುವ ಹಕ್ಕು, ಡಿ) ದುಡಿಯುವ ಮತ್ತು ಸೂಕ್ತವಾದ ಕೆಲಸದ ವಾತಾವರಣದ ಹಕ್ಕು, ಈ) ಅವರ ಮೇಲೆ ಪರಿಣಾಮ ಬೀರುವ ಕಾನೂನುಗಳು ಮತ್ತು ನೀತಿಗಳ ರಚನೆ, ಜಾರಿ ಮತ್ತು ನಿಗಾವಹಿಸುವದರಲ್ಲಿ ಅರ್ಥಪೂರ್ಣ ಪಾತ್ರ ವಹಿಸುವಂತಹ ಕಾನೂನಿನ ಪ್ರಕ್ರಿಯೆಯು ಅವರಿಗೂಅನ್ವಯವಾಗುತ್ತವೆ. ಅಂತಹ ಹಕ್ಕನ್ನು ಅನುಭವಿಸುವ ಸಾಮರ್ಥ್ಯದ ಬಗ್ಗೆ ಭರವಸೆ ಇಡಬೇಕು. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಲೈಂಗಿಕ ಕಾರ್ಯಕರ್ತರ ಮಾನವ ಹಕ್ಕುಗಳನ್ನು ರಕ್ಷಿಸಬೇಕು ಮತ್ತು ಶೋಷಣೆಯ ವಿರುದ್ಧ ಅವರಿಗೆ ರಕ್ಷಣೆ ನೀಡಬೇಕು. ಜೊತೆಗೆ ಸಾರ್ವಜನಿಕ ಆರೋಗ್ಯ ಗುರಿಗಳನ್ನು ಸಾಧಿಸಿಕೊಳ್ಳಲು ಅನುವು ಮಾಡಿಕೊಡಬೇಕು.

ಅಪರಾಧೀಕರಣವೆಂದರೆ ಲೈಂಗಿಕ ವೃತ್ತಿಗೆ ಅಥವಾ ಆ ವೃತ್ತಿಯ ಕೆಲವು ಅಂಶಗಳಿಗೆ ಅಪರಾಧ ಕಾನೂನುಗಳನ್ನು ಅನ್ವಯಿಸುವುದು ಮತ್ತು ನಿಷೇಧಿಸುವುದು. ಹಲವು ದೇಶಗಳಲ್ಲಿ ಪಾವತಿಸಿ ಪಡೆದುಕೊಳ್ಳುವ ಲೈಂಗಿಕ ವಿನಿಮಯಗಳನ್ನೂ ಕಾನೂನಿನಡಿ ಅಪರಾಧಕ್ರಿಯೆಯಾಗಿ ಪರಿಗಣಿಸಲಾಗಿದೆ. ಅದು ಲೈಂಗಿಕ ಕಾರ್ಯಕರ್ತೆಯರು, ಅವರ ಗಿರಾಕಿಗಳು ಅಥವಾ ವ್ಯವಸ್ಥಾಪಕರು ಅಥವಾ ಬ್ರಾಥಲ್ ಮಾಲೀಕರು ಅಥವಾ ನಡೆಸುವವರನ್ನು ಗುರಿಯಾಗಿಸಿಕೊಳ್ಳಬಹುದು.

ನಿಷೇಧಿಸಬೇಕೆನ್ನುವವರು ಇರುವ ದೇಶಗಳಲ್ಲಿ ಲೈಂಗಿಕ ವೃತ್ತಿಯ ಹಲವಾರು ಅಂಶಗಳನ್ನು ಅಪರಾಧೀಕರಣಗೊಳಿಸುವ ಕಾನೂನುಗಳಿವೆ. ಅಪರಾಧ ಕಾನೂನುಗಳು ಸಾಮಾನ್ಯವಾಗಿ ದೀರ್ಘಾವಧಿ ಜೈಲಿನ ಜೊತೆಗೆ ದಂಡದಂತಹ ಕಠಿಣ ದಂಡ/ ಶಿಕ್ಷೆಗಳನ್ನು ಒಳಗೊಂಡಿವೆ. ಬಹುಪಾಲು ಸಮಾಜಗಳಲ್ಲಿ ಕ್ರಿಮಿನಲ್

ರೆಕಾರ್ಡ್/ಅಪರಾಧ ಹಿನ್ನೆಲೆ ಹೊಂದಿರುವವರಿಗೆ ಶಾಶ್ವತ ಹಣೆಪಟ್ಟಿ ಅಂಟಿಕೊಳ್ಳುತ್ತದೆ. ಅಂಥ ಹಣೆಪಟ್ಟಿಯು ವ್ಯಕ್ತಿಯ ಉದ್ಯೋಗ ಪಡೆದುಕೊಳ್ಳುವ ಸಾಮರ್ಥ್ಯವನ್ನು ಕಿತ್ತುಕೊಳ್ಳುತ್ತದೆ ಮತ್ತು ಸಾರ್ವಜನಿಕ ಸಹಾಯವನ್ನು ಪಡೆದುಕೊಳ್ಳಲು ಅನರ್ಹರನ್ನಾಗಿಸುತ್ತದೆ. ಲೈಂಗಿಕ ಕಾರ್ಯಕರ್ತರನ್ನು ಲೈಂಗಿಕ ವೃತ್ತಿಗೆ ಸಂಬಂಧವೇ ಇಲ್ಲದಿದ್ದರೂ ಕಾನೂನಿನಡಿ ಅರೆಸ್ಟ್ ಮಾಡಿ/ವಶಕ್ಕೆ ತೆಗೆದುಕೊಂಡು ಬಂಧಿಸಲೂ ಬಹುದಾಗಿದೆ. ವಲಸೆ ಸಂಬಂಧಿ ಕಾನೂನುನಿನಡಿ ಬರುವ ನಿಯಮಗಳು ಲೈಂಗಿಕ ಕಾರ್ಯಕರ್ತರನ್ನು ನಿರ್ಧಿಷ್ಟವಾಗಿ ಗುರಿಪಡಿಸಿಕೊಳ್ಳುವಂತಹವಾಗಿವೆ. ಸಾಗಾಣಿಕೆ ವಿರೋಧಿ ಕಾನೂನುಗಳು ಸಾಗಣೆ ಮತ್ತು ಲೈಂಗಿಕ ವೃತ್ತಿಯನ್ನು ಗೊಂದಲಗೊಳಿಸಿವೆ ಯಾದ್ದರಿಂದ ಲೈಂಗಿಕ ವೃತ್ತಿಯನ್ನು ಪರಿಣಾಮಕಾರಿಯಾಗಿ ಅಪರಾಧೀಯಗೊಳಿಸ ಬಲ್ಲವು. ಲೈಂಗಿಕ ಕಾರ್ಯಕರ್ತೆಯರ ಸಂಘಟನೆಗಳು ವಿಶೇಷವಾಗಿ ಏಷಿಯಾದಲ್ಲಿ, ಸಾಗಾಣಿಕೆ ವಿರೋಧಿ ಕಾನೂನಿನ ಭಾಗವಾಗಿ ನಡೆಯುವ ದಾಳಿ ಮತ್ತು ರಕ್ಷಣೆಯ ಹೆಸರಿನಲ್ಲಿ ಆಗಿರುವ ಮಾನವ ಹಕ್ಕುಗಳ ಉಲ್ಲಂಘನೆಗಳನ್ನು ದಾಖಲಿಸಿವೆ. ಗಿರಾಕಿಗಳನ್ನು ಶಿಕ್ಷಿಸುವುದು ಸಾರ್ವಜನಿಕವಾಗಿ ನಡೆಯುವುದಿಲ್ಲ, ಭೂಗತವಾಗಿ ನಡೆಯುವುದರಿಂದ, ಸಿಕ್ಕಿಕೊಳ್ಳುವ ಮೊದಲೇ ತಪ್ಪಿಸಿಕೊಳ್ಳುತ್ತಾರೆ.

## ಅಪರಾಧೀಕರಣದ ಪರಿಣಾಮಗಳು:

ಲೈಂಗಿಕ ಕಾರ್ಯಕರ್ತರ ಮೇಲೆ ಹೆಚ್ಚಿನ ಹಿಂಸೆ ನಡೆಸುವವರು ಪೊಲೀಸರು. ಲೈಂಗಿಕ ಕೆಲಸವನ್ನು ಅಪರಾಧೀಕರಣಗೊಳಿಸಿದರೆ ಬಂಧಿಸುವ, ಸಾರ್ವಜನಿಕವಾಗಿ ಅಪಮಾನಿಸುವ ಭೀತಿಯ ಮೂಲಕ ಪೊಲೀಸರು ಲೈಂಗಿಕ ಕಾರ್ಯಕರ್ತರ ಮೇಲೆ ಅಧಿಕಾರ ಚಲಾಯಿಸುತ್ತಾರೆ. ಅಂತಹ ಸಂದರ್ಭಗಳಲ್ಲಿ ಲೈಂಗಿಕ ಕಾರ್ಯಕರ್ತೆಯರು ಪೊಲೀಸರಿಂದ ಹೊಡೆಸಿಕೊಂಡಿದ್ದಾರೆ, ಅತ್ಯಾಚಾರಕ್ಕೆ ಒಳಗಾಗಿದ್ದಾರೆ. ಪೊಲೀಸರು ಮಾತ್ರ ತಾವು ಮಾಡಿದ ಅಪರಾಧಕ್ಕೆ ಯಾವ ಶಿಕ್ಷೆಯೂ ಇಲ್ಲದೆ ಉಳಿಯುತ್ತಾರೆ. ಕಾರಣ ಲೈಂಗಿಕ ಕಾರ್ಯಕರ್ತೆಯರು ಬಂಧಿಸಬಹುದು ಅಥವಾ ಮತ್ತಷ್ಟು ಹಿಂಸೆ ಕೊಡಬಹುದೆಂಬ ಹೆದರಿಕೆಯಿಂದ ದೂರಗಳನ್ನು ದಾಖಲಿಸುವುದಿಲ್ಲ. ಅವರ ಮೇಲೆ ನಡೆಯುವ ಅತ್ಯಾಚಾರದಂತಹ ಅಪರಾಧಗಳು ಜರುಗಿದಾಗಲೂ ಅವರು ವೈದ್ಯಕೀಯ ಸಹಾಯವನ್ನಾಗಲಿ, ಕಾನೂನಿನ ಸಹಾಯವನ್ನಾಗಲಿ ಪಡೆಯಲು ಹೋಗುವುದಿಲ್ಲ.

ಲೈಂಗಿಕ ಕಾರ್ಯಕರ್ತೆಯರು ಸಂಘಟಿತರಾದಾಗ ಆರೋಗ್ಯ ಸೇವೆಯನ್ನು, ಆರ್ಥಿಕ ಸೇವೆಗಳನ್ನು ಪಡೆದುಕೊಳ್ಳಬಹುದು, ಪ್ರಗತಿಯದಾರಿಯಲ್ಲಿ ಸಾಗಬಹುದು. ಇದರ ಜೊತೆಗೆ ಮಾಜಿ ಕೈದಿ ಎಂಬ ಅಪರಾಧ ಹಿನ್ನೆಲೆಯ ಕಳಂಕದೊಂದಿಗೆ ವೃತ್ತಿಗೆ ಅಂಟಿರುವ ಕಳಂಕವೂ ಸೇರಿಕೊಂಡು ತಾಳಲಾರದ ಹೊರೆಯಾಗುತ್ತದೆ. ಅಮೆರಿಕದ ಕೆಲವು ಪ್ರದೇಶಗಳಲ್ಲಿ ಉದಾಹರಣೆಗೆ ತೆಗೆದುಕೊಂಡರೆ ಲೈಂಗಿಕ ವೃತ್ತಿ ಸಂಬಂಧೀ ಅಪರಾಧಗಳಲ್ಲಿ ಸಿಲುಕಿಕೊಂಡವರನ್ನು "ಲೈಂಗಿಕ ಅಪರಾಧಿ" ಎಂದು

ನಾವು ನಿರ್ಲಜ್ಜರಲ್ಲ, ನಿರ್ಭಯರು



ನೊಂದಾಯಿಸುತ್ತಾರೆ ಮತ್ತು ಅವರನ್ನು ಹಾಗೆ ಗುರುತಿಸುವ ದಾಖಲಾತಿಯನ್ನು ಕಡ್ಡಾಯವಾಗಿ ಒಯ್ಯಬೇಕೆಂಬ ನಿಯಮವಿದೆ. ಅವರು ಸಾರ್ವಜನಿಕ ವಸತಿ ಹಾಗೂ ಇನ್ನಿತರ ಸಾಮಾಜಿಕ ಸೇವೆಗಳಿಗೆ ಅನರ್ಹರಾಗುತ್ತಾರಲ್ಲದೆ ಲೈಂಗಿಕ ವೃತ್ತಿ ಬಿಟ್ಟು ಬೇರೆ ಉದ್ಯೋಗಗಳನ್ನು ಹುಡುಕಿಕೊಳ್ಳುವುದು ತುಂಬಾ ಕಷ್ಟದ್ದಾಗಿದೆ.

ಎಚ್ಐವಿ ಮತ್ತು ಲೈಂಗಿಕವೃತ್ತಿ ಕುರಿತಂತೆ ಯು.ಎನ್.ಏಡ್ಸ್‌ನ ಮಾರ್ಗದರ್ಶಿಯು, ಮಾನವ ಸಾಗಣೆಯ ಸಂತ್ರಸ್ತರಾದ ಮಹಿಳೆ ಮತ್ತು ಮಕ್ಕಳಿಗಾಗಿ ಸೇವೆ ಪಡೆದು ಕೊಳ್ಳಲು ಲೈಂಗಿಕ ಕಾರ್ಯಕರ್ತರ ಸಂಘಟನೆಗಳು ಸೂಕ್ತವೆಂದು ಎತ್ತಿಹಿಡಿದಿವೆ. ಲೈಂಗಿಕ ವೃತ್ತಿಯ ಅಪರಾಧೀಕರಣವು ಲೈಂಗಿಕ ಕಾರ್ಯಕರ್ತೆಯರ ಸಂಘಟನೆಗಳ ಸಾಗಣೆ ವಿರೋಧಿ ಪ್ರಯತ್ನಗಳಿಗೆ ಅಡ್ಡಿಮಾಡಬಹುದು ಹಾಗೂ ಸಾಗಣೆ ಮತ್ತು ಲೈಂಗಿಕ ವೃತ್ತಿಯನ್ನು ಸೇರಿಸಿ ನೋಡುವುದರಿಂದ ಲೈಂಗಿಕ ಕಾರ್ಯಕರ್ತೆಯರನ್ನು ಸುಲಭವಾಗಿ ಸಾಗಣೆಗೆ ಒಳಗಾದ ವ್ಯಕ್ತಿಗಳೆಂದು ತಪ್ಪಾಗಿ ಪರಿಗಣಿಸಬಹುದು.

ಲೈಂಗಿಕ ಕಾರ್ಯಕರ್ತೆಯರು ನಿರ್ಲಕ್ಷ್ಯಕ್ಕೆ, ಮಾನವ ಹಕ್ಕುಗಳ ಉಲ್ಲಂಘನೆಗೆ ಒಳಗಾಗುತ್ತಾರೆ ಎಂಬುದನ್ನು ಸಾಮಾನ್ಯವಾಗಿ ಒಪ್ಪಿಕೊಳ್ಳುತ್ತಾರೆ. ಆದರೆ ಅದಕ್ಕಿರುವ ಕಾರಣಗಳೇನು, ಅದರೊಂದಿಗೆ ಹೇಗೆ ವ್ಯವಹರಿಸಬೇಕು ಮತ್ತುಅದರ ಪರಿಣಾಮ ಗಳೇನು ಎಂಬುದರ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಕೆಲವರು, 'ವೇಶ್ಯಾವೃತ್ತಿಯು' ಮೂಲಭೂತವಾಗಿಯೇ ಅಮಾನವೀಯವಾಗಿದೆ, ಹಾಗಾಗಿ ಲೈಂಗಿಕ ಕಾರ್ಯಕರ್ತೆಯರು ಅನುಭವಿಸುವ ತೊಂದರೆಗಳನ್ನು ಕಡಿಮೆಮಾಡಲು ಇರುವ ಒಂದೇದಾರಿ ಎಂದರೆ ಅದನ್ನು ನಿಷೇಧಿಸುವುದು ಎಂದು ಭಾವಿಸುತ್ತಾರೆ. ಅವರು ಪ್ರತಿಪಾದಿಸುವ ಪರಿಹಾರ ಲೈಂಗಿಕ ಉದ್ದಿಮೆಯ ಹಲವಾರು ಅಂಶಗಳನ್ನು ಅಪರಾಧೀಕರಣಗೊಳಿಸುವುದಾಗಿದೆ. ಭಾರತದಲ್ಲಿ ಬಡತನ ಮತ್ತು ಶಿಕ್ಷಣದ ಕೊರತೆಯಿಂದಾಗಿ ಬಹಳ ಸಣ್ಣವಯಸ್ಸಿಗೆ ಮಹಿಳೆಯರು ದುಡಿಯಲು ಆರಂಭಿಸುತ್ತಾರೆ. ಸಾಮಾನ್ಯವಾಗಿ ಅವರು ಅಭದ್ರ ಮತ್ತು ಕಡಿಮೆ ವೇತನ ಸಿಗುವ ಉದ್ಯೋಗಗಳಲ್ಲಿ ಕೆಲಸ ಮಾಡುತ್ತಾರೆ. ಲೈಂಗಿಕ ವೃತ್ತಿಯು ಅವರಿಗೆ ಉತ್ತಮ ಆದಾಯ ತರಬಹುದು. ಲೈಂಗಿಕ ಉದ್ದಿಮೆ ಮತ್ತು ಅದರಲ್ಲಿ ಮಹಿಳೆಯರ ಕೆಲಸದ ಚಾಲಕ ಶಕ್ತಿಯನ್ನು ಲೈಂಗಿಕ ಕಾರ್ಯಕರ್ತೆಯರೇ ಸರಿಯಾಗಿ ಅರ್ಥಮಾಡಿಕೊಳ್ಳಬಲ್ಲರು ಎಂಬುದು ಲೈಂಗಿಕ ಕಾರ್ಯಕರ್ತರ ರಾಷ್ಟ್ರೀಯ ಜಾಲದ ನಂಬಿಕೆಯಾಗಿದೆ. ಕೆಲಸದ ಪರಿಸ್ಥಿತಿಯನ್ನು ಉತ್ತಮಪಡಿಸುವುದು, ಲೈಂಗಿಕ ಕಾರ್ಯಕರ್ತೆಯರನ್ನು ನಿಸ್ಸಹಾಯಕರನ್ನಾಗಿ ಮಾಡುವ ಕಾನೂನು ಮತ್ತು ನೀತಿಗಳಲ್ಲಿ ಸುಧಾರಣೆ ತರುವುದು, ಸಮಾಜದ ಮನೋಭಾವನೆಯಲ್ಲಿ ಬದಲಾವಣೆ ತರುವುದು ಲೈಂಗಿಕ ಕಾರ್ಯಕರ್ತೆಯರ ಹಕ್ಕುಗಳನ್ನು ಉತ್ತಮಪಡಿಸುವ ಮುಖ್ಯಕಾರ್ಯತಂತ್ರಗಳು ಎಂಬುದು ಅವರ ವಾದವಾಗಿದೆ.

ಕೊನೆಯದಾಗಿ, ಅಪರಾಧ ಕಾನೂನು ನಿರ್ಧಿಷ್ಟ ಕ್ರಿಯೆಗಾಗಿ ಅಷ್ಟೇ ಅಲ್ಲದೆ ಬಂಧನ, ಆರೋಪ ಅಥವಾ ವಿಚಾರಣೆಯ ನೆಪದಲ್ಲಿ ಲೈಂಗಿಕ ಕಾರ್ಯಕರ್ತೆಯರಿಗೆ

ಅಪರಾಧಿ ಸ್ಥಾನವನ್ನು ನೀಡುವ ಮೂಲಕ ನ್ಯಾಯಿಕ ಶಿಕ್ಷೆಗಳಿಗೆ ಒಳಪಡಿಸುವುದು ಸಾಮಾಜಿಕ ನಿರ್ಲಕ್ಷ್ಯಕ್ಕೆ ಕಾರಣವಾಗುತ್ತದೆ. ಹೀಗೆ ಬಿಡುಬೀಸಾಗಿ ದಂಡಿಸುವುದು ವ್ಯಾಪಕವಾದ ತಾರತಮ್ಯ, ಕಳಂಕ ಮತ್ತು ಸಾಮಾಜಿಕ ಸಂಸ್ಥೆಗಳಲ್ಲಿ/ ಸೇವೆಗಳಲ್ಲಿ ಆರೋಗ್ಯ ಸಿಬ್ಬಂದಿಗಳು, ಪೊಲೀಸರು ಮತ್ತು ಸಾರ್ವಜನಿಕರು ಕೀಳಾಗಿ ಕಾಣುವುದಕ್ಕೆ ಕಾರಣವಾಗುತ್ತದೆ. ಅಪರಾಧಿ ಹಣೆಪಟ್ಟಿಯು ಕಳಂಕದ ಒಂದು ಮೂಲವಾಗಿದೆ. ಈ ಕಳಂಕವು ಕೀಳಾಗಿ ನಡೆಸಿಕೊಳ್ಳುವುದು ಅಥವಾ ಸಾಮಾಜಿಕ ಪ್ರತ್ಯೇಕತೆಯನ್ನು ಅಧಿಕೃತಗೊಳಿಸುತ್ತದೆ. ಅಂಥ ಮೂಲವನ್ನು ನಿರಪರಾಧೀಕರಣವು ತೊಡೆದುಹಾಕ ಬಲ್ಲದು. ನಾವು ಮೊದಲು ಒತ್ತಾಯಿಸುವುದು ಮಹಿಳೆಯ ಘನತೆಯನ್ನು. ಮಹಿಳೆಗೆ ತನ್ನದೇ ಆಲೋಚಿಸುವ ಮನಸ್ಸಿದೆ, ಕಲಿಯಲು, ಬೆಳೆಯಲು ಮತ್ತು ಸಮಾಜ ದೊಡನೆ ಒಂದಾಗಿರಲು ಅವಳಿಗೆ ಅವಕಾಶ ಕಲ್ಪಿಸುವುದು ಆಕೆಯ ಮತ್ತು ಆಕೆಯ ಹಿಂದಿರುವ ಕಿರಿಯರ ವಿಕಾಸಕ್ಕೆ ಅನುವು ಮಾಡಿಕೊಡುತ್ತದೆ. ಇಂತಹ ಗೌರವಾನ್ವಿತ ಸಭೆಯಲ್ಲಿ ಮಾತನಾಡಲು ನನಗೆ ಅವಕಾಶ ಮಾಡಿಕೊಟ್ಟದ್ದಕ್ಕಾಗಿ ಅನಂತ ಧನ್ಯವಾದಗಳು.

**(ಹಿಂದಿ ಭಾಷಣದ ಕನ್ನಡ ಬರಹ ರೂಪ: ಭಾಗ್ಯಶ್ರೀ ದೊಡ್ಡಮನಿ)**

**ಕಡ್ಡಾಯ ಮದುವೆ ನೋಂದಣೆ ಮಾಡಿರಿ**



# ಒಂಟಿ ಮಹಿಳೆಯರ ಸಾಮಾಜಿಕ ಸಮಸ್ಯೆಗಳು

**ಶಕುನ್ ಮೋಹಿನಿ**

ನಮ್ಮ ದೇಶದಲ್ಲಿ ಹೆಣ್ಣು ಮಗು ಹುಟ್ಟಿದ ಕೂಡಲೇ ದೊಡ್ಡ ಹೊರೆ ಎಂದು ಭಾವಿಸುತ್ತಾರೆ. ಹೆಣ್ಣುಮಕ್ಕಳನ್ನು ಓದಿಸ್ತೀವಿ, ಅವರು ಮುಂದೆ ಬರಬೇಕು ಎಂದು ಹೇಳ್ತೀವಿ, ಆದರೆ ಎಲ್ಲೋ ಒಂದು ಕಡೆ ಮನಸ್ಸಿನ ಆಳದಲ್ಲಿ ಪೋಷಕರಿಗೆ ಮತ್ತು ಹುಡುಗಿಯರಿಗೆ ಮದುವೆ ಅನಿವಾರ್ಯ ಎಂಬ ಭಾವನೆ ಇರುತ್ತದೆ. ಯಾವುದೋ ಕಾರಣಕ್ಕೇ ಮದುವೆ ಆಗದೇ ಇದ್ದರೆ ಅಥವಾ ಮದುವೆ ಆಗಿಯೂ ಕೂಡಾ ಒಂಟಿಯಾಗಿದ್ದರೆ ಅದನ್ನು ತಪ್ಪು ಅಂತಾ ಭಾವಿಸುತ್ತಾರೆ. ಯಾಕೆ ಮದುವೆ ಆಗಿಲ್ಲ ಅಂತ ಪ್ರಶ್ನೆ ಮಾಡ್ತಾರೆ. ನನಗೂ ಕೂಡ ಎಷ್ಟೋ ಜನ ಕೇಳಿದಾರೆ. ನನಗೆ ಮದುವೆ ಆಗಿಲ್ಲ, ಅಂತ ಹೇಳೋದಕ್ಕಿಂತಾ ಮದುವೆ ಮಾಡಿಕೊಂಡಿಲ್ಲಾ ಅಂತ ಹೇಳೋಕೆ ಇಷ್ಟ ಪಡುತ್ತೇನೆ. ಹುಡುಗಿಯರು ಕೂಡಾ ಮದುವೆ ಆಗಲಿಲ್ಲವೆಂದರೆ ನನ್ನಲ್ಲೇ ಏನೋ ತಪ್ಪಾಗಿದೆ, ನನ್ನ ಜೀವನ ತಪ್ಪಾಗಿದೆ, ನನ್ನಲ್ಲೇ ಏನೋ ಕೊರತೆ ಇದೆ ಅಂತ ಅಂದುಕೊಳ್ಳೋರು ಇದ್ದಾರೆ. ನನಗೆ ಮದುವೆ ಆಗದೆ ಇರೋದು ನನ್ನ ಲೈಫ್‌ನಲ್ಲಿ ಕಾಮಾ ಅಷ್ಟೆ, ಫುಲ್‌ಸ್ಟಾಪ್ ಅಲ್ಲ. ನನಗೆ ಮದುವೆ ಮಾಡಕೊಳ್ಳಲೇಬೇಕಂತಿಲ್ಲ, ಬೇರೆ-ಬೇರೆ ಆಸೆಗಳಿವೆ ಪೂರೈಸಿಕೋಬೇಕು, ನನಗೆ ಬೇಕಾಗಿರುವುದನ್ನೆಲ್ಲಾ ಪಡಕೋಬೇಕು, ಮುಂದೆ ಹೋಗಬೇಕು, ನಾನು ನನ್ನ ಆನಂದವನ್ನ ಪಡ್ಕೊಬೇಕು ಅನ್ನೊ ಮಹಿಳೆಯರೂ ಇದ್ದಾರೆ, ಆದರೆ ಅಂತಹ ಮಹಿಳೆಯರನ್ನ ನಾವು ಗುರುತಿಸಲ್ಲ. ಒಂದು ಮದುವೆಗೆ ಹೋದರೆ; ಒಂದು ಫಂಕ್ಷನ್ನಕ್ಕೆ ಹೋದರೆ ಮೊದಲು ಕೇಳೋದು, ಮದುವೆ ಆಗಿದೆಯಮ್ಮಾ? ಎಷ್ಟು ಮಕ್ಕಳು? ಕೆಲವೊಮ್ಮೆ ಮದುವೆಯಾಗಿದೆಯಾ ಅಂತಾನೂ ಕೇಳೋಲ್ಲಾ, ಎಷ್ಟು ಮಕ್ಕಳು ಅಂತಾ ಕೇಳ್ತಾರೆ.

ಅದನ್ನ ಕೇಳಿ ನನಗೆ ಎಷ್ಟೋ ಸಲ ನಗು ಬರುತ್ತೆ. ನಾನು ತಮಾಷೆಯಾಗಿ ಹೌದು, ಒಂದು ಮಗು ಇದೆ ಅಂತ ಹೇಳ್ತೀನಿ, ಗಂಡ ಅಂತ ಕೇಳಿದ್ರೆ ನನಗೆ ಗಂಡ ಇಲ್ಲಾ, ಮದುವೆ ಆಗಿಲ್ಲ ಅಂತ ಹೇಳಬೇಕು ಅಂತ ನಿಜವಾಗ್ಲೂ ಅನಿಸುತ್ತೆ (ನಗು).

ನಿಜವಾಗ್ಲೂ ಹೇಳಿ ಮದುವೆ ಅಷ್ಟು ಅನಿವಾರ್ಯವಾ? ಒಂದು ಕುಟುಂಬದಲ್ಲಿ ಹುಟ್ತೇವಿ, ಬೆಳೀತೀವಿ. ಮನೆಯವರಿಗೆ ನಮ್ಮನ್ನ ಇನ್ನೊಂದು ಮನೆಗೆ ಕಳಿಸಬೇಕು ಅನ್ನೊ ಆತುರ ಯಾಕೆ ಇರತ್ತೆ? ಮಹಿಳೆಯ ಜೀವನಕ್ಕೆ ಇರೋದು ಅದೊಂದೇ ದಾರಿ ಅಂತನಾ ಅಥವಾ ಸಾಮಾಜಿಕ ಒತ್ತಡವಾ? ನಾವು ಏನೇ ಆಗಿರಬಹುದು, ನಾನು ಇಂಜಿನಿಯರ್, ಪ್ರೊಫೆಸರ್, ಬರಹಗಾರ್ತಿ, ಕವಯತ್ರಿ ಆಗಿರಬಹುದು. ಆದರೆ ನಾನು ಯಾರನ್ನು ಮದುವೆ ಮಾಡಿಕೊಂಡಿದ್ದೀನಿ, ನನ್ನ ಮದುವೆ ಎಷ್ಟರಮಟ್ಟಿಗೆ ಸೆಕ್ಸಸ್‌ಫುಲ್ ಆಗಿದೆ, ನನಗೆ ಮಕ್ಕಳು ಎಷ್ಟು ಚೆನ್ನಾಗಿದ್ದಾರೆ, ಗಂಡ ಒಳ್ಳೆ ಕೆಲಸಾ ಮಾಡ್ತಾರಾ ಎನ್ನುವುದು ತುಂಬಾ ಮುಖ್ಯ ಆಗುತ್ತೆ. ಅದೇ ನಮ್ಮ "ಐಡೆಂಟಿಟಿ" ಆಗುತ್ತೆ. ನಾನಷ್ಟೇ ನನ್ನ ಐಡೆಂಟಿಟಿ ಅಂತ ಗುರುತಿಸಿಕೊಳ್ಳುವುದು ಸಮಾಜದಲ್ಲಿ ಕಷ್ಟ. ಇವತ್ತು ಮಹಿಳಾ ದಿನಾಚರಣೆ ಅಂತಾ ಹೇಳ್ತೀವಿ. ಮಹಿಳಾ ದಿವಸ ಅಂದ್ರೇ ಏನು? ಮಹಿಳೆಗೆ ತನ್ನದೇ ಆದ ಒಂದು ಗುರುತು ಇದೆಯಾ? ಅಂತಾ ಯೋಚನೆ ಮಾಡಬೇಕಾಗತ್ತೆ. ನನಗೆ ಮದುವೆ ಆಗಿರಬಹುದು. ನನ್ನ ಗಂಡ ಏನಾದ್ರೂ ಮಾಡುತ್ತಿರಬಹುದು, ಆದರೆ ಅದಲ್ಲದೆಯೂ ನನಗೇ ಒಂದು ಗುರುತು ಇದೆಯಾ? ಮೊದಲು ನನ್ನ ಗಂಡ ಏನು ಅಂತ ಗುರುತು ಮಾಡಿಕೊಂಡು ಆಮೇಲೆ ಓಹೊ ನಿಮ್ ಗಂಡಾ ಇದಾ? ಇಂಜಿನಿಯರ್ರಾ ಅಂತ ಕೇಳ್ತಾರೆ. ಗಂಡಿನೊಂದಿಗೆ, ಅವನ ಕೆಲಸದೊಂದಿಗೆ ನಮ್ಮನ್ನ ಗುರುತಿಸೋದು. ತುಂಬ ಮಹಿಳೆಯರಿಗೆ ಈ ಅನುಭವ ಆಗಿರೋದು, ಬಸ್‌ನಲ್ಲೋ, ಟ್ರೇನ್‌ನಲ್ಲೋ ಪ್ರಯಾಣ ಮಾಡುವಾಗ ಪಕ್ಕ ಕುಳಿತ ಮಹಿಳೆಯರು ಮಾತಾಡಿಸಿದ್ರೆ ಫಸ್ಟ್ ಕೇಳೋದು ನಿಮ್ಮ ಮಕ್ಕಳೆಷ್ಟು? ಗಂಡ ಏನ್ ಮಾಡ್ತಾರೆ ಅಂತ. ಅದೇ ಗಂಡಸರು ಮಾತಾಡ್ತಿದ್ರೆ ಏನ್ ಮಾಡ್ತಿದೀರಿ, ಬಿಜಿನೆಸ್ ಬಗ್ಗೆ, ಕೆಲಸದ ಬಗ್ಗೆ ಮಾತಾಡ್ತಾರೆ. ಪುರುಷಾಧಿಪತ್ಯ ಮಹಿಳೆಯರಲ್ಲಿಯೂ ಇದೆ ಅನ್ನೊದನ್ನ ಗುರುತಿಸಿಕೊಳ್ಳಬೇಕು, ಅರ್ಥ ಮಾಡಿಕೊಳ್ಳಬೇಕು. ನಮ್ಮಲ್ಲಿರೋ ಪುರುಷಾಧಿಪತ್ಯನಾ ಫಸ್ಟ್ ನಾವು ಪ್ರಶ್ನೆ ಮಾಡಿಕೊಂಡು ಅದನ್ನು ಮೀರಿದಾಗ ಹೌದು ನಾನು ಒಂಟಿ ಮಹಿಳೆ ಅಂತಾ, ನಾನು ಮಹಿಳೆ ಅಂತಾನೂ ಹೆಮ್ಮೆಯಿಂದ ಹೇಳೋಕೆ ಸಾಧ್ಯ.

ನಾವು ಏನ್ ಕೆಲಸಾ ಮಾಡ್ತೀವಿ, ನಮ್ಮ ಅಪ್ಪಾ ಏನ್ ಮಾಡ್ತಾರೆ, ಮಕ್ಕಳು ಏನ್ ಮಾಡ್ತಾರೆ, ನಮಗೆ ಏಷ್ಟು ಆಸ್ತಿ ಇದೆ ಎಂಬ ಸೋಷಿಯಲ್ ಸ್ಟೇಟಸ್ ನಮ್ಮ ಸುತ್ತ ಇದೆ. ಅದರಿಂದ ನಮಗೆ ಗುರುತು ಬರುತ್ತಾ ಅಥವಾ ನಮ್ಮದು ಅಂತ ನಮಗೇನಾದ್ರು ಗುರುತು ಇದೆಯಾ ಅನ್ನೊ ಪ್ರಶ್ನೆಯನ್ನು ಹಾಕಿಕೊಳ್ಳಬೇಕಾಗುತ್ತೆ. ಆಗ ನಮಗೆ ಒಂಟಿ ಮಹಿಳೆಯರು ಪಡ್ತಿರೋ ಕಷ್ಟ, ಬಿಕ್ಕಟ್ಟುಗಳನ್ನು ಅರ್ಥಮಾಡಿಕೊಳ್ಳೋಕೆ ಸಾಧ್ಯ ಅಂತ ನಾನು ಭಾವಿಸ್ತೀನಿ. ವಯಸ್ಸಾಗ್ತ ಆಗ್ತಾ ನನ್ನ ಲೈಫ್ ಬೇರೆ ಮಹಿಳೆಯರಿಗಿಂತ ಭಿನ್ನವಾಗಿದೆ, ಎಲ್ಲರಿಗೂ ಅವರವರದೇ ಪ್ರಪಂಚ ಇದೆ, ನನ್ನದು ಬೇರೆಯೇ ಪ್ರಪಂಚ



ಆಗಿದೆ ಅಂತ ಒಂಟಿಯಾಗಿರೋ ಮಹಿಳೆಗೆ ಅನ್ನಿಸುತ್ತೆ. ಇದು ಅವಳಲ್ಲಿ ಆಗ್ತಾ ಇರೋ ಗೊಂದಲ ಅಲ್ಲ, ಇದು ಸಾಮಾಜಿಕ ಗೊಂದಲ. ಒಂಟಿ ಮಹಿಳೆ ಎಷ್ಟೇ ಗಟ್ಟಿಯಾಗಿದ್ದರೂ ನಾನು ಎಲ್ಲಿಗೆ ಹೋಗ್ತಾ ಇದ್ದೀನಿ ಅನ್ನೊ ಗೊಂದಲ ಶುರುವಾಗುತ್ತೆ. ಗೆಳತಿಯರೆಲ್ಲಾ ಮದುವೆಯಾಗಿ, ಮಕ್ಕಳಾಗಿ ಸಂಸಾರದಲ್ಲಿ ಬಿಜಿಯಾಗಿ ಬಿಡ್ತಾರೆ. ಯಾಕೆ ಮದುವೆ ಮಾಡಿಕೊಂಡಿಲ್ಲಾ ಯಾಕೆ ಮದುವೆ ಮಾಡಿಕೊಂಡಿಲ್ಲಾ ಅಂತಾ ಕೇಳೋದು ಕಿರಿಕಿರಿಯಾಗುತ್ತೆ. ಸಮಾಜದಲ್ಲಿ ಹೀಗಿದ್ದರೆ, ಕಾನೂನೂ ಕೂಡಾ ಹಾಗೇ ಇದೆ. ಮಹಿಳೆಗೆ ಕುಟುಂಬದಲ್ಲಿ ಆಗ್ತಾ ಇರೋ ಹಿಂಸೆ ತಡೆಗಟ್ಟಲಿಕ್ಕೆ ಕೌಟುಂಬಿಕ ದೌರ್ಜನ್ಯ ಕಾಯಿದೆ ಇದೆ. ಈ ಕಾಯಿದೆಯನ್ನಾ ನಾವು ಎಷ್ಟ ಅರ್ಥ ಮಾಡಿಕೊಂಡಿದ್ದೀವಿ? ಎಲ್ಲರೂ ಅಂದುಕೊಂಡಿರುವುದು ಮದುವೆಯಾಗಿ ಬಂದಿರುವ ಹೆಂಡತಿಗೆ ಮಾತ್ರ ಅನ್ವಯ ಆಗತ್ತೇ ಅಂತಾ ಆದರೆ ಇದು ಮನೆಯಲ್ಲಿರೋ ಎಲ್ಲ ಮಹಿಳೆಯರಿಗೂ ಅಂದರೆ ಸೊಸೆ, ಅತ್ತೆ, ನಾದಿನಿ, ಮನೆಯಲ್ಲಿ ಕೆಲಸ ಮಾಡೋ ಮಹಿಳೆ ಎಲ್ಲರಿಗೂ ಅನ್ವಯ ಆಗತ್ತೆ. ಇದು ತುಂಬಾ ಜನಕ್ಕೆ ಗೊತ್ತಿಲ್ಲ. ಮನೆಯಲ್ಲಿ ಸೊಸೆ ಬಂದಾಗ ಮನೆಯಲ್ಲಿ ಮದುವೆಯಾಗದಿರೋ ಹೆಣ್ಣುಮಗಳಿಗೆ ತೊಂದರೆ ಆಗಬಹುದು, ಆಸ್ತಿ ಕೊಡದೆ ಇರಬಹುದು ಅವಳಿಗೂ ಸಹ ಈ ಕಾಯಿದೆ ಅನ್ವಯ ಆಗತ್ತೆ.

ಒಂಟಿಯಾಗಿದ್ದರೂ ನನ್ನ ಕಾಲ ಮೇಲೆ ನಾನು ನಿಲ್ತೀನಿ ಅಂತಾ ಮನೆ ಬಿಟ್ಟು ಹೊರಗೆ ಹೋದರೆ ಯಾವ ವ್ಯವಸ್ಥೆ ಇದೆ? ಮನೆ ಇದೆಯಾ? ಒಂದು ಹಾಸ್ಟೆಲ್ ಇದೆಯಾ? ಬೆಂಗಳೂರನ್ನ ತುಂಬಾ ಕಾಸ್ಮೋಪಾಲಿಟನ್ ಸಿಟಿ ಅಂತಾ ಹೆಮ್ಮೆ ಪಡ್ತೀವಿ. ಆದರೆ ಅಲ್ಲಿ ಒಂಟಿ ಮಹಿಳೆಗೆ ಒಂದು ಮನೆ ಸಿಗೋದು ತುಂಬಾ ಕಷ್ಟ. ಆ ಮನೆಗೆ ಯಾರ್‍ಯಾರು ಬರ್ತಾರೆ, ಹೋಗ್ತಾರೆ ಅಂತ ನೋಡ್ತಾರೆ, ಪ್ರಶ್ನೆ ಕೇಳ್ತಾರೆ. ಗಂಡ–ಹೆಂಡತಿ–ಮಕ್ಕಳು, ಅತ್ತೆ–ಸೊಸೆ ಇರೋ ಕುಟುಂಬವನ್ನು ಸಾಮಾನ್ಯವಾದ ಮತ್ತು ಸಾಮಾಜಿಕವಾಗಿ ಒಪ್ಪಿತವಾದ ಕುಟುಂಬವೆಂದು ಪರಿಗಣಿಸುತ್ತಾರೆ. ಅಂತ ಕುಟುಂಬವನ್ನು ಕದ್ದು ನೋಡಲ್ಲಾ, ಆ ಮನೆಗೆ ಯಾರ್‍ಯಾರು ಬರ್ತಾರೆ ಅಂತಾ ನೋಡಲ್ಲಾ. ಒಂಟಿ ಮಹಿಳೆ ಬಳಿ ಹಣ ಇರಲಿ, ಒಳ್ಳೆ ಸ್ಥಾನ ಇರಲಿ ಆದ್ರೂನು ಯಾರ್‍ಯಾರು ಬರ್ತಾರೆ, ಯಾರ್‍ಯಾರೂ ಹೋಗ್ತಾರೆ, ಏನ್ ಮಾಡತಾರೆ ಅಂತ ತಿಳ್ಕೊಳೋ ಕುತೂಹಲವಿರುತ್ತದೆ, ಒಂಟಿ ಮಹಿಳೆ ಬಡ ಮಹಿಳೆಯಾಗಿದ್ದರೆ ಇನ್ನೂ ಕಷ್ಟ, ಅವಳು ಪ್ರತಿ ನಿಮಿಷ ಭಯ ಪಡಬೇಕು, ತುಂಬಾ ಅಸಹಾಯಕಳಾಗ್ತಾಳೆ.

ನಾನು 15 ವರ್ಷದಿಂದ ಬೀದಿಯಲ್ಲಿ ಲೈಂಗಿಕವೃತ್ತಿ ಮಾಡೋ ಮಹಿಳೆಯರ ಜೊತೆಯಲ್ಲಿ ಕೆಲಸ ಮಾಡ್ತ ಇದೀನಿ. ಅವರಲ್ಲಿ ಶೇ.99ರಷ್ಟು ಮಹಿಳೆಯರು ಚಿಕ್ಕಗ್ರಾಮಗಳಿಂದ, ಕೃಷಿ ಇಲ್ಲ, ಕೆಲಸಾ ಇಲ್ಲ ಅಂತ ನಗರಕ್ಕೆ ಬರುತ್ತಾರೆ. ಒಂಟಿ ಮಹಿಳೆಯರಿಗೆ ಇರೊ ಎಲ್ಲ ತೊಂದರೆಗಳೂ ಅವರಿಗಿವೆ, ಆ ಮಹಿಳೆಯರನ್ನ ನಾವು ಒಂಟಿ ಮಹಿಳೆ ಅಂತಾ ಹೇಳ್ತಿವಾ? ಇಲ್ಲಾ, ಯಾಕಂದ್ರೆ, ಟೆಕ್ನಿಕಲಿ ಅವರು ಒಂಟಿನೇ.

ಆದರೆ ಅವರ ದುಡಿಮೆಯ ಶೇ.90ರಷ್ಟನ್ನು ಊರಿನಲ್ಲಿರೊ ಕುಟುಂಬಗಳಿಗೆ ಕಳಿಸುತ್ತಾರೆ. ಅಂದ್ರೆ ಬೀದಿಯಲ್ಲಿರೋ ಲೈಂಗಿಕವೃತ್ತಿ ಮಾಡೋ ಒಂಟಿ ಮಹಿಳೆಯರಿಗೆ ಮಕ್ಕಳಿರುತ್ತಾರೆ, ಮತ್ತೆ ಮನೆ ಮಾಡ್ಕೋತಾರೆ. ಅವರಿಗೆ ಮನೆ ಯಾರು ಕೊಡೋಲ್ಲಾ ಅದಕ್ಕೆ ಅವರು ಪಾರ್ಟನರ್ ಇಟ್ಟುಕೊಳ್ಳತಾರೆ. ಪಾರ್ಟನರ್‌ಗೆ ದುಡ್ಡು ಕೊಡಬೇಕು. ಮತ್ತೆ 2 ವರ್ಷ ಆದ ಮೇಲೆ ಪಾರ್ಟನರ್ ಬಿಟ್ಟುಹೋಗ್ತಾನೆ. ಮತ್ತೇ ಇನ್ನೊಂದು ಪಾರ್ಟನರ್ ಹುಡ್ಕೋಬೇಕು. ಅವರು ಒಂಟಿಯಾಗಿರೋಕೆ ಸಾಧ್ಯವಿಲ್ಲ, ಯಾಕಂದ್ರೆ ಮನೆ ಬಿಟ್ಟು ಓಡಿಸ್ತಾರೆ, ಅವರಿಗೆ ಯಾರು ಮನೆ ಬಾಡಿಗೆಗೆ ಕೊಡೋಲ್ಲಾ, ಅಡ್ವಾನ್ಸ್ ಯಾರು ವಾಪಸ್ ಕೊಡೊಲ್ಲಾ. ಒಂಟಿ ಮಹಿಳೆಯರಿಗೆ ಏನೇನೂ ತೊಂದರೆ ಆಗತ್ತೋ ಅದಕ್ಕಿಂತ ಹೆಚ್ಚು ತೊಂದರೆಗಳು ಅವರಿಗೆ ಆಗತ್ತೆ. ಅವರನ್ನ ಒಂಟಿ ಮಹಿಳೆಯರು ಅನ್ಬೇಕಾ? ತುಂಬಾ ಧೈರ್ಯವಂತ ಮಹಿಳೆಯರು ಅನ್ಬೇಕಾ? ಅಂತಾ ಮಹಿಳೆಯರಿಗಿಂತ ನಾವು ತುಂಬಾ ಸುರಕ್ಷಿತವಾಗಿದ್ದೀವಿ. ನಮಗೆ ಕುಟುಂಬ ಅಂತಾ ಇದೆ. ಒಂಟಿಯಾಗಿದ್ದೀವೋ, ಮದುವೆಯಾಗಿದ್ದೀವೋ ಎಲ್ಲೋ ಒಂದು ಕಡೆ ಸುರಕ್ಷತೆ ಇದೆ. ಆದರೆ ಆ ಮಹಿಳೆಯರಿಗೆ ಒಂದು ನೆಲೆ ಅಂತ ಇಲ್ಲಾ, ವಾಪಸ್ಸ್ ಊರಿಗೆ ಹೋದ್ರೆ ಮುಖವಾಡ ಹಾಕ್ಕೊಂಡು ಹೋಗ್ಬೇಕು. ಸಿಟಿಯಲ್ಲಿ ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡ್ತೀನಿ, ಇನ್ನೆಲ್ಲೋ ಕೆಲಸ ಮಾಡ್ತೀನಿ ಅಂತ ಊರಲ್ಲಿ ಸುಳ್ಳು ಹೇಳಬೇಕು. ಮತ್ತೆ ಇಲ್ಲಿ ಬಂದ್ರೆ ಬೀದಿನೇ ಗತಿ. ಅಂತಹ ಮಹಿಳೆಯರಿಗೆ ಏನ್ ಮಾಡ್ತಾ ಇದೀವಿ ನಾವು?

ಎಲ್ಲಾ ಒಂಟಿ ಮಹಿಳೆಯರೂ ಒಂದೇ ಅಂತಾ ಹೇಳೋಕೆ ಸಾಧ್ಯವಿಲ್ಲ. ಒಂಟಿ ಮಹಿಳೆಯರಲ್ಲೂ ಅಷ್ಟೋ–ಇಷ್ಟೋ ಸುರಕ್ಷಿತವಾಗಿರುವವರು ಇದ್ದಾರೆ, ಇಲ್ಲದವರೂ ಇದ್ದಾರೆ. ಬಹಳ ವರ್ಷಗಳ ಹಿಂದೆ ಕೆಲಸ ಮಾಡೋ ಮಹಿಳೆಯರ ಹಾಸ್ಟೆಲ್ ಒಂದರಲ್ಲಿ ಊಟ ಸರಿ ಇರಲ್ಲಿಲ್ಲ, ತುಂಬ ಕಿರುಕುಳ ನಡೆಯುತ್ತಿತ್ತು, ಲೈಂಗಿಕ ಕಿರುಕುಳವೂ ಇತ್ತು ಎಂದು ನಾವು ಪ್ರತಿಭಟನೆ ಮಾಡಿ ಮುಚ್ಚಿಸಿದೆವು. ಬೆಂಗಳೂರಿನಲ್ಲಿ ಐಟಿ–ಬಿಟಿಯಲ್ಲಿ ದುಡಿಯುವ ಬಹಳಷ್ಟು ಮಹಿಳೆಯರು ಪೇಯಿಂಗ್ ಗೆಸ್ಟ್ ಆಗಿ ಇದ್ದಾರೆ. ಅವರಿಗೆ ಕೂಡ ಸುರಕ್ಷತೆ ಇಲ್ಲ. ರಸ್ತೆಯಲ್ಲಿ ದುಡಿಯೋ ಮಹಿಳೆಯರಿಗೆ ಅವರು, ಸೆಕ್ಸ್‌ವರ್ಕರ್ ಇರಬಹುದು, ವ್ಯಾಪಾರ ಮಾಡೋ ಮಹಿಳೆಯರು ಮನೆಗೆ ಹೋದ್ರೂ ಗಂಡನಾಗಲಿ ಅಥವಾ ಪಾರ್ಟನರ್ ಆಗಲಿ ಕುಡಿದು, ದುಡ್ಡು ಕಿತ್ತುಕೊಂಡು ಹಿಂಸೆ ಕೊಡ್ತಾರೆ. ಅವರಿಗೆ ಬೀದಿನೂ ಸುರಕ್ಷಿತವಲ್ಲ, ಮನೆಯೂ ಸುರಕ್ಷಿತವಲ್ಲ. ಹಾಗಾಗಿ ಒಂಟಿ ಮಹಿಳೆಯರಿಗೆ ನಿಜವಾಗಲೂ ಏನು ಬೇಕು ಅಂತ ಯೋಚನೆ ಮಾಡಬೇಕು. ಅವಳಿಗೆ ಏನು ಕೊರತೆ ಇದೆ? ಒಂಟಿ ಮಹಿಳೆ ವಿಕ್ಟಿಮ್ ಅಲ್ಲ, ಅವಳಿಗೂ ಸಾಮರ್ಥ್ಯ ಇದೆ, ಅವಳು ಮಹಿಳೆ ಅನ್ನೋದನ್ನ ಸುತ್ತಲಿನ ಸಮಾಜ ಯೋಚಿಸಬೇಕು. ಅವಳಿಗೆ ಏನು ಬೇಕು, ಅವಳಿಗೆ ಪೂರಕವಾದ ವಾತಾವರಣ ಕಲ್ಪಿಸುವುದರ ಬಗ್ಗೆ ಯೋಚಿಸಬೇಕು.

ನಿರ್ಭಯಾ ಪ್ರಕರಣದ ನಂತರ ಸಾರ್ವಜನಿಕ ಸ್ಥಳಗಳಲ್ಲಿನ ಸುರಕ್ಷತೆಯ ಬಗ್ಗೆ ನಾವು ಯೋಚ್ನೆ ಮಾಡಿದ್ವಿ. ನಮ್ಮಂಥ ಮಧ್ಯಮವರ್ಗದ ಮಹಿಳೆಯರಿಗೆ ರಾತ್ರಿ 7–8 ಗಂಟೆ ಹೊತ್ತಿನಲ್ಲಿ ಒಂಟಿಯಾಗಿ ಓಡಾಡುವುದು ಕಷ್ಟ. ಆದರೆ ಬೀದಿಯಲ್ಲಿ ತರಕಾರಿ ವ್ಯಾಪಾರ ಮಾಡುವಂತಹ ಮಹಿಳೆ ಬೆಳಗ್ಗೆ 4 ಗಂಟೆಗೆ ಮಾರ್ಕೆಟ್‌ಗೆ ಹೋಗಿ, ಸಾಮಾನು ತಗೊಂಡು ಬೀದಿಗೆ ಬಂದು ಬೇಗ ವ್ಯಾಪಾರ ಮುಗಿಸಿ ರಾತ್ರಿ ವಾಪಸ್ಸು ಹೋಗಬೇಕು. ಅವಳಿಗೆ ಆಗುವ ಕಷ್ಟ ಇನ್ನೂ ದೊಡ್ಡದು. ಅವಳಿಗೆ ಬೇಕಾಗಿರೊ ರಕ್ಷಣೆಯನ್ನ ಪೂರೈಸಬೇಕು. ಗಾಂಧೀಜಿಯವರು "ಯಾವ ಕಾರ್ಯಕ್ರಮವೇ ಆಗಲಿ ತುಂಬಾ ತಳಮಟ್ಟದಲ್ಲಿ ಇರುವ ಮಹಿಳೆಯರಿಗೆ ಮೊದಲು ಒಳ್ಳೆಯದಾದರೆ ಎಲ್ಲರಿಗೂ ಒಳ್ಳೆಯದಾಗುತ್ತದೆ" ಎಂದು ಹೇಳುತ್ತಾರೆ. ನಾವು ಆ ನಿಟ್ಟಿನಲ್ಲಿ ಯೋಚಿಸಬೇಕು. ಈಗ ವಿಶ್ವಸಂಸ್ಥೆಯೂ ಕೂಡ ಒಂಟಿ ಮಹಿಳೆಯರ ಪ್ರಾಜೆಕ್ಟ್ ಬಗ್ಗೆ ಹೇಳುತ್ತೆ. ಆದರೆ ಎಲ್ಲ ಒಂಟಿ ಮಹಿಳೆಯರಿಗೂ ಒಂದೇ ಕಾರ್ಯಕ್ರಮ ಮಾಡುವುದು ಸರಿಯಲ್ಲ, ಬಡತನವಿರುವ ಒಂಟಿ ಮಹಿಳೆಯರಿಗೆ ಯಾವ ರೀತಿಯ ಸುರಕ್ಷತೆ ಬೇಕು, ಅವಕಾಶ ಬೇಕು ಅನ್ನೋ ಬಗ್ಗೆ ಯೋಚನೆ ಮಾಡಿ ಪ್ರಾಜೆಕ್ಟ್‌ನಲ್ಲಿ ಒಳಗೊಳ್ಳಬೇಕು ಆಗ ಒಳ್ಳೆದಾಗುತ್ತೆ.

ದೇವದಾಸಿ ಮಹಿಳೆಯರ ಬಗ್ಗೆ ಪ್ರಸ್ತಾಪ ಬಂತು, ದೇವದಾಸಿ ಪದ್ಧತಿಗೆ ಬೇರೆ ಅರ್ಥ ಇತ್ತು. ಬೇರೆ ಸ್ವರೂಪದಲ್ಲಿತ್ತು. ಈಗ ದೇವದಾಸಿಯರು ಸೆಕ್ಸ್ ಇಂಡಸ್ಟ್ರಿಯಲ್ಲಿದ್ದಾರೆ. ನಾವು ಸತ್ಯಶೋಧನ ಸಮಿತಿ ಭಾಗವಾಗಿ ಹೊಸಪೇಟೆ ಹತ್ತಿರ ಇರುವ ಕೂಡ್ಲಿಗಿಗೆ ಹೋಗಿದ್ವಿ. ಅಲ್ಲಿ ಒಂದು ಇಡೀ ಬೀದಿಯಲ್ಲಿ ದೇವದಾಸಿಯರೇ ಇದ್ದಾರೆ. ವಿಜಯನಗರದ ಕೃಷ್ಣದೇವರಾಯನ ಕಾಲದಿಂದಲೂ ಆ ಪದ್ಧತಿ ಜಾರಿಯಲ್ಲಿತ್ತು. ಟಿ.ವಿ. 9 ನಿಂದ ಇನ್‌ಡಿಪೆಂಡೆಂಟ್ ಫಿಲ್ಮ್ ಮೇಕರ್ ಒಬ್ಬರು, ದೇವದಾಸಿಯರು ಇರುವ ಜಾಗಕ್ಕೆ ಹೋಗಿ ಮೂರು ತಿಂಗಳು ಅಲ್ಲಿದ್ದು ಅವರಿಗೆ ದುಡ್ಡು ಕೊಟ್ಟು ಅವರ ಮನೆಯಲ್ಲಿದ್ದುಕೊಂಡು ಗೌಪ್ಯವಾಗಿ ಒಂದು ಸಿನಿಮಾ ಮಾಡಿದರು. ಟಿ.ವಿ. 9ನಲ್ಲಿ ಒಂದು ಗಂಟೆ ಆ ಪ್ರೋಗ್ರಾಂ ಮಾಡಿ ಅದರಲ್ಲಿ ಇವರು ದೇವದಾಸಿ ಅಂತ ಹೇಳ್ತಾರೆ, ಆದ್ರೆ ಅವ್ರು ಸೆಕ್ಸ್ ವರ್ಕರ್ಸ್, ಅವರ ಮಕ್ಕಳನ್ನೂ ಸೆಕ್ಸ್‌ವರ್ಕ್‌ನಲ್ಲಿ ಬಳಸ್ತಾ ಇದಾರೆ ಅಂತ ಹೇಳಿದ್ರು. ಅವರು ದೇವದಾಸಿಯರು ಅಂತ ಎಲ್ಲರಿಗೂ ಗೊತ್ತು, ಇಲ್ಲಿವರೆಗೂ ಏನೂ ತೊಂದರೆ ಆಗಿರಲ್ಲಿಲ್ಲ. ನಾವು ಅಲ್ಲಿಗೆ ಹೋದಾಗ ಅಲ್ಲಿರುವ ಮನೆಗಳಲ್ಲಿ ಹೆಣ್ಣು ಮಕ್ಕಳು ಶಾಲೆ/ಕಾಲೇಜಿಗೆ ಹೋಗ್ತಾ ಇದ್ರು, ಗಂಡು ಮಕ್ಕಳು ಅಂಗಡಿ ಇಟ್ಕೊಂಡು ವ್ಯಾಪಾರ ಮಾಡ್ತ ಇದ್ರು. ಆದ್ರೆ ಈ ಪ್ರೋಗ್ರಾಂ ಬಂದ ಮೇಲೆ ಎಲ್ಲರಿಗೂ ಗೊತ್ತಾಗಿದೆ, ಯಾರೂ ಅವರಿಗೆ ಕೆಲಸ ಕೊಡುತ್ತಿಲ್ಲ, ಮಕ್ಕಳು ಸ್ಕೂಲಿಗೆ ಹೋಗುವುದಕ್ಕೆ ಹೆದರಿಕೊಳ್ಳುತ್ತಾರೆ. ಕೂಡ್ಲಿಗಿ ಅಂದ್ರೆ ಮದುವೆಯಾಗೋಕೆ ಯಾರೂ ಬರ್ತಿಲ್ಲ ಅಂತ ಹೇಳಿದ್ರು. ನಾವು ಅಲ್ಲಿಗೆ ಸತ್ಯಶೋಧನಾ ಸಮಿತಿಯ ಭಾಗವಾಗಿ ಹೋಗಿ, ಮಾಹಿತಿ ಕಲೆ ಹಾಕಿ ವರದಿ ತಯಾರಿಸಿ, ಟಿ.ವಿ. 9ಗೆ ಪತ್ರ ಬರೆದೆವು. ಸೆಕ್ಸ್‌ವರ್ಕ್ ಮಾಡುವ ಮಹಿಳೆಯರಲ್ಲಿ ಪಾರ್ಟ್‌ನರ್ ಇರಲಿ, ಇಲ್ದೆ ಇರ್ಲಿ ಅವರು ಒಂಟಿ ಮಹಿಳೆಯರೇ, ಒಂಟಿಯಾಗಿ ಕುಟುಂಬ ನಡೆಸುವ ಮಹಿಳೆಯರು. ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಿ

ಎರಡನೇ ಪೀಳಿಗೆಯಲ್ಲಿ ಬದಲಾವಣೆ ಬರಲಿ ಅಂತ ಬಯಸ್ತಾರೆ, ಇಂತಹ ಪ್ರೋಗ್ರಾಂನಿಂದ ಅವರಿಗೆ ಏನಾಗಬಹುದು ಹೇಳಿ, ಆ ಊರಲ್ಲಿ ಹಿಂದೆ ಇಲ್ದೆ ಇರೂ ಡಿವಿಷನ್ ಈಗ ಬಂದಿದೆ. ಅವರ ಬದುಕಿಗೆ ಹಾನಿಯಾದರೆ ನೀವು ಜವಾಬ್ದಾರರು ಎಂದು ಪತ್ರದಲ್ಲಿ ಬರೆದಿದ್ದೆವು. ಅವರು ಉತ್ತರ ನೀಡಲಿಲ್ಲ. ನಂತರ ಪ್ರೆಸ್ ಕೌನ್ಸಿಲ್‌ಗೆ ಪತ್ರ ಬರೆದೆವು. ಅವರು ಬಂದು ತನಿಖೆ ಮಾಡಿದರು. ಆ ಸಿನಿಮಾಗೆ ಒಂದು ಪ್ರಶಸ್ತಿಯೂ ಸಿಕ್ಕಿತ್ತು. ತನಿಖೆಯಾದ ಮೇಲೆ ಪ್ರಶಸ್ತಿ ವಾಪಸ್ಸ್ ತೆಗೆದುಕೊಂಡರು. ಟಿ.ವಿ.9 ನವರು ಕ್ಷಮಾಪಣೆ ಪತ್ರ ಬರೆದರು. ಆದ್ರೆ ಇವತ್ತು ಪರಿಸ್ಥಿತಿ ಅಲ್ಲಿ ಮೊದಲಿನಂತೆ ಇಲ್ಲ. ಸೆಕ್ಸ್‌ವರ್ಕ್‌ರ್ ಅಂದ್ರೆ ಬೇರೆಯಾಗಿಯೇ ನೋಡ್ತಾರೆ, ಎಲ್ಲಿ ಒಂಟಿ ಮಹಿಳೆಯರು ತುಂಬಾ ಇದ್ದಾರೆ ಅಲ್ಲಿ ಸುರಕ್ಷಿತವಾದ, ಸಾಮಾಜಿಕವಾಗಿ ಪೂರಕವಾದ ವಾತಾವರಣ ಕಲ್ಪಿಸಬೇಕು ಅಂದ್ರೆ ಆ ಬಗ್ಗೆ ತುಂಬಾ ಕೆಲಸ ಮಾಡಬೇಕು ಒಬ್ಬೊಬ್ಬರಿಂದ ಪ್ರಯತ್ನ ಶುರುವಾಗಿ ಕ್ರಮೇಣ ವಿಸ್ತರಿಸಬೇಕು.

ಅಭಿವೃದ್ಧಿಯ ಹೆಸರಿನಲ್ಲಿ ಭೂಸ್ವಾಧೀನದ ಕಾರುಬಾರು
ನರಕವಾಗುತ್ತಿದೆ ನಿರ್ವಸಿತ ಮಹಿಳೆಯರ ಬಾಳು



# ಅಪರಾಧ ವಯಸ್ಸು

**ದರ್ಶನಾ ಮಿತ್ರ**

ನಮಸ್ತೆ, ನನಗೆ ಕನ್ನಡ ಸರಿಯಾಗಿ ಬರುವುದಿಲ್ಲ ಹಿಂದಿಯಲ್ಲಿ ಮಾತನಾಡುತ್ತೇನೆ. ನನಗೆ ಕೊಟ್ಟಿರುವ ವಿಷಯ ಬಾಲ್ಯ ವಿವಾಹ, ಮಕ್ಕಳ ಮೇಲಿನ ದೌರ್ಜನ್ಯ ಮತ್ತು ಮಕ್ಕಳ ಸಾಗಣೆ. ಬೆಳಗಿನಿಂದ ನಾವು ಸ್ವಾತಂತ್ರ್ಯದ ಕುರಿತು ಮಾತನಾಡುತ್ತಿದ್ದೇವೆ, ನಮಗೆ ಮನುವಾದದಿಂದ ಸ್ವಾತಂತ್ರ್ಯ ಬೇಕು, ನಮಗೆ ಬಹಳಷ್ಟು ತರಹದ ಸ್ವಾತಂತ್ರ್ಯ ಬೇಕು ಎಂದು. ಆದರೆ ಸ್ವಾತಂತ್ರ್ಯ ಎಂದರೇನು? ನನಗೆ ಅನಿಸುತ್ತದೆ ನಮ್ಮದೇಶದಲ್ಲಿ ನಾವು ಎಲ್ಲರ ಸ್ವಾತಂತ್ರ್ಯವನ್ನು ಕೇಳುತ್ತೇವೆ, ನಾವು ಯಾರ ಸ್ವಾತಂತ್ರ್ಯವನ್ನು ಕೇಳುವುದಿಲ್ಲವೋ ಹಾಗೂ ಯಾರು ತಮ್ಮ ಬಗ್ಗೆ ಮಾತನಾಡುವುದಿಲ್ಲವೋ ಅದೇ ಮಕ್ಕಳ ಸ್ವಾತಂತ್ರ್ಯವಾಗಿದೆ.

ಮಕ್ಕಳು ಮುಗ್ಧರು ಮತ್ತು ಅವರಿಗೆ ತಿಳುವಳಿಕೆ ಇರುವುದಿಲ್ಲ. ಅವರಿಗೆ ಸ್ವಾತಂತ್ರ್ಯ ಕೊಟ್ಟರೆ ಅದನ್ನು ಅವರ ಹಿತಕ್ಕೆ ಬಳಸಿಕೊಳ್ಳುತ್ತಾರೆಂಬ ಗ್ಯಾರಂಟಿ ಇರುವುದಿಲ್ಲ. ಉದಾಹರಣೆಗೆ ಮಕ್ಕಳಿಗೆ ಶಾಲೆಗೆ ಹೋಗಲು ಇಷ್ಟವಿಲ್ಲದಿರಬಹುದು, ರಸ್ತೆಯಲ್ಲಿ ಎಚ್ಚರಿಕೆಯಿಂದ ಓಡಾಡದೆ ಅಪಾಯಕ್ಕೆ ಸಿಲುಕಿಕೊಳ್ಳಬಹುದು. ಏನೋ ಅಪಾಯ ಮಾಡಿಕೊಂಡುಬಿಡಬಹುದೆಂದು ಅವರಿಗೆ ಸ್ವಾತಂತ್ರ್ಯ ಕೊಡುವುದಿಲ್ಲ. ಆದರೆ ಬೇಕಾದ್ದನ್ನು ಮಾಡಬಹುದು ಎಂಬುದು ಸ್ವಾತಂತ್ರ್ಯವಲ್ಲ. ಶಾಲೆಗೆ ಹೋಗಿ ಏನಾದರು ಆಗುವುದಕ್ಕೆ ನನಗೆ ಸ್ವಾತಂತ್ರ್ಯವಿದೆ. ಉದಾಹರಣೆಗೆ ನಾನು 5 ವರ್ಷದ ಬಾಲಕಿ ಇದ್ದೇನೆ ಮುಂದೆ ನಾನು ಡಾಕ್ಟರ್ ಆಗಬೇಕೆಂದರೆ ಶಾಲೆಯು ನನಗೆ ಡಾಕ್ಟರ್ ಆಗುವುದಕ್ಕೆ ಸ್ವಾತಂತ್ರ್ಯವನ್ನು ನೀಡುತ್ತದೆ. ನಾನು ಶಿಕ್ಷಣವನ್ನು ಪಡೆಯಬೇಕಾದರೆ ನನ್ನ ಮನೆಯಲ್ಲಿ ಸಂಪಾದನೆ ಮಾಡುವವರು ಯಾರು ಇಲ್ಲದಿರುವ ಸನ್ನಿವೇಶ ನನ್ನ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುತ್ತದೆ.

ಪಾಲಕರ ಹತ್ತಿರ ಕೆಲಸವಿಲ್ಲದೆ ನಾನು ಕೆಲಸ ಮಾಡುವಂತಹ ಸಂದರ್ಭ ಬಂದರೆ, ಅದು ನನ್ನ ಶಿಕ್ಷಣದ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುತ್ತದೆ. ಶಿಕ್ಷಣ ಪಡೆಯುವ ಸ್ವಾತಂತ್ರ್ಯ ನಮ್ಮ ಮಕ್ಕಳ ಹತ್ತಿರ ಇಲ್ಲ. ಶಿಕ್ಷಣ ಹಕ್ಕು ಕಾಯ್ದೆಯ ಅನುಸಾರ ಪ್ರೈವೇಟ್ ಶಾಲೆಗಳಲ್ಲಿಯು ಸಹ ಎಲ್ಲ ವರ್ಗಗಳ ಮಕ್ಕಳಿಗೆ ಪ್ರವೇಶವನ್ನು ನೀಡಬೇಕು. ಎಷ್ಟು ಪ್ರೈವೇಟ್ ಶಾಲೆಗಳಲ್ಲಿ ಬಡ ಮಕ್ಕಳು ಓದುತ್ತಿದ್ದಾರೆ? ನನಗಂತೂ ಒಂದು ಶಾಲೆಯೂ ನೆನಪಿಗೆ ಬರುತ್ತಿಲ್ಲ. ಆಹಾರ ಹಕ್ಕು ಕಾಯ್ದೆ ಪ್ರಕಾರ ಎಲ್ಲರಿಗೂ ಆಹಾರ ದೊರೆಯಬೇಕು. ಅಂದರೆ ಯಾರೂ/ಯಾವ ಮಗುವೂ ಖಾಲಿ ಹೊಟ್ಟೆಯಲ್ಲಿ ಮಲಗಬಾರದು ಎಂದು. ಆದರೆ ಇವತ್ತು ಸಹ ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳಿಗೆ ಸರಿಯಾದ ಊಟ ಸಿಗುವುದಿಲ್ಲ. ಅವರಿಗೆ ಸಿಗುವ ಬಿಸಿ ಊಟದಲ್ಲಿ ಹುಳಗಳು ಇರುವುದರಿಂದ ಆ ಮಕ್ಕಳು ಬಿಸಿ ಊಟವನ್ನು ತಿನ್ನುವುದಿಲ್ಲ. ಈ ಮೂಲಭೂತ ವಸ್ತುಗಳು ಮಕ್ಕಳಿಗೆ ದೊರೆಯದೆ ಇದ್ದಾಗ ನಾವು ಯಾವ ಸ್ವಾತಂತ್ರ್ಯದ ಕುರಿತು ಮಾತನಾಡುತ್ತಿದ್ದೇವೆ. ಈ ಕೊರತೆಯು ಮಕ್ಕಳ ಮೇಲೆ ಹೇಗೆ ಪರಿಣಾಮ ಬೀರುತ್ತದೆ?

ನಿಮಗೆಲ್ಲರಿಗೂ ಜುವೆನೈಲ್ ಜಸ್ಟೀಸ್ ಬಗ್ಗೆ ಗೊತ್ತಿದೆ, ಯಾವುದೇ ಒಂದು ಮಗು ಅಪರಾಧವನ್ನು ಮಾಡಿದರೆ ಅವರನ್ನು ಜುವೆನೈಲ್ ಜಸ್ಟೀಸ್ ಒಳಗಡೆ ಶಿಕ್ಷೆ ನೀಡಲಾಗುತ್ತದೆ. ಸರಕಾರವು ಈ ಮಕ್ಕಳ ಸಲುವಾಗಿ ಕಾವಲು ಗೃಹಗಳನ್ನು ರಚನೆ ಮಾಡಿದ್ದು, ಯಾವುದೇ ಮಗು ಅಪರಾಧ ಮಾಡಿದ್ದರೆ ಅವರನ್ನು ಆ ಕಾವಲು ಮನೆಯಲ್ಲಿ ಇರಿಸುತ್ತಾರೆ. ನಾನು ಬೆಂಗಳೂರಿನ ಕಾವಲು ಗೃಹಗಳಿಗೆ ಭೇಟಿ ನೀಡಿದಾಗ ಅಲ್ಲಿದ್ದ ಎಲ್ಲ ಮಕ್ಕಳು ಸಿಂಗಲ್ ಪೇರೆಂಟ್ ಮನೆಯಿಂದ ಬಂದವರಾಗಿದ್ದಾರೆ. ಅಂದರೆ ಅಪ್ಪಅಮ್ಮ ಇಲ್ಲದೆ ಇರುವುದು, ಅನಾಥರಾಗಿರುವುದು. ಈ ಮಕ್ಕಳು ಸಮಾಜೋ–ಆರ್ಥಿಕವಾಗಿ ಹಿಂದುಳಿದ ವರ್ಗದಿಂದ ಬಂದವರಾಗಿರುತ್ತಾರೆ. ಅಂದರೆಅವರು ಬಡವರಾಗಿದ್ದಾರೆ ಅವರ ಹತ್ತಿರ ದುಡ್ಡಿಲ್ಲ. ಅವರು ದಲಿತರು ಆಗಬಹುದು ಅಥವಾ ಮುಸ್ಲಿಮರು ಆಗಿರಬಹುದು. ಅಂದರೆ ಮೇಲ್ವರ್ಗದ ಮತ್ತು ಮಧ್ಯಮ ವರ್ಗದಿಂದ ಯಾವುದೇ ಮಕ್ಕಳು ಕಾವಲು ಗೃಹಗಳಿಗೆ ಹೋಗುವುದಿಲ್ಲ. ಅವರನ್ನು ಪೊಲೀಸರು ಹಿಡಿಯುವುದಿಲ್ಲ. ಅವರನ್ನು ಯಾರು, ನೀನು ಊಟಕ್ಕಾಗಿ ಕಳ್ಳತನವನ್ನು ಮಾಡಿದ್ದೀಯಾ ಎಂದು ಕೇಳುವುದಿಲ್ಲ. ಮಕ್ಕಳು ಅಪರಾಧ ಮಾಡುತ್ತಾರೆ, ಕೊಲೆ ಮಾಡುತ್ತಾರೆ ಅಥವಾ ಡ್ರಗ್ಸ್ ತೆಗೆದುಕೊಳ್ಳುತ್ತಾರೆ ಎನ್ನುವುದಕ್ಕೆ ಕಾರಣ ಇದೆ. ಅದೇನೆಂದರೆ ಅವರಿಗೆ ಸ್ವಾತಂತ್ರ್ಯವೇ ಇಲ್ಲದೇ ಇರುವುದು. ನಿಮ್ಮೆಲ್ಲರಿಗೂ ಗೊತ್ತಿರಬಹುದು ಕೆಲವು ದಿನಗಳ ಹಿಂದೆ ಜುವೆನೈಲ್ ಜಸ್ಟೀಸ್ ಕಾಯ್ದೆಜಾರಿಗೆ ಬಂದಿತು. ಈ ಕಾಯ್ದೆಯು ನಿರ್ಭಯಾ ದೆಹಲಿ ಗ್ಯಾಂಗ್ ರೇಪ್ ಪ್ರಕರಣದ ನಂತರ ಜಾರಿಯಾಯಿತು. ನಿರ್ಭಯಾ ಪ್ರಕರಣದಲ್ಲಿ ಅತ್ಯಂತ ಕ್ರೂರವಾಗಿ ವರ್ತಿಸಿದವನು 17 ವರ್ಷದ ಹುಡುಗನಾಗಿದ್ದನು. ಆ ಸಂದರ್ಭದಲ್ಲಿ 18 ವರ್ಷದ ಒಳಗೆ ಯಾರೇ ಇರಲಿ ಅವರನ್ನು ವಯಸ್ಕರ ತರಹದ ಶಿಕ್ಷೆ ಕೊಡಲು

**ಭೂಮಿಯೊಂದಿಗೆ ಆಕೆಯದ್ದು ಕರುಳಬಳ್ಳಿಯ ಸಂಬಂಧ. ಅಳೆಯದಿರಿ ಅದನ್ನು ದುಡ್ಡಿನ ಮೂಲಕ**



ಬರುವುದಿಲ್ಲ ಜುವೆನೈಲ್ ಜಸ್ಟೀಸ್ ಹೇಳಿಕೆ ನೀಡಿತು. 18 ವರ್ಷದ ಮೇಲಿನ ಅಪರಾಧಿಯನ್ನು ಜುವೆನೈಲ್ ಜಸ್ಟಿಸ್ ಹೋಮ್‌ನಲ್ಲಿ ಇಡುವುದಿಲ್ಲ. ಇದು ಸರಿಯಲ್ಲ, ಅತ್ಯಂತ ಕ್ರೂರವಾಗಿ ವರ್ತಿಸಿದವನಿಗೆ ಕಠಿಣವಾದ ಶಿಕ್ಷೆ ದೊರೆಯಬೇಕೆಂದು ಹಲವರಿಗೆ ಅನ್ನಿಸಿತು. 17 ವರ್ಷದವರಿಗೂ ಶಿಕ್ಷೆ ದೊರೆಯಲೇಬೇಕೆಂದು 'ಜುವೆನೈಲ್ ಜಸ್ಟಿಸ್ ಅಮೆಂಡ್‌ಮೆಂಟ್ ಕಾಯ್ದೆ' ಜಾರಿಗೆ ಬಂತು. ಈ ಕಾಯ್ದೆ 16 ರಿಂದ 18 ವರ್ಷದ ಒಳಗಿರುವವರು ಯಾವುದೇ ಘೋರ ಅಪರಾಧವನ್ನು ಮಾಡಿದ್ದರೆ ಅವರಿಗೆ 7 ವರ್ಷ ಅಥವಾ 7 ವರ್ಷಕ್ಕಿಂತ ಹೆಚ್ಚಿನ ಶಿಕ್ಷೆ ನೀಡಬೇಕೆಂದು ಹೇಳುತ್ತದೆ. ಆದರೆ ಅಪರಾಧಿಗೆ ಮಕ್ಕಳ ಹಾಗೇ ಶಿಕ್ಷೆಯನ್ನು ನೀಡಬೇಕೆಂದು ಹೇಳುತ್ತದೆ. ಇದರ ಅರ್ಥ ಏನೆಂದರೆ ಈ ಅಮೆಂಡ್‌ಮೆಂಟ್ ಕಾಯ್ದೆಯ ಪ್ರಕಾರಮಂಡಳಿಯನ್ನು ನೇಮಿಸಿ ಅಪರಾಧ ಮಾಡಿರುವ ಮಗುವಿನ ವಿಚಾರಣೆ ನಡೆಸಬೇಕು. ಉದಾಹರಣೆಗೆ ವಿಚಾರಣೆಯಲ್ಲಿ 'ಮಗು ನೀನು ಕೊಲೆ ಮಾಡಿದ್ದೀಯಾ? ನೀನು ಬಂದೂಕಿನಿಂದ ಹೊಡೆದ ಗುಂಡು ಅವನನ್ನು ಸಾಯಿಸುವುದೆಂದು ನಿನಗೆ ಗೊತ್ತಿತ್ತಾ ಎಂದು ಕೇಳಿ, ಅದು ಆ ಮಗುವಿಗೆ ಗೊತ್ತಿದ್ದರೆ ಆ ಮಗುವನ್ನು ವಯಸ್ಕರ ಹಾಗೇ ಶಿಕ್ಷಿಸಬೇಕು. ಹಾಗೆಯೇ ಆ ಮಗುವಿಗೆ ಅಪರಾಧದ ಕುರಿತು ಏನೂ ಗೊತ್ತಿಲ್ಲದೇಇದ್ದರೆ ಆ ಮಗುವಿಗೆ ಮಕ್ಕಳಂತೆ ಶಿಕ್ಷೆಯನ್ನು ವಿಧಿಸಬೇಕು.

ಆದರೆ ಇದರಲ್ಲಿ ಲೋಪವಿದೆ. ಅದೇನೆಂದರೆ ನಾಲ್ಕು ವರ್ಷದ ಮಗುವಿಗೂ ಸಹ ಬಂದೂಕಿನಿಂದ ಗುಂಡು ಹೊರಗೆ ಬರುತ್ತದೆ ಮತ್ತು ಆ ಗುಂಡಿನಿಂದ ಮನುಷ್ಯ ಸಾಯುತ್ತಾನೆ ಎಂದು ಗೊತ್ತಿರುತ್ತದೆ. ಅಂದರೆ ಅಪರಾಧ ಮಾಡುವವರು 5 ವರ್ಷ, 15 ವರ್ಷ, 25 ವರ್ಷ ಅಥವಾ 80 ವರ್ಷ ವಯಸ್ಸಿನವರು ಯಾರೇ ಆಗಲಿ ಅವರಿಗೆ ಗೊತ್ತಿದೆ ಅವರು ಏನು ಮಾಡುತ್ತಿದ್ದಾರೆಂದು. ನಾನಾಗಲಿ ಅಥವಾ ನೀವಾಗಲಿ ಸಣ್ಣ ವಯಸ್ಸಿನಲ್ಲಿ ಬೇರೆಯವರು ಹೇಳಿದ ಹಾಗೇ ಮಾಡುವುದು ಸಾಮಾನ್ಯ. 17 ಮತ್ತು 16 ವರ್ಷದ ಮಗುವಿಗೆ ತಾನು ಏನು ಮಾಡುತ್ತಿದ್ದಾನೆ ಎಂದು ಗೊತ್ತಿರುತ್ತದೆ. ಅವನಲ್ಲಿ ಇಂಪಲ್ಸ್ ಕಂಟ್ರೋಲ್ ಇರುವುದಿಲ್ಲ. ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಹಾಗೂ ಬೆಂಗಳೂರಿನಲ್ಲಿರುವ ಮನೋವಿಜ್ಞಾನಿಗಳನ್ನು ವಿಚಾರಿಸಿದಾಗ ಅವರು '25 ವರ್ಷದ ತನಕ ಮಾನವರಲ್ಲಿ ಇಂಪಲ್ಸ್ ಕಂಟ್ರೋಲ್ ಸಂಪೂರ್ಣವಾಗಿ ವೃದ್ಧಿಯಾಗಿರುವುದಿಲ್ಲ' ಎಂದು ಹೇಳಿದರು. ನನಗೀಗ ವಯಸ್ಸು 27. ಹಾಗಾದರೆ ನನಗೆ ಈಗ 2 ವರ್ಷ ಆಯಿತು ಇಂಪಲ್ಸ್ ಕಂಟ್ರೋಲ್ ವೃದ್ಧಿಯಾಗಿ. ಅದಕ್ಕಿಂತ ಮುಂಚೆ ನನಗೆ ಇಂಪಲ್ಸ್ ಕಂಟ್ರೋಲ್ ಇರಲಿಲ್ಲ. ಹಾಗಾದರೆ ವಿಚಾರ ಮಾಡಿ ನನಗೆ ಇಂಪಲ್ಸ್ ಕಂಟ್ರೋಲ್ ಆಗಿ ಕೇವಲ 2 ವರ್ಷಗಳಾದರೆ, 18 ವರ್ಷ 17 ವರ್ಷದ ಹುಡುಗ ಅಥವಾ ಹುಡುಗಿಯ ಬಳಿ ಇಂಪಲ್ಸ್ ಕಂಟ್ರೋಲ್ ಇದೆಯೋ ಅಥವಾ ಇಲ್ಲವೋ ಎಂದು. ಆ ಕಾರಣಕ್ಕಾಗಿಯೇ ಜುವೆನೈಲ್ ಜಸ್ಟಿಸ್‌ನಲ್ಲಿ ವಯಸ್ಸನ್ನು 18 ವರ್ಷಕ್ಕೆ ನಿಗದಿಪಡಿಸಲಾಗಿತ್ತು. ಆ ವಯಸ್ಸನ್ನು 19 ವರ್ಷಕ್ಕೆ ಏರಿಸಬಹುದು ಅಥವಾ 17 ವರ್ಷಕ್ಕೆ ಇಳಿಸಬಹುದು. ಈ ವಯಸ್ಸಿನ ನಿಗದಿಮಾಡಿರುವುದು ಮಕ್ಕಳಿಗೆ ಸ್ವಾತಂತ್ರ್ಯ ಸಿಗಲಿ ಎಂದು.

ನಾನು ಮೊದಲೇ ಹೇಳಿದ ಹಾಗೇ ನಮ್ಮದೇಶದ ಮಕ್ಕಳಿಗೆ ಸ್ವಾತಂತ್ರ್ಯ ಎನ್ನುವುದಿಲ್ಲ. ಕೆಲವು ಮಕ್ಕಳು ಶಾಲೆಗೆ ಹೋಗಲು ಆಗುವುದಿಲ್ಲ, ಕೆಲವರಿಗೆ ತಿನ್ನಲು ಆಹಾರ ಇಲ್ಲ, ಆ ಮೂಲಕವೇ ನಾವು ಮಕ್ಕಳ ಸ್ವಾತಂತ್ರ್ಯವನ್ನು ಕಸಿದುಕೊಳ್ಳುತ್ತಿದ್ದೇವೆ ಹಾಗೂ ಅವರನ್ನು ಜೈಲಿನಲ್ಲಿ ಹಾಕುತ್ತಿದ್ದೇವೆ. ಯಾರ ಸ್ವಾತಂತ್ರ್ಯವನ್ನು ಸಹ ಕಿತ್ತುಕೊಳ್ಳಬಾರದು. ಒಬ್ಬರ ಸ್ವಾತಂತ್ರ್ಯಕ್ಕೋಸ್ಕರ ಬೇರೆಯವರ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವುದು ಸರಿಯಲ್ಲ. ಭೀತಿಯಲ್ಲಿ ನೆರಳಿನಲ್ಲಿರುವ ಸ್ವಾತಂತ್ರ್ಯ ಎಂಥ ಸ್ವಾತಂತ್ರ್ಯ? ಅಪರಾಧಿಯನ್ನು ಜೈಲಿಗೆ ಹಾಕಿಸುವುದು ಅಥವಾ ಶಿಕ್ಷೆ ಕೊಡಿಸುವುದು ಅವನಿಂದ ಆಗುವ ಅಪಾಯದ ಭೀತಿಯಿಂದ ಸ್ವತಂತ್ರರಾಗಲು. ಡಿಸೆಂಬರ್ 16ರ ದೆಹಲಿ ಪ್ರಕರಣದ ನಂತರ ಅಲ್ಲಿ ನಡೆದ ರ್‍ಯಾಲಿಯಲ್ಲಿ 'ಭಯವಿಲ್ಲದ ಸ್ವಾತಂತ್ರ್ಯ ಬೇಕು' ಎಂಬ ಘೋಷಣೆ ಕೂಗಲಾಯಿತು. ಅಂದರೆ ಅವರು ಕೇವಲ ಸ್ವಾತಂತ್ರ್ಯವನ್ನು ಕೇಳಲ್ಲಿಲ್ಲ, ಅವರು ಭಯವಿಲ್ಲದ ಸ್ವಾತಂತ್ರ್ಯವನ್ನು ಕೇಳಿದ್ದರು. Freedom without fear, freedom with fear is nothing and fear without freedom is nothing at all. ನಾವು ಮಕ್ಕಳ ಸ್ವಾತಂತ್ರ್ಯವನ್ನು ಕಿತ್ತುಕೊಂಡು ಸ್ವಾತಂತ್ರ್ಯದ ಬಗ್ಗೆ ಮಾತನಾಡುವುದು ಸ್ವಾತಂತ್ರ್ಯ ಅಲ್ಲ.

ನಾನು ಇನ್ನೊಂದು ವಿಷಯವನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮ್ಮ ಕರ್ನಾಟಕ ಸರ್ಕಾರವು ಉಗ್ರಪ್ಪ ಕಮಿಟಿ ರಿಪೋರ್ಟನ್ನು ಜಾರಿಗೆ ತಂದಿದೆ. ಅದರಲ್ಲಿ ಲೈಂಗಿಕ ದೌರ್ಜನ್ಯವನ್ನು ತಡೆಗಟ್ಟಲು ಯಾವಯಾವ ಕ್ರಮಗಳನ್ನು ಬಳಸಬೇಕೆಂದು ತಿಳಿಸಲಾಗಿದೆ. ಉಗ್ರಪ್ಪ ಕಮಿಟಿಯ ಶಿಫಾರಸ್ಸುಗಳಲ್ಲಿ 'ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯವನ್ನು ಎಸಗುವವರು ಹೊರಗಿನವರಾದ ಬಿಹಾರ, ಗುಜರಾತ್, ಯು.ಪಿ. ಜಾರ್ಖಂಡ್‌ನ ಜನಗಳಾಗಿದ್ದಾರೆ, ಅವರು ಕರ್ನಾಟಕಕ್ಕೆ ಬಂದು ಅತ್ಯಾಚಾರ ಎಸಗಿ ಹೋಗುತ್ತಾರೆ, ಅವರನ್ನು ನಾವು ನಿಷೇಧಿಸಬೇಕು, ಅವರ ಮೇಲೆ ನಿಗಾವಹಿಸಲು ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಬೇಕು' ಎಂಬಂತಹ ವಿಚಿತ್ರವಾದ ಅಂಶಗಳಿವೆ. ಆದರೆ ವಾಸ್ತವದಲ್ಲಿ ಹೆಚ್ಚಿನ ಲೈಂಗಿಕ ದೌರ್ಜನ್ಯಗಳು ನಡೆಯವುದು ಸಂಬಂಧಿಕರಿಂದ ಹಾಗೂ ಪರಿಚಿತರಿಂದ ಅಂದರೆ ಗುರುತಿನವರೇ ಹೆಚ್ಚಾಗಿ ದೌರ್ಜನ್ಯ ಮಾಡುತ್ತಾರೆಯೇ ಹೊರತು ಬೇರೆ ರಾಜ್ಯಗಳಿಂದ ದುಡಿಯಲು ಕರ್ನಾಟಕಕ್ಕೆ ಬಂದ ಜನರಲ್ಲ. ಸ್ವಾತಂತ್ರ್ಯವೇ ಇಲ್ಲದ, ಹಣ ಇಲ್ಲದ ಜನರು ಹೊಟ್ಟೆಪಾಡಿಗಾಗಿ ದುಡಿಯಲು ಕರ್ನಾಟಕಕ್ಕೆ ಬಂದರೆ ಅವರನ್ನು ಅಪರಾಧಿಗಳನ್ನಾಗಿಸಿ ಅವರ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುತ್ತಿದ್ದೇವೆ. ಇಂತಹ ಸಮಯದಲ್ಲಿ ನಾವು ಯೋಚನೆ ಮಾಡಬೇಕಾಗಿರುವುದು ಕೇವಲ ನಮಗೆ ಸಿಗುವ ಅಥವಾ ಒಂದು ಹೆಣ್ಣಿಗೆ ಸಿಗುವ ಸ್ವಾತಂತ್ರ್ಯವಲ್ಲ, ಅದು ಎಲ್ಲ ಮಹಿಳೆಯರಿಗೆ ಸಿಗಬೇಕಾದ ಸ್ವಾತಂತ್ರ್ಯ ಆಗಬೇಕಾಗಿದೆ. ಎಲ್ಲರಿಗೂ ಸ್ವಾತಂತ್ರ್ಯ ಸಿಗಲಿಲ್ಲವೆಂದರೆ ನಮ್ಮದೂ ಸಹ ಸ್ವಾತಂತ್ರ್ಯವಲ್ಲ.

**(ಇಂಗ್ಲಿಷ್ ಭಾಷಣದ ಕನ್ನಡ ಬರಹ ರೂಪ: ರಜಿಯಾ ನದಾಫ್)**

**ಅಬಲೆಯರಲ್ಲ ನಾವು ಅಕ್ಕನ ನಾಡಿನವರು ಸಹಿಸಲಾರೆವು ಅನ್ಯಾಯ ಚಾಂದ್‌ಬೀಬೀ ಬೀಡಿನವರು**



# ಕೌಟುಂಬಿಕ ದೌರ್ಜನ್ಯ: ಸಾಮಾಜಿಕ ಆಯಾಮ

**ಬಿ. ಸಿ. ಮಂಜುಳ**

ಇಂದು ನಾನು ಮಾತಾಡಬೇಕಾಗಿರುವ ವಿಷಯ ಕೌಟುಂಬಿಕ ದೌರ್ಜನ್ಯಕ್ಕೆ ಇರುವ ಸಾಮಾಜಿಕ ಆಯಾಮ. ಕೌಟುಂಬಿಕ ದೌರ್ಜನ್ಯ ಎನ್ನುವ ಪದದ ಅರ್ಥ, ಹಿಂದೆ ನಾವು ಗ್ರಹಿಸಿಕೊಂಡಿದ್ದಕ್ಕಿಂತ, ಇಂದು ತುಂಬಾ ವಿಶಾಲ ಅರ್ಥವನ್ನು ಪಡೆದುಕೊಂಡಿದೆ. ಎಲ್ಲ ದೌರ್ಜನ್ಯಗಳೂ ಕೌಟುಂಬಿಕ ದೌರ್ಜನ್ಯದಡಿಯಲ್ಲಿ ಬಂದಿವೆ. ಈ ಪದರಚನೆಯಲ್ಲಿಯೇ ಇರುವ ಅರ್ಥವನ್ನು ಗಮನಿಸಿದರೆ ಅದರ ವ್ಯಾಪ್ತಿ ನಮಗೆ ಗೊತ್ತಾಗುತ್ತೆ. ಡೊಮೆಸ್ಟಿಕ್ ಸರ್ವಿಸ್ ಅಂತೀವಿ. ನಮ್ಮನ್ನ ಅಂದರೆ ಗಂಡಸರನ್ನ ಸೇರಿಸಿಯೂ ಹೆಣ್ಣುಮಕ್ಕಳನ್ನ ಹೇಗೆ ಕೌಟುಂಬಿಕ ಸಂರಚನೆಯ ಒಳಗಡೆ ಬಂಧಿಸುವ, ಒಗ್ಗಿಸಿಕೊಳ್ಳುವ ಅದು ಸಾಧ್ಯವಾಗದಿದ್ದರೆ ಬಗ್ಗಿಸಿಕೊಳ್ಳುವ ವ್ಯವಸ್ಥೆಯನ್ನು ನಾವು ಮಾಡ್ಕಂಡಿದೀವಿ ಅನ್ನೋದನ್ನ ನಾವು ಯೋಚಿಸಬೇಕು. ನಾವೇ ರೂಪಿಸಿಕೊಂಡಿರುವಂತಹ ತಂತ್ರದ ಒಳಗಡೆ ಸ್ವಾತಂತ್ರ್ಯದ ಹೆಸರಿನಲ್ಲಿ ಬಂಧಿಗಳಾಗಿದ್ದೀವಿ. ನಾವೇ ರೂಪಿಸಿದ ಈ ತಂತ್ರಗಳಿಂದ ಹೊರಬಂದು, ನಮ್ಮ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗಿರುವಂತಹ ತಂತ್ರಗಳನ್ನು ಪುರುಷರು ಮತ್ತು ಸ್ತ್ರೀಯರು ಇಬ್ಬರೂ ಕೂಡಿ ನಿರ್ಧರಿಸಿ, ಅನುಭವದ ನೆಲೆಯಲ್ಲಿ ಬದುಕನ್ನು ಕಟ್ಟಿಕೊಳ್ಳುವ ವ್ಯವಸ್ಥೆಯನ್ನು ಮಾಡಿಕೊಳ್ಳುವ ಸಲುವಾಗಿ ನಾವು ಈ ರೀತಿಯ ಸಮಾರಂಭಗಳನ್ನು, ವಿಚಾರ ಸಂಕಿರಣಗಳನ್ನು ಆಯೋಜಿಸುತ್ತಿದ್ದೇವೆ. ದೌರ್ಜನ್ಯದೊಳಗೆ ಆಸಿಡ್ ದಾಳಿಯಿಂದ ಹಿಡಿದು ಗಂಡ ಹೊಡೆಯೋದು, ಅಪ್ಪ ಅಮ್ಮ ಬೈಯ್ಯೋದು, ಅತ್ಯಾಚಾರ, ಕಿರುಕುಳ, ಹೊಡೆಯೋದು, ಹೀಯಾಳಿಸುವುದು ಎಲ್ಲವೂ ಬರುತ್ತದೆ. ಕೌಟುಂಬಿಕ ದೌರ್ಜನ್ಯ ಕಾಯ್ದೆಯು ಎಲ್ಲಾ ದೈಹಿಕ, ಮಾನಸಿಕ, ಆರ್ಥಿಕ, ಲೈಂಗಿಕ, ಶಾಬ್ದಿಕ ಹಿಂಸೆಗಳನ್ನು

ಒಳಗೊಂಡಿದೆ. ಆದರೆ ನಾನು ಈ ಸಂದರ್ಭದಲ್ಲಿ ಕುಟುಂಬದ ಒಳಗೆ ಅಂದರೆ ಕೌಟುಂಬಿಕ ರಚನೆಯೊಳಗೆ, ಸಂಸಾರದ ಒಳಗೆ ನಡೆಯುವ ಕೆಲವು ದೌರ್ಜನ್ಯಗಳನ್ನು ಮಾತ್ರ ಹೆಸರಿಸುವ ಪ್ರಯತ್ನ ಮಾಡ್ತೇನೆ.

ಮಕ್ಕಳನ್ನು ಸಾಕುವಾಗಲೇ ಅದು ಹೆಣ್ಣೋ, ಗಂಡೋ ಎಂಬ ಭಿನ್ನತೆ ಮಾಡುವುದೇ ಮೊದಲನೇ ದೌರ್ಜನ್ಯ. ಹುಟ್ಟುವ ಮೊದಲೇ ಮಗು ಗಂಡೋ, ಹೆಣ್ಣೋ ಅಂತ ತಂತ್ರಜ್ಞಾನದ ಮೂಲಕ ತಿಳಿದುಕೊಳ್ಳುವುದು ಸಾಧ್ಯವಾದಾಗ ಭ್ರೂಣವಿರುವಾಗಲೇ ಕೊಲ್ಲುವುದೂ ಕೌಟುಂಬಿಕ ದೌರ್ಜನ್ಯ. ಹುಟ್ಟಿನಿಂದ ಸಾವಿನವರೆಗೆ ಒಂದಲ್ಲ ಒಂದು ರೀತಿಯಲ್ಲಿ ಲಿಂಗತ್ವದ ಆಧಾರದ ಮೇಲೆ ಏನೇನು ದೌರ್ಜನ್ಯಗಳು ನಡೆಯುತ್ತಿವೆಯೋ ಅವೆಲ್ಲವೂ ಕೌಟುಂಬಿಕ ದೌರ್ಜನ್ಯದೊಳಗೆ ಬರುತ್ತವೆ. ಬಲವಂತದ ಮದುವೆ, ಗರ್ಭಧಾರಣೆ, ಗರ್ಭಪಾತ ಎಲ್ಲವೂ ಅದರಡಿ ಬರುತ್ತವೆ.

ವ್ಯವಸ್ಥೆಯೊಳಗೆ ನಾಗರಿಕರೆನಿಸಿಕೊಂಡು ನಗರ/ಗ್ರಾಮದಲ್ಲಿ ವಾಸ ಮಾಡು ವಂತಹವರು, ಅತ್ಯಂತ ಹಿಂದುಳಿದ ಜಾತಿಯವರು ಊರಿನಾಚೆಗೆ ಬದುಕುತ್ತಿರುವ ಬುಡಕಟ್ಟುಗಳಲ್ಲಿಯೂ ಇವೆಲ್ಲವನ್ನು ಕಾಣಬಹುದು. ಹೆಣ್ಣಿನಶೀಲ, ಚಾರಿತ್ರ್ಯದ ಪರಿಕಲ್ಪನೆಗಳು ಅವರಲ್ಲಿವೆ. ಮಹಿಳೆಯರು ಅನುಭವಿಸುವಂತಹ ಹಿಂಸೆಗಳ ಕಡೆಗೆ ನಾವಿನ್ನೂ ನೋಟ ಬೀರಿದ್ದೇವಷ್ಟೆ, ಆ ಬಗ್ಗೆ ಇನ್ನೂ ಒಳಹೊಕ್ಕು ಕೆಲಸ ಮಾಡಬೇಕಾಗಿದೆ. ಶೀಲ, ಚಾರಿತ್ರ್ಯದ ಹೆಸರಿನಲ್ಲಿ ನಡೆಸುವ ಎರಡು ಬೆರಳುಗಳ ಪರೀಕ್ಷೆ ಅಥವಾ ಕನ್ಯಾಪೊರೆ ಹರಿದಿದೆಯೇ ಎಂಬ ಪರೀಕ್ಷೆಗಳನ್ನೇ ನೋಡಬಹುದು. ಅಲೆಮಾರಿ ಸಮುದಾಯವಾದ ಹಕ್ಕಿ–ಪಿಕ್ಕಿಗಳಲ್ಲಿ ಕೋಳಿ ಮೊಟ್ಟೆಯನ್ನು ಯೋನಿಯಲ್ಲಿ ತೂರಿಸುವುದರ ಮೂಲಕ ಕಂಡುಹಿಡಿಯುತ್ತಾರಂತೆ. ಓತಿಕೇತವನ್ನು ದಾರಕ್ಕೆ ಕಟ್ಟಿ ಒಳ ಉಡುಪುಗಳಲ್ಲಿ ಸೇರಿಸುವಂತದೂ ಇದೆ. ಇಂತಹ ಹಿಂಸೆಗಳನ್ನು ಯಾವ ಕಾನೂನಿನಡಿಯಲ್ಲಿ ತರುವುದು? ಅಂದರೆ ಮನುಷ್ಯನ ಮನಸ್ಸು ಎಷ್ಟು ವಿಕೃತ ವಾಗಿದೆಯೋ ಅಷ್ಟು ರೀತಿಯ ನೋವುಗಳನ್ನು ಬೇರೆಯವರಿಗೆ ಕೊಡುವುದನ್ನು ಕಾಣಬಹುದು. ಅಂತಹ ಮನೋಭಾವವನ್ನು ಬದಲಾಯಿಸುವ ಬಗ್ಗೆ ನಾವು ಆಲೋಚಿಸಬೇಕು. ಬದಲಾವಣೆಯನ್ನು ಹೇಗೆ ತರಬೇಕು, ಇದರಿಂದಾಗುತ್ತಿರುವ ಸಾಮಾಜಿಕ ಪರಿಣಾಮಗಳೇನು, ನಮ್ಮ ಬದುಕು ಯಾವ ದಿಕ್ಕಿನಲ್ಲಿ ಹೋಗ ಬೇಕಾಗಿತ್ತು, ಯಾವ ದಿಕ್ಕಿನಲ್ಲಿ ಹೋಗುತ್ತಿದೆ ಎಂಬುದನ್ನು ಯೋಚಿಸುವಾಗ ಒಳಗಿನಿಂದ ನಡುಕ ಹುಟ್ಟುತ್ತದೆ. ಸಂಘಟಿತರಾಗಿ ಮಾಡುವ ಹೋರಾಟದ ಮೂಲಕ ಬದಲಾವಣೆಯನ್ನು ತರುವ ಪ್ರಯತ್ನ ಮಾಡುತ್ತಿದ್ದೇವೆ. ಬಾವುಟ ಹಿಡಿದು ಹೋರಾಡು ವವರ ಜೊತೆ ಹೋಗಿದ್ದರೆಂಬ ಕಾರಣಕ್ಕೆ ಹಿಂಸೆ ಮಾಡುವುದು ಸಹ ದೌರ್ಜನ್ಯವೇ.

ಮಹಿಳೆಯರಿಗಾಗುವ ದೌರ್ಜನ್ಯಗಳ ವಿಧಗಳೇನನ್ನು ಗುರುತಿಸಿದ್ದೇವೆಯೋ ಅದರಾಚೆಗೂ ಇನ್ನೂ ಸಾವಿರಾರು ವಿಧಗಳಿವೆ ಎಂಬುದನ್ನು ಹೇಳೋಕೆ ಇಷ್ಟಪಡ್ತೀನಿ. ವರದಿಯಾಗಿರುವ ದೌರ್ಜನ್ಯದ ಸಂಖ್ಯೆ ಬಹಳ ಕಡಿಮೆ. ಉಳಿದವು ಬೆಳಕಿಗೆ ಬಾರದೆ ಕಣ್ಮರೆಯಾಗುತ್ತವೆ. ಇದರಿಂದಾಗುವ ಪರಿಣಾಮಗಳ ಬಗ್ಗೆ ಯೋಚಿಸಬೇಕು.



ಸಮಾಜಕ್ಕಾಗುತ್ತಿರುವ ನಷ್ಟವೇನು? ವ್ಯಕ್ತಿಗತವಾಗಿ ಆಗುತ್ತಿರುವ ನಷ್ಟವೇನು? ಕುಟುಂಬಕ್ಕಾಗುತ್ತಿರುವ ನಷ್ಟವೇನು? ಎಂದು ಯೋಚಿಸುವಾಗ ನಾವು ಅನುಭವಿಸ ಬೇಕಾಗಿದ್ದ ಸುಖ, ನೆಮ್ಮದಿ, ಸಾಧಿಸಬೇಕಾಗಿದ್ದ ಪ್ರಗತಿಯನ್ನು ಸಾಧಿಸಲಾಗುತ್ತಿಲ್ಲ ವೆಂಬುದು ಅರಿವಾಗುತ್ತದೆ. ನಾವು ನೇಯ್ದಿರುವ ಬಟ್ಟೆ ನೋವಿನಿಂದ ಕೂಡಿರು ವಂತದ್ದು, ಅದರಿಂದ ಮಾನ ಮುಚ್ಚಿಕೊಳ್ಳುವ ಪ್ರಯತ್ನ ನಾವು ಮಾಡ್ತಾ ಇದ್ದೀವಿ. ಇದನ್ನ ಬಿಟ್ಟು ಯೋಚನೆ ಮಾಡಿದಾಗ ನಾವೆಷ್ಟು ಹಿಂದುಳಿದಿದ್ದೀವಿ, ನಮ್ಮದೆಷ್ಟು ಬಾರ್ಬರಿಕ್ ಕಲ್ಚರ್ ಅಂತ ತಿಳಿಯುತ್ತದೆ. ಎಲ್ಲವೂ ಮೇಲ್ನೋಟಕ್ಕೆ ಮಾತ್ರ ಬದಲಾಗಿದೆ. ಮಾನಸಿಕವಾಗಿ ನಮ್ಮಲ್ಲಿನ್ನೂ ಪರಿವರ್ತನೆ ಆಗಿಲ್ಲ.

ತಾಯ್ತನ ಅನ್ನುವುದು ಪ್ರೀತಿಯ ಹೆಸರಲ್ಲಿರಲ್ಲಿರಬೇಕಾಗಿತ್ತು, ಈಗ ಬಲವಂತ ವಾಗುತ್ತಿದೆ, ತಾಯ್ತನವನ್ನು ವ್ಯಾಪಾರೀಕರಣಗೊಳಿಸುವುದರ ಮೂಲಕ ಹೆಣ್ಣಿನ ಮೇಲೆ ತಾಯ್ತನವನ್ನು ಹೇರಲಾಗುತ್ತಿದೆ. ಅದೂ ದೌರ್ಜನ್ಯವೇ. ತಾಯ್ತನ ಅನ್ನೋದು ಪ್ರೀತಿಯ ಹೆಸರಲ್ಲಿರಬೇಕಾಗಿತ್ತು. ಈಗ ಬಲವಂತದ ಹೆಸರಿನಲ್ಲಿರುವುದರಿಂದ ನಿಜವಾದ ಪ್ರೀತಿಯನ್ನು ಅನುಭವಿಸೋದಿಕ್ಕೆ ಆಗ್ತಿಲ್ಲ. ಸಾಮಾಜಿಕ ಅಪರಾಧಗಳು, ಯುದ್ಧಗಳೆಲ್ಲವೂ ಬಂದಿರುವುದು ಪ್ರೀತಿಯ ನಂಬಿಕೆಯನ್ನು ವಿಶ್ವಾಸದ ಹಿನ್ನೆಲೆಯಲ್ಲಿ ಕಟ್ಟಿಕೊಳ್ಳದ ವಿಕೃತ ಮನಸ್ಸುಗಳ ಹಿನ್ನೆಲೆಯಿಂದ. ಅವುಗಳ ಪರಿಣಾಮಕ್ಕೆಹೆಚ್ಚು ಒಳಗಾಗುವವರು ಮಹಿಳೆಯರು. ಇದರಿಂದಾಗಿ ಸಮಾಜ ಶಾಂತಿ, ನೆಮ್ಮದಿಯನ್ನು ಕಳೆದುಕೊಂಡಿದೆ. ಅಪರಾಧಗಳ ಸಂಖ್ಯೆ ಹೆಚ್ಚುತ್ತಿದೆ. ನಮ್ಮ ಪ್ರಭುತ್ವವು ಕೊಡುವ ಭಾಗ್ಯೋದಯಗಳಿಂದ ಸಮಾಜದ ಭಾಗ್ಯೋದಯವಾಗದ ಸ್ಥಿತಿಯನ್ನು ತಲುಪುತ್ತೆ. ಒಂದು ತಪ್ಪಿನ ಪರಿಣಾಮವನ್ನು ತಡೆಯಲು ಕೊಟ್ಯಾಂತರ ರೂಪಾಯಿ ಖರ್ಚು ಮಾಡಿದರೂ ಪ್ರಯೋಜನವಾಗುತ್ತಿಲ್ಲ ಎನ್ನುವಾಗ, ಆ ತಪ್ಪು ನಡೆಯದೆ ಇದ್ದರೆ ಕೊಟ್ಯಾಂತರ ರೂಪಾಯಿಯನ್ನು ನಾವು ಅಭಿವೃದ್ಧಿಗೆ ಬಳಸಿಕೊಳ್ಳಲು ಸಾಧ್ಯವಾಗುತ್ತಿತ್ತು ಎಂಬುದನ್ನು ನಾವು ಯೋಚಿಸಬೇಕು. ಸಾಮಾಜಿಕ ಬಿಕ್ಕಟ್ಟುಗಳು ಹೆಚ್ಚಾಗುತ್ತವೆ, ಮಾನಸಿಕ ರೋಗಗಳು ಹೆಚ್ಚಾಗುತ್ತವೆ, ಶಾಂತಿ ಹಾಳಾಗುತ್ತದೆ. ಸಂಸಾರದ ಶಾಂತಿ ಹಾಳಾಗುವುದೆಂದರೆ ಇಡೀ ವ್ಯವಸ್ಥೆಯಲ್ಲಿ ಅಶಾಂತಿ ಉಂಟಾಗುತ್ತದೆ ಎಂದು ಅರ್ಥಮಾಡಿಕೊಳ್ಳಬೇಕು. ರಾಜಕೀಯವನ್ನು ಕುರಿತು ಯೋಚಿಸುವಾಗ ಅಲ್ಲಿ ಮಹಿಳೆಯರಿಗೆ ಸೂಕ್ತವಾದ ವಾತಾವರಣ ಇದೆಯಾ ಎಂದು ಯೋಚನೆ ಮಾಡಬೇಕಾದ ಸ್ಥಿತಿಯನ್ನು ನಾವು ತಲುಪಿದ್ದೇವೆ. ಜನಸಂಖ್ಯೆಯ ಅರ್ಧದಷ್ಟಿರುವ ಹೆಣ್ಣುಮಕ್ಕಳ ಬುದ್ಧಿಮತ್ತೆಯನ್ನು, ಕಾರ್ಯಕ್ಷಮತೆಯನ್ನು, ದಕ್ಷತೆಯನ್ನು ಸಾಮಾಜಿಕ ಪ್ರಗತಿಗೆ ಬಳಸಿಕೊಳ್ಳುವಲ್ಲಿ ನಾವು ವಿಫಲರಾಗ್ತಾ ಇದ್ದೀವಿ. ಇತ್ತೀಚಿನ ದಿನಗಳಲ್ಲಿ ಅಂದರೆ ಹತ್ತು ವರ್ಷಗಳಲ್ಲಿ ಹೆಚ್ಚಿರುವ ಹಿಂಸೆಗಳನ್ನು ಗಮನಿಸಿದಾಗ ತಂತ್ರಜ್ಞಾನ, ಆಧುನಿಕತೆ ಹೆಚ್ಚಿದಂತೆ ಹಿಂಸೆಯ ಸ್ವರೂಪಗಳು ಆಧುನಿಕ ಗೊಳ್ಳುತ್ತಿವೆ ಎಂಬುದರ ಅರಿವಾಗುತ್ತದೆ. ಒಂದುಕಡೆ ಆಸಿಡ್ ದಾಳಿ ಹಳೆಯದಾಗಿ,

ಯುದ್ಧ ನಮಗೆ ಬೇಡ ಶಾಂತಿ ನಮಗೆ ಬೇಕು

ವಿದ್ಯುನ್ಮಾನ ಮಾಧ್ಯಮಗಳನ್ನು ಬಳಸಿಕೊಂಡು ಕೊಡುವ ತೊಂದರೆಗಳು ಹೆಚ್ಚುತ್ತಿದ್ದರೆ, ಮತ್ತೊಂದು ಕಡೆ ಗೊಲ್ಲ ಸಮುದಾಯಗಳಲ್ಲಿ ಮುಟ್ಟಾದ ಹೆಣ್ಣು ಮಗಳನ್ನು ಮೂರು ದಿನಗಳ ಕಾಲ ಮನೆಯಿಂದ ಹೊರಹಾಕುವ ಸಂಪ್ರದಾಯವಿದೆ. ಇಂತಹದ್ದರಿಂದ ತಪ್ಪಿಸಿಕೊಳ್ಳಲು ಆ ಸಮುದಾಯದ ಮಹಿಳೆ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಗರ್ಭಕೋಶವನ್ನು ತೆಗೆಸಿಕೊಳ್ಳುವ ಪ್ರಯತ್ನಗಳು ನಡೆಯುತ್ತಿವೆ. ಇದರಿಂದ ಆ ಹೆಣ್ಣು ಮಕ್ಕಳ ಮೇಲೆ ಆಗುವಂತಹ ಆರೋಗ್ಯದ ಪರಿಣಾಮಗಳು, ತತ್ಪರಿಣಾಮವಾಗಿ ಸಮಾಜದ ಮೇಲಾಗುವಂತಹ ದುಷ್ಪರಿಣಾಮ ಗಳನ್ನು ಯೋಚನೆ ಮಾಡಬೇಕಾಗುತ್ತದೆ.

ಆಸ್ತಿ ಹಕ್ಕನ್ನು ಪಡೆದುಕೊಂಡಿದ್ದೇವೆ, ಆದರೆ ಆಸ್ತಿಗಾಗಿ ಮೊನ್ನೆ ಒಬ್ಬನೇ ವ್ಯಕ್ತಿ ಒಂದೆ ಕುಟುಂಬದ 14 ಜನರನ್ನು ಕೊಂದಿರುವ ಪ್ರಕರಣ ಜರುಗಿದೆ. ಆತ್ಮಹತ್ಯೆ ಮಾಡಿಕೊಂಡಿರುವ ಘಟನೆಗಳು ಇವೆ. ಒಂದು ಹೆಣ್ಣಿಗೆ ಆಸ್ತಿಯಲ್ಲಿ ಪಾಲು ಕೊಡೋಕೆ ಯೋಚನೆ ಮಾಡುವಂತ ಸ್ಥಿತಿಯನ್ನು ನಾವು ತಲುಪಿದೀವಿ. ಪ್ರೇಮವಿವಾಹವಾಗಿ 8 ವರ್ಷಗಳ ನಂತರ ತವರನ್ನು ನೋಡಬೇಕು ಅಂತ ಆಸೆಯಿಂದ ಮನೆಗೆ ಬಂದ ಹೆಣ್ಣು ಮಗಳನ್ನ ದಾರಿಯಲ್ಲಿ ನಿಲ್ಲಿಸಿ ಸೀಮೆಎಣ್ಣೆ ಸುರಿದು ಸುಡಲಾಯಿತು. ವ್ಯವಸ್ಥೆ ಎಷ್ಟು ಬದಲಾಗಿದೆ? ಅಥವಾ ನಾವು ಹಿಂದೆ ಹೋಗಿದ್ದೇವಾ ಎಂಬುದನ್ನು ಯೋಚಿಸಬೇಕು. ಇದೆಲ್ಲದರ ದುಷ್ಪರಿಣಾಮವನ್ನು ಈಗಾಗಲೇ ನಾವು ಅನುಭವಿಸುತ್ತಿದ್ದೀವಿ. ಇವತ್ತು ಸಂಕೇತವಾಗಿ ಆಚರಿಸುತ್ತಿರುವ ಆಚರಣೆಯ ನಮ್ಮ ನೆಲದ ಮಹಿಳೆಯರು ನಡೆಸಿರುವ ಹೋರಾಟದ ಇತಿಹಾಸವಿದೆ. ಜನಪದ ಧ್ವನಿಗಳ ಮಹತ್ವ ಎಂಥದ್ದೆಂದರೆ ನಾವು ನೀವು ಹೇಳೋಕಾಗದಿರೋ ಸಂಗತಿಗಳನ್ನು ಎರಡು ಮೂರು ಹಾಡುಗಳಲ್ಲಿ ಅವರು ಹೇಳಿ ಮುಗಿಸಿದ್ದಾರೆ. 'ಹೆಣ್ಣಿನ ರೋಷಕ್ಕೆ ಬನ್ನಿಯ ಮರ ಸುಟ್ಟೋ, ಸನ್ಯಾಸಿಯ ಮಠ ಸುಟ್ಟೋ, ವೇದಪಂಚಾಂಗ ಹೊತ್ತಿ ಉರಿದಾವೋ' ಎಂಬಂತಹ ಹಾಡುಗಳೇ ಸಾಕ್ಷಿ. ಯಾವುದನ್ನು ಮಾತಾಡೋಕೆ ಹೆದರುತ್ತೇವೊ, ಅಂಥವನ್ನು ಧೈರ್ಯದಿಂದ ಹೇಳುವ ಶಕ್ತಿ, ಚೈತನ್ಯ ಈ ನೆಲದಲ್ಲಿತ್ತು. ಅಂತಹ ಶಕ್ತಿ, ಚೈತನ್ಯವನ್ನು ನಾವು ಮತ್ತೊಮ್ಮೆ ನಮ್ಮಲ್ಲಿ ಆವಾಹಿಸಿಕೊಂಡು, ಅಥವಾ ಸಮಾಜದ ಹಿನ್ನೆಲೆಗೆ ಕಾರಣ ಆಗಿರುವ ದೌರ್ಜನ್ಯ, ಅನ್ಯಾಯಗಳ ವಿರುದ್ಧ ಸಂಘಟಿತರಾಗಿ ಹೋರಾಡೋಣ, ಯಾರೋ ಹಾಳುಮಾಡಿದ ಅಂದ ಮಾತ್ರಕ್ಕೆ ನಾವೇನು ಹಾಳಾಗಿ ಹೋಗಲ್ಲ ಎನ್ನುವ ಶಕ್ತಿಯನ್ನು ನಮ್ಮಲ್ಲಿ ತುಂಬಿರುವಂತಹ ಹೆಣ್ಣುಮಕ್ಕಳು ಇದ್ದಾರೆ. ಉದಾಹರಣೆ 'ಬಾಳೆಯ ಕಡಿದರೆ ಬಾಳೆತೋಟ ಏನು ಹಾಳಾಗುತ್ತಾ ಹಾಗೆ ಯಾರೋ ಗಂಡ ಬಿಟ್ಟ ಅಂದ್ರೆ ಹೆಣ್ಣುಮಕ್ಕಳ ಜೀವನಾ ಏನು ಹಾಳಾಗಲ್ಲ', 'ಬಾಳೆ ಹಣ್ಣೇನು ಕೊಳಿಯಾಕ' ಎಂದು ತಿರುಗಿಸಿ ಪ್ರಶ್ನೆ ಕೇಳುತ್ತಾರೆ. ಇಂತಹ ಹೆಣ್ಣು ದನಿಗಳು ನಮ್ಮಲ್ಲಿ ಇದ್ದವು, ಈಗಲೂ ಇದ್ದಾವೆ, ಸಂಘಟನೆಯಿಂದ ಅದಕ್ಕೆ ಮತ್ತಷ್ಟು ಸಾಮರ್ಥ್ಯ ಬಂದಿದೆ. ಈ ಶಕ್ತಿಯಜೊತೆಗೆ ಬರಿ ಹೆಣ್ಣು ಮಕ್ಕಳೇ ಅಲ್ಲ ಪುರುಷ ಮತ್ತು ಹೆಣ್ಣು ಮಕ್ಕಳು ಒಟ್ಟಾಗಿ ದುಡಿಯುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ನಾವು ಆದಷ್ಟು ಬೇಗ ಈ ದೇಶದ ಪ್ರಗತಿಯನ್ನು ತನ್ಮೂಲಕ ವಿಶ್ವಗ್ರಾಮ ಪರಿಕಲ್ಪನೆಯ ತನಕ ಹೋಗ್ತಾ ಹೋಗ್ತಾ ಸೈನ್ಯಕ್ಕೆ ಮಹತ್ವವನ್ನು ಕೊಡಬಾರ್ದು ಅಂತ ಹೇಳ್ತಾಯಿದ್ದೀವಿ. ದೇಶದರಕ್ಷಣೆ ಬೇರೆ, ಸೈನ್ಯದರಕ್ಷಣೆ ಬೇರೆ. ಆ ನೆಲೆಗಳನ್ನ ನಾವು ನಿರಾಕರಿಸುತ್ತಾ ಎಲ್ಲೆಲ್ಲಿ, ಹೇಗೇಗೆ ಸಾಧ್ಯವೋ ಹಾಗೆ ಅಂಬೇಡ್ಕರ್ ಹೇಳಿದಂತೆ ಸಂಘಟಿತರಾಗೋಣ, ನ್ಯಾಯಕ್ಕಾಗಿ ಹೋರಾಡೋಣ ಈ ನೆಲೆಯಲ್ಲಿ ಯಾರಿಗೂ ಎಲ್ಲಿಯೂ ನಾವು ಹೆದರಬೇಕಾಗಿಲ್ಲ ಅಂತ ಹೇಳ್ತಾ ನನ್ನ ಮಾತನ್ನ ಮುಗಿಸ್ತೀನಿ.

**ಮುಗಿದು ಹೋಯಿತು ನಿಮ್ಮ ಅಡಿಯಾಳಾಗುವ ಕಾಲ**
**ಬಂದೆ ಬಂದಿದೆ ನಮ್ಮ ಹಕ್ಕೊತ್ತಾಯದ ಕಾಲ**

# ಮಹಿಳೆ ಮತ್ತು ರಾಜಕೀಯ ಪ್ರಾತಿನಿಧ್ಯ

**ಡಾ. ಎಚ್. ಎಸ್. ಅನುಪಮಾ**

ಈ ವರ್ಷದ ಮಹಿಳಾ ದಿನಾಚರಣೆಯ ದಿನ ಸಂಸತ್ತಿನಲ್ಲಿ ಮಹಿಳಾ ಸಂಸದರೇ ಮಾತಾಡಲಿ ಎಂಬ ಸೂಚನೆಯೊಂದನ್ನು ಪ್ರಧಾನಿ ಮುಂದಿಟರು. ಅದಕ್ಕೆ ಭಾರೀ ಪ್ರಚಾರ, ಬೆಂಬಲ ಎಲ್ಲ ವ್ಯಕ್ತವಾಯಿತು. ಪ್ರಧಾನಿಯನ್ನು ಮಹಿಳಾಪರ ನಾಯಕ ಎಂದು ಕೊಂಡಾಡಲಾಯಿತು. ಇದರಲ್ಲೆ ಭಾರತದ ಇವತ್ತಿನ ರಾಜಕಾರಣದಲ್ಲಿ ಮಹಿಳೆಯರ ಸ್ಥಿತಿಗತಿ, ಸಂಸತ್ತು ಹಾಗೂ ಮಹಿಳಾ ಪ್ರಾತಿನಿಧ್ಯದ ಮಹತ್ವ ಏನೆನ್ನುವುದನ್ನು ಅರಿಯಬಹುದು.

ಸ್ವತಂತ್ರ ಬಂದು ಏಳು ದಶಕ ಕಳೆದ ರಾಷ್ಟ್ರವೊಂದು ಮಹಿಳೆಯರಿಗೆ ಮಾತನಾಡುವ ಅವಕಾಶ ನೀಡಲು ವಿಶೇಷವಾಗಿ ಒಂದು ದಿನವನ್ನು ಆಯ್ದು ಕೊಳ್ಳುವಂತೆ ಏಕಾಯಿತು? ಈ ದೇಶದ 50% ಜನಸಂಖ್ಯೆಯಷ್ಟಿರುವ ಮಹಿಳೆಯರು ಒಂದು ದಿನದ ಅವಕಾಶಕ್ಕೆ ತೃಪ್ತಿ ಹೊಂದುವಂತಹ ದುರಂತ ಏಕೆ ಸೃಷ್ಟಿಯಾಯಿತು? ಯಾಕಿನ್ನೂ ಮಹಿಳೆ ಇಂಥ ಸಾಂಕೇತಿಕತೆಗೆ ತೃಪ್ತಿ ಹೊಂದುತ್ತಿದ್ದಾಳೆ? ಈ ಪ್ರಶ್ನೆಗಳೊಂದಿಗೆ ಇವತ್ತಿನ ಪಕ್ಷ, ಚುನಾವಣಾ ರಾಜಕಾರಣ ಹಾಗೂ ಸಂಸತ್ತಿನತ್ತ ಒಮ್ಮೆ ಕಣ್ಣು ಹಾಯಿಸಬಹುದು.

ಮಹಿಳೆಯರ ರಾಜಕೀಯ ಪ್ರಾತಿನಿಧ್ಯದ ವಸ್ತುಸ್ಥಿತಿ ತಿಳಿಯಬೇಕಾದರೆ ಕೆಲ ಅಂಕಿಅಂಶಗಳತ್ತ ಗಮನ ಹರಿಸಬೇಕು.

ನಾವೀಗ 33% ಮಹಿಳಾ ಮೀಸಲಾತಿಯ ಮಾತನಾಡುತ್ತಿದ್ದೇವೆ. ಅದರಂತೆ ಲೋಕಸಭೆಯ 544 ಸ್ಥಾನಗಳಲ್ಲಿ 181 ಮಹಿಳೆಯರಿರಬೇಕು ಹಾಗೂ 28 ರಾಜ್ಯಗಳ 4109 ವಿಧಾನಸಭಾ ಪ್ರತಿನಿಧಿಗಳಲ್ಲಿ 1370 ಮಹಿಳೆಯರಿರಬೇಕು. ಆದರೆ 2014ರ ಚುನಾವಣೆ ನಂತರ 16ನೇ ಲೋಕಸಭೆಯಲ್ಲಿ 544 ಸಂಸದರಲ್ಲಿ ಮಹಿಳಾ ಪ್ರತಿನಿಧಿಗಳು 62 ಜನ ಇದ್ದಾರೆ. ಎಂದರೆ 12.15%. ರಾಜ್ಯ ವಿಧಾನಸಭೆಗಳ ಸರಾಸರಿ



ಇನ್ನೂ ಕಡಿಮೆ, 9% ಇದೆ. ಸಂಸತ್ತಿನ ಮಹಿಳಾ ಪ್ರತಿನಿಧಿಗಳಲ್ಲಿ ಬಿಜೆಪಿಯ 30 ಜನ ಸಂಸದೆಯರನ್ನು ಬಿಟ್ಟರೆ ಮತ್ತಾವ ಪಕ್ಷದಿಂದಲೂ ಮಹಿಳಾ ಪ್ರತಿನಿಧಿಗಳ ಸಂಖ್ಯೆ ಎರಡಂಕಿ ದಾಟಿಲ್ಲ. ಎಐಎಡಿಎಂಕೆ ಮತ್ತು ಶಿವಸೇನಾ ತಲಾ ನಾಲ್ಕು, ಕಾಂಗ್ರೆಸ್ 3, ಬಿಜೆಡಿ, ವೈಆರೆಸ್ ಕಾಂಗ್ರೆಸ್ ತಲಾ 2 ಬಿಟ್ಟರೆ ಉಳಿದ ಪಕ್ಷಗಳ ಸದಸ್ಯ ಬಲ ಒಂದಕ್ಕೆ ಸೀಮಿತಗೊಂಡಿದೆ. ಗೆದ್ದ 30 ಜನ ಬಿಜೆಪಿ ಮಹಿಳೆಯರಲ್ಲಿ ತಮ್ಮ ನಾಯಕನ ಜಯದ ಅಲೆಯಲ್ಲಿ ತೇಲಿ ಬಂದವರೇ ಹೆಚ್ಚು. ಅಂಥವರಾಗಲೀ ಅಥವಾ ಎಂಟ್ಹತ್ತು ಪಕ್ಷಗಳಲ್ಲಿ ಹಂಚಿಹೋದ ಉಳಿದ ಮಹಿಳೆಯರಾಗಲೀ ಒಗ್ಗಟ್ಟಿನಿಂದ ಮಹಿಳಾಪರ ದನಿಯೆತ್ತುವುದು ದೂರದ ಮಾತು. ಅದಕ್ಕೆಂದೇ ಮಹಿಳಾ ದಿನದಂದು ಕೇವಲ ಮಹಿಳಾ ಎಂಪಿಗಳಷ್ಟೇ ಮಾತಾಡಲಿ ಎಂದು ಪ್ರಧಾನಿ ಹೇಳಿರಬಹುದು.

ಇದು ಇವತ್ತಿನ ಮಾತಷ್ಟೇ ಅಲ್ಲ, ಎಂದಿನಿಂದ ಮಹಿಳಾ ಪ್ರಾತಿನಿಧ್ಯ ಕಡಿಮೆಯೇ ಇರುವುದು.

1951ರ ಚುನಾವಣೆ ಬಳಿಕ ಲೋಕಸಭೆಯಲ್ಲಿ 22 ಸಂಸದೆಯರು ಎಂದರೆ 4.5% ಮಹಿಳಾ ಪ್ರತಿನಿಧಿಗಳಿದ್ದರು. ನಂತರದ ವರ್ಷಗಳಲ್ಲಿ ಅದು ನಿಧಾನ ಏರಿಕೆ ಕಂಡಿದೆ. ಪ್ರಾತಿನಿಧ್ಯ ಎರಡಂಕಿ ತಲುಪಲು 2009ನೇ ಇಸವಿ ಬರಬೇಕಾಯಿತು. ಸಂಸತ್ತಿನಲ್ಲಿ ಮಹಿಳಾ ಪ್ರಾತಿನಿಧ್ಯವನ್ನು ಕೆಳಕಂಡ ಅಂಕಿಸಂಖ್ಯೆಗಳಲ್ಲಿ ಪರಿಶೀಲಿಸಬಹುದಾಗಿದೆ:

1957 – 4.45% (22 ಸಂಸದೆಯರು),
1962 – 6.28% (31)
1967 – 5.58% (29)
1971 – 5.41% (28)
1977 – 3.51% (19)
1980 – 5.29% (28)
1984 – 7.95% (43)
1989 – 5.48% (29)
1991 – 7.3% (39)
1996 – 7.37% (40)
1998 – 7.92% (43)
1999 – 9.02% (49)
2004 – 8.29% (45)
2009 – 10.87% (59)
2014 – 12.15% (66)

ಗಮನಿಸಬೇಕಾದ ಮತ್ತೊಂದು ಸಂಗತಿಯೆಂದರೆ ಅಂದೂ ಇಂದೂ ಯಾವ ರಾಷ್ಟ್ರೀಯ ಪಕ್ಷದಲ್ಲೂ 33% ಸ್ಥಾನಕ್ಕೆ ಸ್ಪರ್ಧಿಸಬಲ್ಲ ಮಹಿಳಾ ಅಭ್ಯರ್ಥಿಗಳೇ ಇಲ್ಲ!

**ಮಹಿಳಾ ಸ್ನೇಹಿ ಪ್ರಜಾಪ್ರಭುತ್ವ ಜಾರಿಗೆ ಬರಲಿ**

1957ರ ಚುನಾವಣೆಯಲ್ಲಿ 45 ಮಹಿಳೆಯರು ಸ್ಪರ್ಧಿಸಿ 22 ಜನ ಗೆದ್ದರು. (ಪುರುಷರು 1474 ಜನ ಸ್ಪರ್ಧಿಸಿದ್ದರು.) ಈಗ 668 ಮಹಿಳೆಯರು ಸ್ಪರ್ಧಿಸಿ 62 ಜನ ಗೆದ್ದರು. (ಪುರುಷರು ಈ ಸಲ 7583 ಜನ ಸ್ಪರ್ಧಿಸಿದ್ದಾರೆ.)

ಭಾರತ ಪ್ರಜಾಪ್ರಭುತ್ವ ದೇಶ. ಪ್ರಜಾಪ್ರಭುತ್ವದ ಮುಖ್ಯ ಲಕ್ಷಣಗಳಲ್ಲೊಂದು ಸಮಾನ ಜನ ಪ್ರಾತಿನಿಧ್ಯ. ಎಂದರೆ ಶಾಸನ ಸಭೆಗಳಲ್ಲಿ ನಮ್ಮ ಜನಪ್ರತಿನಿಧಿಗಳಾಗಿರುವವರಲ್ಲಿ ಸಮಾಜದ ಎಲ್ಲ ಜನ, ಜಾತಿ, ವರ್ಗ, ಭಾಷೆ, ಪ್ರಾಂತ್ಯಗಳಿಂದ ಬಂದ ಜನರಿರಬೇಕು. ಎಂದರೆ ಸಮಾನ ಲಿಂಗಪ್ರಾತಿನಿಧ್ಯವೂ ಇರಬೇಕು. ಅದು ಕೇವಲ ಅಲಂಕಾರಿಕ ಮಾತಾಗಿ ಅಲ್ಲ, ಬದಲಾಗಿ ಸಾಮಾಜಿಕ ಮಹತ್ವವೂ ಇರುವಂಥದು. ಹೀಗಿದ್ದರೂ ಮಹಿಳಾ ಮೀಸಲಾತಿಯ ಪರವಿರುವ ಪಕ್ಷಗಳಾಗಲೀ, ವಿರುದ್ಧ ಇರುವ ಪಕ್ಷಗಳಾಗಲೀ ಮಹಿಳಾ ನಾಯಕತ್ವ ಬೆಳೆಸುವ ಯಾವ ರಚನಾತ್ಮಕ ಕಾರ್ಯಕ್ರಮವನ್ನೂ ಹಾಕಿಕೊಂಡಿಲ್ಲ. ವಿಶ್ವಸಂಸ್ಥೆ 'ಲಿಂಗ ಸಮಾನತೆ'ಯನ್ನು 2013ರ ವರ್ಷದ ವಿಷಯವನ್ನಾಗಿ ಮಾಡಿತ್ತು. ಆದರೆ ಆ ವರ್ಷ ಕ್ಯಾಬಿನೆಟ್‌ನಲ್ಲಿ ಮಹಿಳಾ ಪ್ರತಿನಿಧಿಗಳೇ ಇಲ್ಲದ ಬಿಜೆಪಿ ಸರ್ಕಾರ ಕರ್ನಾಟಕದಲ್ಲಿ ತನ್ನ ಅವಧಿ ಮುಗಿಸಿತ್ತು. ರಾಜಕೀಯವಾಗಿ 33% ಪ್ರಾತಿನಿಧ್ಯ ನೀಡಲು ಉದ್ದೇಶಿಸಿದ್ದ ಮಹಿಳಾ ಮೀಸಲಾತಿ ಮಸೂದೆ ಸಂಸತ್ತಿನಲ್ಲಿ ಬಿದ್ದುಹೋಯಿತು. ಕಳೆದ ದೆಹಲಿಯ ಅಧಿಕಾರದ ಗದ್ದುಗೆ ಹಿಡಿದ ಆಪ್ ಸಂಪುಟದಲ್ಲಿ ಒಬ್ಬ ಮಹಿಳೆಯೂ ಇಲ್ಲ. ಈಗ ಕರ್ನಾಟಕ ವಿಧಾನಸಭೆಯ 224 ಸದಸ್ಯರ ಪೈಕಿ ಮಹಿಳೆಯರು ಕೇವಲ 6 ಇದ್ದಾರೆ! ಅತ್ಯಂತ ಮುಂದುವರಿದ, ಹಲವು ಚಳುವಳಿಗಳನ್ನು ಕಂಡ ಕರ್ನಾಟಕದಲ್ಲಿ ಬರಬರುತ್ತ ಮಹಿಳಾ ಪ್ರಾತಿನಿಧ್ಯ ಇಳಿಯುತ್ತಿದೆ. ಗ್ರಾಮ, ತಾಲೂಕು, ಜಿಲ್ಲಾ ಮಟ್ಟದ ಮಹಿಳಾ ಪ್ರತಿನಿಧಿಗಳು ಉತ್ತಮ ಸಾಮರ್ಥ್ಯ ತೋರಿದರೂ ರಾಜ್ಯ, ರಾಷ್ಟ್ರಮಟ್ಟದ ತನಕ ಬೆಳೆಯುವ ಸಹಜ ವಿಕಾಸ ಕಾಣಿಸುತ್ತಿಲ್ಲ. ಪಂಚಾಯತ್ ರಾಜ್ ಚುನಾವಣೆಯಲ್ಲಿ ಮಹಿಳಾ ಮೀಸಲಾತಿಯನ್ನು ಎಷ್ಟು ವಿರೂಪಗೊಳಿಸಿ ನಾಮಕಾವಸ್ತೆ ಮಾಡಲಾಗಿದೆಯೆಂದರೆ ಅಲ್ಲಿ ಅದನ್ನು 50%ಗೇರಿಸಲು ಜನನಾಯಕರು ಸಿದ್ಧರಿದ್ದಾರೆ. ಆದರೆ ವಿಧಾನಸಭೆ, ಸಂಸತ್ತುಗಳಲ್ಲಿ ಮಹಿಳಾ ಮೀಸಲಾತಿ ಬಿದ್ದು ಹೋಗುವಂತೆ ವ್ಯವಸ್ಥಿತವಾಗಿ ನೋಡಿಕೊಂಡಿದ್ದಾರೆ.

## ಯಾಕೆ ಹೀಗೆ?

ನಾವು ಮಹಿಳೆಗೆ ರಾಜಕೀಯ ಪ್ರಾತಿನಿಧ್ಯ ಅಗತ್ಯ ಮತ್ತದರ ಮಹತ್ವ ಏನೆಂದು ಚರ್ಚಿಸಬೇಕಾದ ಅನಿವಾರ್ಯತೆ ಏಕೆ ಸೃಷ್ಟಿಯಾಯಿತು ಎಂದು ಹುಡುಕುತ್ತ ಹೊರಟರೆ ಚಾರಿತ್ರಿಕ ಹಾಗೂ ವರ್ತಮಾನದ ವೈರುಧ್ಯಗಳು ಕಣ್ಣಿಗೆ ರಾಚುತ್ತವೆ. ಈ ಸಮಾಜ ಜಾತಿವ್ಯವಸ್ಥೆಯಿಂದ ಉದ್ದುದ್ದವಾಗಿಯೂ, ವರ್ಗ ಸಂರಚನೆಯಿಂದ ಅಡ್ಡಡ್ಡವಾಗಿಯೂ ಸೀಳಲ್ಪಟ್ಟಿದೆ. ಅದರ ನಡುವೆ ಅಲಕ್ಷಿತ ಬಿಂದುಗಳಾಗಿ ಮಹಿಳೆಯರಿದ್ದಾರೆ. ಭಾರತವಷ್ಟೇ ಅಲ್ಲ, ಜಗತ್ತಿನ ಬಹುತೇಕ ದೇಶಗಳಲ್ಲಿ ಮಹಿಳೆಯ ರಾಜಕೀಯ ಚರಿತ್ರೆ ಎಂದರೆ ಮಹಿಳೆಯ ಅಧಿಕಾರ ದಮನಿಸುವ ಚರಿತ್ರೆಯೇ ಆಗಿದೆ. ಆಳುವ ವರ್ಗವಾಗಿ, ನಿರ್ಧಾರ ತೆಗೆದುಕೊಳ್ಳುವ ಜವಾಬ್ದಾರಿಯುತ ನಾಯಕಿಯಾಗಿ ಮಹಿಳೆ ಕಾಣಿಸಿಕೊಂಡಿದ್ದು ಅಪರೂಪ. ದೇಶಕಾಲಗಳ ವ್ಯತ್ಯಾಸವಿಲ್ಲದೆ ಹೆಣ್ಣಿನ ಧಾರ್ಮಿಕ–ಸಾಂಸ್ಕೃತಿಕ–ರಾಜಕೀಯ ಅಧಿಕಾರ ಕಡಿತಗೊಳಿಸಲು ಸಮಾಜಗಳು ಸತತವಾಗಿ ಪ್ರಯತ್ನಪಟ್ಟಿವೆ. ಸಾವಿರಾರು ವರ್ಷಗಳಿಂದ ಸಾವಿರಾರು ರಾಜಮಹಾರಾಜರು ಆಳಿದ ಭೂಮಿ ಇದು. ಆದರೆ ಮಹಿಳೆ ಆಳಿದ್ದೆಲ್ಲ ಹೃದಯ ಸಾಮ್ರಾಜ್ಯವನ್ನು. ದೇಶವನ್ನಲ್ಲ. ಹೀಗಿರುವುದರಿಂದಲೇ ಈ ಸಮಾಜ ಹೆಣ್ಣಿಗೆ ನೀಡಿರುವ ಕಾಲ್ಪನಿಕ ಸ್ಥಾನಕ್ಕೂ, ಮಹಿಳೆಯ ನಿಜ ಸ್ಥಿತಿಗತಿಗೂ ಬಹಳ ವ್ಯತ್ಯಾಸವಿದೆ. ಕಾಲ್ಪನಿಕವಾಗಿ ಅತ್ಯಂತ ಮಹತ್ವಪೂರ್ಣ ಸ್ಥಾನವಿದ್ದರೂ ವಾಸ್ತವವಾಗಿ ಮಹಿಳೆ ಸಂಪೂರ್ಣ ಕಡೆಗಣಿಸಲ್ಪಟ್ಟಿದ್ದಾಳೆ. ಇದಕ್ಕೆ ಕಾರಣ ಹಲವು.

## ಸಾಂಸ್ಕೃತಿಕ ಕಾರಣಗಳು:

- ಜೈವಿಕವಾಗಿ ದುರ್ಬಲ, ಸುಮದಂತೆ ಕೋಮಲ ಎಂದು ಒಪ್ಪಿಸಿ, ಬಾಯ್ಮುಚ್ಚಿಸಲ್ಪಟ್ಟ ಸಮುದಾಯ ಮಹಿಳೆಯರದು. ಬೆಳೆಯುವ ಮಗುವಿನ ಕೌಟುಂಬಿಕ ಪರಿಸರವೇ ಇಂತಹ ಯೋಚನಾಕ್ರಮಗಳನ್ನು ರೂಢಿಸಿಕೊಂಡಿದೆ.
- ಹೆಣ್ಣು ಅಧಿಕಾರ ನಿಭಾಯಿಸಬಲ್ಲಳು ಎಂದು ಯಾರೂ, ಸ್ವತಃ ಅವಳೂ ಭಾವಿಸುವುದಿಲ್ಲ. ಯಾವ ಹಿನ್ನೆಲೆಯೂ ಇಲ್ಲದ ನಿರಕ್ಷರಿ ಗಂಡು ಅಧಿಕಾರ ನಿಭಾಯಿಸಬಲ್ಲ ಎಂದು ನಂಬುವ ಸಮಾಜ ಅಷ್ಟೇ ಅನನುಭವಿ ಮಹಿಳೆ ಅದನ್ನು ನಿಭಾಯಿಸಬಲ್ಲಳು ಎಂದು ವಿಶ್ವಾಸವಿಡುವುದಿಲ್ಲ. ಸ್ವಾತಂತ್ರ್ಯ ಚಳುವಳಿ ಕಾಲದಲ್ಲಿ ರಾಜಕೀಯವಾಗಿ ಕ್ರಿಯಾಶೀಲವಾಗಿದ್ದ ಎಷ್ಟೊಂದು ಮಹಿಳೆಯರಿದ್ದರು. ಆದರೆ ಸಂವಿಧಾನ ಕರಡು ಸಮಿತಿಯಲ್ಲಿ ಯಾರಿಗೂ ಸ್ಥಾನ ಸಿಗಲಿಲ್ಲ. ಮಹಾರಾಷ್ಟ್ರದ ದಲಿತ ಚಳುವಳಿಯಲ್ಲಿ ಸಾವಿರಗಟ್ಟಲೆ ಕ್ರಿಯಾಶೀಲ ನಾಯಕಿಯರಿದ್ದರು, ಆದರೆ ಇದುವರೆಗೆ ಅಲ್ಲೊಬ್ಬ ದಲಿತ ಮಹಿಳಾ ಸಿಎಂ ಬರಲು ಸಾಧ್ಯವಾಗಿಲ್ಲ. ವಯಸ್ಸಾದ ಮರಣಶಯ್ಯೆಯಲ್ಲಿರುವ ವ್ಯಕ್ತಿಗೆ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ಸಿಗುತ್ತದೆ, ಆದರೆ ಕ್ರಿಯಾಶೀಲ ಹೆಣ್ಣುಮಗಳಿಗೆ ಟಿಕೆಟ್ ಸಿಗಲಿಕ್ಕೆ ಸಾವಿರ ತೊಡರು ಸೃಷ್ಟಿಸಲಾಗುತ್ತದೆ. ಹೆಣ್ಣು ಮತ್ತು ಅಧಿಕಾರಗಳನ್ನು ವಿರುದ್ಧ ಪದಗಳೆಂಬಂತೆ ಭಾವಿಸಲಾಗಿದೆ.
- ಅಧಿಕಾರ ಮತ್ತು ಎಲ್ಲ ಸಾಂಸ್ಥಿಕ ರಚನೆಗಳು ಮಹಿಳಾ ವಿರೋಧಿ ಹಾಗೂ ಮಹಿಳೆಯರನ್ನು ಹೊರಗಿಡುವಂಥವೇ ಆಗಿರುವುದರಿಂದ ಅದು ತನ್ನ ಕಾರ್ಯಕ್ಷೇತ್ರವಲ್ಲ ಎಂಬ ಭಾವನೆಯನ್ನು ಮಹಿಳಾ ಹೋರಾಟದಲ್ಲಿ ತೊಡಗಿರುವ ಹೆಣ್ಣುಮಕ್ಕಳೂ ಸೇರಿದಂತೆ ಹಲವರು ಹೊಂದಿದ್ದಾರೆ.

**ವರದಕ್ಷಿಣೆಗೆ ನಿಮ್ಮನ್ನು ನೀವು ಮಾರಿಕೊಳ್ಳದಿರಿ**
**ನಿಮ್ಮ ಘನತೆಯನ್ನು ಹರಾಜು ಹಾಕಿಕೊಳ್ಳದಿರಿ.**

**ರಾಜಕೀಯ ಕಾರಣಗಳು:**

- ಸಮಾನ ಹಕ್ಕು, ಗೌರವಗಳಿಗಾಗಿ ಮಹಿಳಾ ಮೀಸಲಾತಿಯ ಬೇಡಿಕೆ ಹೆಚ್ಚುತ್ತ ಹೋದಂತೆ ಪ್ರತಿ ರಾಜಕೀಯ ಪಕ್ಷವೂ ಮಹಿಳಾ ವಿಭಾಗವನ್ನು ಹೊಂದಿದೆ. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಅಖಿಲ ಭಾರತ ಮಹಿಳಾ ಕಾಂಗ್ರೆಸ್, ಬಿಜೆಪಿಯ ಬಿಜೆಪಿ ಮಹಿಳಾ ಮೋರ್ಚಾ ಹಾಗೂ ಸಿಪಿಐನ ನ್ಯಾಷನಲ್ ಫೆಡರೇಷನ್ ಆಫ್ ವುಮೆನ್, ತೆಲುಗು ದೇಶಂನ ತೆಲುಗು ಮಹಿಳಾ, ಆಲ್ ಇಂಡಿಯಾ ಡೆಮಾಕ್ರೆಟಿಕ್ ವಿಮೆನ್ಸ್ ಅಸೋಸಿಯೇಷನ್ – ಇವು ಕೆಲವು ಉದಾಹರಣೆಗಳು. ಆದರೆ ಮಹಿಳಾ ವಿಭಾಗ ಇದೆ ಎನ್ನುವುದೇ ಮುಖ್ಯ ವಾಹಿನಿಯ ಪಕ್ಷ ರಾಜಕಾರಣದಿಂದ ಅವರನ್ನು ದೂರವಿಡುವ ಹುನ್ನಾರವಾಗಿದೆ. ತಮ್ಮೆಲ್ಲ ನಾಯಕಿಯರನ್ನು, ಕಾರ್ಯಕರ್ತೆಯರನ್ನು ಒಂದೆಡೆ ಜಾಗ ಕೊಟ್ಟು ಕೂರಿಸಿ ತೃಪ್ತಿ ಪಡಿಸಿ ತಾವು ಅಧಿಕಾರದ ಮೊಗಸಾಲೆಯಲ್ಲಿ ಕಚ್ಚಾಡುವುದನ್ನು ಪುರುಷರು ಬಹು ಸುಲಭ ಮಾಡಿಕೊಂಡಿದ್ದಾರೆ. ಮಹಿಳಾ ವಿಂಗ್ ಎನ್ನುವುದೂ ಒಂದು 'ಹೊರಗಿಡುವ ತಂತ್ರ'ವೆಂದು ಎಚ್ಚರಿಕೆಯಿಂದ ಗಮನಿಸಿದಲ್ಲಿ ತಿಳಿಯುತ್ತದೆ.
- ರಾಜಕಾರಣವು ಮಹಿಳೆಯನ್ನು ವೋಟ್‌ಬ್ಯಾಂಕ್ ಎಂದು ಗಂಭೀರವಾಗಿ ಪರಿಗಣಿಸಿಲ್ಲ. ಅರ್ಧಕ್ಕರ್ಧ ಸಂಖ್ಯೆಯ ಮತದಾರರಾದ ಮಹಿಳೆಯ ಕುರಿತು ಮಾತನಾಡುವಾಗ ಎಲ್ಲಿ ತಮ್ಮ ವೋಟ್‌ಬ್ಯಾಂಕ್ ಕುಸಿದೀತೋ ಎಂಬ ಭಯ ಯಾವ ರಾಜಕಾರಣಿಯನ್ನೂ ಕಾಡುವುದಿಲ್ಲ. ಈ ಸಹಸ್ರಮಾನ ದಾಟುವವರೆಗೆ ಬಹುತೇಕ ರಾಜಕೀಯ ಪಕ್ಷಗಳ ಸದಸ್ಯರಲ್ಲಿ ಮಹಿಳೆಯರ ಸಂಖ್ಯೆ 10–12% ಮೀರಲಿಲ್ಲ! ಶಾಸನ ರೂಪಿಸುವ ಸ್ಥಳದಲ್ಲಿ ಮಹಿಳಾ ಧ್ವನಿ ನಗಣ್ಯವೆನ್ನುವಷ್ಟು ದುರ್ಬಲವಾಗಿದೆ.

ನಮಗೆ ಮಹಿಳಾ ಕಾನ್‌ಸ್ಟೇಬಲ್ ಬೇಕು, ಮಹಿಳಾ ಕಮಿಷನರ್ ಬೇಡ. ಮಹಿಳಾ ವರದಿಗಾರ್ತಿಯರು ಬೇಕು, ಮಹಿಳಾ ಎಡಿಟರ್ ಬೇಡ. ಚಂದದ ದಿರಿಸಿನ ಗೊಂಬೆಯಂಥ ಹಾವಭಾವ ಹೊಂದಿದ ವಾಚಕಿಯರು ಬೇಕು, ಮಾಧ್ಯಮ ಒಡೆತನ ಮಹಿಳೆಗೆ ಕೊಡಲು, ಎಡಿಟರ್ ಆಗಿ ಒಪ್ಪಲು ಸಾಧ್ಯವಿಲ್ಲ. ಮಹಿಳಾ ಕಾರ್ಯಕರ್ತೆಯರು ಸಂಘಟನೆಗೆ ಬೇಕು, ಮಹಿಳಾ ಅಧ್ಯಕ್ಷರು ಬೇಡ. ಮನೆಮಠ, ದೇವಳ ತುಂಬ ಹೆಣ್ಣುಮಕ್ಕಳೇ, ಭಕ್ತೆಯರೇ ಇರಲಿ. ತಿಜೋರಿ ಗರ್ಭಗುಡಿಯಿಂದ ಮಾತ್ರ ದೂರವಿರಲಿ. ಒಟ್ಟಾರೆ ಅಧಿಕಾರ ಕೇಂದ್ರಗಳತ್ತ ಬರದೆ ವ್ಯವಸ್ಥೆಯ ರಕ್ಷಕಳಾಗಿ, ಬೇಲಿಚೌಕಟ್ಟುಗಳ ಭದ್ರಗೊಳಿಸುವ ಶಿಸ್ತುಗಾರಳಾಗಿ ಇರುವ ಮಹಿಳೆಗೆ ಅವಕಾಶ, ಮನ್ನಣೆ, ಸ್ವಾಗತವಿದೆ. ರಾಜಕೀಯ ಪಕ್ಷಗಳೂ ಸಹಾ ವಿನ್ನಬಿಲಿಟಿಯ ನೆಪದಲ್ಲಿ ಪ್ರಭಾವಿ ಸರ್‌ನೇಮ್‌ಗಳಿರುವ ಮಹಿಳೆಗೆ ಮಣೆ ಹಾಕಿ ಕೂರಿಸುತ್ತವೆ. ಜನಪ್ರಿಯ ನಟಿಮಣಿಯರನ್ನು ಬರಮಾಡಿಕೊಳ್ಳುತ್ತವೆ. ಸುಂದರ, ವಾಚಾಳಿ ನಾಯಕಿಯರನ್ನು ಗಿಳಿಪಾಠ ಒಪ್ಪಿಸಲು ಬೆಳೆಸುತ್ತವೆ. ಆದರೆ ಪಕ್ಷದ ಶಿಸ್ತು, ಚೌಕಟ್ಟಿನ ಆಚೆಗೆ ಸ್ವಂತವಿಚಾರ



ಹರಿಯಬಿಡದಂತೆ ನಿರ್ಬಂಧ ವಿಧಿಸುತ್ತವೆ. ಜನರನ್ನು ಆಕರ್ಷಿಸುವ ಬಿಂದುಗಳಾಗಿ, ನಿಶಾನೆ ಹಿಡಿದವರಾಗಿ ಅಧಿಕಾರದ ಬಯಲಿಗೆ ಸ್ವಾಗತಿಸಲ್ಪಡುವ ಮಹಿಳೆಯರು ಅಧಿಕಾರದಲ್ಲಿ ಪಾಲು ಕೇಳಿದ್ದೇ ಅವರ ಭವಿಷ್ಯ ಮಸುಕಾಗತೊಡಗುತ್ತದೆ.

ಅಂತೂ ರಾಜಕೀಯ ಪ್ರವೇಶಿಸಿ ನೆಲೆ ನಿಂತ ಮಹಿಳೆಯರಾದರೂ ಹೇಗಿದ್ದಾರೆ? ಬಹಳಷ್ಟು ಮಹಿಳೆಯರು ಅಧಿಕಾರ ನಿರ್ವಹಿಸುವ ಸ್ಥಳ ತಲುಪಿದೊಡನೆ ತಾವೂ ಪುರುಷ ಮನಸ್ಥಿತಿಯ ಪ್ರತೀಕವಾಗಿ ಬದಲಾಗಿದ್ದಾರೆ. ಅಥವಾ ಪುರುಷರ ಕೈಗೊಂಬೆಯಾಗಿದ್ದಾರೆ. ಕೆಲವು ಸ್ಥಳೀಯ ನಾಯಕಿಯರು ರಾಷ್ಟ್ರ ರಾಜಕಾರಣದ ದಿಕ್ಕುದೆಸೆ ನಿರ್ಧರಿಸುವಷ್ಟು ಶಕ್ತಿಯಿರುವವರಾದರೂ ತಂತಮ್ಮ ಪಕ್ಷದ ಮಿತಿಗಳ, ಶಿಸ್ತಿನ ಚೌಕಟ್ಟುಗಳ ದಾಟಲಾಗದೇ ಹೋಗಿದ್ದಾರೆ. ಅಷ್ಟೇ ಅಲ್ಲ, ಎರಡನೆಯ ಹಂತದ ದಕ್ಷ ಮಹಿಳಾ ನಾಯಕತ್ವವನ್ನು ಬೆಳೆಯಗೊಡದೇ ಹೋಗಿದ್ದಾರೆ. ಎಂದೇ ಇದುವರೆಗೆ ಮಹಿಳೆಗೆ ಸಿಕ್ಕ ಅಧಿಕಾರ, ಬಲ ಕೇವಲ ಸಾಂಕೇತಿಕವಾಗಿದೆ ಹಾಗೂ ಆಳಿದ/ಆಳುತ್ತಿರುವ ನಾಯಕಿಯರು ಕೂಡಾ ಜಾಗೃತ ಮಹಿಳೆಯ ಪ್ರತೀಕವಾಗಿ ಉಳಿದಿಲ್ಲ ಎಂದೇ ಹೇಳಬೇಕಾಗಿದೆ.

ಒಟ್ಟಾರೆಯಾಗಿ ಆಳುವ ವ್ಯವಸ್ಥೆ, ಸಾಮಾಜಿಕ–ಸಾಂಸ್ಕೃತಿಕ ವಾತಾವರಣ ಆಳದಲ್ಲಿ ಪುರುಷಪರವೂ, ಪುರುಷಾಧಿಪತ್ಯವನ್ನು ಪೋಷಿಸುವಂಥದೂ ಆಗಿದೆ. ಎಂದೇ ಮಹಿಳಾ ಪ್ರಾತಿನಿಧ್ಯದ ಬಗೆಗೆ, ಮಹಿಳಾ ಮೀಸಲಾತಿಯ ಬಗೆಗೆ ಮತ್ತೆಮತ್ತೆ ಮಾತನಾಡಬೇಕಿದೆ. ಲಿಂಗಸಮಾನತೆಯ ಒಂದು ಉಪಕರಣವಾಗಿ ಮಹಿಳಾ ಪ್ರಾತಿನಿಧ್ಯ ಹಾಗೂ ಅದನ್ನು ಸಾಕಾರಗೊಳಿಸಲು ಮಹಿಳಾ ಮೀಸಲಾತಿಯನ್ನು ಪ್ರತಿಪಾದಿಸಬೇಕಾಗುತ್ತದೆ.

ಆದರೆ ಹೆಣ್ಣುಮಕ್ಕಳಿಗೆ ಮೀಸಲಾತಿಯ ಹೆಸರಿನಲ್ಲಿ ಅವಕಾಶ ಸಿಗುವುದು ಮಹಿಳಾ ಮೀಸಲಾತಿಯ ಇತ್ಯಾತ್ಮಕ ಅಂಶವಾಗಿದ್ದರೆ, ಮೀಸಲಾತಿ ಹೆಸರಲ್ಲಿ ಪುರುಷ ರಾಜಕಾರಣದ ಕೈಗೊಂಬೆಯಾಗುವ ಅನಿವಾರ್ಯತೆಯಿರುವುದು ನೇತ್ಯಾತ್ಮಕ ಅಂಶವಾಗಿ ಕಾಣಿಸುತ್ತದೆ. ವಿನ್ನಬಲಿಟಿಯಲ್ಲಿ ಹಣ, ಜಾತಿ ಮತ್ತು ರಾಜಕೀಯ ಮನೆತನದ ಮಹಿಳೆ ಎನ್ನುವುದು ಮುಖ್ಯವಾಗಿ ಪರಿಗಣಿಸಲ್ಪಡುವ ಅಂಶವಾಗಿದೆ. ಇವು ಮೂರೂ ಮಹಿಳೆಯರು ಪುರುಷರ ಅಧೀನದಲ್ಲಿಯೇ ಉಳಿಯಬೇಕಾದ ಅನಿವಾರ್ಯತೆ ನಿರ್ಮಾಣ ಮಾಡಿವೆ.

ಅಧಿಕಾರ ಎಂದಿಗೂ ಕೊರತೆಯ ಸಂಪನ್ಮೂಲ. ಅದರ ಸುತ್ತ ಠಳಾಯಿಸುತ್ತಲೇ ಇರುವುದು ಪುರುಷ ಪರಮಾಧಿಕಾರ. ಅಧಿಕಾರ ಬಿಟ್ಟುಕೊಡುವುದೂ, ಪ್ರಾಣ ಬಿಡುವುದೂ ಹೆಚ್ಚುಕಮ್ಮಿ ಒಂದೇ ಎಂದು ಭಾವಿಸಲಾಗಿದೆ. ಅಧಿಕಾರ ಗ್ರಹಣವೇ ತಮ್ಮ ಆತ್ಯಂತಿಕ ಗುರಿಯೆಂದುಕೊಂಡದ್ದರಿಂದಲೇ ಭಾರತದ ಇವತ್ತಿನ ಯಾವ ರಾಜಕೀಯ ಪಕ್ಷವೂ, ಸಂಘಟನೆಯೂ ಮಹಿಳಾಪರ ಎಂದು ಹೇಳಿಕೊಳ್ಳುವ ಯೋಗ್ಯತೆ ಪಡೆದಿಲ್ಲ. ಅಂತೂ ಅಧಿಕಾರವನ್ನು ಹೆಣ್ಣಿಗೆ ಹಸ್ತಾಂತರಿಸಲು ಆಳವಾದ

ಅಸಮ್ಮತಿಯಿದೆ. ಅದು ಮಹಿಳಾ ಪ್ರಾತಿನಿಧ್ಯ ಅರ್ಥಪೂರ್ಣವಾಗಲು ಇರುವ ಮುಖ್ಯ ತೊಡಕಾಗಿದೆ. ಅಸಲಿಗೆ ಅಧಿಕಾರದ ಹಾಗೂ ಎಲ್ಲ ಸಾಂಸ್ಥಿಕ ರಚನೆಗಳ ಮುಖ್ಯ ಸ್ವರೂಪ ಮಹಿಳಾ ವಿರೋಧಿಯೇ ಆಗಿದೆ. ಎಂದೇ ಮಹಿಳೆಯರ ನೆಪದಲ್ಲಿ ಸಿಗಬಹುದಾದ 33% ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳದಂತೆ ನೋಡಿಕೊಳ್ಳುವುದು ಮಹಿಳಾ ಪ್ರಾತಿನಿಧ್ಯ ಎದುರಿಸುತ್ತಿರುವ ಮೊದಲ ಸವಾಲಾಗಿದೆ.

## ಹಾಗಾಗದೇ ಇರಲು

- ರಾಜಕಾರಣದಲ್ಲಿ ಕ್ರಿಯಾಶೀಲಳಾಗುವುದಕ್ಕೆ ಪೂರಕವಾಗಿ ಮಹಿಳೆ ಸಂಘಟಿತಳಾಗಬೇಕು. ಒಗ್ಗೂಡಿ ಧ್ವನಿಯೆತ್ತಬೇಕು.
- ಪಕ್ಷಗಳು ತಮ್ಮ ಪ್ರಣಾಳಿಕೆಯಲ್ಲಿ ಮಹಿಳಾಪರ ಕಾರ್ಯಕ್ರಮ, ಯೋಜನೆ ಹಾಕಿಕೊಳ್ಳದಿದ್ದರೆ ಮತದಾನ ಮಾಡುವುದಿಲ್ಲವೆಂದು ಘಟ್ಟಿಸಿ ಹೇಳುವ ಸ್ಪಷ್ಟ ರಾಜಕೀಯ ಪ್ರಜ್ಞೆ ಬೆಳೆಸಿಕೊಳ್ಳಬೇಕು.
- ನಾನಾ ಸಂಘಟನೆ–ಸಮುದಾಯಗಳಿಗಾಗಿ ಸಾರ್ವಜನಿಕ ಬದುಕಿನಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಮಹಿಳೆಯರು ರಾಜಕೀಯ ಪ್ರವೇಶಿಸಬೇಕು. ತಮ್ಮ ಜನಸಂಪರ್ಕವನ್ನು ಓಟುಗಳಾಗಿ ಪರಿವರ್ತಿಸಿಕೊಳ್ಳಬೇಕು.
- ಸದ್ಯದ ರಾಜಕೀಯ ಪರಿಸ್ಥಿತಿ ಸಿನಿಕತನವನ್ನು ಹುಟ್ಟಿಸುವಂತಿದ್ದರೂ ಸಹಾ ಅದರ ಪಾಲುದಾರಳಾಗದ ಹೊರತು ಬದಲಾವಣೆ ತರಲು ಸಾಧ್ಯವಾಗಲಾರದು ಎಂಬುದನ್ನು ಗಮನಿಸಬೇಕು.
- ಕೊನೆಯದಾಗಿ, ಮಹಿಳೆಗೆ ಅಧಿಕಾರ ಬೇಕಾಗಿರುವುದು ಗಣ್ಯತೆ, ಅವಕಾಶ, ಆಳ್ವಿಕೆಯ ಪರಮಾಧಿಕಾರ ಬಯಸುವುದಕ್ಕಲ್ಲ. ತನ್ನ ಸಿರಿಸಂಪತ್ತು, ಕುರ್ಚಿ ಉಳಿಸಿಕೊಳ್ಳುವ ಸಾಧನವಾಗಿಯೂ ಅಲ್ಲ. ಬದಲಾಗಿ ಅಧಿಕಾರ ನಿಸ್ಪೃಹವಾಗಿ ಹಂಚಿಕೊಳ್ಳಬಲ್ಲ ಸಂಪನ್ಮೂಲವಾಗಬೇಕು. ದಾಹವಾಗದೇ ಒಂದು ಶಕ್ತಿಯಾಗಬೇಕು. ಈ ಮನೋಭೂಮಿಕೆ ಮಹಿಳಾ ರಾಜಕಾರಣಿಗಳಲ್ಲಿ ಹುಟ್ಟುವಂತೆ ನೋಡಿಕೊಳ್ಳುವುದು ಸಮಾಜ ಹಾಗೂ ಸಂಘಟನೆಗಳ ಜವಾಬ್ದಾರಿಯಾಗಿದೆ. ಹೀಗೆ ಅಧಿಕಾರವನ್ನು ಬಳಸಿಕೊಂಡರಷ್ಟೇ ದಿನದಿಂದ ದಿನಕ್ಕೆ ಅರ್ಥ ಕಳೆದುಕೊಳ್ಳುತ್ತಿರುವ ಭಾರತದ ಪ್ರಜಾತಂತ್ರ ವ್ಯವಸ್ಥೆ ಹೊಸ ಉಸಿರು ದೊರೆತು ರಾಜಕಾರಣ ಜನಪರವಾಗಲು ಸಾಧ್ಯವಿದೆ.

## ಮಹಿಳೆಯರ ಪ್ರಾತಿನಿಧ್ಯದ ಮಹತ್ವವೇನು?

- ಮಹಿಳಾ ಪ್ರಾತಿನಿಧ್ಯ, ಮಹಿಳಾ ಪೊಲೀಸ್ ಠಾಣೆ, ಮಹಿಳಾ ಬ್ಯಾಂಕ್, ಮಹಿಳಾ ಬಜೆಟ್ ಇವೆಲ್ಲವುಗಳ ಮುಖ್ಯ ಉದ್ದೇಶ ಮಹಿಳೆಯನ್ನು ಹೆಚ್ಚೆಚ್ಚು ಸ್ವೀಕಾರಾರ್ಹ, ಗೌರವಾರ್ಹ ಮಾಡುವುದೇ ಆಗಿದೆ. ಅದು ಸಮಾನತೆಯೆಡೆ ಮೊದಲ ಹೆಜ್ಜೆ. ಸ್ತ್ರೀಭ್ರೂಣ ಹತ್ಯೆ ನಡೆಯುವ ದೇಶದಲ್ಲಿ; ಮನೆಯೊಳಗೆ ಹಾಗೂ ಹೊರಗೆ



ಇವತ್ತಿಗೂ ಮಹಿಳೆ ಎರಡನೆಯ ದರ್ಜೆ ಪ್ರಜೆಯಾಗಿರುವ ಸಮಾಜದಲ್ಲಿ ಪುರುಷನಿಗಿಂತ ಭಿನ್ನ ದೃಷ್ಟಿಕೋನ ಹೊಂದಿದ ಮಹಿಳೆಯ ದನಿ ಕೇಳುವುದು, ಜನಸಂಖ್ಯೆಯ ಶೇ. 50% ಇರುವ ಮಹಿಳೆಯರು ಎಲ್ಲದರಲ್ಲೂ ಪಾಲ್ಗೊಳ್ಳುವುದು ಸಮಾಜದ ದೃಷ್ಟಿಯಿಂದ ಅವಶ್ಯವಾಗಿದೆ. ಹಾಗಾಗಿ ಮಹಿಳಾ ಪ್ರಾತಿನಿಧ್ಯ ಅಗತ್ಯವಷ್ಟೇ ಅಲ್ಲ, ಅನಿವಾರ್ಯವೂ ಆಗಿದೆ.

- ಭಾರತದ ಮಹಿಳೆಯರು ಸಂಖ್ಯೆಯಲ್ಲಿ 50% ಇದ್ದರೂ 'ಅಲ್ಪಸಂಖ್ಯಾತರು'. ನಾನಿಲ್ಲಿ ಅಲ್ಪಸಂಖ್ಯಾತ ಎನ್ನಲು ಅಂಬೇಡ್ಕರ್ ಸ್ಟೇಟ್ಸ್ ಅಂಡ್ ಮೈನಾರಿಟೀಸ್‌ನಲ್ಲಿ ಬಳಸಿದ ವ್ಯಾಖ್ಯಾನ ಬಳಸಿಕೊಳ್ಳುತ್ತಿದ್ದೇನೆ. 'ಯಾವ ಜನವರ್ಗದ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸ್ಥಿತಿ ಅತ್ಯಂತ ಹೀನವಾಗಿದೆಯೋ; ಯಾರಿಗೆ ಸಂಪನ್ಮೂಲಗಳನ್ನು ಪಡೆಯಲು, ಹಂಚಿಕೊಳ್ಳಲು ಅವಕಾಶವಿಲ್ಲವೋ ಅವರು ಅಲ್ಪಸಂಖ್ಯಾತರು. ಸಾಮಾಜಿಕ–ಆರ್ಥಿಕ–ಶೈಕ್ಷಣಿಕವಾಗಿ ಸಬಲರಾಗಿರುವ ಹಾಗೂ ಸಂಪನ್ಮೂಲಗಳನ್ನು ತಮ್ಮ ವಶದಲ್ಲಿಟ್ಟುಕೊಂಡು ಸಮಾನ ಹಂಚಿಕೆ ತಡೆಗಟ್ಟುವವರು ಬಹುಸಂಖ್ಯಾತರು.' ಈ ದೃಷ್ಟಿಯಿಂದ ಮಹಿಳೆ ಸದಾ ಅಲ್ಪಸಂಖ್ಯಾತಳೇ. ಎಂದೇ ಅವರ ಪ್ರಾತಿನಿಧ್ಯ ಮಹತ್ವದ್ದಾಗಿದೆ.
- ಮಹಿಳಾ ರಾಜಕೀಯ ಪ್ರಾತಿನಿಧ್ಯ ಹೆಣ್ಣಿನ ಕುರಿತ ಸಮಾಜದ ಧೋರಣೆ ಬದಲಾಯಿಸಬಲ್ಲದು. ತನಗೆ ದಕ್ಕಿರುವ ಸ್ಥಾನದ ಘನತೆ ಮತ್ತು ಮಹತ್ವದ ಅರಿವಿನಿಂದ ಮಹಿಳೆ ಸ್ವತಂತ್ರವಾಗಿ ಯೋಚಿಸಲು ಸಾಧ್ಯವಾಗಬಹುದು. ನಿರ್ಣಾಯಕ ಘಳಿಗೆಗಳಲ್ಲಿ ಧ್ವನಿ ಕೇಳಿಸುವಂತೆ ಮಾತಾಡಬಹುದು. ಆಗ ಮಾತ್ರ ಮಹಿಳೆಯ ರಾಜಕೀಯ ನೆಲೆಯ ಪ್ರಯತ್ನಕ್ಕೆ ಯಶ ದೊರೆತೀತು.
- ಸಾರ್ವಜನಿಕ ನೀತಿಯ ಮೌಲ್ಯ ಹೆಚ್ಚಿಸಲು – ಕ್ವಾಲಿಟಿ ಆಫ್ ಪಬ್ಲಿಕ್ ಪಾಲಿಸಿ ಹೆಚ್ಚಿಸಲು ಮಹಿಳಾ ಪ್ರಾತಿನಿಧ್ಯ ಅವಶ್ಯವಾಗಿದೆ.

## ಕೊನೆಗೊಂದು ಮಾತು

ಇತ್ತೀಚೆಗೆ ಚಾಲ್ತಿಗೆ ಬರುತ್ತಿರುವ ಮಹಿಳಾ ಪಕ್ಷಗಳನ್ನು ಗಮನದಲ್ಲಿಟ್ಟುಕೊಂಡರೆ, ಮಹಿಳಾ ಪಕ್ಷವೊಂದು ಹುಟ್ಟಿ ಬಂದರೆ ಅರ್ಥಪೂರ್ಣ ಮಹಿಳಾ ಪ್ರಾತಿನಿಧ್ಯ ಸಿಗಬಹುದೆ? ಎಂಬ ಜಿಜ್ಞಾಸೆ ಶುರುವಾಗಿದೆ ಎನ್ನಬಹುದು.

ಇಂಗ್ಲೆಂಡಿನಲ್ಲಿ ವಿಮೆನ್ಸ್ ಪೊಲಿಟಿಕಲ್ ಪಾರ್ಟಿ ಎಂಬ ರಾಜಕೀಯ ಪಕ್ಷ ಹುಟ್ಟಿಕೊಂಡಿದೆ. 4 ತಿಂಗಳ ಕೆಳಗೆ ರೇಡಿಯೋ ನಿರ್ವಾಹಕಿ ಸ್ಯಾಂಡಿ ಟೋಕ್ಸ್ವಿಗ್ ಹಾಗೂ 20 ವರ್ಷಗಳಿಂದ ರಾಯಿಟರ್ಸ್ ಸುದ್ದಿ ಸಂಸ್ಥೆಯ ಪತ್ರಕರ್ತೆಯಾದ ಕ್ಯಾಥರಿನ್ ಮೇಯರ್ (ಪ್ರಿನ್ಸ್ ಚಾರ್ಲ್ಸ್ ಜೀವನ ಚರಿತ್ರೆ ಬರೆದವಳು) ಮಹಿಳಾ ಸಮಾನತೆಯ ಪಕ್ಷ ಶುರು ಮಾಡಿದ ಕುರಿತು ಪ್ರಕಟಣೆ ಹೊರಡಿಸಿದರು. ಈಗ ಅದು ಅತಿ ವೇಗವಾಗಿ ಬೆಳೆಯುತ್ತಿರುವ ರಾಜಕೀಯ ಪಕ್ಷ. ಈಗ ಅದರ ನಾಯಕಿಯಾಗಿ

ಸೋಫಿ ವಾಕರ್(44) ಅವರನ್ನು ನೇಮಿಸಲಾಗಿದೆ. ಸಾರ್ವತ್ರಿಕ ಚುನಾವಣೆಗಳು ಹತ್ತಿರ ಬರುತ್ತಿರುವಾಗ, ಯಾವ ಪಕ್ಷವೂ ಮಹಿಳಾ ವಿಷಯ ಕುರಿತು ಕೊನೆ ಸಾಲಿನ ಹೇಳಿಕೆ ಕೊಡುವುದಕ್ಕಿಂತ ಹೆಚ್ಚಿನ ಗಮನ ನೀಡದಿರುವಾಗ, ಇನಫ್ ಈಸ್ ಇನಫ್ ಎಂದು ಮಹಿಳಾ ಪಕ್ಷ ಶುರು ಮಾಡಲಾಗಿದೆ. ಅದರ 58 ಶಾಖೆಗಳು ಶುರುವಾಗಿವೆ. ತಿಂಗಳಿಗೆ 4 ಪೌಂಡ್ ಹಣ ನೀಡಿ ಸದಸ್ಯರನ್ನು ನೋಂದಾಯಿಸುವ ಅಭಿಯಾನ ಶುರುವಾಗಿದೆ. ಮೊದಲ ದಿನವೇ 1300 ಜನ ನೋಂದಾಯಿಸಿದ್ದಾರೆ! ಸಾವಿರಾರು ಜನ ಸ್ವಯಂಸೇವಕರಾಗಿ ಕೆಲಸ ಮಾಡುವುದಾಗಿ ಮೇಲ್ ಹಾಕಿದ್ದಾರೆ. ಅದು ಈ ಸೆಪ್ಟೆಂಬರಿನಲ್ಲಿ ಅಧಿಕೃತವಾಗಿ ಪಕ್ಷವೆನಿಸಿಕೊಳ್ಳಲಿದೆ. ಪಕ್ಷ 2020ರ ಚುನಾವಣೆಗೆ ಅಭ್ಯರ್ಥಿಗಳ ನಿಲಿಸಲಿದೆ. ಇದು ಬಿಳಿಯ, ಕರಿಯ, ಗೇ, ಜನಾಂಗೀಯ ಅಲ್ಪಸಂಖ್ಯಾತ ಎಲ್ಲರನ್ನೊಳಗೊಂಡ ಪಕ್ಷವಾಗಿದೆ.

ಮಹಿಳಾ ಪಕ್ಷದ 6 ಭರವಸೆಗಳು ಹೀಗಿವೆ:

1. ರಾಜಕೀಯ ಮತ್ತು ವ್ಯಾಪಾರಿ ರಂಗದಲ್ಲಿ ತೊಡಗಿಸಿಕೊಳ್ಳಲು ಸಮಾನ ಅವಕಾಶ
2. ಶಿಕ್ಷಣದಲ್ಲಿ ಸಮಾನ ಪ್ರಾತಿನಿಧ್ಯ
3. ಸಮಾನ ವೇತನ
4. ಮಾಧ್ಯಮದಲ್ಲಿ ಸಮಾನ ಗೌರವ
5. ಸಮಾನ ಪಾಲಕ ಹಕ್ಕು (ಪೇರೆಂಟಿಂಗ್ ರೈಟ್ಸ್)
6. ಮಹಿಳಾ ದೌರ್ಜನ್ಯ ತಡೆಯುವುದು

ಇದೇ ರೀತಿ ಸ್ವೀಡನ್‌ನಲ್ಲೂ 'ಫೆಮಿನಿಸ್ಟ್ ಇನಿಷಿಯೇಟಿವ್ ಪಾರ್ಟಿ' ಇದೆ. ಸದ್ಯದ ಚುನಾವಣೆಯಲ್ಲಿ ಒಂದು ಸ್ಥಾನ ಗಳಿಸಿದೆ. ಇದು ನಾರ್ವೆಯಲ್ಲು ಶುರುವಾಗಿದೆ.

ಭಾರತವೇನು ಕಡಿಮೆಯೆ? ಭಾರತದಲ್ಲೂ ಯುನೈಟೆಡ್ ವಿಮೆನ್ ಫ್ರಂಟ್ 2007ರಲ್ಲಿ ಶುರುವಾಗಿದೆ. ಮಾಜಿ ಉಪರಾಷ್ಟ್ರಪತಿ ಕೃಷ್ಣಕಾಂತ್ ಪತ್ನಿ ಸುಮನ್ ಕೃಷ್ಣಕಾಂತ್‌ರಿಂದ ಶುರುವಾದ ಈ ಪಕ್ಷ ರಾಜಕೀಯವಾಗಿ ಉತ್ತರಪ್ರದೇಶದಲ್ಲಷ್ಟೆ ಕೊಂಚ ಕ್ರಿಯಾಶೀಲವಾಗಿರುವುದರಿಂದ ಗಮನ ಸೆಳೆಯಲು ವಿಫಲವಾಗಿದೆ.

ಹೆಣ್ಣುಮಕ್ಕಳನ್ನು ಒಡೆದು ಇಟ್ಟರಷ್ಟೆ, ಒಡೆದು ಆಳಿದರಷ್ಟೆ ತಮ್ಮ ಜಾಗ ಹಾಗೂ ಸುಖಸವಲತ್ತು ಗಟ್ಟಿ ಎಂದು ಪುರುಷಗಣಕ್ಕೆ ಗೊತ್ತಿದೆ. ಎಂದೇ ಮನೆಯೊಳಗೆ, ಪಕ್ಷದೊಳಗೆ ಒಂದಕ್ಕಿಂತ ಹೆಚ್ಚು ಜನರಿಗೆ ಸಮಾನ ಪ್ರಾಮುಖ್ಯತೆ ನೀಡಿ ನಿರಂತರ ಒಡೆಯುವ ಪ್ರಕ್ರಿಯೆ, ಅವರ ನಡುವೆಯೇ ಜಗಳ ನಡೆಯುವಂತೆ ಮಾಡುವ ಪ್ರಕ್ರಿಯೆ ಚಾಲ್ತಿಯಲ್ಲಿದೆ. ಮಹಿಳಾ ಸಮಾನತೆ ಕುರಿತು ಮಾತನಾಡುವ ನಾವು ಅರ್ಥಪೂರ್ಣ ಹಾಗೂ ಗೌರವಯುತ ಪ್ರಾತಿನಿಧ್ಯವನ್ನು ಬಯಸುವುದೇ ಆದಲ್ಲಿ, ಅದಕ್ಕೆ ಸದ್ಯ ಇರುವ ರಾಜಕೀಯ ಪಕ್ಷಗಳಲ್ಲಿ ಅವಕಾಶ ಸಿಗುವುದು ಕಷ್ಟವಾಗಿರುವ ಹೊತ್ತಿನಲ್ಲಿ, ಮಹಿಳಾ ಪಕ್ಷ ಕಟ್ಟಿದರೆ ಹೇಗಾದೀತು? ಎಂಬ ಬಗೆಗೆ ಯೋಚಿಸಬಹುದೆನಿಸುತ್ತಿದೆ.

ಇದೊಂದು ಕನಸಿನ ಬೀಜವಷ್ಟೆ. ಈ ನಿಟ್ಟಿನಲ್ಲಿ ಒಂದಲ್ಲ ಒಂದು ದಿನ ಮಹಿಳೆ ಮುನ್ನಡೆದಾಳೆನ್ನುವುದು ನನ್ನ ಆಶಯ.



# ಪ್ರತಿಕ್ರಿಯೆಗಳು

**'ಇಂದು ನಾನು ಒಂಟಿ ಮಹಿಳೆಯಲ್ಲ ನನ್ನ ಜೊತೆ ನನ್ನ ಸಂಸ್ಥೆಯ ಬಳಗ ಇದೆ'.**

**– ಮೀನಾಕ್ಷಿ ಉಟಗಿ,**

ಆಶಾ ಕಿರಣ ವಿಧವೆಯರ ಹಾಗೂ ಬಡಮಕ್ಕಳ ಸಂಸ್ಥೆಯ ಸಂಸ್ಥಾಪಕಿ.

"ನನ್ನ ಪತಿ 2005ರಲ್ಲಿ ತೀರಿಕೊಂಡರು. ಗಂಡನ ಮೃತದೇಹವನ್ನು ತೆಗೆದು ಕೊಂಡು ಸ್ವಗ್ರಾಮಕ್ಕೆ ಒಯ್ದ ಸಂದರ್ಭದಲ್ಲಿ 'ಗಂಡ ಕೋಟಿಗಟ್ಟಲೆ ಆಸ್ತಿ ಮಾಡಿ ಸತ್ತಾನ ಸತ್ತವನ ಬಾಯಿಯಾಗ ಮಣ್ಣು, ಇವಳಿಗೇನೂ? ಆಸ್ತಿ ತೆಗೆದುಕೊಂಡು ಆರಾಮವಾಗಿ ಇರುತ್ತಾಳೆ' ಎಂದು ಜನ ಹೇಳಿದರು. 'ನನಗ ಆಸ್ತಿ ಬೇಡ ನನ್ನ ಗಂಡನ್ನು ಉಳಿಸಿ ಕೊಡಿರಿ' ಎಂದು ಕೇಳಿದೆ. ಮೂರನೇ ದಿವಸದ ಕಾರ್ಯವನ್ನು ಮಾಡುವ ಸಂದರ್ಭ ದಲ್ಲಿ ಮಗನ ಎರಡನೇಯ ವರ್ಷದ ಪಿಯುಸಿ ಪರೀಕ್ಷೆ ಇದ್ದುದರಿಂದ ಹುಬ್ಬಳ್ಳಿಗೆ ಹೋಗಬೇಕಾಯಿತು. 'ಗಂಡ ಸತ್ತಿದ್ದಾನೆ. ಹೋಗುವುದು ಬೇಡ ಈ ಸಲ ಪರೀಕ್ಷೆ ಬರೆಯುವುದು ಬೇಡ' ಎಂದು ಗಂಡನ ಮನೆಯವರು ಹೇಳಿದರು. 'ಸತ್ತವರಂತೂ ಮರಳಿ ಬರುವುದಿಲ್ಲ ಅವರ ಆಶೀರ್ವಾದ ನನ್ನಮೇಲೆ ಇರುತ್ತದೆ' ಎಂದು ಹುಬ್ಬಳ್ಳಿಗೆ ಹೋದೆವು. ಮಗ ಪರೀಕ್ಷೆ ಬರೆದು ಪ್ರಥಮದರ್ಜೆಯಲ್ಲಿ ಪಾಸಾದ. ಗಂಡನ ಅಂತ್ಯಕ್ರಿಯೆ ನಡೆಯುವಾಗ ಕೈಯನ್ನು ಬಂಡೆಯ ಮೇಲಿರಿಸಿ ಬಳೆಗಳನ್ನು ಒಡೆದು ತೆಗೆದರು. ತಾಳಿಯನ್ನು ಹರಿದರು. ಯಾವ ಒಬ್ಬ ಮಹಿಳೆಗೂ ಈ ಪರಿಸ್ಥಿತಿ ಬರಬಾರದು. ಆಶಾಕಿರಣ ಸಂಸ್ಥೆಯ ಮೂಲಕ ವಿಧವೆಯರಿಗೆ ಯಾವುದೇ ಅನ್ಯಾಯ ಆಗದ ಹಾಗೆ ನೋಡಿಕೊಳ್ಳುತ್ತಿದ್ದೇವೆ, ಅನಿಷ್ಠ ಪದ್ಧತಿಯನ್ನು ಆಚರಿಸಲು ಬಿಡದೆ ತಡೆಯುತ್ತಿದ್ದೇವೆ.

ಒಂದು ಮದುವೆಯಲ್ಲಿ ಐದುಜನ ವಿಧವೆಯರಿಗೆ ಕುಪ್ಪಸ ಮತ್ತು ಸೀರೆ ಕೊಡಲು ಹೇಳಿದರು. ನಾನು ನಿರಾಕರಿಸಿ 'ಮುತ್ತೈದೆ ಹೆಣ್ಣುಮಕ್ಕಳು ಕೊಟ್ಟರೆ ಗಂಡ ಸಾಯುತ್ತಾನಾ' ಎಂದು ಹೇಳಿದೆ.

ಒಮ್ಮೆ ಮಗುವಿನ ನಾಮಕರಣದಲ್ಲಿ ಮಗುವನ್ನು ಎತ್ತಿಕೊಂಡಾಗ ಒಬ್ಬ ಅಜ್ಜಿ ಬಂದು ಮಗುವನ್ನು ಕಿತ್ತುಕೊಂಡರು. ಯಾಕೆ ಎಂದು ಪ್ರಶ್ನಿಸಿದಾಗ 'ಗಂಡಸತ್ತ ವಿಧವಾ ಮಹಿಳೆಯರು ಜಡಿ ಇರುವ ಮಗುವನ್ನು ಮುಟ್ಟಬಾರದು' ಎಂದು ಹೇಳಿದರು. ನನ್ನ ಜೀವನದಲ್ಲಿ ಆದ ಇಂಥ ಸಣ್ಣಪುಟ್ಟ ಘಟನೆಗಳೇ ನನಗೆ ಆತ್ಮಸ್ಥೈರ್ಯ ತಂದುಕೊಟ್ಟು ಆಶಾಕಿರಣ ಎಂಬ ಸಂಸ್ಥೆಯನ್ನು ಆರಂಭಿಸಲು ಪ್ರೇರಣೆ ಯಾದವು. ಮನೋ ವಿಜ್ಞಾನ ಪದವಿಯನ್ನು ಪಡೆಯಲು ಮೂರು ವರ್ಷ ಲಂಡನ್ನಿಗೆ ಹೋಗಿ ಭಾರತಕ್ಕೆ ಬಂದ ಮೇಲೆ ಅಕ್ಕ ಪಕ್ಕದ ಜನರು 'ಎಲ್ಲಿ ಹೋಗ್ಯಾಳೋ ಯಾವನ ಜೊತೆ ಹೋಗ್ಯಾಳೋ' ಅಂತ ಅಸಹ್ಯವಾಗಿ ಮಾತನಾಡುತ್ತಿದ್ದರು. ಸಮಾಜವೇ ನನಗೆ ವಿಶ್ವವಿದ್ಯಾಲಯ ಆಗಿದೆ. ಸಮಾಜವೇ ಜೀವನದ ಪಾಠವಾಗಿದೆ. ಒಂದು ವರ್ಷದ ವರೆಗೆ ಖಿನ್ನತೆಗೆ ಒಳಗಾಗಿದ್ದೆ. ಆ ಸಮಯದಲ್ಲಿ ಸಿದ್ದೇಶ್ವರ ಸ್ವಾಮಿಜಿಯವರಲ್ಲಿಗೆ ಹೋಗಿ ಚೀಟಿಯಲ್ಲಿ "ನಾನು ತುಂಬಾ ಖಿನ್ನತೆಗೆ ಒಳಗಾಗಿದ್ದೇನೆ ನಾನು ನನ್ನ ಗಂಡನನ್ನು ಕಳೆದುಕೊಂಡಿನಿ" ಎಂದು ಬರೆದುಕೊಟ್ಟೆ. ಆಗ ಸಿದ್ದೇಶ್ವರ ಸ್ವಾಮಿಜಿ ಯವರು ಚೀಟಿಯಲ್ಲಿ "ರೀಡ್ ಯು ಕ್ಯಾನ್ ವಿನ್" ಎಂಬ ಪುಸ್ತಕವನ್ನು ಓದಲು ಹೇಳಿದರು. ತಕ್ಷಣ ಮಾರುಕಟ್ಟೆಗೆ ಹೋಗಿ ಪುಸ್ತಕವನ್ನು ಖರೀದಿಸಿ ಪುಸ್ತಕದಲ್ಲಿರುವ ಪ್ರತಿಯೊಂದು ಭಾಗವನ್ನು ಓದಿದೆ. ಸಿದ್ದೇಶ್ವರ ಸ್ವಾಮೀಜಿಯವರ ಆಶೀರ್ವಾದದಿಂದ ಬದುಕಲು ಕಲಿತೆ. ಒಬ್ಬಳೆ ಓಡಾಡುವುದನ್ನು, ಕೆಲಸ ಮಾಡುವುದನ್ನು ಕಲಿತೆ. ಅಪವಾದಗಳಿಗೆ ತಲೆ ಕೆಡಿಸಿಕೊಳ್ಳದೆ ಬದುಕುವುದನ್ನು ಕಲಿತೆ.

ಇಂದು ನಾನು ಒಂಟಿ ಮಹಿಳೆಯಲ್ಲ ನನ್ನ ಜೊತೆ ನನ್ನ ಒಕ್ಕೂಟ ಇದೆ.

ಗಂಡನಿಂದ ಸಿಕ್ಕ ಇಪ್ಪತ್ತೈದು ಲಕ್ಷ ರೂಪಾಯಿಗಳ ನಿರ್ವಹಣೆಯಿಂದ ಹಿಡಿದು ಶಾಲೆಯೊಂದರ ಪ್ರಿನ್ಸಿಪಾಲ್ ಆಗಿ ಕಾರ್ಯ ನಿರ್ವಹಿಸುವವರೆಗೂ, ಡಿಡಿಪಿಐ ಮತ್ತು ಬಿಇಓ ಇತ್ಯಾದಿ ವಿವಿಧ ಸರ್ಕಾರಿ ಕಚೇರಿಗಳಿಗೆ ಹೋಗಿ ಕೆಲಸ ಮಾಡಿಸಿಕೊಂಡು ಬರುವುದನ್ನು, ಆಸ್ತಿ ವಿಷಯವಾಗಿ ಕೋರ್ಟಿಗೆ ಓಡಾಡುವುದನ್ನು, ವಿಜಯಪುರದಿಂದ, ದೆಹಲಿ, ಲಂಡನ್‌ವರೆಗೂ ಓಡಾಡುವುದನ್ನು ನಾನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದೇನೆ.

ಸಮಾಜದಲ್ಲಿ ವಿಧವಾ ಮಹಿಳೆಯರ ಸಮಸ್ಯೆಗಳು ಸಾಕಷ್ಟಿವೆ. ಹೆಂಡತಿ ಸತ್ತ ಮೇಲೆ ಪುರುಷರು 15 ರಿಂದ 1 ತಿಂಗಳ ಒಳಗೆ ಮದುವೆಯನ್ನು ಮಾಡಿಕೊಳ್ಳುತ್ತಾರೆ. ಆದರೆ ಅದೇ ಹೆಣ್ಣು ಮಕ್ಕಳು ಗಂಡನ ನೆನಪಲ್ಲೇ ಮತ್ತು ಮಕ್ಕಳನ್ನು ಬೆಳೆಸುವುದರಲ್ಲೇ ಜೀವನವನ್ನು ತೆಗೆಯುತ್ತಾರೆ. ಗಂಡ ಸತ್ತರೂ ಕಾಲುಂಗುರವನ್ನು, ಮೂಗುತಿಯನ್ನು, ಮಂಗಳಸೂತ್ರವನ್ನು ಅವರ ಹೆಸರಿನಲ್ಲಿಯೇ ಹಾಕಿಕೊಳ್ಳುತ್ತೇವೆ. ಯಾರಿಗಾದರೂ ನಮಸ್ಕರಿಸಿದರೆ ದೀರ್ಘ ಸುಮಂಗಲೀ ಭವ ಎಂದು ಆಶೀರ್ವದಿಸುತ್ತಾರೆ. ಮಕ್ಕಳಿಗೆ ಶಾಲೆಗೆ ದಾಖಲಿಸಬೇಕೆಂದರೆ ತಂದೆಯ ಹೆಸರೇ ಬರೆಯಬೇಕು. ಎಲ್ಲವು ಅವರ ಹೆಸರಿನಲ್ಲಿಯೇ ಇದೆ ನಮ್ಮದೇನಿದೆ?

**ತನ್ನ ಸಂಬಳದ ಮೇಲೆ ಮಹಿಳೆಗಿರಲಿ ಹಿಡಿತ**



ಸಮಾಜದಲ್ಲಿ ಎಲ್ಲ ಕೆಲಸವನ್ನು ಮಾಡುವವಳೇ ಹೆಣ್ಣು, ಹೆಣ್ಣು ಎಷ್ಟು ಶ್ರಮಪಟ್ಟು ತಾಳ್ಮೆಯಿಂದ ಕೆಲಸವನ್ನು ಮಾಡುತ್ತಾಳೆ. ವಿಧವಾ ಮಹಿಳೆಯರು ಗಂಡನನ್ನು ಕಳೆದುಕೊಂಡು ಸಾಕಷ್ಟು ನೊಂದಿರುವಾಗ ಅವಳನ್ನು ನಿಂದನೆ ಮಾಡದೆ ಸಹಾಯ, ಸಹಕಾರ ನೀಡಿದರೆ ಮಾತ್ರ ವಿಧವಾ ಮಹಿಳೆಯರು ಸಮಾಜದಲ್ಲಿ ಮುಂದೆ ಬಂದು ಸಾಧನೆ ಮಾಡಲು ಸಾಧ್ಯ.

**ಅಪ್ಸರಾಬೇಗಂ ಚಪ್ಪರಬಂದ್**

ಮಾರ್ಚ್ 8 ಮತ್ತು 9, 2016ರ ಮಹಿಳಾ ದಿನಾಚರಣೆ ಮತ್ತು ಜಾಥಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದಕ್ಕೆ ನಾನು ಮಹಿಳೆಯಾಗಿ ಹುಟ್ಟಿದ್ದಕ್ಕೆ ಹೆಮ್ಮೆ ಎನಿಸುತ್ತದೆ. ಇದು ಮಹಿಳಾ ಐಕ್ಯತೆಗೆ ಸಾಕ್ಷಿಯಾಗಿ ಹೊರಹೊಮ್ಮಿದ ಕಾರ್ಯಕ್ರಮ. ಹೆಣ್ಣಿಗೆ ಹೆಣ್ಣೇ ಶತ್ರು ಎನ್ನುವ ಮನಸ್ಸುಗಳಿಗೆ ಈ ಕಾರ್ಯಕ್ರಮವೇ ಉತ್ತರ ನೀಡಿದೆ. ಇಂದಿನ ಮಹಿಳೆಯರು ಇಡೀ ಜಗತ್ತಿಗೆ ಸ್ಪೂರ್ತಿಯಾಗಿದ್ದಾರೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಅವಕಾಶ ನೀಡಿದ ನನ್ನೆಲ್ಲ ಸ್ನೇಹಿತರಿಗೆ ಎಂದೆಂದು ಚಿರಋಣಿಯಾಗಿದ್ದೇನೆ.

# ಮಹಿಳಾ ಶಕ್ತಿ ಬಂದಿದೆ ಹೊಸಬೆಳಕು ತಂದಿದೆ

**ಮೇಧಾ ಪಾಟ್ಕರ್**

## ಮಹಿಳಾ ಸಂಘಟನೆಯ ಬೀಜ, ಸಮಾನತೆಯ ಕಾಡ ಬೆಳೆಸಲಿ

ಮಹಾರಾಷ್ಟ್ರ ಮತ್ತು ಕರ್ನಾಟಕದ ಗಡಿ ಸೀಮೆಯಲ್ಲಿ ನಾವಿದ್ದೇವೆ. ಎರಡೂ ರಾಜ್ಯಗಳ ಮಹಿಳೆಯರು ಇಲ್ಲಿ ಸೇರಿದ್ದೀರಿ. ನನ್ನ ಜೊತೆ ಶೊಲಾಪುರದ ವರ್ಷಾ ಅವರು ಬಂದಿದ್ದಾರೆ, ಎನ್.ಎ.ಪಿ.ಎಂನ ಸೀಲಿಯಾ ಅವರು ಬಂದಿದ್ದಾರೆ. ಈಗಷ್ಟೆ ಅಪ್ಸರಾ ಅವರು ವಿಜಯಪುರದ ಬಗ್ಗೆ ಹೇಳುತ್ತಿದ್ದರು. ಒಂದು ಕಾಲದಲ್ಲಿ ಸುಭಿಕ್ಷ ವಾಗಿದ್ದ, ಉದ್ಯಾನವನಗಳು, ಹೊಲಗಳು ಇದ್ದ ಊರಿದು. ಇಂದು ಬಿಕ್ಕಟ್ಟಿನಲ್ಲಿದೆ. ಇಲ್ಲಿ ಸಂಘರ್ಷವೂ ಇದೆ, ನಿರ್ಮಾಣವು ಇದೆ, ಇಲ್ಲಿ ಎಷ್ಟೆಲ್ಲ ಜನ ನೆರೆದಿದ್ದೀರಿ, ಜಿಲ್ಲಾ ಪಂಚಾಯತಿಯಲ್ಲಿ, ಸರ್ಕಾರಿ ಸಂಸ್ಥೆಗಳಲ್ಲಿ, ಕೋಪರೇಟಿವ್ ಸೊಸೈಟಿ ನಡೆಸುವ, ಕೆಲಸ ಮಾಡುವ ಮಹಿಳೆಯರಿದ್ದಾರೆ, ಬಾಲ ಕಾರ್ಮಿಕರ ವಿರುದ್ಧ ಹೋರಾಡು ವವರು, ವರದಕ್ಷಿಣೆ, ಅತ್ಯಾಚಾರ ಮತ್ತು ಜಾತೀಯತೆಯ ವಿರುದ್ಧ ಹೋರಾಡು ವವರು, ದೇವದಾಸಿಯರಿಗಾಗಿ ಹೋರಾಡುವವರು, ಹೆಚ್ಐವಿ ಪೀಡಿತರೊಂದಿಗೆ ಕೆಲಸ ಮಾಡುತ್ತಿರುವವರು, ಮಕ್ಕಳೊಂದಿಗೆ ಕೆಲಸ ಮಾಡುವ ಮಹಿಳೆಯರು ಇಲ್ಲಿ ಸೇರಿದ್ದಾರೆ. ಜೊತೆಗೆ ಕೃಷಿ ಮತ್ತು ಕಾರ್ಮಿಕ ವಲಯದಲ್ಲಿ ದುಡಿಯುತ್ತಿರುವ ಮಹಿಳೆಯರೊಂದಿಗೆ ಕೆಲಸ ಮಾಡುವ ಮಹಿಳೆಯರು ಇಲ್ಲಿದ್ದಾರೆ. ಇಲ್ಲಿ ಯಾರಿಲ್ಲಾ ಹೇಳಿ? ಶಿಕ್ಷಕಿಯರು, ವಕೀಲರು, ಮಕ್ಕಳು ಎಲ್ಲ ಪ್ರತಿನಿಧಿಗಳು ಇದ್ದಾರೆ. ಕೊಳೆಗೇರಿಗಳ ಜನರ ಹಕ್ಕುಗಳಿಗಾಗಿ ಹೋರಾಡುತ್ತಿರುವ ಅಕ್ರಂ ಬಾಯಿ ಇದ್ದಾರೆ. ಬಂಜಾರ ಮಹಿಳೆಯರಿಗಾಗಿ ಹೋರಾಡುತ್ತಿರುವ ಸೋನಾ ಬಾಯಿ ಇದ್ದಾರೆ.

**ಮಾರ್ಚ್ 8 ಬಂದಿದೆ... ಎದ್ದು ನಿಲ್ಲಿ ಎಂದಿದೆ... ಸಂಘಟಿತ ಸ್ತ್ರೀ ಶಕ್ತಿಗೆ ಜಯ ಖಂಡಿತ ಎಂದಿದೆ !!**



ಮಹಿಳೆಯರನ್ನು ಸನ್ಮಾನಿಸುವಂತಹ ಪುರುಷರನ್ನು ಇಲ್ಲಿ ಕರೆತರಲಾಗಿದೆ. ಈ ಮಕ್ಕಳು ಬೇಟಿ ಬಚಾವೋ ಎಂಬ ಘೋಷಣೆಯನ್ನು ಹಾಡಿನ ಮೂಲಕ ಸುಂದರವಾಗಿ ಪ್ರದರ್ಶಿಸಿದ್ದಾರೆ. ನಿಮ್ಮೆಲ್ಲರಿಗೂ ಸಲಾಮು ಹೇಳುತ್ತೇನೆ. ಮಹಿಳೆಯರು ನೆರೆದಿರುವ ಇಂತಹ ಸಂದರ್ಭದಲ್ಲಿ ನನಗೆ ಒಂದು ಹಾಡು ನೆನಪಾಗುತ್ತದೆ.

**ತೋಡ ತೋಡಕೆ ಬಂಧನೋಂಕೊ ದೇಖೋ ಮಹಿಲಾ ಆತಿ ಹೈ**
**ತೋಡತೋಡಕೆ ಬಂಧನೋಂಕೊ ದೇಖೋ ಮಹಿಲಾ ಆತಿ ಹೈ**
**ಆಯೇಗಿ ಜುಲ್ಮ, ಮಿಟಾಯೇಗಿ ವೋತೋ ನಯಾ ಜಮಾನಾ ಲಾಯೇಗಿ**
**ವೋತೋ ನಯಾ ಜಮಾನಾ ಲಾಯೇಗಿ,**
**ಸಿಸಕ ಸಿಸಕರ್‌ನ ರೋಯೇಗಿ ವೋತೋ ಹಿಮ್ಮತಸೆ ಲಡತಿ ಜಾಯೇಗಿ**

(ಎಲ್ಲ ಬಂಧನಗಳನ್ನು ಮುರಿದು ಹಾಕಿ ಮಹಿಳೆಯರ ದಂಡು ಬರ್‍ತಾ ಇದೆ, ಅನ್ಯಾಯ, ಅಪರಾಧಗಳ ಅಳಿಸಿ ಹಾಕಿ ಹೊಸ ಜಗತ್ತನ್ನು ತರುವರು, ಗೋಳಾಡಿ ರೋಧಿಸುವುದಿಲ್ಲ, ಧೈರ್ಯದಿಂದ ಹೋರಾಡುವರು)

ಈ ಹಾಡು ನಮ್ಮ ಎಲ್ಲಾ ಮಹಿಳಾ ಸಂಘಟನೆಯ ಹಾಡಾಗಿದೆ. ಮಹಿಳೆಯರು, ಮಹಿಳೆಯರಿಗಾಗಿ ಕೆಲಸ ಮಾಡುವ ಸಂಘಟನೆಯಷ್ಟೇ ಮಹಿಳಾ ಸಂಘಟನೆ ಅಲ್ಲ, ಯಾವ ಮಹಿಳೆಯರು ಒಂದು ದೇಶಕ್ಕೆ ಅಲ್ಲ ಇಡೀ ಜಗತ್ತಿಗೆ ತಮ್ಮ ತಾಕತ್ತನ್ನು ತೋರಿಸಿದ ದಿನವೇ ಮಾರ್ಚ್ 8ರ ಮಹಿಳಾ ದಿನಾಚರಣೆಯಾಗಿದೆ. ಅಂದು ನ್ಯೂಯಾರ್ಕ್‌ನಲ್ಲಿ ಆ ಮಹಿಳೆಯರು ತೋರಿಸಿದ ಆ ಶಕ್ತಿ/ತಾಕತ್ತು ಇಂದಿಗೂ ಉಳಿದುಕೊಂಡು ಬೆಳೆದುಕೊಂಡು ಬಂದಿದೆ. ಒಂದು ಉದ್ದೇಶ, ಒಂದು ಮೌಲ್ಯ, ಒಂದು ಗುರಿಯನ್ನು ಎದುರಿಗಿಟ್ಟುಕೊಂಡು ಅದನ್ನು ಸಾಧಿಸುವವರೆಗೂ ಈ ಶಕ್ತಿ ನಿಲ್ಲುವುದಿಲ್ಲ, ಕುಗ್ಗುವುದಿಲ್ಲ, ಸುಮ್ಮನಿರುವುದಿಲ್ಲ, ನಾಶವಾಗುವುದಿಲ್ಲ. ಜಾತಿ, ಧರ್ಮ, ಪಂಥ, ಲಿಂಗ ಬೇಧಗಳ ಮೀರಿ ಹೊಸ ಸಮಾಜ ನಿರ್ಮಾಣ ಮಾಡುವಂಥ ಮುಂದಾಳತ್ವ ಜರೂರಿ ಇಂದು ಇದೆ.ಇಂತಹ ಸಂದರ್ಭದಲ್ಲಿ ಶಿಕ್ಷಿತರು, ದಲಿತರು, ಆದಿವಾಸಿಗಳು, ದುಡಿಯುವವರು, ಹಮಾಲಿಗಳೆಲ್ಲರನ್ನೂ ಇಲ್ಲಿ ಒಗ್ಗೂಡಿಸಿರುವಂತದ್ದು ಅಂತಹ ಮುಂದಾಳತ್ವವನ್ನು ಕಟ್ಟುವ ಕಾರ್ಯವಾಗಿದೆ. ಅದಕ್ಕಾಗಿ ನಿಮ್ಮೆಲ್ಲರಿಗೂ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಮಹಿಳೆ ಎಂಬುದು ಮಹಿಮ+ಲಾಲ್+ಇತಿ ಎಂಬ ಸಂಸ್ಕೃತದಿಂದ ಬಂದ ಶಬ್ದವಾಗಿದೆ. ಅಂದರೆ ಯಾರ ಕೈ ಮಣ್ಣಿನಲ್ಲಿದೆ ಅವಳು ಮಹಿಳೆ ಎಂದು.ಯಾರು ಸ್ವತಃ ತಾನೇ ಭೂಮಿಯಾಗಿರುವವಳು, ನದಿಯಾಗಿರುವವಳು, ಸ್ವತಃ ಮಣ್ಣಾಗಿದ್ದಾಳೆ, ಸ್ವತಃ ಗಿಡ, ಪೊದೆ, ಮರವಾಗಿದ್ದಾಳೆ ಅವಳೇ ನಿಜವಾದ ಮಹಿಳೆ ಆಗಿದ್ದಾಳೆ, ಬೇರಿನ್ನಾರೂ ಅಲ್ಲ. ನಾವೆಲ್ಲರೂ ಆಕಾಶದಲ್ಲಿ ಹಾರಾಡೋ ಹಕ್ಕಿಗಳಲ್ಲ, ನಾವು ಭೂಮಿಯ ಮೇಲೆ ಪಾದ ಊರಿ ನಿಂತ ಮನುಷ್ಯರು, ನಿಜವಾದ ಮನುಷ್ಯರು. ಮಕ್ಕಳು ನಾವು ದೇವಿಯರಲ್ಲಾ, ದಾಸಿಯರಲ್ಲಾ ಕೇವಲ ಮನುಷ್ಯರು. ಹಾಗಾಗಿ ಗರ್ವದಿಂದ ಹೇಳಿ ನಾವು ಮನುಷ್ಯರೆಂದು. ಯಾರು ಮನುಷ್ಯರೋ ಅವರು

ಖಂಡಿತಾ ಕೈ ಮೇಲೆತ್ತುತ್ತಾರೆ. ಮುಷ್ಟಿ ಹಿಡಿದು ಗಟ್ಟಿಯಾಗಿ ಹೇಳಿ ನಾವು ಮನುಷ್ಯರು. ಜಾತಿಪಾತಿ, ಧರ್ಮ, ಲಿಂಗ, ಪ್ರಾಂತ್ಯ ಎಲ್ಲ ಬೇಧಗಳನ್ನೂ ದಾಟಿದ ಮನುಷ್ಯರು. ಇಂದು ಮನುಷ್ಯತ್ವದ ಅಭಾವವಿದೆ ಎಂದಾಗ ಮೊದಲು ಎದ್ದು ನಿಲ್ಲುವವರು ಮಹಿಳೆಯರೇ ಆಗಿದ್ದಾರೆ. ಹಾಗಾಗಿ ಎಲ್ಲರೂ ಹೆಮ್ಮೆಯಿಂದ ಹೇಳಿ ನಾವು ಮಹಿಳೆಯರು ಎಂದು. ಹೆಮ್ಮೆಯಿಂದ ಹೇಳಿ ನಾವು ಮಹಿಳೆಯರು. ಈ ಭಾವನೆ ನಮ್ಮ ಅಭಿವ್ಯಕ್ತಿಯ ಭಾಗವಾಗಿ ಹೊಮ್ಮಿಬರುವುದು ಅವಶ್ಯಕವಾಗಿದೆ. ಜಗತ್ತಿಗೆ ತಿಳಿದಿದೆ ಹೆಣ್ಣಿನಲ್ಲಿ ವಿಶೇಷ ಶಕ್ತಿ ಇದೆ ಎಂದು, ಸಾಲಬಾಧೆಯಲ್ಲಿ ರೈತರು, ಕಾರ್ಮಿಕರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಆದರೆ ಮಹಿಳೆಯರು ಜೀವವನ್ನೆ ಒತ್ತೆ ಇಟ್ಟು ಜೀವನವನ್ನು ಪೋಷಿಸುವಳು, ಜೀವ ವಿರೋಧಿ ಅಲ್ಲ. ಒಂದು ಕಡೆ ಪರಿವಾರದ ಜೊತೆ ಇನ್ನೊಂದು ಕಡೆ ಸಮಾಜ ಮತ್ತು ಪ್ರಕೃತಿಯೊಂದಿಗೆ ಸೇರಿಕೊಂಡಿರುವುದೇ ಮಹಿಳೆಯರಿಗೆ ಶಕ್ತಿ, ಚೈತನ್ಯವನ್ನು ನೀಡುತ್ತದೆ. ಹಾಗಾಗಿ ಪ್ರಕೃತಿಯನ್ನು ಉಳಿಸುವುದು ಮತ್ತು ಬದುಕುವ ಅಧಿಕಾರವನ್ನು ಉಳಿಸಿಕೊಳ್ಳುವುದು ಮಹಿಳೆಯರ ಸಂದೇಶವಾಗಿದೆ. ತಮ್ಮತಮ್ಮ ನೆಲೆಯಲ್ಲಿ ಮಹಿಳೆಯರು ನಡೆಸುತ್ತಿರುವ ಈ ಹೋರಾಟ ವೈವಿಧ್ಯಮಯವಾಗಿದೆ. ಈ ವೇದಿಕೆಯಲ್ಲಿರುವವರು ನಿಜವಾದ ಜನಪ್ರತಿನಿಧಿಗಳಾಗಿದ್ದಾರೆ, ಇವರ‍್ಯಾರು ಜಿಲ್ಲಾ ಪಂಚಾಯತಿಯಲ್ಲೋ, ಲೋಕ ಸಭೆಯಲ್ಲೋ ಕುಳಿತವರಲ್ಲ. ಲೋಕಸಭೆಗಿಂತ ಹೆಚ್ಚು ಸಂಸದರಿರುವ ಈ ಜನ ಸಭೆಯಲ್ಲಿ ತಮ್ಮ ಭಾವನೆ, ಕಷ್ಟ ಮತ್ತು ಆಕ್ರೋಶದ ಜೊತೆಗೆ ತಮ್ಮ ಲೋಕದೃಷ್ಟಿಯನ್ನು ತಮ್ಮೆದುರಿಗೆ ತಂದಿದ್ದಾರೆ.

ಬಂಧುಗಳೇ, ಇಂದು ಬದುಕುವ ಅಧಿಕಾರದ ಹೋರಾಟವನ್ನು ಮಹಿಳೆಯರು ಮುನ್ನಡೆಸಿದ್ದಾರೆ.ಸಮಾಜಹೆಣ್ಣು ಮಕ್ಕಳ ಜೀವವನ್ನು ತೆಗೆಯುತ್ತದೆ, ಅವಳಿಗೆ ಬೆಲೆಕಟ್ಟಿ ವ್ಯಾಪಾರ, ಮಾರಾಟ ಮಾಡುತ್ತದೆ. ಇಲ್ಲಿ ಹೆಣ್ಣು ಭ್ರೂಣ ಹತ್ಯೆಯ ಬಗ್ಗೆ ಮಕ್ಕಳು ಸುಂದರವಾಗಿ ನಾಟ್ಯದ ಮೂಲಕ ತೋರಿಸಿದರು. ಅದನ್ನು ನೋಡಿ ಮನತುಂಬಿ ಬಂತು. ಆದರೆ ಎಲ್ಲಿ ಸುಶಿಕ್ಷಿತರೂ ಹೆಚ್ಚಿದ್ದಾರೊ, ಎಲ್ಲಿ ಉದ್ಯೋಗಸ್ಥರು ಹೆಚ್ಚಿದ್ದಾರೊ, ಎಲ್ಲಿ ಉನ್ನತ ಜಾತಿಯವರಿದ್ದಾರೋ ಅಲ್ಲಿ ಹೆಣ್ಣುಮಕ್ಕಳ ಜೀವವನ್ನು ತೆಗೆಯಲಾಗುತ್ತಿದೆ. ಹೆಣ್ಣುಮಕ್ಕಳನ್ನು ಕಾಪಾಡುವ ಸಲುವಾಗಿ ನಾವಿಲ್ಲಿ ಕಾರ್ಯಪ್ರವೃತ್ತರಾಗಿದ್ದೇವೆ. ಬದುಕುವ ಅಧಿಕಾರಕ್ಕಾಗಿ ನಡೆಸಿರುವ ಮೂಲಭೂತ ಹೋರಾಟದಲ್ಲಿ ನಾವು ತೊಡಗಿದ್ದೇವೆ ಆ ಬಗ್ಗೆ ಯಾವ ಅನುಮಾನಗಳೂ ಇಲ್ಲ. ಹರಿಯಾಣಾದ ಕಲ್ಪನಾ ಚಾವ್ಲಾ ಗಗನಯಾತ್ರಿಯಾದಳು ಎಂದ ಮಾತ್ರಕ್ಕೆ ಹರಿಯಾಣದಲ್ಲಿ ಹೆಣ್ಣು ಮಕ್ಕಳು ಸುರಕ್ಷಿತವಾಗಿದ್ದಾರೆ ಎಂದು ಕೊಳ್ಳುವುದು ಸರಿಯಲ್ಲ. ಹೆಣ್ಣು ಮಕ್ಕಳನ್ನು ಬದುಕಿಸುವವರೂ ಇಲ್ಲಿದ್ದಾರೆ, ಅವರು ಹೇಳುತ್ತಿದ್ದಾರೆ ಯಾರೂ ಸಹಕಾರವನ್ನೇ ನೀಡುತ್ತಿಲ್ಲ. ಸಮಾಜದ ಒಂದು ಭಾಗವೇ ವಿರುದ್ಧವಾಗಿದೆ, ಸ್ತ್ರೀ ಮತ್ತು ಪುರುಷರ ನಡುವಿನ ಲಿಂಗಾನುಪಾತ ಇಳಿಯುತ್ತಿದೆ. 1000 ಜನ

**ಎಲ್ಲೋ ಇಲ್ಲ ಅತ್ಯಾಚಾರಿಗಳು ನಮ್ಮ ನಡುವೆ ಇದ್ದಾರೆ ನಮ್ಮೊಳಗೂ ಇದ್ದಾರೆ!**



ಪುರುಷರಿಗೆ 950ಕ್ಕೂ ಕಡಿಮೆ ಹುಡುಗಿಯರು ಇದ್ದಾರೆ. ಇದು ಹೀಗೆ ಮುಂದುವರೆದರೆ ಮದುವೆ ವಯಸ್ಸಿಗೆ ಬಂದ ಹುಡುಗರಿಗೆ ಹೆಣ್ಣುಗಳು ಸಿಗುವುದಿಲ್ಲ, ಆದರೆ ಈ ವಿಷಯ ಮುಖ್ಯವಲ್ಲ, ನಮಗೆ ಮುಖ್ಯವಾಗಬೇಕಾಗಿರುವುದು ಪ್ರತಿಯೊಬ್ಬರ ಜೀವ ಉಳಿಸುವುದು ಮತ್ತು ಸ್ತ್ರೀ– ಪುರುಷರ ಸಮಾನತೆ ಬದುಕುವ ಅಧಿಕಾರವನ್ನು ಉಳಿಸುವುದು. ಪ್ರತಿ ವರ್ಷ ಲಕ್ಷಾಂತರ ಹೆಣ್ಣುಮಕ್ಕಳನ್ನು ಲಿಂಗ ಪತ್ತೆ ಪರೀಕ್ಷೆ ಮಾಡಿ ಕೊಲ್ಲಲಾಗುತ್ತಿದೆ. ವಿಜ್ಞಾನದ ಹೆಸರಿನಲ್ಲಿ ಮನುಷ್ಯ ಮನುಷ್ಯರ ನಡುವೆ ಬೇದ ಭಾವ ಮಾಡುವುದನ್ನು ವಿಕಾಸದ ಪ್ರತೀಕವೆಂದು ಭಾವಿಸಲಾಗುತ್ತಿದೆ. ಇದನ್ನು ನಾವೆಲ್ಲಾ ಮಹಿಳೆಯರು ಇಂದು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯೆಂದು ಖಂಡಿಸುತ್ತೇವೆ. ಹೆಣ್ಣು ಮಕ್ಕಳನ್ನು ಉಳಿಸಬಾರದೆನ್ನುವ ಈ ಸಮಾಜ ಯಾಕೆ ಹೀಗೆ ಮಾಡುತ್ತಿದೆ? ಸಮಾಜದ ಪ್ರತಿಯೊಂದು ಕ್ಷೇತ್ರದಲ್ಲೂ ವಿಷಮತೆ ಇದೆ. ಇವತ್ತಿಗೂ ವರದಕ್ಷಿಣೆ ಪದ್ಧತಿ ಎಲ್ಲೆಲ್ಲಿ ಜಾರಿ ಇದೆಯೋ ಅಲ್ಲಿ ತಂದೆತಾಯಂದಿರು ಬೆಲೆ ತೆರಬೇಕೆನ್ನುವ ಕಾರಣಕ್ಕೆ, ಹೆಣ್ಣುಮಕ್ಕಳನ್ನು ಹುಟ್ಟಿಸಲೇ ಬಾರದೆಂದು ತೀರ್ಮಾನಿಸುತ್ತಾರೆ. ಒಳ್ಳೆ ಆಹಾರ ನೀಡಿ ಆರೋಗ್ಯದಿಂದ ಯಾಕೆ ಸಾಕಬೇಕು ಹೇಗೂ ಬೇರೆಯವರ ಮನೆಗೆ ಹೋಗುವವಳು ಎಂದು ಭಾವಿಸುತ್ತಾರೆ. ಎಲ್ಲಾ ಕ್ಷೇತ್ರದಲ್ಲಿರುವಂತೆ ಶಿಕ್ಷಣದಲ್ಲೂ ಸ್ಪರ್ದೆಯಿದೆ. ಶಿಕ್ಷಣದ ಅಧಿಕಾರವನ್ನು ಬಾಬಾ ಸಾಹೇಬರು ಅಂದೇ ಸಂವಿಧಾನದಲ್ಲಿ ನೀಡಿದ್ದರು. ಈಗ ಶಿಕ್ಷಣದ ಅಧಿಕಾರ ನೀಡಬೇಕೆಂದು ಅನಿಸಿದ ಕಪಿಲ್ ಸಿಬಲ್ ಅಧಿಕಾರದ ಕಾನೂನು ಮಾಡಿದರು ಮೋದಿ ಸರಕಾರವು ಸೇರಿದಂತೆ ಎಲ್ಲಾ ಸರ್ಕಾರಗಳು ದಲಿತರು, ಆದಿವಾಸಿಗಳು ಮತ್ತು ಬಹುಜನರಿಂದ ಶಿಕ್ಷಣದ ಹಕ್ಕನ್ನು ಕಸಿದುಕೊಂಡವು. ಶಿಕ್ಷಣದ ವ್ಯಾಪಾರೀಕರಣದಿಂದಾಗಿ ಅಪ್ಪ ಅಮ್ಮಂದಿರು ಹೆಣ್ಣು ಮಕ್ಕಳನ್ನೇ ಶಿಕ್ಷಣದಿಂದ ದೂರವಿರಿಸಿದರು. ಇಂತಹ ವಿಷಮತೆ, ತಾರತಮ್ಯ ಪ್ರತೀ ಕ್ಷೇತ್ರದಲ್ಲೂ ಇದೆ. ಈ ವಿಷಮತೆ ಅಸಾಮಾನತೆ ಸೋದರಿಯರ ಮೇಲೆ ಇನ್ನೂ ಗಾಢವಾದ ಪರಿಣಾಮ ಬೀರುತ್ತದೆ. ಸ್ತ್ರೀ ಪುರುಷ ನಡುವಿನ ತಾರತಮ್ಯವೇ ಆರ್ಥಿಕತೆಯಲ್ಲಿದೆ, ಸಂಪಾದನೆಯಲ್ಲಿದೆ. ಲಕ್ಷಾಧಿಪತಿಯೊಬ್ಬನ ಕಾರ್ಖಾನೆಯಲ್ಲಿ ಕೆಲಸ ಮಾಡುವ ಕಾರ್ಮಿಕನ ಉತ್ಪಾದನೆಯಲ್ಲಿ ತಾರತಮ್ಯ, ಸಂಘಟಿತ ಅಸಂಘಟಿತ ವಲಯದ ಕಾರ್ಮಿಕರ ನಡುವಿನ ತಾರತಮ್ಯ, ಕೃಷಿ ಮತ್ತು ಉದ್ಯೋಗ ಎಂಬ ತಾರತಮ್ಯ, ನಗರ ಮತ್ತು ಗ್ರಾಮೀಣ ಪ್ರದೇಶ ಎಂಬ ತಾರತಮ್ಯ ಹೀಗೆ ಎಲ್ಲಾ ತಾರತಮ್ಯಗಳ ಕಾರಣದಿಂದಾಗಿ ಇಂದು ಮಹಿಳೆಯರು ಎಲ್ಲರಿಗಿಂತ ಹೆಚ್ಚಾಗಿ ಅದರ ಪರಿಣಾಮವನ್ನು ಅನುಭವಿಸುತ್ತಿದ್ದಾರೆ. ಇದು ಸರಿಯಾ? ಇದನ್ನು ಒಪ್ಪಬಹುದಾ? ಇಲ್ಲ ಈ ಸ್ಥಿತಿಯನ್ನು ಬದಲಾಯಿಸಲು ಮಹಿಳಾ ಐಕ್ಯತೆ ಚಿರಾಯುವಾಗಲಿ.

ಕೇವಲ ಘೋಷಣೆಗಳ ಮೂಲಕವಲ್ಲ, ಅದು ನಮ್ಮೊಳಗಿನ ಸಂಕಲ್ಪವಾಗಬೇಕು. ಕೃಷಿ ಕೆಲಸ ಮಾಡುವ ಮಹಿಳೆಯರು ಸೇರಿದ್ದಾರೆ. ಅವರ ಕೈಗಳು ಮಣ್ಣಾಗಿವೆ. ಅವರೇ ಇಂದು ಮದ್ಯಾಹ್ನ ನಮಗೆ ಅನ್ನ ನೀಡುವವರು. ಆದರೆ ಅವರ ಪರಿಸ್ಥಿತಿ

ಹೇಗಿದೆ? 3,20,000 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆ ರೈತರ ಮನೆಗಳಲ್ಲಿರುವ ವಿಧವೆಯರ ಮತ್ತು ಮಕ್ಕಳ ಪರಿಸ್ಥಿತಿ ಹೇಗಿದೆ? ಯಾಕೆ ಅವರ ಪರಿಸ್ಥಿತಿ ಹೀಗಿದೆ? ಏಕೆಂದರೆ ಭೂಮಿಯನ್ನು ನಷ್ಟದ ಬಾಬತ್ತೆಂದು ಪರಿಗಣಿಸ ಲಾಗಿದೆ. ಹೊಲದಲ್ಲಿ ದುಡಿಯುವವರ ಬೆವರಿಗೆ, ರಕ್ತಕ್ಕೆ ಬೆಲೆ ಇಲ್ಲದಾಗಿದೆ. ಹೊಲದ ಉತ್ಪನ್ನಕ್ಕೆ ಬೆಲೆಯಿಲ್ಲದಾಗಿದೆ. ಇದರ ವಿರುದ್ಧ ಹೋರಾಡಲು ರೈತರಿಗೆ ಮಹಿಳೆಯರ ಶಕ್ತಿ ಬೇಕಾಗಿದೆ. ನಮ್ಮ ನರ್ಮದಾ ಘಟ್ಟದಲ್ಲಿ ಹೋರಾಡುತ್ತಿರುವ ಮಹಿಳೆಯರಾಗಲಿ, ಮರಾತವಾಡಾ ಅಥವಾ ಕರ್ನಾಟಕದ ರೈತ ಮಹಿಳೆಯರಾಗಲಿ ಕೃಷಿ ದುಡಿಮೆ ಗಾರರದೇ ಬಹುದೊಡ್ಡ ಸಂಖ್ಯೆಯಾಗಿದೆ. ಅವರ ದುಡಿಮೆಗೆ ಸಿಗುತ್ತಿರುವ ಬೆಲೆ ಏನು ಎಂಬುದನ್ನು ಯೋಚಿಸಬೇಕಾಗಿದೆ. ಅವರೇ ಏಕೆ ಆತ್ಮಹತ್ಯೆ ಮಾಡಿಕೊಳ್ಳು ವಂತಾಗಿದೆ? ಯಾವ ಉದ್ಯೋಗಪತಿಗೂ ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿ ಯಾಕೆ ಬಂದಿಲ್ಲ? ಮಹಿಳೆಯರ ನೇತೃತ್ವದಲ್ಲಿ ಈ ವಿಷಯ ಬಂದರೆ ವ್ಯವಸಾಯದೊಂದಿಗೆ ತಳುಕು ಹಾಕಿಕೊಂಡಿರುವ ಊಟದ ಅಧಿಕಾರ ಕುರಿತು ಮಾತನಾಡುವುದಾದರೆ ಒಂದು ರೇಶನ್ ಕಾರ್ಡ್ ಬಿಹಾರದಲ್ಲಿ 350 ರೂಪಾಯಿಗೆ ಮಾರಾಟವಾಗುತ್ತೆ, ಇಲ್ಲಿ ಎಲ್ಲಿ ಸಿಗುತ್ತದೆ ರೇಷನ್ ಕಾರ್ಡ್ ಎಂದು ನನಗೆ ಗೊತ್ತಿಲ್ಲ, ನಾಲ್ಕು ಜನ ಅಧಿಕಾರಿಗಳನ್ನು ನಮ್ಮ ಬಾಂಬೆಯ ಸ್ಲಂ ಹೆಣ್ಣು ಮಕ್ಕಳು ಜೇಲಿಗೆ ಕಳುಹಿಸಿದ್ದರು. ರೇಷನ್ನಿನ ಹೆಸರಿನಲ್ಲಿ ಆಗುತ್ತಿರುವ ಭ್ರಷ್ಟಾಚಾರದಿಂದ ಜನ ಬೇಸತ್ತು ಹೋಗಿದ್ದಾರೆ. ಕೃಷಿಯನ್ನು, ಕೃಷಿ ಮಾಡುವ ರೈತರನ್ನು, ರೈತ ಕೂಲಿಗಳನ್ನು ಉಳಿಸುವ ಕೆಲಸ ಆಹಾರ ಅಧಿಕಾರದ ಭಾಗವಾಗಿದೆ. ಈ ಅಧಿಕಾರ ತಾಯಿಗೆ ಚೆನ್ನಾಗಿ ಗೊತ್ತು ಯಾಕೆಂದರೆ ಅವಳೇ ಮಕ್ಕಳಿಗೆ ಊಟ ನೀಡುವವಳು. ಹಾಗಾಗಿ ಕೃಷಿಯನ್ನು ಉಳಿಸುವ, ಆಹಾರ ಹಕ್ಕನ್ನು ಕಾಪಾಡುವ ಕೆಲಸ ಬಹಳ ಮಹತ್ವದ್ದು. ನಮಗಷ್ಟೇ ಘೋಷಣೆ ಕೂಗಲು ಸಾಧ್ಯ. ಈ ದೇಶದಲ್ಲಿ ನಡೆಯುತ್ತಿರುವ ಗೂಂಡಾಗಿರಿ ನಮ್ಮ ಬಾಯಿಂದ ಊಟ ಕಸಿಯುತ್ತಿದೆ ಅವರ ವಿರುದ್ಧ ನಮ್ಮ ಸಂಘಟನೆ ಜೂಂಡಾಗರ್ದಿ ಹೇಗೆ ಪ್ರಯೋಜನಕ್ಕೆ ಬರುತ್ತದೆ ಎಂಬುದನ್ನು ಯೋಚಿಸಬೇಕು. ರಣನೀತಿಯನ್ನು ಮಾಡಿಕೊಂಡು ಗುಂಡಾಗರ್ದಿಯ ವಿರುದ್ಧ ಜೂಂಡಾಗರ್ದಿಯನ್ನು ನಡೆಸಲು ತೀರ್ಮಾನಮಾಡಿಕೊಂಡು ರೇಶನ್ ಅಂಗಡಿಗಳ ಮುಂದೆ ಹೋಗಿ ಕೇಳಬೇಕು. ಹೋಗಿ ಅಲ್ಲಿ ರೈತರನ್ನು ರುಬ್ಬುತ್ತಿರುವ, ಅವರನ್ನು ಸಾಲಗಾರನನ್ನಾಗಿ ಮಾಡಿ ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡುವ ಶ್ರೀಮಂತರೊಂದಿಗೆ ಹೋರಾಡಬೇಕು. ಮಹಿಳೆಯರು ಧ್ವನಿ ಎತ್ತಿ ನಿಂತರೆ ಶ್ರೀಮಂತನಿರಲಿ, ಸರಕಾರವೇ ಇರಲಿ ನಿಲ್ಲುವುದಿಲ್ಲ, ಮಹಿಳೆಯರು ಅವರಿಗೆ ಪಾಠ ಕಲಿಸದೇ ಬಿಡುವುದಿಲ್ಲ.

ನಮ್ಮ ಮುಂದೆ ಇಂದು ಭೂಮಿಯ ಪ್ರಶ್ನೆ ಇದೆ, ನಗರದ ಬಹಳಷ್ಟು ಬಡ ಮಹಿಳೆಯರು ಇಲ್ಲಿ ನೆರೆದಿದ್ದಾರೆ, ಇವರೆಲ್ಲ ಹೋರಾಡುವ ಮಹಿಳೆಯರು. ಇವರು 20/15 ತುಂಡು ನಿವೇಶನಕ್ಕಾಗಿ ಹೋರಾಡಬೇಕಾಗಿದೆ. ವಿಜಾಪುರದ ಸ್ಲಂಗಳನ್ನು

**ನಮಗೆ ನಮ್ಮ ರಕ್ಷಣೆ ಬೇಕಿಲ್ಲ ಬೇಕಿದ್ದರೆ ಕೇಳಿ ನಾವೇ ಕೊಡುತ್ತೇವೆ.**



ಸಕ್ರಮ, ಅಕ್ರಮವೆಂದು ಘೋಷಿಸುವ ಕೆಲಸವನ್ನು ಕಲೆಕ್ಟರ್ ಆಗಿದ್ದ ನಂದಕುಮಾರ ಮಾಡಿದ್ದರು, ಮುಂದೆ ಅವರು ಯಡಿಯೂರಪ್ಪನವರೊಂದಿಗೆ ಸೇರಿಕೊಂಡು ಎಲ್ಲಿ ಹೋದರೋ ಗೊತ್ತಿಲ್ಲ. ಆದರೆ ಇವತ್ತಿಗೂ ವಿಜಾಪುರದ ಸ್ಲಂಗಳನ್ನು ಸಕ್ರಮವೆಂದು ಘೋಷಿಸದಿದ್ದರೆ, ಸ್ಲಂಗಳಲ್ಲಿರುವ ಈ ಮಹಿಳೆಯರು ಗುಂಡಾಗಳೇ? ಕಳ್ಳರೇ? ಲೂಟಿ ಮಾಡುವವರೇ, ತಮ್ಮ ಸ್ವಾರ್ಥಕ್ಕಾಗಿ ಮಾಡುತ್ತಿದ್ದಾರೆಯೇ? ಸಮಾಜಕ್ಕೆ ಅವರು ಕೊಡುಗೆ ನೀಡುತ್ತಿಲ್ಲವೇ? ಸಮಾಜದ ನಿರ್ಮಾಣಕ್ಕೆ ಅವರು ದುಡಿಯುತ್ತಿಲ್ಲವೇ? ದೊಡ್ಡದೊಡ್ಡ ಧಣಿಗಳ ಮನೆಯಲ್ಲಿ ಕೆಲಸ ಮಾಡುವ ಮಹಿಳೆಯರಲ್ಲವೇ? ರಸ್ತೆ ಬದಿಯಲ್ಲಿ ಕೂತು ತರಕಾರಿ ಹಣ್ಣು, ಹೂ ಮಾರುವವರು ಮಹಿಳೆಯರಲ್ಲವೇ? ರಸ್ತೆ ಸ್ವಚ್ಛಮಾಡುವ ಪೌರಕಾರ್ಮಿಕರು ಸ್ಲಂನಲ್ಲಿ ಇಲ್ಲವೇ? ಸಮಾಜಕ್ಕೆ ಇವರಿಗಿಂತ ಹೆಚ್ಚಿನ ಸೇವೆ ಯಾರು ನೀಡುತ್ತಾರೆ? ಅಂಬಾನಿ ಕೊಡುತ್ತಾನಾ? ಟಾಟಾ, ಬಿರ್ಲಾ, ಜಿಂದಾಲ್, ಮಿತ್ತಲ್ ಕೊಡುತ್ತಾರಾ? ಈ ಮಹಿಳೆಯರು ದೇಶದಲ್ಲಿ ಒಂದೇ ಒಂದು ದಿನ ಕೆಲಸ ನಿಲ್ಲಿಸಿದರೆ, ಅವರ ಕಾರ್ಖಾನೆ ನಡೆಯುವುದಿಲ್ಲ, ಅವರ ಮನೆಗಳು ನಡೆಯುವುದಿಲ್ಲ, ಅವರ ಶೌಚಾಲಯಗಳು ಸ್ವಚ್ಛವಾಗುವುದಿಲ್ಲ. ಸಂಗಾತಿಗಳೇ ಅದಕ್ಕಾಗಿಯೇ ತಮ್ಮ ಮನೆಗಾಗಿ, ವಸತಿ ಹಕ್ಕಿಗಾಗಿ ಹೋರಾಡುತ್ತಿರುವ ಈ ಮಹಿಳೆಯರಿಗೆ ನಾವೆಲ್ಲರೂ ಸಲಾಂ ಮಾಡುವ. ಮುಂಬೈನ ಬಸ್ತಿಬಸ್ತಿಗಳನ್ನೆ ನಾಶ ಮಾಡಲಾಯಿತು. 2004ರಲ್ಲಿ ಎಪ್ಪತ್ತೈದು ಸಾವಿರ ಮನೆಗಳನ್ನು ಕೆಡವಲಾಯಿತು. ಕೆಡವಿದ್ದು ಗುಡಿಸಲುಗಳು ಎಂದರು, ನಾವು ಕೇಳಿದೆವು ಗುಡಿಸಲಾಗಲಿ, ಮಹಲಾಗಲಿ ಮನೆಯೇ ಅಲ್ಲವೇ? ಯಾಕೆ ಕೆಡವಿದಿರಿ ಎಂದು. ಇಲ್ಲಿ ಪ್ರಶ್ನೆ ಭೂಮಿಯದಾಗಿದೆ. ಭೂಮಿ ಹೆಣ್ಣು, ಪೃಥ್ವಿ ಹೆಣ್ಣು, ಅದರ ಮೇಲೆ ಅತ್ಯಾಚಾರ ಮಾಡುವ ಗಂಡಸು ಮತ್ತು ಪುರುಷ ಪ್ರಧಾನ ವ್ಯವಸ್ಥೆ ಆ ಭೂಮಿಗಾಗಿ ಬಂಗಾರ ಮತ್ತು ಹಣ ಕೇಳಿ, ಅದನ್ನು ತುಂಡುತುಂಡು ಮಾಡಿ ಕೊಳ್ಳೆ ಹೊಡೆಯಲು ತಯಾರಾಗಿದ್ದಾರೆ. ಹೀಗೆ ಭೂಮಿಯನ್ನು ಲೂಟಿ ಮಾಡುವವರಿಗೆ ಮಹಿಳೆಯರು ಸವಾಲು ಹಾಕಿದಾಗ, ಜನಸಾಗರವೇ ಎದ್ದು ಬರುವ ದೃಶ್ಯಕ್ಕೆ ಮುಂಬೈ ಸಾಕ್ಷಿಯಾಗಿದೆ. ಒಬ್ಬ ಅನ್ವರಿ ಎದ್ದು ನಿಲ್ಲುತ್ತಾಳೆ ಮಗುವನ್ನು ಕಂಕುಳಲ್ಲಿಟ್ಟುಕೊಂಡು ರ‍್ಯಾಲಿಯಲ್ಲಿ ಸೇರಿಕೊಳ್ಳುತ್ತಾಳೆ. ಈಗ ಹತ್ತನ್ನೆರೆಡು ದಿನಗಳ ಹಿಂದೆ, ಮೊನಿರಾಜ ಎಂಬ ಗುಂಡಾ ಮುಂಬೈನ ಮಾನಕುರ್ತ ಕ್ಷೇತ್ರದಲ್ಲಿ ಮನೆ ಮನೆಗೂ ನುಗ್ಗಿ ಸಾಮಾನುಗಳನ್ನು ಮುರಿದ, ಜೀವ ತೆಗೆಯುವ ಮಾತು ಬಂದಾಗ, ತನ್ನ ಮನೆಯ ಅಧಿಕಾರಕ್ಕಾಗಿ 2005 ಹೋರಾಡುತ್ತಲೇ ಬಂದಿರುವ ಅದೇ ಅನ್ವರಿದೇವಿ ಇಡೀ ಸಮಾಜವನ್ನು ಕರೆದುಕೊಂಡು ರಸ್ತೆಗೆ ಇಳಿದಳು, ಪೋಲಿಸರು ಬಂದರು, ಅಲ್ಲಿದ್ದ ಪೊಲೀಸ್ ಮಹಿಳೆಯರ ಬಳಿ ಹೋಗಿ ಇವತ್ತಾದರೂ ನೀವು ಈ ಕಡೆಗೆ ಬನ್ನಿ ಎಂದು ಕರೆದಳು, ಈ ದಿನ ನಾನೂ ಸಹ ಮಹಿಳಾ ಪೊಲೀಸರನ್ನು ಕರೆದೆ. ಅನ್ವರಿ ನೇತೃತ್ವದಲ್ಲಿ ನಡೆದ ಹೋರಾಟವು ಇಡೀ ಕ್ಷೇತ್ರವನ್ನೇ ಬಚಾವು ಮಾಡಿತು. ಆ ಸ್ಥಳದ ಹೆಸರು ಸನಹರಿ ನಗರ. ನಾನು ಸುಳ್ಳು ಹೇಳುತ್ತಿಲ್ಲ ಮೋದಿಜಿಯವರ ಮನಕಿಬಾತ್ ನಂತೆ.

ಮಹಿಳೆಯರಲ್ಲಿ ಹಟವಿದೆ ಅವರು 'ಡಾಲ್ ಭೀ ಹೈ ತಲ್ವಾರ್ ಭೀ ಹೈ'. ಆದರೆ ಅವರು ತ್ರಿಶೂಲ ಕೈಗೆತ್ತಿಕೊಳ್ಳುವುದಿಲ್ಲ. ಮಹಿಳೆಯರ ಮೂಳೆ ಮತ್ತು ರಕ್ತದಲ್ಲಿರುವ ಶಕ್ತಿ/ತಾಕತ್ತು ಅವರು ಜನಾಂದೋಲನದಲ್ಲಿ ಭಾಗಿಯಾದಾಗ ಉಕ್ಕಿ ಹೊರ ಹೊಮ್ಮುತ್ತದೆ. ಮಹಿಳಾ ಬಿಡುಗಡೆಯ ಹೊಸ ಮಾರ್ಗ ಜನಾಂದೋಲನವೇ ಆಗಿದೆ. ಪಂಚಾಯತ್‌ನಲ್ಲಿ, ಲೋಕಸಭೆಯಲ್ಲಿ, ವಿಧಾನ ಸಭೆಯಲ್ಲಿ ನಮಗೆ ರಕ್ಷಣೆ ಬೇಡವೆ? ಈ ಮಾತನ್ನು ಬೆಳಗಿನಿಂದ ಪತ್ರಕರ್ತರು ಕೇಳುತ್ತಿದ್ದರು, ಬೇಗಂ ಅವರು ಕೇಳುತ್ತಿದ್ದರು, ಹೌದು, ರಕ್ಷಣೆ ಬೇಕು. ಆದರೆ ಅದಕ್ಕಿಂತ ಮುಂಚೆ ನಮ್ಮ ಮತ್ತು ಸಮಾಜದ ಸುರಕ್ಷತೆ ಬೇಕು, ಅಧಿಕಾರದ ರಕ್ಷಣೆ ಬೇಕು. ಆದರೆ ನಮ್ಮ ರಾಜನೀತಿಯು ಕೇವಲ ಲೋಕಸಭೆ, ರಾಜ್ಯ ಸಭೆ, ಪಂಚಾಯ್ತಿಗೆ ಸೀಮಿತವಾಗಬಾರದು. ಪಂಚಾಯ್ತಿಯಲ್ಲಿ ಈಗಾಗಲೇ ಅಧಿಕಾರ ಪಡೆದುಕೊಂಡಿರುವ ಮೂರ್‍ನಾಲ್ಕು ಮಹಿಳೆಯರು ಇಲ್ಲಿ ಕುಳಿತಿದ್ದಾರೆ. ಅವರಿಗೆ ಚೆನ್ನಾಗಿ ಗೊತ್ತು ಅವರಿಗಿರುವ ಗೌರವ. ಜನಾಂದೋಲನಕ್ಕೂ ಗೌರವವಿದೆ. ಆದರೆ ಜನಾಂದೋಲನ ರಾಜಕಾರಣದಲ್ಲಿಯೂ ಮಹಿಳೆಯರ ಸ್ಥಾನ, ಸಮ್ಮಾನ, ಅಧಿಕಾರ ಹೊಂದುವುದು ಮಹಿಳೆಯರಿಗೆ ಬಲ ನೀಡುತ್ತದೆ. ಹಾಗಾಗಿ ನಾವು ಜನಾಧಿಕಾರದ ರಾಜಕೀಯದಲ್ಲಿ ಇರಬೇಕು, ಇರುತ್ತೇವೆ. ಸಂಗಾತಿಗಳೇ ಇದು ಕೇವಲ ಭೂಮಿಯ ಪ್ರಶ್ನೆಯಲ್ಲ. ಎಲ್ಲಿ ಉದ್ಯೋಗದ ಹೆಸರಿನಲ್ಲಿ ಕೃಷಿ ಭೂಮಿಯನ್ನು ಕಸಿದುಕೊಳ್ಳಲಾಗುತ್ತಿದೆಯೋ, ಕರ್ನಾಟಕದಲ್ಲಿಯೂ ಇದು ನಡೆಯುತ್ತಿದೆ, ರೆಡ್ಡಿ ಸೋದರರು ಕಸಿದುಕೊಂಡು (ಕಟಾರ) ಭೂಮಿಯ ವಿರುದ್ಧ ಮಲ್ಲಿಕಾರ್ಜುನ ಅವರು ಹೋರಾಟವನ್ನು ಆರಂಭಿಸಿದಾಗ ಹಲವಾರು ಮಹಿಳೆಯರು ಭಾಗಿಯಾದರು. ಪೋಸ್ಕೋ ವಿರುದ್ಧ ಹೋರಾಡಿದ ಜನರು ಇಲ್ಲಿದ್ದಾರೆ, ಆ ಹೋರಾಟದಲ್ಲಿ ಮಠದ ಸ್ವಾಮಿಯವರ ಜೊತೆ ಹಲವಾರು ಮಹಿಳೆಯರು ಜೊತೆ ಗೂಡಿದರು. ಹೋರಾಟದಿಂದಾಗಿ ಪೋಸ್ಕೋ ಕಂಪನಿ ಕರ್ನಾಟಕ ಬಿಟ್ಟು ಹೋಗಬೇಕಾಯಿತು. ಒರಿಸ್ಸಾದಲ್ಲಿಯೂ ಪೋಸ್ಕೋದ ದನಿಯೂ ಇಲ್ಲಿಯತನಕ ಬೀಗ ಜಡಿದುಕೊಂಡು ಕೂತಿದೆ. ನರ್ಮದಾ ಹೋರಾಟಕ್ಕೆ 20 ವರ್ಷಗಳಾಯಿತು. ಯಾವುದೇ ಆಂದೋಲನನಲ್ಲಿ ಏಳು ಸಾವಿರ ಜನ ಸೇರಿದರೆ 3 ರಿಂದ 4 ಸಾವಿರ ಮಹಿಳೆಯರು ಅಲ್ಲಿ ಸೇರುತ್ತಾರೆ. ಹೋರಾಟದ ಫೋಟೋಗಳನ್ನು, ಕ್ಯಾಲೆಂಡರ್ ಗಳನ್ನು ಅಲ್ಲಿ ಪ್ರದರ್ಶಿಸಲಾಗಿದೆ, ಅದರಲ್ಲಿ ನೀವು ನೋಡಬಹುದು. ಯಾವ ಆಂದೋಲನದಲ್ಲಿ ಮಹಿಳೆಯರ ಶಕ್ತಿ ಚಿಮ್ಮಿ ಬರುತ್ತದೆಯೋ ಆ ಆಂದೋಲನವು ವ್ಯವಸ್ಥೆಗೆ ಸವಾಲು ಹಾಕದೆ ಇರುವುದಿಲ್ಲಾ. ವಿಶೇಷ ಚೈತನ್ಯ ಮತ್ತು ಸೃಜನಶೀಲತೆಯೊಂದಿಗೆ ಮಹಿಳೆ ವ್ಯವಸ್ಥೆ ವಿರುದ್ಧ ಸಿಡಿದೆದ್ದರೆ ರಾಜಕಾರಣಿಯಾಗಿರಲಿ, ಸರ್ಕಾರದ ಅಧಿಕಾರಿಯಾಗಿರಲಿ, ಉದ್ಯೋಗಪತಿ ಇರಲಿ, ವಿಶ್ವಬ್ಯಾಂಕ್ ಅಧಿಕಾರಿಯೇ ಬರಲಿ ತಡೆಯಲಾಗುವುದಿಲ್ಲ. ಕೆಲವೊಮ್ಮೆ ಅವರ ಕಾಲರ್ ಪಟ್ಟಿ ಹಿಡಿದು ಗಟ್ಟಿಸಿ ಕೇಳಿರುವುದೂ ಇದೆ. ಬಿಂಕ್ಲಾನ್ ಎಂಬ ವಿಶ್ವಬ್ಯಾಂಕ್ ಅಧಿಕಾರಿಯೊಬ್ಬರ ಕಾಲರ್



ಹಿಡಿದು ತಾಯಿಯೊಬ್ಬಳು ಕೇಳಿದ್ದಳು 'ನಿಮ್ಮ ಮನೆಯಲ್ಲಿ ಮಹಿಳೆಯರು ಇದ್ದಾರಾ ಇಲ್ವಾ? ನಿಮಗೆ ಮಕ್ಕಳಿದ್ದಾರಾ? ಇಲ್ವಾ?' ಎಂದು. ಆ ಅಧಿಕಾರಿಯು ದನಿ ಕಳೆದುಕೊಂಡು ಬಾಯಿ ಮುಚ್ಚಿ ನಿಂತ. ಅಂಥ ಮಹಿಳೆಯರ ದನಿ ವಿಶ್ವಬ್ಯಾಂಕಿಗೂ ಮುಟ್ಟಿ ಅವರು ನರ್ಮದ ಕಣಿವೆಗೆ ಬರದಂತೆ ತಡೆಯಿತು. ರ್‍ಯಾಲಿಯಲ್ಲಿ ನಡೆಯುತ್ತ ನಡೆಯುತ್ತ ಕೆಲವು ಸಲ ನಮ್ಮ ಮಹಿಳೆಯರ ಮೇಲೆ ದೇವಿಯರ ಆವಾಹನೆಯಾಗುತ್ತದೆ. ದುರ್ಗಾ, ಕಾಳಿಯರಾಗಿ ಅಧಿಕಾರಿಗಳನ್ನು ಸುತ್ತುವರೆದರೆ ಅವರ ಬೆವರಿಳಿಸುತ್ತಾರೆ. ಮಹಿಳೆಯರ ಹಾಡು, ಘೋಷಣೆಗಳಲ್ಲಿ ಇರುವ ತಾಕತ್ತು, ಮಹಿಳೆಯರ ನೇತೃತ್ವವನ್ನು ಬಡಿದೆಬ್ಬಿಸುತ್ತದೆ. ಯಾವಾಗ ಮಹಿಳೆಯರ ಶಕ್ತಿ ಆಂದೋಲನದಲ್ಲಿ ಹರಿದು ಬರುವುದೋ ಆಗ ಆ ಆಂದೋಲನಕ್ಕೆ ಹೊಸ ರೂಪ ಸಿಗುತ್ತದೆ. ಹೊಸ ಶಕ್ತಿ ಸಿಗುತ್ತದೆ, ಹೊಸ ಗುರಿ ಸಿಗುತ್ತದೆ ಮತ್ತು ಸಮಾಜಕ್ಕೆ ಸಂದೇಶ ತಲುಪಿಸಲು ಹೊಸ ಮಾರ್ಗ ಸಿಗುತ್ತದೆ. ಇವು ಪತ್ರಿಕೆಗಳಲ್ಲಿ ಬರುವುದಿಲ್ಲ. ಮಹಿಳಾ ವಿಶ್ವವಿದ್ಯಾಲಯದ ಜರ್ನಲಿಸಂನ ವಿದ್ಯಾರ್ಥಿಗಳು ಮೂರು ಗಂಟೆಗಳೊಳಗೆ ನಿನ್ನೆಯ ಕಾರ್ಯಕ್ರಮ ಕುರಿತು "ಮಹಿಳಾ ಧ್ವನಿ" ಪತ್ರಿಕೆಯಲ್ಲಿ ವರದಿ ಮಾಡಿದ್ದಾರೆ. ಆ ಪತ್ರಿಕೆಯ ಮೂಲಕ ಅವರು ಎತ್ತಿರುವ ದನಿ ಮಹತ್ವಪೂರ್ಣದ್ದಾಗಿದೆ. ಮಹಿಳೆಯರ ದನಿ ಹೊಸ ಹೊಸ ರೂಪದಲ್ಲಿ ಹೊರಬರಬೇಕಾಗಿದೆ. ಘೋಷಣೆಗಳು, ಹಾಡು, ನೃತ್ಯ, ಕಿರುನಾಟಕಗಳು ಹೀಗೆ ಹಲವಾರು ರೂಪದಲ್ಲಿ ಈ ಸಭೆಯಲ್ಲಿ ವ್ಯಕ್ತವಾಗಿದೆ. ಮಹಿಳಾ ಶಕ್ತಿ ಬಂದಿದೆ ಹೊಸ ಬೆಳಕು ತಂದಿದೆ ಎಂದು ಘೋಷಣೆ ಕೂಗಿದಾಗ ನಮ್ಮ ಮನಸ್ಸಿನಲ್ಲೂ ಹೊಸ ಬೆಳಕು ಬಂದಂತೆ ಆಗುತ್ತಲ್ಲವೇ? ಹೌದು ತಾನೆ ಹಾಗಾದರೆ ನಾವೆಲ್ಲರೂ ಸೇರಿ ಹೇಳೋಣ 'ಬೇಕೆ ಬೇಕು ನ್ಯಾಯ ಬೇಕು' 'ಮಹಿಳಾ ಶಕ್ತಿ ಬಂದಿದೆ ಹೊಸ ಬೆಳಕು ತಂದಿದೆ'. ಯಾರ್‍ಯಾರು ಇಲ್ಲಿಗೆ ಸ್ವಲ್ಪ ಬೆಳಕನ್ನಿಟ್ಟುಕೊಂಡು ಬಂದಿದ್ದೀರೊ ಅವರೆಲ್ಲ ತುಂಬಾ ಬೆಳಕನ್ನು ಇಲ್ಲಿಂದ ಒಯ್ಯಲಿದ್ದೀರಿ, ಅಂತಹವರೆಲ್ಲ ಮುಷ್ಟಿ ಎತ್ತಿ ಘೋಷಣೆ ಕೂಗಿ. ಯಾರ ಹೃದಯದಲ್ಲಿ ಕತ್ತಲಿದೆಯೋ ಅವರು ಖಂಡಿತಾ ಕೈ ಎತ್ತ ಬೇಡಿ. 'ಮಹಿಳಾ ಶಕ್ತಿ ಬಂದಿದೆ ಹೊಸ ಬೆಳಕು ತಂದಿದೆ'. 'ದೇಶದ ಮಹಿಳೆ ಹೇಗಿದ್ದಾಳೆ? ಹೂವಲ್ಲ, ಬೆಳಕಿನ ಕಿಡಿಯಾಗಿದ್ದಾಳೆ' 'ಯಾವಾಗ ಮಹಿಳೆ ಹೋರಾಡುತ್ತಾಳೆ ಅನ್ಯಾಯದ ನಿದ್ದೆ ಕೆಡಿಸುತ್ತಾಳೆ'. ಈ ದನಿಯಿಂದ ಬಿಜಾಪುರಕ್ಕೆ ಒಂದು ಹೊಡತ ಬಿದ್ದಿದೆ. ಯಾಕೆಂದರೆ ವಿಜಾಪುರದಲ್ಲಿ ನನಗೆ ಗೊತ್ತಿರುವಂತೆ ಹಲವಾರು ಸಂಘಟನೆಗಳು ಮೂಲಭೂತ ವಿಷಯಗಳೊಂದಿಗೆ, ಮಹಿಳಾ ಶಕ್ತಿಯನ್ನುಟ್ಟುಕೊಂಡು ನಿಂತಿವೆ. ಪ್ರತಿ ದಿನವು ಇಬ್ಬರು ಹೆಣ್ಣು ಮಕ್ಕಳು ಮೈ ಮಾರಿಕೊಳ್ಳಲು ಕಾಣೆಯಾಗುತ್ತಿದ್ದಾರೆ. ನಾವೆಲ್ಲರೂ ಆ ಬಗ್ಗೆ ನಾಚಿಕೆ ಪಟ್ಟುಕೊಳ್ಳುತ್ತೇವೆ. ಆದರೆ ನಾವು ವೇಶ್ಯೆಯರಿಗೆ ಗೌರವ ಕೊಡುವುದಿಲ್ಲ ಎಂದಲ್ಲ, ಅವರ ಮಕ್ಕಳಿಗೆ ಬದುಕುವ ಅಧಿಕಾರವಿದೆ, ಯಾವ ಪುರುಷ ಪ್ರಧಾನ ವ್ಯವಸ್ಥೆ ಆಕೆಯ ಮೇಲೆ ಅತ್ಯಾಚಾರವೆಸಗಿ ಅವಳ ಭವಿಷ್ಯವನ್ನು ಕಿತ್ತುಕೊಳ್ಳುತ್ತದೆಯೋ ಅದನ್ನು ನಾವು ಖಂಡಿಸುತ್ತೇವೆ. ಭೂಮಿಯನ್ನು ಕಿತ್ತುಕೊಳ್ಳುವ ಮೂಲಕ, ನೀರನ್ನು

ಕಿತ್ತುಕೊಳ್ಳುವ ಮೂಲಕ ಮಹಿಳೆಯರು ವಲಸೆ ಹೋಗುವಂತೆ ಮಾಡಲಾಗಿದೆ. ನೀರಿನ ಬಗ್ಗೆ ನಾನು ನಂತರ ಮಾತನಾಡುವೆ, ಇಲ್ಲಿ ನೀರಿದೆ, ದೇಶದ ಸರಾಸರಿ ಮಳೆಗಿಂತ ಇಲ್ಲಿ ಹೆಚ್ಚಿಗೆ ನೀರಿದೆ. ನೀರು, ಭೂಮಿಯಿಂದ ವಂಚಿತರಾಗಿ ಗುಳೆ ಹೋಗುತ್ತಿದ್ದಾರೆ. ಮುಂಬೈನ ಬಸ್ತಿಗಳಲ್ಲಿ ಬಿಜಾಪುರದ ಹಲವಾರು ಬಡ ದುಡಿಮೆಗಾರರಿದ್ದಾರೆ. ಅವರಿಗೆ ನೆಲೆ ಇಲ್ಲ. ಆದರೆ 'ನಮ್ಮ ದೇಶ ಮಹಾನ್' ಎಂದು ಹೇಳುತ್ತೇವೆ. ಈ ಎಲ್ಲಾ ಸಮಸ್ಯೆಗಳು ಯಾಕಾಗುತ್ತಿವೆ? ಏಕೆಂದರೆ ಉದ್ಯೋಗವೆಂಬುದು ನಿಜವಾದ ಅರ್ಥದಲ್ಲಿ ಸಿಗುತ್ತಿಲ್ಲ. ಮಹಿಳೆಯರ ಉದ್ಯೋಗವನ್ನು ಯಾವ ರೀತಿ ಸೃಷ್ಟಿಸಬೇಕು? ಈ ಬಗ್ಗೆ ಮಹಿಳೆ ಸಂಘಟನೆಗಳು ಹೆಚ್ಚು ಲಕ್ಷ್ಯ ಕೊಡುವುದು ಸ್ವಾಭಾವಿಕವೇ. ಬದುಕುವ ಹಕ್ಕನ್ನು ಬಾಬಾ ಸಾಹೇಬರು ಸಂವಿಧಾನದಲ್ಲಿ ನೀಡಿದ್ದಾರೆ. ಊಟ, ಉದ್ಯೋಗ, ಶಿಕ್ಷಣ, ವಸತಿಯ ಹಕ್ಕು ಬದುಕುವ ಹಕ್ಕಿನ ಭಾಗವಾಗಿದೆ. ಆದರೆ ಇಲ್ಲಿ ಉದ್ಯೋಗ ಕಲ್ಪಿಸುವ ಬದಲು ಮುಚ್ಚಲಾಗುತ್ತಿದೆ. ಸೃಷ್ಟಿಸುತ್ತಿರುವುದಾದರೂ ಎಂಥ ಉದ್ಯೋಗಳನನ್ನು? ಉಪಭೋಗ್ಯ ಗ್ರಾಹಕವಸ್ತುಗಳನ್ನು ಉತ್ಪಾದಿಸುವ ಉದ್ಯೋಗಳನ್ನು. ಮನೆಗಳ ನಿರ್ಮಾಣಗಳನ್ನು ನಿಲ್ಲಿಸಲಾಗುತ್ತಿದೆ, ಬೃಹತ್ ಏರ್‌ಪೋರ್ಟುಗಳು, ಬೃಹತ್ ಪೆಟ್ರೋಲ್ ಪಂಪುಗಳನ್ನು, ರಸ್ತೆಗಳನ್ನು ನಿರ್ಮಿಸಲಾಗುತ್ತಿದೆ. ಇದಕ್ಕಾಗಿ ಕೋಟ್ಯಾಂತರ ಹಣವನ್ನು ವಿನಿಯೋಗಿಸಲಾಗುತ್ತಿದೆ. ಆದರೆ ಸಣ್ಣಪುಟ್ಟ ಕೆಲಸಗಳ ಮೂಲಕ ಉದ್ಯೋಗ ಕಲ್ಪಿಸುವ ಬಗ್ಗೆ, ಕಾಡು, ಕೃಷಿ ಉತ್ಪಾದನೆಯು ಪ್ರತಿ ಗ್ರಾಮ, ತಾಲೂಕು, ಜಿಲ್ಲೆಯಲ್ಲಿ ನಿರ್ಮಾಣವಾಗಲಿ ಎಂದು ಯಾರೂ ಕನಸು ಕಾಣುತ್ತಿಲ್ಲ. ನಮ್ಮ ಶಾಸಕರು ದೊಡ್ಡ ದೊಡ್ಡ ಬಂಡವಳಿಗರ ಗುಲಾಮರಾಗುತ್ತಿದ್ದಾರೆ. ವಿದೇಶಿಗರ ಹಣದಿಂದ ಉದ್ಯೋಗ ನಿರ್ಮಾಣ ಮಾಡಲು ಹೊರಟಿದ್ದಾರೆ. ಆದರೆ ಅದರಿಂದ ಉದ್ಯೋಗ ನಿರ್ಮಾಣವಾಗುವುದಿಲ್ಲ. ನಮಗೆಂಥ ಉದ್ಯೋಗ ಬೇಕು ಎಂಬುದು ಮಹಿಳೆಯರಿಗೆ ಗೊತ್ತಿರಬೇಕು. ಉದ್ಯೋಗದ ಖಾತ್ರಿ ಆಗುವುದು ಸ್ಥಳೀಯವಾಗಿ ಮಾಡುವ, ವ್ಯವಸಾಯ ಉತ್ಪನ್ನಕ್ಕೆ ಸಂಬಂಧಪಟ್ಟ, ಅರಣ್ಯಕ್ಕೆ ಸಂಬಂಧಪಟ್ಟ ದುಡಿಮೆಯನ್ನು ಬೇಡುವ ಉದ್ಯೋಗಗಳಲ್ಲಿ, ಗೃಹ ಉದ್ಯೋಗದಲ್ಲಿ, ಗ್ರಾಮೋದ್ಯೋಗದಲ್ಲಿ, ವಿಕೇಂದ್ರಿತ ಅಭಿವೃದ್ಧಿಯಲ್ಲಿ. ಇಂಥ ಉದ್ಯೋಗ ನಿರ್ಮಾಣವನ್ನು ಮಹಿಳಾ ಸಂಘಟನೆಗಳು ತಮ್ಮ ಕಾರ್ಯತಂತ್ರದ ಭಾಗ ಮಾಡಿಕೊಂಡಾಗ, ಗುಳೆ ಹೋಗುವ ಪ್ರಮೇಯ ಬರುವುದಿಲ್ಲ, ನಿರುದ್ಯೋಗದಿಂದಾಗಿ ಮೌಲ್ಯ ಕಳೆದುಕೊಳ್ಳುವುದಿಲ್ಲ, ಅವಮಾನವನ್ನು ಎದುರಿಸಬಹುದು, ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಬರುವುದಿಲ್ಲ.

ಸಂಗಾತಿಗಳೇ, ಈ ಎಲ್ಲಾ ವಿಷಯಗಳನ್ನು ಇಟ್ಟುಕೊಂಡು ನಾವು ನಡೆಯುತ್ತಿದ್ದೇವೆ ಅದರಲ್ಲಿ ನಿಜವಾದ ಅಂಶವೆಂದರೆ ಅಭಿವೃದ್ಧಿಯದು. ಈ ಅಭಿವೃದ್ಧಿಯಲ್ಲಿ ಮಹಿಳೆಯರು ಒಳಗೊಳ್ಳುತ್ತಾರೆ ಹೇಗೆಂದರೆ ದೊಡ್ಡ ದೊಡ್ಡ ಪೋಸ್ಟರ್‌ಗಳಲ್ಲಿ ಅದು ಪಂಪ್‌ಸೆಟ್ಟಿನದಾಗಿರಲೀ, ಮನೆ ಖರೀದಿಸುವುದಿರಲೀ ಪ್ರತಿಯೊಂದರಲ್ಲೂ ಮಹಿಳೆಯರ ಫೋಟೋ ಹಾಕುತ್ತಾರೆ. ಅದರಲ್ಲೂ ಪ್ರಚೋದನಕಾರಿಯಾಗಿರುವಂತದ್ದು, ಇದು ವ್ಯವಸ್ಥೆಯ ಹುನ್ನಾರವಾಗಿದೆ. ಅಭಿವೃದ್ಧಿಯ ಲಾಭದಲ್ಲಿ ಮಹಿಳೆಯರು ಪಾಲು ಕೇಳಿದರೆ ರಾಷ್ಟ್ರದ್ರೋಹಿಗಳು ಎನ್ನುತ್ತಾರೆ. ನೀವು ಅಭಿವೃದ್ಧಿಯ ವಿರೋಧಿಗಳಾಗಿದ್ದೀರಿ ಎನ್ನುತ್ತಾರೆ. ನಾವು ಸಮಾನತೆ ಇರುವ, ನ್ಯಾಯವಿರುವ, ಮಹಿಳೆ ಪುರುಷರಿಬ್ಬರಿಗೂ ಉದ್ಯೋಗವಿರುವ ಹಾಗೂ ಪ್ರಕೃತಿಯನ್ನು ಉಳಿಸುವ ನಿಜವಾದ ಅಭಿವೃದ್ಧಿಯನ್ನು ಬೆಂಬಲಿಸುತ್ತೇವೆ. ನೀರನ್ನು ಖಾಲಿ ಮಾಡುವ, ಕಾಡನ್ನು ನಾಶ ಮಾಡುವ, ಇಂಧನಗಳನ್ನು ಖಾಲಿ ಮಾಡುವ ವಿಕಾಸ ನಮಗೆ ಬೇಕಿಲ್ಲ. ಸ್ತ್ರೀವಾದಿ/ಮಹಿಳಾವಾದಿ ದೃಷ್ಟಿಕೋನದ ನಿರಂತವಾದ ಅಭಿವೃದ್ಧಿ ನಮಗೆ ಬೇಕು. ಯಾಕೆಂದರೆ ಇಂದು ನಾವು ಬೆಳೆಸುತ್ತಿರುವ ಮಕ್ಕಳು ಅವರ ಮುಂದಿನ ಪೀಳಿಗೆಯವರು ಪ್ರಕೃತಿ, ಭೂಮಿ, ನದಿಗಳ ಪಾಲನೆ/ಪೋಷಣೆ ಮಾಡುತ್ತಾರೆ. ಇದೆ ಮಹಿಳೆಯರ ದೃಷ್ಟಿಕೋನವಾಗಿದೆ. ಮಹಿಳಾವಾದಿ ದೃಷ್ಟಿಕೋನವನ್ನು ಇಡೀ ಪ್ರಪಂಚದಲ್ಲಿ ಚರ್ಚೆ ಮಾಡುತ್ತಿದ್ದಾರೆ. ಆದ್ದರಿಂದ ನಮ್ಮೆಲ್ಲ ಸಂಘಟನೆಗಳ ದೃಷ್ಟಿಕೋನ ಒಂದೇ ಆಗುತ್ತಿರುವಾಗ ನಾವೆಲ್ಲರೂ ಒಟ್ಟಿಗೆ ಸೇರಿ ಸರ್ಕಾರದ ಹಲವು ನೀತಿಗಳನ್ನು ಧೂಳೆಬ್ಬಿಸಬಹುದು. ಸರಕಾರದ ಬಜೆಟ್ಟಿನಲ್ಲಿ ಮಹಿಳೆಯರಿಗೆಂದು ಕೊಡುವ ವಿಶೇಷ ಬಜೆಟ್ ಕಡಿಮೆಯಾಗುತ್ತ ಬರುತ್ತಿದೆ. ನಾವೆಲ್ಲರೂ ಸೇರಿ ಹಣದ ಬಜೆಟ್ ಮಾತ್ರ ಸುರಕ್ಷತೆಯನ್ನು ನೀಡುವುದಿಲ್ಲ. ಮಹಿಳೆಯರಿಗೆ ಭೂಮಿ ಬೇಕು, ಭೂ ಹೀನ ದಲಿತ ಮಹಿಳೆಯರಿಗೆ ಭೂಮಿ ಬೇಕು, ಕಡಿಮೆ ಎಂದರೆ ಒಂದು ಹೆಕ್ಟೇರ್ ಭೂಮಿಯಾದರೂ ಬೇಕು. ಉದ್ಯೋಗಪತಿಗಳಿಗಲ್ಲ, ಭೂ ಹೀನರಿಗೆ ಭೂಮಿಬೇಕು ಎಂಬ ಬೇಡಿಕೆಯನ್ನು ಮುಂದಿಡಬೇಕು. ಇಡಬಹುದಲ್ಲವೇ? ಇದು ನಮ್ಮ ರಾಜಕಾರಣದ ಅಜೆಂಡ ಆಗಿದೆ. ಇದರಲ್ಲಿ ಆರ್ಥಿಕ ಹಾಗೂ ಸಾಮಾಜಿಕತೆ ಎರಡೂ ಇದೆ. ನಾವೆಲ್ಲರೂ ಒಟ್ಟಾಗಿ ಸೇರಿದರೆ ಏನನ್ನು ಮಾಡಲಾಗುವುದಿಲ್ಲ ಹೇಳಿ? ಏನು ಮಾಡಬೇಕು ಎಂದು ಯಾರೋ ಪ್ರತಿನಿಧಿಗಳು ಕೇಳುತ್ತಿದ್ದರು. ಇದೇ ಅದಕ್ಕೆ ಉತ್ತರ. ನಾವೆಲ್ಲ ಒಟ್ಟಿಗೆ ಸೇರಿ ಒಕ್ಕೂಟ ಮಾಡುತ್ತೀವಿ, ಶಕ್ತಿ ಒಗ್ಗೂಡಿಸಿಕೊಳ್ಳುತ್ತೇವೆ, ಆದರೆ ಇದನ್ನು ಮುರಿಯುವ ಶಕ್ತಿಗಳಿಗೇನು ದೇಶದಲ್ಲಿ ಕೊರತೆ ಇಲ್ಲ. ಜಾತಿ ಹೆಸರಲ್ಲಿ, ಧರ್ಮದ ಹೆಸರಲ್ಲಿ, ರಾಜ ಠಾಕ್ರೆ ಹೆಸರಲ್ಲಿ ಗುರುತಿಸುವ ಪ್ರಾಂತಭೇದದ ಹೆಸರಿನಲ್ಲಿ ನುಸುಳುವ ಶಕ್ತಿಗಳಿಗೂ ಶಾಂತಿಯಿಂದ, ಚೆನ್ನಾಗಿ ಪಾಠ ಕಲಿಸುವುದು ಮಹಿಳೆಯರಿಗೆ ಗೊತ್ತಿದೆ. ಮಹಿಳೆಯರು ಹಿಂಸೆಯ ಮಾರ್ಗವನ್ನು ತುಳಿಯುವುದಿಲ್ಲ, ನೇಣಿನ ಶಿಕ್ಷೆಯನ್ನೂ ಮಹಿಳೆಯರು ವಿರೋಧಿಸಿದ್ದಾರೆ. ಈ ಮಾತು ನಿಮ್ಮೆಲ್ಲರಿಗೂ ಒಪ್ಪಿತವೇ? ಅತ್ಯಾಚಾರ ಮಾಡಿದವನಿಗೆ ಗೆಲ್ಲಿಗೇರಿಸಬೇಕು ಎಂದು ಕೋಪದಿಂದ ಹೇಳುತ್ತಾರೆ. ಹೃದಯದಿಂದ, ಸತ್ಯದಿಂದ ಹೇಳಿ ನಿಮಗೆ ಒಪ್ಪಿತವೇ? ನಿಮಗೆ ಒಪ್ಪಿತವೇ? ಗಲ್ಲು ಶಿಕ್ಷೆ ಏಕೆ ಬೇಕು? ಒಬ್ಬ ಮನುಷ್ಯನ ಹತ್ಯೆ ಇನ್ನೊಬ್ಬ ಮನುಷ್ಯ ಮಾಡಿದ್ದರೆ ಅವನಿಗೆ ಗಲ್ಲು ಶಿಕ್ಷೆ ಕೊಡುವುದು ಅಥವಾ ಸಮಾಜ ಮತ್ತು ಸರ್ಕಾರ ಯೋಜನೆ ಮಾಡಿ ಗಲ್ಲುಶಿಕ್ಷೆ ನೀಡುವುದು ಎರಡು ಒಂದೆ ರೀತಿಯಾಗಿವೆ.

**ಕೃಷಿ ಭೂಮಿಯ ಮೇಲಿನ ಹಕ್ಕು ರೈತ ಮಹಿಳೆಗೂ ದಕ್ಕಲಿ**

ಯಾವುದನ್ನು ಬುದ್ಧ ಒಪ್ಪಲಿಲ್ಲ, ಕಬೀರ, ಪೈಗಂಬರ್ ಒಪ್ಪಲಿಲ್ಲ, ಗಾಂಧಿ ಒಪ್ಪಲಿಲ್ಲ, ಯಾವ ಸಂತನೂ ಒಪ್ಪಲಿಲ್ಲ, ಅಂತಹ ಹಿಂಸೆ ಮತ್ತು ಹತ್ಯೆಯನ್ನು ನಾವು ಒಪ್ಪಬೇಕೆ? ಈ ವಿಜಾಪುರ ಬಸವಣ್ಣನ ನಾಡಾಗಿದೆ. ಸಮಾನತೆ, ನ್ಯಾಯ ಅಹಿಂಸೆ, ಬದುಕುವ ಹಕ್ಕಿನ ಬಗ್ಗೆ ಹನ್ನೆರಡನೇ ಶತಮಾನದಲ್ಲಿಯೇ ಅವರು ಸಮಾಜಕ್ಕೆ ಮತ್ತು ದೇಶಕ್ಕೆ, ಜಗತ್ತಿಗೆ ನೀಡಿರುವ ಸಂದೇಶ ಮಹತ್ವದ್ದಾಗಿದೆ. ಈ ಸಂದೇಶಗಳು ಅವರ ವಚನಗಳ ಮೂಲಕ ಎಲ್ಲೆಡೆ ಸ್ಥಾಪಿತವಾಗಿವೆ. ರಂಜಾನ್ ದರ್ಗಾರಿಂದ ಹಿಡಿದು ಅನೇಕ ಲೇಖಕರು ದಾಖಲಿಸಿದ್ದಾರೆ. ನನಗೆ ಬಸವಣ್ಣನವರ ಹೆಸರಿನಲ್ಲಿ ಪ್ರಶಸ್ತಿ ಸಿಕ್ಕಿದೆ ಎಂಬುದನ್ನು ನಾನು ವಿನಯದಿಂದ ಹೇಳುತ್ತೇನೆ, ಆ ಪ್ರಶಸ್ತಿಯ ಬಗ್ಗೆ ನಾನು ಹೆಮ್ಮೆ ಪಡುತ್ತೇನೆ. ಸರ್ವಧರ್ಮ ಸಮಾನತೆಯ, ಮಾತು ಜಾತಿ ಬೇಧ ನಿರ್ಮೂಲನೆ ಮಾಡುವ ಮಾತು ಹಾಗೂ ಸ್ತ್ರೀ ಪುರುಷರ ಬೇಧವಷ್ಟೇ ಅಲ್ಲ ಎಲ್ಲಾ ಲಿಂಗಗಳನ್ನು ಸಮಾನವಾಗಿ ನೋಡಿರುವುದನ್ನು ಯಾವ ಯಾವ ಸಂತರು, ಚಿಂತಕರು ನಮಗೆ ನೀಡಿದ್ದಾರೋ ಅವರೆಲ್ಲರನ್ನು ಇಂದು ನಾವು ನೆನಪಿಸಿಕೊಳ್ಳುತ್ತೇವೆ, ಅವರಿಂದ ಪ್ರೇರಣೆ ಪಡೆಯುತ್ತೇವೆ. ಮಹಿಳೆಯರೂ ಈ ಪರಂಪರೆಯನ್ನು ಮುಂದುವರಿಸಿ ಕೊಂಡು ಹೋಗಬೇಕಾಗಿದೆ. ಹೈದ್ರಾಬಾದಿನ ರೋಹಿತ ವೇಮುಲನನ್ನೂ ನೆನಪು ಮಾಡಿಕೊಳ್ಳುತ್ತೇನೆ, ಹೈದ್ರಾಬಾದ್ ಇಲ್ಲಿಂದ ಬಹಳ ದೂರವೇನಿಲ್ಲ. ಅಲ್ಲಿನ ಪತ್ರಕರ್ತ ರೊಬ್ಬರು ಇಲ್ಲಿಗೆ ಬಂದಿದ್ದಾರೆ. ಹೈದ್ರಾಬಾದ್ ವಿಶ್ವವಿದ್ಯಾಲಯದ ರೋಹಿತ ವೇಮುಲ ಆತ್ಮಹತ್ಯೆ ಮಾಡಿಕೊಳ್ಳುವ ಹಾಗೆ ಮಾಡಲಾಯಿತು. ಅವರ ತಾಯಿಯನ್ನು ನಾನು ದೆಹಲಿಯಲ್ಲಿ ಭೇಟಿಯಾದಾಗ, ಎಂದೂ, ಯಾವ ಕೊರತೆಯನ್ನು ನಾನು ಅವನಲ್ಲಿ ನೋಡಿರಲಿಲ್ಲ ಎಂದು ಹೇಳಿದರು. ಆದರೆ ರೋಹಿತ ತನ್ನ ಸಾವಿನ ಮೂಲಕ ಧಿಕ್ಕಾರ ಹೇಳಿದ್ದಾನೆ, ಬಲಿದಾನ ಮಾಡಿದ್ದಾನೆ. ದಲಿತರನ್ನಷ್ಟೆ ಅಲ್ಲ ವಿಶ್ವವಿದ್ಯಾಲಯದ ಎಲ್ಲಾ ವಿದ್ಯಾರ್ಥಿಗಳನ್ನು ಎಚ್ಚರಿಸುವ ಕೆಲಸ ಮಾಡಿದ್ದಾನೆ. ಆದರೆ ಅದಕ್ಕಾಗಿ ಜೀವವನ್ನು ಕಳೆದುಕೊಳ್ಳುವುದನ್ನು ನಾವು ಬಯಸುವುದಿಲ್ಲ. ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳು ಅನ್ಯಾಯ ಸಹಿಸಿಕೊಳ್ಳಬೇಕಾಗುತ್ತದೆ, ನಾನು ಅದಕ್ಕೆ ಸಾಕ್ಷಿ ಯಾಗಿದ್ದೇನೆ ಯಾಕೆಂದರೆ ಜೆ.ಎನ್.ಯೂಗೆ ನಾನು ಎರಡು ಮೂರು ತಿಂಗಳಿಗೊಮ್ಮೆ ಹೋಗುತ್ತಿರುತ್ತೇನೆ. ಆಂದೋಲನ ಕುರಿತು ಮಾತನಾಡಲು, ಅವರ ವಾಸ್ತವವನ್ನು ತಿಳಿದುಕೊಳ್ಳಲು, ಮಧ್ಯರಾತ್ರಿ ಒಂದು ಗಂಟೆಯವರೆಗೂ ಚರ್ಚೆ ನಡೆಯುತ್ತದೆ. ಅಲ್ಲಿನ ಹುಡುಗಿಯರ ಹೆಸರು ಕೆಡಿಸುವ ಕುತಂತ್ರಗಳನ್ನು ಅಲ್ಲಿ ಯಾಕೆ ಮಾಡಲಾಗುತ್ತದೆ? ಅವರು ಪುರುಷರೂ ಅಲ್ಲ, ಮನುಷ್ಯರೂ ಅಲ್ಲ, ನಮ್ಮ ಸೋದರರೂ ಅಲ್ಲ ಎಂದು ಹೇಳಿದರೆ ಇಲ್ಲಿರುವ ಸಹೋದರರು ಬೆಂಬಲಿಸುತ್ತಾರೆ ಎಂದುಕೊಳ್ಳುತ್ತೇನೆ.

ಸಂಗಾತಿಗಳೇ ನಾವೆಲ್ಲರೂ ಒಂದೇ ಎಂದು ಭಾವಿಸೋಣ, ನಮ್ಮೆಲ್ಲರ ತುರ್ತು ಅಗತ್ಯವೇನೆಂದರೆ ನೀರಿಗಾಗಿ, ಭೂಮಿಗಾಗಿ ಹೋರಾಡಲು ಐಕ್ಯತೆಯ ಅವಶ್ಯಕತೆ ಇದೆ. ಜಾತಿ, ಪಂಥ, ಧರ್ಮದ ಹೆಸರಿನಲ್ಲಿ ಗೂಂಡಾಗಿರಿ ನಡೆಸುವ ತತ್ವಗಳ ವಿರುದ್ಧ

**ದೌರ್ಜನ್ಯಗಳನ್ನು ತಡೆಯೋಣ, ಮಾನವೀಯತೆಯನ್ನು ಬೆಳೆಸೋಣ**



ಶಾಂತಿಯುತ ಸತ್ಯಾಗ್ರಹದ ರೂಪದಲ್ಲಿ, ಬಂದೂಕನ್ನು ಹಿಡಿಯದೆ, ನಮ್ಮ ತಾಕತ್ತು, ಮತ್ತು ಮೂಳೆಗಳ ಬಲದಿಂದಲೇ ಅದನ್ನು ಸಾಧಿಸಬಹುದು. ನೀರಿನ ಹೆಸರನ್ನು ಎತ್ತುವುದೂ ಸಹ ಬಿಜಾಪುರದಲ್ಲಿ ಅಪರಾದವೆಂದು ನನಗೆ ಗೊತ್ತಿದೆ. ನೀರಿಗಾಗಿ ಯುದ್ಧ ನಡೆಯಲಿದೆ ಎನ್ನುತ್ತಾರೆ, ಆದರೆ ಅಂಥ ಯುದ್ಧ ಈಗಾಗಲೇ ವಿಜಾಪುರದಲ್ಲಿ, ಹತ್ತಿರವಿರುವ ಮರಾಠವಾಡದಲ್ಲಿ ಆರಂಭವಾಗಿದೆ. ಆದರೆ ನೀರನ್ನು ಉಳಿಸಿಕೊಳ್ಳುವ ಕೆಲಸವನ್ನೂ ಮಹಿಳೆಯರು ಮಾಡಬಲ್ಲರು. ನೀರಿಗೆ ದೊಡ್ಡ ದೊಡ್ಡ ಕೊಳದ ಸ್ವರೂಪ ನೀಡುವುದು ಮತ್ತು ಆ ನೀರನ್ನು ನಗರಗಳಿಗೆ, ಉದ್ಯೋಗಪತಿಗಳಿಗೆ ಹೆಚ್ಚೆಚ್ಚು ನೀಡುವಂತ ಕುತಂತ್ರ ಗುಜಾರಾತಿನಲ್ಲಿ ಹೆಚ್ಚಾಗಿ ನಡೆಯುತ್ತಿದೆ. ನರ್ಮದಾ ಕಣಿವೆಯಲ್ಲಿ 214 ಕಿ.ಮೀ. ದೂರದವರೆಗೂ 275 ಊರುಗಳನ್ನು ಮುಳುಗಿಸಿ ನೀರು ತುಂಬಿಸುವ ಕೆಲಸವನ್ನು ನರೇಂದ್ರ ಮೋದಿಯವರು ಮಾಡುತ್ತಿದ್ದಾರೆ. ಒಂದು ಅಣೆಕಟ್ಟಿನಿಂದ ಒಂದಿಡೀ ನಗರವೇ ಮುಳುಗಿದೆ. ಮತ್ತೊಂದು ಅಣೆಕಟ್ಟು 256 ಹಳ್ಳಿಗಳ ಮುಳುಗಡೆ, ಮತ್ತೆ ಮೂರನೆ ಅಣೆಕಟ್ಟು 61 ಹಳ್ಳಿಗಳ ಮುಳುಗಡೆ, ಮತ್ತೆ ನಾಲ್ಕನೆ ಅಣೆಕಟ್ಟಿನಲ್ಲಿ 161 ಹಳ್ಳಿಗಳು ಮುಳುಗಲಿವೆ. ಈ ವಿದ್ಯಮಾನ ಇಡೀ ನರ್ಮದಾ ಕಣಿವೆಯನ್ನು ನಾಶಮಾಡಲಿದೆ. ಆಲಮಟ್ಟಿ ಡ್ಯಾಂ ಇಲ್ಲಿಂದ ದೂರವಿಲ್ಲ, ಅದರಲ್ಲಿ ಬಾಗಲಕೋಟೆ ಮುಳುಗಿ ಹೋಯಿತು. ಪುನರ್ವಸತಿ ಸಿಕ್ಕಿತು, ಪುನರ್‌ವಸತಿ ಕಲ್ಪಿಸಿದ್ದೇವೆ ಎಂದು ಜಮಾದಾರ್‌ರಂತಹ ಅಧಿಕಾರಿಗಳು, ವಿಶ್ವಬ್ಯಾಂಕಿನ ಅಧಿಕಾರಿಗಳು ವಾದಿಸುತ್ತಾರೆ. ಆದರೆ ಪುನರ್‌ವಸತಿ ಪೀಳಿಗೆವರೆಗೂ ಆಗುವುದಿಲ್ಲ. ಆಲಮಟ್ಟಿ ಡ್ಯಾಂ ಎತ್ತರಿಸಲ್ಲಿದ್ದಾರೆ, ಆಗ ಇನ್ನಷ್ಟು ಹಳ್ಳಿಗಳು ಮುಳುಗಡೆಯಾಗುತ್ತವೆ? ಇನ್ನು ಪುನರ್‌ವಸತಿ ಆಗುವುದೆಂತು? ಹಳ್ಳಿಯ ಬದಲಿಗೆ ಹಳ್ಳಿ, ನದಿಯ ಬದಲಿಗೆ ನದಿ, ಬೆಟ್ಟದ ಬದಲಿಗೆ ಬೆಟ್ಟ, ಮರದ ಬದಲಿಗೆ ಮರ, ಮೀನಿನ ಬದಲಿಗೆ ಮೀನನ್ನು ಕೊಡಲು ಸಾಧ್ಯವೇ? ಹಾಗಾಗಿ ನೀರನ್ನು ಸಂಗ್ರಹಿಸುವುದು ತೀರಾ ಅಗತ್ಯ, ಅದರಲ್ಲಿಯೂ ಅಂತರ್ಜಲವನ್ನು ಕಾಪಾಡುವ ಜರೂರಿ ಇದೆ. ಕೊಳಗಳು, ಸಣ್ಣ ಸಣ್ಣ ಅಣೆಕಟ್ಟುಗಳ ಮೂಲಕ ನೀರನ್ನು ಸಂಗ್ರಹಿಸಬೇಕು. ರಾಜ್ಯ ರಾಜ್ಯಗಳ ನಡುವೆ ಕಿತ್ತಾಟ ನಡೆದಿದೆ. ಅದು ಬಿಜಾಪುರದಲ್ಲಿಯೂ ನಡೆಯುತ್ತಿದೆ. ಕಿತ್ತಾಟದ ಅಗತ್ಯವಿಲ್ಲ, ಸರ್ಕಾರವನ್ನು ಕರೆಯುವ ಅಗತ್ಯವಿಲ್ಲ, ಸರ್ಕಾರ ಬಂದರೆ ಅವರ ಪಬ್ಲಿಕ್ ಪ್ರೈವೇಟ್ ಪಾರ್ಟನರ್‌ಶಿಪ್ ಖಾಸಗಿ ಕಂಪನಿಗಳನ್ನು ಕರೆಸಿ ಅಣೆಕಟ್ಟು ಮತ್ತು ವಿದ್ಯುತ್ ಸ್ಥಾವರ ಗಳನ್ನು ಸ್ಥಾಪಿಸುತ್ತಾರೆ. ಸೂರ್ಯಶಕ್ತಿಯನ್ನೂ ಅವರ ಕೈಯಲ್ಲಿಡುತ್ತಾರೆ. ನಾವು ಮಹಿಳೆಯರು ಕೇಳಬೇಕಾಗಿರುವುದು, ತಂತ್ರಜ್ಞಾನ, ನೀರು, ನಮ್ಮ ಕೈಯಲ್ಲಿ ಇರಲು ಬಿಡಿ, ನಾವು ಸಿಂಗರಿಸುವೆವು ಜೊತೆಗೆ ರಕ್ಷಿಸುವೆವು ನೀರನ್ನು, ಭೂಮಿಯನ್ನು. ಸಂಗಾತಿಗಳೇ ನಾನು ಇನ್ನೇನು ಹೆಚ್ಚಿಗೆ ಹೇಳುವುದಿಲ್ಲ. ಇಂದು ಕಾರ್ಮಿಕರ ಸಂಖ್ಯೆ ಹೆಚ್ಚುತ್ತಿದೆ, ಬಾಲ ಕಾರ್ಮಿಕರ ಸಂಖ್ಯೆ ಹೆಚ್ಚಾಗುತ್ತಿದೆ. ಗುತ್ತಿಗೆ ಕಾರ್ಮಿಕರ ಸಂಖ್ಯೆ ಹೆಚ್ಚುತ್ತಿದೆ. ಕಾನೂನು ಎಲ್ಲವನ್ನು ಸರಿಪಡಿಸುತ್ತದೆ ಎಂದು ಕೊಂಡು ಸುಮ್ಮನಿರಲಾಗು ವುದಿಲ್ಲ. ಒಂದು ರೀತಿಯಲ್ಲಿ ನಮ್ಮ ಶ್ರಮದ ಹತ್ಯೆಯಾಗುತ್ತಿದೆ. ಅದಕ್ಕಾಗಿ ನಾವು ನಮ್ಮ

ಶಕ್ತಿಯನ್ನ, ನಮ್ಮ ಸ್ವಾಭಿಮಾನ, ಸ್ವಾವಲಂಬನೆಯನ್ನು ಆಧರಿಸಿದ ವಿಕಾಸದ ಘೋಷಣೆಗಳನ್ನು ಕೂಗೋಣ. ಜೊತೆಗೆ ಸಮಾನತೆ, ನ್ಯಾಯವನ್ನು ಸಾಧಿಸಿ ಕೊಳ್ಳೋಣ. ಆಗಲೇ ಈ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಂದು ಹೊಸ ಸಂಕಲ್ಪ ಮತ್ತು ಹೊಸ ದಾರಿಯನ್ನು ತೀರ್ಮಾನಿಸಬಹುದು. ಹಾಗಾಗಿಯೇ ನಾವು ಕೃಷಿಯ ಮಾತನ್ನು ಆಡುತ್ತ, ಕೃಷಿಯನ್ನು ಆವರಿಸಿಕೊಂಡಿರುವ ಮಾರುಕಟ್ಟೆಯ ಪರಿಣಾಮವಾಗಿ ಬಿಟಿ ಕಾಟನ್ ಫೇಲ್ ಆಗಿದೆ. ಬರಗಾಲ ಬಂದರೆ ಬೀಜ ಮೊಳಕೆ ಬರುವುದಿಲ್ಲ. ಬೆಳೆದ ಬೆಳೆಗೆ ಸೂಕ್ತ ಬೆಲೆಯಿಲ್ಲ, ಗೋಧಿಗೆ ಕನಿಷ್ಟ ಪಕ್ಷ ಎರಡು ಸಾವಿರದ ಐದು ನೂರು ಆಗಬೇಕು. ಹತ್ತಿ ಕನಿಷ್ಟ ಪಕ್ಷ 1200 ಆಗಬೇಕು, ಸಜ್ಜೆ, ಮುಸುಕಿನ ಜೋಳ ಕ್ವಿಂಟಾಲ್‌ಗೆ 1200 ಆಗಬೇಕು. ಬಾಳೆ ಹಣ್ಣಿಗೆ ಕ್ವಿಂಟಾಲ್‌ಗೆ 1000 ರೂ ಆಗಬೇಕು. ಆದರೆ ಅದು ಸಿಗುತ್ತಿಲ್ಲ. ಈಗ ಲೋಕ ಸಾವಯವ ಕೃಷಿ, ಸಹಜ ಕೃಷಿಯ ಬಗ್ಗೆ ಯೋಚಿಸತೊಡಗಿದೆ. ದೊಡ್ಡ ದೊಡ್ಡ ಶ್ರೀಮಂತರು ಹೆಚ್ಚಿನ ದುಡ್ಡು ಕೊಟ್ಟು ರಾಸಾಯನಿಕ ವಸ್ತುಗಳನ್ನು ಬಳಸದ ಸಾವಯವ ವಸ್ತುಗಳನ್ನು ಕೊಳ್ಳುತ್ತಾರೆ. ಮಧ್ಯಪ್ರದೇಶದ ಅನುಭವ ಹೇಳುತ್ತೇನೆ, ಇಂದು ಸಮಾಜದಲ್ಲಿ ಸಹಜ ಕೃಷಿಯ ಫಲವನ್ನು ದೊಡ್ಡ ದೊಡ್ಡ ಶ್ರೀಮಂತರು ಬಳಸಿಕೊಳ್ಳುತ್ತಾರೆ, ನನ್ನ ಅನುಭವವನ್ನು ಹೇಳುತ್ತೇನೆ ಮಧ್ಯಪ್ರದೇಶದ ರೈತರು ಬೆಳೆದ ಸಾವಯವ ಪಪ್ಪಾಯಿಯನ್ನು ಕೆ.ಜಿಗೆ ಆರು ರೂಪಾಯಿಯಂತೆ ಎರಡು ಚೀಲ ತೆಗೆದುಕೊಂಡು ಮುಂಬೈ ಮಾರುಕಟ್ಟೆಯಲ್ಲಿ 60 ರೂಪಾಯಿಗೆ ಕಿಲೋನಂತೆ ಮಾರಾಟ ಮಾಡಿದೆ. ಆ ಹಣವನ್ನು ಆದಿವಾಸಿಗಳಿಗಾಗಿ ನಾವು ನಡೆಸುತ್ತಿರುವ 'ಜೀವನ್ ಶಾಲೆ' ನೀಡಿದೆ. ನಿಂಬೆ ಹಣ್ಣನ್ನು 15 ರೂ ಕಿಲೋನಂತೆ ರೈತರಿಂದ ಕೊಂಡುಕೊಂಡು ಮುಂಬೈನ ಧಾರಾವಿ ಸ್ಲಂನ ಎದುರಿನಲ್ಲಿ ಪ್ರತಿ ಭಾನುವಾರ ಸೇರುವ ಸಂತೆಯಲ್ಲಿ ಕಿಲೋಗೆ 150–200 ರೂನಂತೆ ಮಾರಿದ್ದೇನೆ. ಇಲ್ಲಿ ಸೋದರಿ ಸರಸ್ವತಿ ಮತ್ತು ಕೆಲವರೂ ಸಾವಯವ ತರಕಾರಿ ಬೀಜಗಳನ್ನು ಎಲ್ಲರಿಗೂ ಹಂಚಲಿದ್ದಾರೆ. ತಮ್ಮ ತಮ್ಮ ಮನೆಗಳಲ್ಲಿ ಬೀಜನೆಟ್ಟು ಬೆಳೆದ ತರಕಾರಿಯನ್ನು ತಮ್ಮ ಮಕ್ಕಳಿಗೆ ತಿನ್ನಸಬಹುದು, ಮಾರುವ ಅಗತ್ಯವಿದ್ದರೆ ಮಾರಾಟ ಮಾಡಬಹುದು. ಆ ಬೀಜಗಳು ಬರಗಾಲ ಬಂದರೂ, ನೀರು ಕಡಿಮೆ ಇದ್ದರೂ ಬದುಕುಳಿಯುವಂತಹವು. ಇಂಥ ಬೀಜವನ್ನು ಒಯ್ಯಲು ನೀವೆಲ್ಲರೂ ತಯಾರಿದ್ದೀರಾ? ಆ ಬೀಜಗಳನ್ನು ಉಚಿತವಾಗಿ ನೀಡುತ್ತಿದ್ದಾರೆ. ತೆಗೆದುಕೊಂಡು ಹೋಗಿ ಬೆಳೆಯಬೇಕೆನ್ನುವವರು ಕೈ ಎತ್ತಿ. ಸರ್ಕಾರ ಸುಳ್ಳು ಆಶ್ವಾಸನೆ ನೀಡುತ್ತೆ, ಅದು ಬಾಲ್ಯ ವಿವಾಹವಿರಲಿ, ಬಾಲ ಕಾರ್ಮಿಕರ ವಿಷಯವಿರಲಿ. ಸರ್ಕಾರ ಸಾವಿರ ಮರ ನೆಡುತ್ತೇವೆ ಎನ್ನುತ್ತದೆ ಅದರಲ್ಲಿ ಹತ್ತು ಸಹ ಬದುಕಿ ಉಳಿಯುವುದಿಲ್ಲ. ನಿಮ್ಮ ಗಿಡಗಳು ಹಾಗಾಗುವುದಿಲ್ಲ, ಪ್ರತಿಯೊಂದು ಜೀವಂತವಾಗಿ ಬದುಕಿ ಉಳಿಯಬೇಕು. ಯಾಕೆಂದರೆ ತಾಯಿಯು ತನ್ನ ಮಡಿಲೊಳಗೆ ಮಗುವನ್ನು ಜೋಪಾನವಾಗಿ ಇಟ್ಟುಕೊಳ್ಳುವಂತೆ ಭೂಮಿ ತನ್ನ ಮಡಿಲಲ್ಲಿ ಬೀಜವನ್ನು ಇರಿಸಿಕೊಳ್ಳುತ್ತದೆ. ನೀವು



ತಯಾರಿದ್ದೀರಾ? ಬೀಜವನ್ನು ಪಾಲಿಸಿ, ಪೋಷಿಸಲು? ಹಸಿವನ್ನು ಹಿಂಗಿಸಲು ಧಾನ್ಯ, ಆಹಾರಕ್ಕಷ್ಟೇ ಸಾಧ್ಯ, ಆಹಾರವನ್ನು ಬೆಳೆಯಲು ಬೀಜ ತೆಗೆದುಕೊಂಡು ಹೋಗಲಿದ್ದೀರಿ, ಈ ಸಮ್ಮೇಳನದಲ್ಲಿ ಮಹಿಳಾ ಸಂಘಟನೆಯು ನೀಡುವ ಬೀಜವನ್ನು ತೆಗೆದುಕೊಂಡು ಹೋಗಿ ಗಿಡವಲ್ಲ ಮಹಿಳಾ ಶಕ್ತಿಯ ವೃಕ್ಷವನ್ನು, ಕಾಡನ್ನು ಬೆಳೆದೇ ತೀರುತ್ತದೆ. ಆ ಕಾಡು ಖಂಡಿತವಾಗಿಯೂ ಈ ದೇಶದಲ್ಲಿ ಸಮತೆ ಮತ್ತು ನ್ಯಾಯದ ಭೂಮಿಯನ್ನು ಹಿಡಿದಿಟ್ಟುಕೊಂಡು, ನೀರನ್ನು ಜೋಪಾನ ಮಾಡುತ್ತದೆ. ನಾನು ಒಂದು ಘೋಷಣೆ ಕೂಗಿ ಮಾತು ಮುಗಿಸುತ್ತೇನೆ, ನೀವು ಸೇರಿಕೊಳ್ಳಿ

## ಹೋರಾಡಿದರೆ ಗೆದ್ದೇ ಗೆಲ್ಲುತ್ತೇವೆ.

ಎಲ್ಲರೂ ಮುಷ್ಟಿ ಬಿಗಿ ಹಿಡಿದು ದನಿ ಸೇರಿಸಿ, ಹಸಿದ ಹೊಟ್ಟೆಯಲ್ಲಿ ಆಕ್ರೋಶ ಜಾಸ್ತಿ ಇರುತ್ತೆ, ಜೋರಾಗಿ ಹೇಳಿ, ಒಟ್ಟಿಗೆ ಹೇಳಿ ಹೋರಾಡಿದರೆ ಗೆದ್ದೇ ಗೆಲ್ಲುತ್ತೇವೆ, ಮಹಿಳಾ ಶಕ್ತಿ ಹೊರಟಿದೆ, ಹೊಸ ಬೆಳಕನ್ನು ತಂದಿದೆ, ಶಾಸನ ಮಾಡುವವರೇ ನಮ್ಮ ದನಿ ಕೇಳಿಸಿಕೊಳ್ಳಿ, ನಮ್ಮ ನಾಡಿನಲ್ಲಿ, ನಮ್ಮದೇ ಅಧಿಕಾರ/ರಾಜ್ಯಭಾರ, ಮಹಿಳೆಯರದೇ ಅಧಿಕಾರ/ ರಾಜ್ಯಭಾರ.

ಜಿಂದಾಬಾದ್

**(ಹಿಂದಿ ಭಾಷಣದ ಕನ್ನಡ ಬರಹ ರೂಪ: ಡಾ. ಸುಕನ್ಯಾ ಹಾವನೂರ್)**

# ಸಮಾವೇಶದ ನಿರ್ಣಯಗಳು

- ಸರ್ಕಾರ ರಚನೆಯೂ ಸೇರಿದಂತೆ ಎಲ್ಲ ರಂಗಗಳಲ್ಲಿಯೂ ಎಲ್ಲ ವರ್ಗದ ಮಹಿಳೆಯರನ್ನು ಒಳಗೊಳ್ಳುವಂಥ ಮೀಸಲಾತಿ ಜಾರಿಯಾಗಬೇಕು. ರಾಜಕೀಯ ಪಕ್ಷಗಳಲ್ಲಿ ಮತ್ತು ಜನಪರ ಸಂಘಟನೆಗಳಲ್ಲಿ ಮಹಿಳಾ ನಾಯಕತ್ವವನ್ನು ಬೆಳೆಸಲು ಕಾರ್ಯಕ್ರಮ ರೂಪಿಸಬೇಕು.
- ಉದ್ಯೋಗವೂ ಪ್ರತಿ ಪ್ರಜೆಯ ಹಕ್ಕು. ಸಾಮರ್ಥ್ಯಕ್ಕೆ ತಕ್ಕಉದ್ಯೋಗ ಹಾಗೂ ಸೂಕ್ತ ವೇತನ ಮಹಿಳೆಯರಿಗೆ ದೊರೆಯಬೇಕು.
- ಜಾತಿ, ವರ್ಗ, ಮತ, ಧರ್ಮ, ಜನಾಂಗ, ಯುದ್ಧ, ಭಯೋತ್ಪಾದನೆ, ಸಿದ್ಧಾಂತಗಳ ಹೆಸರಿನಲ್ಲಿ ನಡೆಯುವ ಭೀಕರ ಹಿಂಸೆ, ಅತ್ಯಾಚಾರಗಳು ನಿಲ್ಲಬೇಕು. ಮಹಿಳೆಯನ್ನು ಹಿಂಸೆ–ಪ್ರತಿಹಿಂಸೆಯ ದಾಳವಾಗಿ ಬಳಸಿಕೊಳ್ಳುವುದು ನಿಲ್ಲಬೇಕು.
- ವಿಶೇಷ ಅನುದಾನಯೋಜನೆ ಹಣವೂ ಸೇರಿದಂತೆ ಎಲ್ಲ ಕಡೆ 1984ರಲ್ಲಿ ಆದೇಶವಾಗಿರುವ ಶೇ. 33 ಜೆಂಡರ್ ಬಜೆಟ್ ಕಡ್ಡಾಯವಾಗಿ ಜಾರಿಯಾಗ ಬೇಕು. ಯೋಜನೆಯ ಹಣ ವಾಪಸಾಗುವುದನ್ನು, ದುರ್ಬಳಕೆಯಾಗುವುದನ್ನು ತಡೆಯಲು ಕಾವಲು ಸಮಿತಿಯನ್ನುರಚಿಸಬೇಕು.
- ಹೆಣ್ಣು ಭ್ರೂಣಹತ್ಯೆ, ಆ್ಯಸಿಡ್ ದಾಳಿಗಳು, ಬಾಲ್ಯ ವಿವಾಹ, ಮಕ್ಕಳ ಮಾರಾಟ, ಮಕ್ಕಳು ಮತ್ತು ಮಹಿಳೆಯರ ಮೇಲಿನ ಅತ್ಯಾಚಾರ ಕೊನೆಯಾಗಬೇಕು.
- ಆರೋಗ್ಯಕರ ಲೈಂಗಿಕ ಶಿಕ್ಷಣದ ಜೊತೆಗೆ ಸಾರ್ವಜನಿಕ ಸ್ಥಳ/ಸಂಸ್ಥೆಗಳಲ್ಲಿ, ವಿವಾಹ ಮತ್ತು ಕುಟುಂಬ ವ್ಯವಸ್ಥೆಯಲ್ಲಿ ಮಹಿಳೆಯರನ್ನು ಸಹಜೀವಿಯಾಗಿ, ಸಮಾನವಾಗಿ ಕಾಣುವ ಪರಿಣಾಮಕಾರಿ ಪಠ್ಯಕ್ರಮಗಳು ಶಿಕ್ಷಣದಲ್ಲಿ ಜಾರಿಯಾಗಬೇಕು.
- ವಿದೇಶಕ್ಕೆ ಹೋಗಲು ಮಹಿಳೆ ಪತಿ ಅಥವಾ ತಂದೆಯ ಅನುಮತಿ ಪಡೆಯಬೇಕೆಂಬಂತಹ ಪುರುಷ ಪ್ರಧಾನ ನೀತಿಗಳು ರದ್ದಾಗಬೇಕು. ಸಂಗಾತಿ/



ಪೋಷಕನ ಒಪ್ಪಿಗೆ ಅನಿವಾರ್ಯವಾದಲ್ಲಿ ಅದು ಪುರುಷರಿಗೂ ಅನ್ವಯವಾಗಬೇಕು.

- ಗಂಡ/ಸಂಗಾತಿಯ ಆಸ್ತಿ, ಅಧಿಕಾರದಲ್ಲಿ ಮಹಿಳೆಗೆ ಸಮಪಾಲು ನೀಡಬೇಕು. ಕೌಟುಂಬಿಕ ಜವಾಬ್ದಾರಿ ನಿರ್ವಹಣೆಗೆ ಮನೆಯೊಡತಿಗೆ ನಿಗದಿಪಡಿಸಿರುವ ಅತ್ಯಲ್ಪ ಹಣವನ್ನು ಹೆಚ್ಚುಮಾಡಬೇಕು.
- ಕಾರ್ಮಿಕ, ಮಹಿಳಾ, ದಲಿತ, ಆದಿವಾಸಿ ವಿರೋಧಿ ಕಾನೂನು ತಿದ್ದುಪಡಿಗಳು ರದ್ದಾಗಬೇಕು. ಅಲೆಮಾರಿ ಬುಡಕಟ್ಟು ಜನರಿಗೆ ಎಲ್ಲಾ ಸಂವಿಧಾನಾತ್ಮಕ ಹಕ್ಕುಗಳನ್ನು ನೀಡಬೇಕು.
- ಜನಸ್ನೇಹಿ ಸಾರಿಗೆ ವ್ಯವಸ್ಥೆ ಜಾರಿಯಾಗಬೇಕು. ಮಹಿಳಾ ಸುರಕ್ಷತೆಗೆ ಆದ್ಯತೆ ನೀಡಬೇಕು.
- ಪೌರಕಾರ್ಮಿಕರಿಗೆ ಬದುಕುವ ವೇತನ, ಉತ್ತಮ ಕೆಲಸದ ವಾತಾವರಣ, ಸುರಕ್ಷಾ ಸೌಲಭ್ಯಗಳು ಸಿಗಲೇಬೇಕು. ಕೆಲಸ ಖಾಯಮ್ಮಾಗಬೇಕು. ಒಳಚರಂಡಿ ವ್ಯವಸ್ಥೆಯನ್ನು ಕಡ್ಡಾಯವಾಗಿ ಸಂಪೂರ್ಣ ಯಾಂತ್ರೀಕೃತಗೊಳಿಸಬೇಕು.
- ಗಾರ್ಮೆಂಟ್ಸ್ ನೌಕರರು, ಮನೆಗೆಲಸದವರು, ಕಟ್ಟಡ ಕಾರ್ಮಿಕರು, ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಇನ್ನಿತರ ಅಸಂಘಟಿತ ವಲಯದ ದುಡಿಮೆಗಾರರಿಗೆ ಬದುಕುವ ವೇತನ, ಆರೋಗ್ಯಕರ ಕೆಲಸದ ವಾತಾವರಣ ಸಿಗಲೇಬೇಕು.
- ಲೈಂಗಿಕ ವೃತ್ತಿಯ ಅಪರಾಧೀಕರಣ ನಿಂತು ಆ ವೃತ್ತಿಯಲ್ಲಿರುವವರಿಗೆ, ಅವರ ಮಕ್ಕಳಿಗೆ ಉತ್ತಮ ಆರೋಗ್ಯ ಸೇವೆ, ಶಿಕ್ಷಣ, ಮತ್ತು ಉದ್ಯೋಗ ಮತ್ತು ಇತರೆ ನಾಗರಿಕ ಸೌಲಭ್ಯ ಸಿಗಬೇಕು. ಮಹಿಳೆ ಮತ್ತು ಮಕ್ಕಳ ಸಾಗಾಣಿಕೆ ತಡೆಗೆ ಗಂಭೀರ ಪ್ರಯತ್ನಗಳಾಗಬೇಕು.
- ಲಿಂಗತ್ವ ಮತ್ತು ಲೈಂಗಿಕತೆ ಅಲ್ಪಸಂಖ್ಯಾತರ ಮಾನವ ಹಕ್ಕುಗಳ ಉಲ್ಲಂಘನೆ ನಿಲ್ಲಬೇಕು.
- ಬಿಸಿಯೂಟ ಯೋಜನೆಯ ಖಾಸಗೀಕರಣವನ್ನು ತಡೆಯಬೇಕು. ಬಿಸಿಯೂಟ ತಯಾರಿಸುವ ಮಹಿಳೆಯರಿಗೆ ಉದ್ಯೋಗ ಭದ್ರತೆ, ಸೌಲಭ್ಯ ಹಾಗೂ ಯೋಗ್ಯ ವೇತನ ನೀಡಬೇಕು.
- ಕೃಷಿ ಭೂಮಿಯನ್ನು ರೈತರಿಂದ ಬಲವಂತವಾಗಿ ಕಸಿದುಕೊಂಡು ಅವರ ಬದುಕನ್ನು ದಿಕ್ಕಾಪಾಲಾಗಿಸುವ ಭೂಸ್ವಾಧೀನ ಸುಗ್ರೀವಾಜ್ಞೆ ತಡೆಯಾಗಬೇಕು.
- ಬೀದಿಬದಿ ವ್ಯಾಪಾರಿಗಳ ಎತ್ತಂಗಡಿ ಮಾಡುವುದನ್ನು ನಿಲ್ಲಿಸಬೇಕು. ಹಾಗೂ ಅವರ ವ್ಯಾಪಾರ ಅಧಿಕೃತಗೊಳಿಸಬೇಕು.
- ಶಿಕ್ಷಣ, ಆರೋಗ್ಯ ಹಾಗೂ ಇನ್ನಿತರ ಸಾರ್ವಜನಿಕ ಕ್ಷೇತ್ರಗಳ ಖಾಸಗೀಕರಣ/ಕಾರ್ಪೋರೇಟೀಕರಣ ನಿಲ್ಲಬೇಕು. ಸರ್ಕಾರ/ಸಾರ್ವಜನಿಕರ/ಸಹಕಾರಿ ತತ್ವಗಳ ಸ್ವಾಮ್ಯತೆ ಜಾರಿಯಾಗಬೇಕು.

- ಕಾರ್ಪೊರೇಟ್ ವಲಯದಲ್ಲಿ ಹಗಲು–ರಾತ್ರಿ ವ್ಯತ್ಯಾಸವಿಲ್ಲದ ದುಡಿಮೆ ನಿಲ್ಲಬೇಕು.
- ಸೆಕ್ಸ್‌ವರ್ಕರ್‌ಗಳನ್ನು ಕಾನೂನು ಬಾಹಿರವಾಗಿ ಬಂಧಿಸಿ ಅವರನ್ನು ಬೆಗ್ಗರ್ಸ್ ಹೋಂಗೆ ಕಳಿಸುವುದನ್ನು, ಅವರ ವೃತ್ತಿಯನ್ನು ಅಪರಾಧೀಕರಣ ಗೊಳಿಸುವುದನ್ನು ಒಕ್ಕೂಟವು ವಿರೋಧಿಸುತ್ತದೆ.
- ವಿಶ್ವವಿದ್ಯಾಲಯಗಳು ಸಮಾನತೆ, ಮಾನವತೆಯ ಬದುಕು ಕಟ್ಟಿಕೊಳ್ಳುವ ತಾಣ ಗಳಾಗಲಿ, ಆತ್ಮಹತ್ಯೆಯ ಕೂಪಗಳಾಗದಿರಲಿ. ಈ ನೆಲದ ನ್ಯಾಯವಾದ ಸಂವಿಧಾನದ ಆಧಾರದ ಮೇಲೆ ದೇಶಕಟ್ಟುವ ಯುವಜನತೆಯನ್ನು ದೇಶದ್ರೋಹಿಗಳಾಗಿಸಬೇಡಿ
- ಕಾಶ್ಮೀರದಲ್ಲಿ, ಛತ್ತೀಸ್‌ಗಢದಲ್ಲಿ ಮಹಿಳೆಯರ ಮೇಲಾಗುತ್ತಿರುವ ದೌರ್ಜನ್ಯ ವನ್ನು ಖಂಡಿಸುತ್ತೇವೆ. ದೇಶರಕ್ಷಣೆ ಎಂದರೆ ನಮ್ಮ ನಾಡಿನ ಜನ, ನೆಲ, ಜಲ, ವೈವಿಧ್ಯಮಯ ಸಂಸ್ಕೃತಿ, ಮಹಿಳೆ, ಆದಿವಾಸಿಗಳ, ದಲಿತರ ಹಾಗೂ ದಮನಿತರೆಲ್ಲರ ರಕ್ಷಣೆಯೆ ಹೊರತು ಅವರ ಮೇಲಿನ ದಾಳಿಯಲ್ಲ.



# ಸಮಾವೇಶದ ಮೆಲಕುಗಳು

## ಮೊದಲ ಬಾರಿ ರ್‍ಯಾಲಿಯಲ್ಲಿ ನಡೆಯುವಾಗ...

**ಭುವನೇಶ್ವರಿ**
ಸಂಶೋಧನಾ ವಿದ್ಯಾರ್ಥಿನಿ, ಮಹಿಳಾ ಅಧ್ಯಯನ ವಿಭಾಗ, ಕರಾಮವಿವಿ, ವಿಜಯಪುರ

ಕರ್ನಾಟಕ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ವತಿಯಿಂದ 2016 ಮಾರ್ಚ 8 ಮತ್ತು 9 ರಂದು ಅಂತಾರಾಷ್ಟ್ರೀಯ ಮಹಿಳಾ ದಿನಾಚಾರಣೆಯನ್ನು ವಿಜಯಪುರದ ಕಂದಗಲ್ ಹನುಮಂತರಾಯ ರಂಗಮಂದಿರದಲ್ಲಿ ನಡೆಸಲಾಯಿತು. ನರ್ಮದಾ ಬಚಾವೋ ಆಂದೋಲನದ ರೂವಾರಿಯಾದ ಮೇಧಾ ಪಾಟ್ಕರ್‌ರವರು ಕಾರ್ಯಕ್ರಮಕ್ಕೆ ಬರುವ ವಿಷಯ ತಿಳಿದು ನನಗೆ ತುಂಬಾ ಖುಷಿಯಾಗಿತ್ತು. ಏಕೆಂದರೆ ನಾನು ಮಹಿಳಾ ಅಧ್ಯಯನದಲ್ಲಿ ಎಂ.ಎ ಓದುವಾಗ ನಮ್ಮ ಪಠ್ಯಕ್ರಮದಲ್ಲಿ ಮೇಧಾ ಪಾಟ್ಕರ್ ಕುರಿತು ಓದಿದ್ದೆ. ಅವರು, ಗುಜರಾತಿನ ಜೀವನದಿಯಾದ ನರ್ಮದಾ ನದಿಗೆ ಕಟ್ಟುವ ಅಣೆಕಟ್ಟಿನಿಂದಾಗಿ ತಮ್ಮ ನೆಲೆ, ವಸತಿ, ಭೂಮಿ ಕಳೆದುಕೊಂಡವರ ಧ್ವನಿಯಾಗಿ ಮತ್ತು ಪರಿಸರ ಸಂರಕ್ಷಣೆಗಾಗಿ ಶ್ರಮಿದವರು. ನೂರಾರು ವರ್ಷಗಳಿಂದ ಪೂರ್ವಜರು ಬದುಕಿ ಬಾಳಿದ ಊರು, ಹೊಲ, ಮನೆ, ಗದ್ದೆ ಮತ್ತು ತೋಟದ ಜೊತೆ ಸಂತ್ರಸ್ತರಿಗಿರುವ ಭಾವನಾತ್ಮಕ ಸಂಬಂಧಗಳನ್ನು ಅರ್ಥ ಮಾಡಿಕೊಂಡ ಮೇಧಾ ಪಾಟ್ಕರ್ ಅವರು ಜನರಿರುವಲ್ಲಿಗೇ ಹೋಗಿ ಅವರ ಜೊತೆಯಲ್ಲಿಯೇ ವಾಸ ಮಾಡಿ, ಅಣೆಕಟ್ಟಿನ ಎತ್ತರವನ್ನು ವಿರೋಧಿಸಿದರು. ವಿರೋಧಿಸುವ ಸಲುವಾಗಿ ಕಂಠಮಟ್ಟ ನೀರಿನಲ್ಲಿ ಸತತವಾಗಿ 12 ಗಂಟೆಗಳ ಕಾಲ 50ಕ್ಕಿಂತ ಹೆಚ್ಚು ಸಂಗಡಿಗರೊಂದಿಗೆ ನಿಂತಿದ್ದಾರೆ. ಹಾಗಾಗಿ ಇಂಥಹ ಸಾಧಕಿಯನ್ನು ನೋಡುವುದು ನನಗೆ ಹೆಮ್ಮೆಯೆನಿಸಿತ್ತು.

ಈ ಸಮ್ಮೇಳನಕ್ಕಾಗಿ ನಡೆಯುತ್ತಿದ್ದ ಸಿದ್ಧತೆಗಳಲ್ಲಿ ನಾನು ತೊಡಗಿಕೊಂಡೆ. ಕಾರ್ಯಕ್ರಮಕ್ಕೆ ಬೇಕಾದ ಹಣವನ್ನು ಸಂಗ್ರಹಿಸುವುದರ ಭಾಗವಾಗಿ ಕರವಸ್ತ್ರ ಮಾರಾಟ ಮಾಡುವ ಕೆಲಸವನ್ನು ನಾನು ಮಾಡಿದೆ. ನಾನಿರುವ ಪಿ.ಜಿಯಲ್ಲಿರುವ ಹುಡುಗಿಯರಿಗೆ, ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿಗೆಂದು ಚಾಣಕ್ಯ ಕೆರಿಯರ್ ಕೇಂದ್ರಕ್ಕೆ ಬರುವ ಹುಡುಗಿಯರಿಗೆ ಮಹಿಳಾ ದಿನಾಚರಣೆ ಕುರಿತು ಹೇಳಿ ಕರವಸ್ತ್ರಗಳನ್ನು ಮಾರಟ ಮಾಡಿ ಹಣ ಸಂಗ್ರಹಿಸಿದೆ.

ದಿನಾಂಕ 8 ರಂದು 'ಮಹಿಳೆ ಮತ್ತು ವರ್ತಮಾನದ ಬಿಕ್ಕಟ್ಟು' ಕುರಿತ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಆಯೋಜಿಸಲಾಗಿತ್ತು. ವಿಚಾರ ಸಂಕಿರಣದ ಎಲ್ಲಾ ಗೋಷ್ಠಿಗಳು ಅರ್ಥಪೂರ್ಣವಾಗಿದ್ದವು. ವಿ. ಗಾಯತ್ರಿಯವರು ಮಾತನಾಡುತ್ತಾ 'ಇಂದು ಕೃಷಿ ಭೂಮಿ ಫಲವತ್ತತೆ ಕಳೆದುಕೊಂಡಿರುವದು ರೈತರ ಆತ್ಮಹತ್ಯೆಗೆ ಕಾರಣ ವಾಗಿದೆ. ಕೇಂದ್ರ ಸರ್ಕಾರವು ಅರವತ್ತರ ದಶಕದಲ್ಲಿ ಜಾರಿಗೊಳಿಸಿದ ಹಸಿರು ಕ್ರಾಂತಿ ಕಾರ್ಯಕ್ರಮದ ಭಾಗವಾಗಿ ವಿದೇಶಿ ಬೀಜಗಳ, ರಸಾಯನಿಕಗಳ, ರಸಗೊಬ್ಬರಗಳ ಉಪಯೋಗವನ್ನು ಪರಿಚಯಿಸಿತು. ಅವೆಲ್ಲದರ ಪರಿಣಾಮವಾಗಿ ಫಲವತ್ತಾದ ಭೂಮಿಯು ಹಾಳಾಯಿತು' ಎಂದು ಹೇಳಿದರು. ನಮ್ಮ ವಿಜಯಪುರದಲ್ಲಿಯೂ ಕೂಡ ವಾಣಿಜ್ಯ ಬೆಳೆಯಾಗಿ ಬೆಳೆಯುವ ದ್ರಾಕ್ಷಿಗೆ ರಸಾಯನಿಕಗಳನ್ನು ಹೆಚ್ಚಾಗಿ ಬಳಸಲಾಗುತ್ತದೆ. ಅದರಿಂದಾಗಿ ಕೃಷಿ ಭೂಮಿ ಹಾಳಾಗಿರುವುದಲ್ಲದೇ, ದ್ರಾಕ್ಷಿ ತೋಟಗಳಲ್ಲಿ ಕೂಲಿ ಕೆಲಸ ಮಾಡುವ ಮಹಿಳೆಯರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುತ್ತಿರುವುದು ಆ ಸಂದರ್ಭದಲ್ಲಿ ನನಗೆ ನೆನಪಾಯಿತು.

ಸಾಯಂಕಾಲ 6–30ರ ಹೊತ್ತಿಗೆ ವಿಜಯಪುರ ನಗರದ ಲಾಲಬಹದ್ದೂರ್ ಶಾಸ್ತ್ರಿ ಮಾರುಕಟ್ಟೆ ಪ್ರಾಂಗಣದಲ್ಲಿ ಎಲ್ಲಾ ಮಹಿಳೆಯರು ಕಪ್ಪು ಉಡುಪಿನೊಂದಿಗೆ ಮೇಣದ ಬತ್ತಿ ಹಿಡಿದು ಮೌನ ಪ್ರತಿಭಟನೆ ಮಾಡಿದೆವು. ಯುದ್ಧ, ಹಿಂಸೆ, ದೌರ್ಜನ್ಯವನ್ನು ಶಾಂತಿಯುತವಾಗಿ ವಿರೋಧಿಸುವುದು ಮೌನ ಪ್ರತಿಭಟನೆಯ ಉದ್ದೇಶವಾಗಿದೆ. ಪ್ರೀತಿಯ ರಾಜಕಾರಣವನ್ನು ಪ್ರತಿಪಾದಿಸುವ ಮಹಿಳಾ ಚಳುವಳಿಯು ಮೌನದ ಮೂಲಕ ಶಾಂತಿಯುತವಾಗಿ ನಡೆಸುವ ಪ್ರತಿಭಟನೆಯಲ್ಲಿ ನಾನು ಕೂಡಾ ಭಾಗವಹಿಸಿದ್ದು ತುಂಬಾ ಹೆಮ್ಮೆಯ ವಿಷಯ.

ಮಾರನೆಯ ದಿನ 9 ಗಂಟೆ ಸುಮಾರಿಗೆ ನಾವೆಲ್ಲ ವಿಜಯಪುರ ನಗರದ ಶಿವಾಜಿ ಸರ್ಕಲ್‌ನಲ್ಲಿ ಸೇರಿದೆವು. ಮೇಧಾ ಪಾಟ್ಕರ್‌ರವರು ಬಂದರು. ಅಲ್ಲಿಂದ ಅಪಾರ ಸಂಖ್ಯೆಯಲ್ಲಿ ಎಲ್ಲರೂ ಜೊತೆ ಸೇರಿ 'ಮಹಿಳೆಯರೇ ಒಂದಾಗಿ, ಹೋರಾಟಕ್ಕೆ ಮುಂದಾಗಿ' 'ಸಹೋದರಿಯರ ಹೋರಾಟ ಘನತೆಯ ಬದುಕಿಗಾಗಿ' ಹೀಗೆ ಹಲವಾರು ಮಹಿಳಾ ಜಾಗೃತಿ ಮೂಡಿಸುವ ಭಿತ್ತಿಫಲಕ ಹಿಡಿದುಕೊಂಡು, ಹೋರಾಟದ ಹಾಡುಗಳನ್ನು ಹೇಳುತ್ತಾ ಸಾಗಿದ ರ‍್ಯಾಲಿಯಲ್ಲಿ ನಮ್ಮ ಮಹಿಳಾ ಅಧ್ಯಯನ ವಿಭಾಗದವರೆಲ್ಲರೂ ರೆಡ್‌ಕ್ಯಾಪ್ ಹಾಕಿಕೊಂಡು ಭಾಗವಹಿಸಿದೆವು. ಇದು ನನ್ನ ಮೊದಲನೇ ರ‍್ಯಾಲಿಯಾಗಿತ್ತು.



ಸಮಾವೇಶದ ಕೊನೆಯಲ್ಲಿ ಮುಂದಿನ ವರ್ಷ ಕೊಪ್ಪಳದಲ್ಲಿ ಸಮಾವೇಶ ಮಾಡಲಿರುವ ಕೊಪ್ಪಳದ ಗೆಳತಿಯರು ವಿಜಯಪುರದ ಗೆಳತಿಯರಿಂದ ಸಸಿಯನ್ನು ತೆಗೆದುಕೊಂಡರು. ಈ ಸಮಾವೇಶ ನೋಡಿದ ನಂತರ ಮುಂದಿನ ಬಾರಿಯೂ ವಿಜಯಪುರದಲ್ಲಿಯೇ ಸಮಾವೇಶ ನಡೆಯಬೇಕು ಅನಿಸಿತು. ಅದಲ್ಲದೇ ಸಮಾವೇಶದಲ್ಲಿ ಭಾಗವಹಿಸಿದ ಗಟ್ಟಿಗಿತ್ತಿ ಮಹಿಳೆಯರ ಕಂಡು ನನಗೂ ಅವರ ಹಾಗೆಯೇ ಸಂಘಟನೆಯಲ್ಲಿ ತೊಡಗಬೇಕು ಮತ್ತು ಬೇರೆ–ಬೇರೆ ಸಮಾವೇಶಗಳಲ್ಲೂ ಭಾಗವಹಿಸಬೇಕು ಅನಿಸಿತು.

**ಭುವನೇಶ್ವರಿ,** ಸಂಶೋಧನಾ ವಿದ್ಯಾರ್ಥಿನಿ, ಮಹಿಳಾ ಅಧ್ಯಯನ ವಿಭಾಗ, ಕರಾಮವಿವಿ, ವಿಜಯಪುರ

## ಐತಿಹಾಸಿಕ ಅನುಭವವಾದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

**ಹಮೀದಾ,**
ಸಂಶೋಧನಾ ವಿದ್ಯಾರ್ಥಿನಿ, ಮಹಿಳಾ ಅಧ್ಯಯನ ವಿಭಾಗ, ಕರಾಮವಿವಿ, ವಿಜಯಪುರ

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು 2013ರಿಂದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಒಂದೊಂದು ವರ್ಷ ಒಂದೊಂದು ಜಿಲ್ಲೆಯಲ್ಲಿ ಆಚರಿಸಿಕೊಂಡು ಬರುತ್ತಿದೆ. ಅಂತೆಯೇ 2016ರ ಮಹಿಳಾ ದಿನಾಚರಣೆಯನ್ನು ನಮ್ಮ ವಿಜಯಪುರ ಜಿಲ್ಲೆಯಲ್ಲಿ ನಡೆಸಲಾಯಿತು. ಇಲ್ಲಿನ ಎಲ್ಲಾ ಮಹಿಳಾ ಸಂಘಟನೆಗಳೂ ಮತ್ತು ಸಮಾನ ಮನಸ್ಕ ಸಂಘಟನೆಗಳು ಸೇರಿ ಮಹಿಳಾ ದಿನಾಚರಣೆಯನ್ನು ಆಚರಿಸಲು ಮಾಡಿಕೊಳ್ಳಬೇಕಾದ ಸಿದ್ಧತೆಗಳ ಕುರಿತು ಚರ್ಚಿಸಿದರು. ಕರವಸ್ತ್ರ, ಕರಪತ್ರ, ಊಟ, ವಸತಿ, ಅತಿಥಿಗಳು, ಪೆಂಡಾಲು ಇತ್ಯಾದಿ ಒಂದೊಂದು ಜವಾಬ್ದಾರಿಯನ್ನು ಒಬ್ಬೊಬ್ಬರು ತೆಗೆದುಕೊಂಡರು. ಎರಡು ದಿನಗಳ ಕಾರ್ಯಕ್ರಮಕ್ಕೆ ಒಟ್ಟು ಎಂಟು ಲಕ್ಷ ರೂಪಾಯಿಗಳನ್ನು ಹೊಂದಿಸಬೇಕಾಗಿತ್ತು. ಯಾವುದೆಲ್ಲ ವ್ಯವಸ್ಥೆಯನ್ನು ಉಚಿತವಾಗಿ ಪಡೆಯಬಹುದೋ ಅದನ್ನು ಬಿಟ್ಟು ಉಳಿದ ಹಣವನ್ನು ಸಾರ್ವಜನಿಕರಿಂದಲೇ ಸಂಗ್ರಹಿಸಬೇಕೆಂದು ತೀರ್ಮಾನಿಸ ಲಾಯಿತು. ಕಾರ್ಯಕ್ರಮ ವಿವರ ಕುರಿತ ಕರಪತ್ರಗಳನ್ನು ಮುದ್ರಿಸಲಾಯಿತು, ತಲಾ 25ರೂಗೆ ಮಾರಾಟ ಮಾಡಿ ಹಣ ಸಂಗ್ರಹಿಸಲು ಕರವಸ್ತ್ರಗಳನ್ನು ಹೊಲೆಸಲಾಯಿತು. ನಂತರ ಗುಂಪುಗಳನ್ನು ಮಾಡಿಕೊಂಡು ಕರಪತ್ರ ಮತ್ತು ಕರವಸ್ತ್ರವನ್ನು ತೆಗೆದುಕೊಂಡು ತಮಗೆ ಪರಿಚಯವಿರುವ ಸಂಘ, ಸಂಸ್ಥೆ, ಶಾಲಾ, ಕಾಲೇಜುಗಳಿಗೆ ಹೋಗಿ ಕರಪತ್ರ ನೀಡಿ, ವಿಷಯ ತಿಳಿಸಿ, ಕರವಸ್ತ್ರ ಮಾರಾಟ ಮಾಡಿ ಹಣ ಸಂಗ್ರಹಿಸಲಾಯಿತು. ನಮ್ಮ ಗುಂಪಿನಲ್ಲಿ ಮೊದಲ ದಿನವೇ ಹನ್ನೆರಡು ಸಾವಿರ

**ಶಾಸಕಾಂಗದಲ್ಲಿ ದೊರಕಲಿ ಸಮಪಾಲು ಮಹಿಳೆಯರಿಗೆ**

ರೂಪಾಯಿ ದೇಣಿಗೆ ಪಡೆದೆವು. ಇದು ನನ್ನ ಪಾಲಿಗೆ ಒಂದು ಐತಿಹಾಸಿಕ ಕೆಲಸವೆನಿಸಿತು. ಇದು ನಮ್ಮೆಲ್ಲರಲ್ಲೂ ಉತ್ಸಾಹ ಮೂಡಿಸಿದರೆ ಕೆಲವು ಸಲ ಮುಜುಗರವು ಆಗುತ್ತಿತ್ತು. ಆದರೂ ನಾವೆಲ್ಲರು ಉತ್ಸಾಹದಿಂದ ವಿಜಯಪುರದ ಸುತ್ತಮುತ್ತಲಿನ ಊರುಗಳಿಗೆ ಹೋಗಿಬಂದೆವು. ಅಲ್ಲೆಲ್ಲಾ ನಮಗಾದ ಅನುಭವಗಳನ್ನು ಮರೆಯಲಾಗದು. ಒಂದು ಸಲ ಗಾಂಧಿ ಚೌಕನ ಮಾರ್ಕೆಟ್‌ನಲ್ಲಿ ಕರಪತ್ರ ನೀಡಿ ಸಮಾವೇಶಕ್ಕೆಂದು ಒಂದುರೂಪಾಯಿ ನೀಡಿ ಎಂದು ಚೀಲ ಹಿಡಿಯುತ್ತಿದ್ದೆವು. ಆಗ ಒಬ್ಬ ತರಕಾರಿ ಇಳಿಸುತ್ತಿದ್ದ ಹುಡುಗ ಅದರೊಳಗೆ ಗೆಣಸಿನ ಗೆಡ್ಡೆಯನ್ನು ಚೀಲಕ್ಕೆ ಹಾಕಿದಾಗ ನನಗೆ ಸಿಟ್ಟು ಬಂದಿತ್ತು. ಆದರೆ ಅವನು ತರಕಾರಿಯನ್ನೂ ಹಾಕಬಹುದೇನೋ ಎಂದು ಹಾಕಿದ್ದನಷ್ಟೇ. ಪ್ರತಿ ಶುಕ್ರವಾರ ಅಥವಾ ರವಿವಾರ ಸಭೆ ಸೇರಿ ಪರಸ್ಪರ ಉತ್ಸಾಹ ತುಂಬುತ್ತಾ ಹಣ ಸಂಗ್ರಹ ಮಾಡಿದೆವು. ಮಾರ್ಚ ಏಳನೇ ತಾರೀಖಿನಂದು ಕೊನೆ ಸಭೆ ಸೇರಿ ಎಲ್ಲಾ ಕಾರ್ಯಕ್ರಮಗಳ ಪಟ್ಟಿಯನ್ನು ತಯಾರಿಸಿಕೊಂಡೆವು. ದೆಹಲಿಯ ಜೆಎನ್‌ಯುನಲ್ಲಿ ಸಂದರ್ಶಕ ಪ್ರೊಫೆಸರ್ ಆಗಿರುವ ಉಮಾ ಚಕ್ರವರ್ತಿಯವರು ವಿಚಾರ ಸಂಕಿರಣಕ್ಕೆ ಮುಖ್ಯ ಭಾಷಣಕಾರರಾಗಿ ಬಂದರು. ಮಾರನೇ ದಿನ ಕಾರ್ಯಕ್ರಮದಂದು ಎಲ್ಲರಲ್ಲಿ ಸಡಗರ, ಆತಂಕಗಳೆರಡು ತುಂಬಿಕೊಂಡಿದ್ದವು. ಮಾರ್ಚ 8 ಮುಂಜಾನೆ 9 ಗಂಟೆಗೆ ಎಲ್ಲರೂ ವಿಚಾರ ಸಂಕಿರಣ ನಡೆಯಲ್ಲಿದ್ದ ರಂಗಮಂದಿರದಲ್ಲಿ ಸೇರಿದೆವು. ಎನ್.ಎಸ್.ಎಸ್. ಮಕ್ಕಳೊಂದಿಗೆ ಸೇರಿಕೊಂಡು ಸಭಾಮಂಟಪವನ್ನು ಅಲಂಕರಿಸಿದೆವು. ಅತಿಥಿಗಳಿಗೆ ಕೊಡುವ ಹಣ್ಣು ಶಾಲುಗಳನ್ನು ಸಿದ್ಧಮಾಡಿಕೊಂಡೆವು. ನಾವೆಲ್ಲರು ಅಬಲೆಯರಲ್ಲ ಸಬಲೆಯರು ಎಂಬ ಘೋಷಣೆಗಳನ್ನು ಕೂಗಿ ಹೆಮ್ಮೆ ಪಟ್ಟೆವು. ವಿಚಾರ ಸಂಕಿರಣ ಕಾರ್ಯಕ್ರಮ ಯಶಸ್ವಿಯಾಗಿ ನಡೆದು ಎಲ್ಲರಿಗೂ ಹೆಮ್ಮೆ ಎನಿಸಿತು.

ವಿಚಾರ ಸಂಕಿರಣ ಮುಗಿದ ನಂತರ ಸಂಜೆ ಗಾಂಧಿ ಚೌಕದಲ್ಲಿರುವ ಶಾಸ್ತ್ರಿ ಮಾರುಕಟ್ಟೆಯ ಮುಂಬಾಗದಲ್ಲಿ ನಡೆದ 'ವಿಮೆನ್‌ಇನ್ ಬ್ಲಾಕ್' ಕಾರ್ಯಕ್ರಮವಂತೂ ಎಂದೂ ಮರೆಯಲಾರದಂತದು. ಅದು ನಮ್ಮಲ್ಲಿ ಒಂದುಹೊಸ ಉತ್ಸುಕತೆ ಮೂಡಿಸಿತು. ಆ ಕಾರ್ಯಕ್ರಮದಲ್ಲಿ ಕಪ್ಪುಉಡುಪು ಧರಿಸಿ, ಕೈಯಲ್ಲಿ ಉರಿವ ಕ್ಯಾಂಡಲು ಹಿಡಿದು ಮೌನವಾಗಿ ಒಂದು ತಾಸು ನಿಂತು ಪ್ರತಿಭಟನೆ ಮಾಡಿದೆವು. ಇದಂತು ಮೊದಲಿಗೆ ನನಗೆ ಸ್ವಲ್ಪ ಮುಜುಗರ ಹುಟ್ಟಿಸಿತು. ಆದರೆ ಕೆಲವೇ ನಿಮಿಷಗಳಲ್ಲಿ ಆ ಮುಜುಗರ ಮಾಯವಾಗಿ ಒಂದು ಹೊಸ ಭಾವನೆಗಳನ್ನು ಹುಟ್ಟಿಸಿತು. ಈ ಅನುಭವವನ್ನು ಯಾರೂ ಮರೆಯಲಾರರು. ನಾವು ನಿಂತಿದ್ದ ಆದೃಶ್ಯವು ನಮಗೆ ಕಾಣುತ್ತಿರಲಿಲ್ಲ, ಆದರೆ ನಮ್ಮ ಎದುರಿನಲ್ಲಿ ಓಡಾಡುತ್ತಿದ್ದ, ನಿಂತು ನೋಡುತ್ತಿದ್ದ ಜನರ ಕಣ್ಣುಗಳಲ್ಲಿ 'ಆ ದೃಶ್ಯ ಎಷ್ಟು ಚೆನ್ನಾಗಿದೆ' ಎಂಬುದನ್ನು ಕಂಡುಕೊಂಡೆ. ಅದನ್ನು ನೋಡಿದವರೂ ಆ ಕಾರ್ಯಕ್ರಮದಲ್ಲಿ ಭಾಗಿಯಾಗಲು ಬರತೊಡಗಿದರು. ಒಬ್ಬ ವ್ಯಕ್ತಿ ಮಕ್ಕಳನ್ನು ತಾನು ಎತ್ತಿಕೊಂಡು ಹೆಂಡತಿಯನ್ನು ಅಲ್ಲಿ ನಿಲ್ಲು ಎಂದು ಕಳಿಸಿದ. ಎಲ್ಲರೂ ತಮ್ಮ ಜಾತಿ ಬೇಧ ಮರೆತು ಮಹಿಳೆಯರೆಲ್ಲಾ ಒಂದೇಎಂದು ಭಾವಿಸಿದರು. ಯಾರಿಗೂ ಆ ಮೌನ ಮೀರಿ ಮಾತನಾಡಲು ಇಷ್ಟವಾಗುತ್ತಿರಲಿಲ್ಲ. ಎಲ್ಲರೂ ಒಂದೇ ಎಂಬ ಭಾವದಿಂದ ನಿಲ್ಲುತ್ತಿದ್ದರು. ಹಕ್ಕಿಗಳು ಝೇಂಕಾರ ಹಾಕುತ್ತಾ ಗುಂಪಿನಲ್ಲಿ ಸಾಗುತ್ತಿದ್ದವು. ಕತ್ತಲು ಕವಿಯುವಾಗ ಬೆಳಕು ತುಂಬುತ್ತಿರುವ ಆ ದೃಶ್ಯ ಎದುರಿನಲ್ಲಿ ನೋಡುತ್ತಿರುವ ಕಣ್ಣುಗಳಲ್ಲಿ ಉಂಟು ಮಾಡುತ್ತಿದ್ದ ಭಾವವನ್ನು ನೋಡಿ ಆನಂದಿಸಿದೆವು. ಆ ದೃಶ್ಯ ನನ್ನ ಪಾಲಿಗೆ ಎಂದೂ ಮರೆಯಲಾಗದ ಇತಿಹಾಸವಾಗಿದೆ. ಇಂತಹ ಕಾರ್ಯಕ್ರಮದ ಭಾಗಿಯಾದವರು ನಿಜವಾಗಿಯೂ ಅದೃಷ್ಟವಂತರು ಎಂದು ಭಾವಿಸುತ್ತೇನೆ. ಮರುದಿನ ಪತ್ರಿಕೆಯಲ್ಲಿ ಬಂದ ಫೋಟೋ ನೋಡಿದ ನನ್ನ ಮಕ್ಕಳು ತಾವೂ ಆ ಕಾರ್ಯಕ್ರಮದಲ್ಲಿ ಭಾಗಿಯಾಗುವ ಆಸೆಯನ್ನು ವ್ಯಕ್ತಪಡಿಸಿದರು. ನಿಜವಾಗಿಯೂ ಅದು ಮರೆಯದಂತಹ ಕಾರ್ಯಕ್ರಮವಾಗಿದೆ.

ಆ ಕಾರ್ಯಕ್ರಮದ ಕೊನೆಯಲ್ಲಿ ನಮ್ಮ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ವಿಭಾಗದ ವಿದ್ಯಾರ್ಥಿನಿಯರು ದಿನವಿಡೀ ಆದ ಕಾರ್ಯಕ್ರಮವನ್ನು ವರದಿ ಮಾಡಿ ಪತ್ರಿಕೆಯ ರೂಪದಲ್ಲಿ ಪ್ರಕಟಿಸಿದ್ದನ್ನು ಬಿಡುಗಡೆ ಮಾಡಿ ಹಂಚಲಾಯಿತು. ಮರುದಿನ ಬೆಳಿಗ್ಗೆ ನಮಗೆ ಮತ್ತೊಂದು ಉತ್ಸಾಹ ಕಾದಿತ್ತು. ಅದು ಮೇಧಾಪಾಟ್ಕರ್ ಮೇಡಂರವರ ಜೊತೆಯಲ್ಲಿ ರ್‍ಯಾಲಿಯಲ್ಲಿ ಹೋಗುವ ಕಾರ್ಯಕ್ರಮವಿತ್ತು. ಎಲ್ಲರೂ ಶಿವಾಜಿ ಸರ್ಕಲ್‌ನಲ್ಲಿ ಸೇರಿದೆವು. ಉದ್ಘಾಟನೆಯ ನಂತರ ಶಿವಾಜಿ ಸರ್ಕಲ್‌ನಿಂದ ದರ್ಬಾರ್ ಹೈಸ್ಕೂಲ್ ಮೈದಾನದವರೆಗೂ ಮೆರವಣಿಗೆಯಲ್ಲಿ ನಡೆದು ಘೋಷಣೆಗಳನ್ನು ಕೂಗುತ್ತಾ, ಹಾಡುಗಳನ್ನು ಹಾಡುತ್ತಾ ಹೋದೆವು. ಹನ್ನೆರಡು ಗಂಟೆಗೆ ದರ್ಬಾರ್ ಹೈಸ್ಕೂಲ್ ಮೈದಾನಕ್ಕೆ ಬಂದು ಸೇರಿದೆವು. ಸ್ಕೂಲಿನಲ್ಲಿರುವಾಗ ಪ್ರಭಾತ್ ಫೇರಿಗೆ ಹೋದ ನೆನಪಾಯಿತು. ಮೇಧಾ ಮೇಡಂ ಬಂದು ಎಲ್ಲರಿಗೂ ಹುಮ್ಮಸ್ಸು ತುಂಬುವ ಘೋಷಣೆಗಳನ್ನು ಹಾಕಿ ಮಹಿಳೆಯರ ಸಬಲಿಕರಣದ ಬಗ್ಗೆ ಭಾಷಣ ಮಾಡಿದರು. ನಮ್ಮ ಏಳಿಗೆಗಾಗಿ ನಾವೇ ಶ್ರಮಿಸಬೇಕು, ನಮ್ಮ ಗೌರವದ ಇತಿಹಾಸವನ್ನು ನಾವೇ ಬರೆಯಬೇಕು, ತಾಯಿಗೆ ಜೀವಕೊಡುವ ಸಾಮರ್ಥ್ಯವಿದೆ. ಎಂದರೆ ತನ್ನ ಬಡತನ, ಒಂಟಿತನದ ಸ್ಥಿತಿಯಲ್ಲಿಯೂ ತನ್ನ ಮಗುವನ್ನು ರಾಜ ಅಥವಾ ರಾಣಿಯಾಗಿ ಬೆಳೆಸುವ ಸಾಮರ್ಥ್ಯ ಅವಳಲ್ಲಿ ಇದೆ ಎಂದು, ಎಲ್ಲಾ ಮಹಿಳೆಯರಲ್ಲೂ ಚೈತನ್ಯವನ್ನು ತುಂಬಿದರು. ಅವರು ಸತ್ಯಸಂಗತಿಗಳನ್ನು ಹೇಳಲು ಸ್ವಲ್ಪವು ಹಿಂದೆ ಮುಂದೆ ನೋಡದೇ, ಖಡಾಖಂಡಿತವಾಗಿ ಆಡಿದ ಮಾತುಗಳು ನಮ್ಮ ಮನಸ್ಸಿನಲ್ಲಿ ಅಚ್ಚೊತ್ತಿವೆ.

ಈ ಎರಡು ದಿನಗಳ ಮಹಿಳಾ ದಿನಾಚರಣೆಯಲ್ಲಿ ಹಲವಾರು ಹೊಸ ಜನರ ಪರಿಚಯವಾಯಿತು. ಹೊಸ ಅನುಭವಗಳನ್ನು ಪಡೆದುಕೊಂಡೆವು. ಇಂತಹದ್ದೊಂದು ಹೊಸ ಇತಿಹಾಸದಲ್ಲಿ ನಾವು ಭಾಗಿಗಳಾದೆವು. ಶ್ರಮ ವಹಿಸಿ ದುಡಿಯುವ ಜನರು ಎಷ್ಟು ಉದಾರ ಮನಸ್ಸಿನವರು ಎನ್ನುವುದು ತಿಳಿಯಿತು. ಈ ಮಹಿಳಾ ದಿನಾಚರಣೆ ಹೊಸ ಚಳುವಳಿಯನ್ನು ಪ್ರಾರಂಭಿಸಿತು. ನಾವು ನಮ್ಮ ಹಕ್ಕುಗಳನ್ನು ಕೇಳಲು ಎಂತಹ ಬದಲಾವಣೆ ಎಚ್ಚರ / ಬೇಕು ಎಂಬುವುದನ್ನು

**ಪ್ರಕೃತಿಯ ರಕ್ಷಣೆ ಮಹಿಳೆ ಬದುಕಿಗೆ ಬೇಕೆ ಬೇಕು**

ಕಲಿತೆವು. ಮೇಧಾಪಾಟ್ಕರ್ ರವರು ಅಂತಹ ಒಂದು ಧೈರ್ಯ, ಚೈತನ್ಯವನ್ನು ತುಂಬಲು ಎಲ್ಲರಿಂದ ಘೋಷಣೆಗಳನ್ನು ಕೂಗಿಸಿದರು. ಇದರಿಂದ ಮಹಿಳೆಯರಲ್ಲಿರುವ ಮುಜುಗರ ಕಡಿಮೆಯಾಗಿ ನಂತರ ತಾವೇ ಚೆನ್ನಾಗಿ ಕೂಗುತ್ತಿದ್ದರು.

ಮಾಡುವ ಕೆಲಸಗಳು ಪಾರದರ್ಶಕವಾಗಿರಬೇಕು, ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ ಬೆಳೆಸಿಕೊಳ್ಳಬೇಕು. ಭಿನ್ನಾಭಿಪ್ರಾಯಗಳನ್ನು ಗೌರವಿಸಿಕೊಂಡೇ ಒಂದು ಧ್ವನಿಯಾಗಿ ಮಾತನಾಡುವುದನ್ನು ಕಲಿಯಬೇಕಾಗಿದೆ. "ನಮ್ಮ ಶಕ್ತಿಯನ್ನ, ನಮ್ಮ ಸ್ವಾಭಿಮಾನ, ಸ್ವಾವಲಂಬನೆಯನ್ನು ಆಧರಿಸಿದ ವಿಕಾಸ ಜೊತೆಗೆ ಸಮಾನತೆ, ನ್ಯಾಯವನ್ನು ಸಾಧಿಸಿಕೊಳ್ಳೋಣ. ಆಗಲೇ ಈ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯಂದು ಹೊಸ ಸಂಕಲ್ಪ ಮತ್ತು ಹೊಸ ದಾರಿಯನ್ನು ಕಂಡುಕೊಳ್ಳಬಹುದು" ಎಂಬ ಮೇಧಾ ಅವರ ಮಾತುಗಳು ಬಂಧನಗಳನ್ನು ಮೀರಿ, ಬಿಡುಗಡೆಯ ಹಾದಿಯಲ್ಲಿ ನಡೆಯಲು ಚೈತನ್ಯದಂತಿವೆ.

## ಶಿವಬಾಳಮ್ಮ ಕೊಂಡುಗೂಳಿ

ಜಿಲ್ಲಾ ಕಾರ್ಯದರ್ಶಿ, ಎ.ಐ.ಎಮ್.ಎಸ್.ಎಸ್, ವಿಜಯಪುರ

ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು 2016 ಮಾರ್ಚ 8 ರಂದು ವಿವಿಧ ಸಂಘಟನೆಗಳ ನೇತೃತ್ವದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ವಿಜಯಪುರದಲ್ಲಿ ಹಮ್ಮಿಕೊಂಡಿತ್ತು. ವಿಷಮಯ ಕೃಷಿ ಕೊನೆಯಾಗಲಿ ಮಹಿಳೆಯರು ಮತ್ತು ಮಕ್ಕಳ ಸಾಗಣೆ ಮತ್ತು ಅವರ ಮೇಲಿನ ದೌರ್ಜನ್ಯ ನಿಲ್ಲಲಿ ಎಂಬ ಪ್ರಮುಖವಾದ ಬೇಡಿಕೆಗಳನ್ನು ಹೊಂದಿದ್ದು ಮತ್ತು ವಿಜಯಪುರದ ವಿವಿಧ ರೀತಿಯ ಸಂಘಟನೆಗಳನ್ನು ಒಂದೇ ವೇದಿಕೆಯಡಿ ಸಂಘಟಿಸಿದ್ದು ಅತ್ಯುತ್ತಮ ಕಾರ್ಯವಾಗಿತ್ತು. ಇದರಲ್ಲಿ ನಮ್ಮ ಸಂಘಟನೆಯಾದ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯು ಕೈಜೋಡಿಸಿತ್ತು. ದಿನಾಂಕ–8–3–2016 ರಂದು ರಂಗಮಂದಿರದಲ್ಲಿ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ಮತ್ತು ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟದ ಸಂಯುಕ್ತಾಶ್ರಯದಲ್ಲಿ ಮಹಿಳೆಯ ಅನುಭವಿಸುವ ಪ್ರಸಕ್ತ ಸಮಸ್ಯೆಗಳ ಕುರಿತು, 'ಮಹಿಳೆ ಮತ್ತು ವರ್ತಮಾನದ ಬಿಕ್ಕಟ್ಟುಗಳು' ಎಂಬ ವಿಚಾರಸಂಕಿರಣ ಹಮ್ಮಿಕೊಳ್ಳಲಾಗಿತ್ತು. ಈ ವಿಚಾರಸಂಕಿರಣಕ್ಕೆ ನಾಡಿನ ಹಾಗೂ ವಿವಿಧೆಡೆಯಿಂದ ಮಹಿಳಾ ಚಿಂತಕರು ಬಂದಿದ್ದರು. ಅದೇ ದಿನ ಸಾಯಂಕಾಲ 6.30ಕ್ಕೆ ನಗರದ ಪ್ರಮುಖ ಸ್ಥಳವಾದ ಗಾಂಧಿಚೌಕದಲ್ಲಿ ಕಪ್ಪು ಉಡುಪಿನಲ್ಲಿ ಮೇಣದ ಬತ್ತಿ ಬೆಳಗಿಸಿ ಮಹಿಳೆಯರು 'ಮೌನ ಪ್ರತಿಭಟನೆ' ನಡೆಸಿದರು. ಈ ಕಾರ್ಯಕ್ರಮದಲ್ಲಿ ಎಲ್ಲ ಮಹಿಳೆಯರು ಉತ್ಸಾಹದಿಂದ ಪಾಲ್ಗೊಂಡರು. ಮತ್ತು ಈ ವಿನೂತನ ಕಾರ್ಯಕ್ರಮವು ಮಹಿಳೆಯರಲ್ಲಿ ಒಂದು ಹೊಸ ಚೈತನ್ಯ ತುಂಬಿತು.



ದಿನಾಂಕ–9–3–2016 ರಂದು ಬಹಿರಂಗ ಸಾರ್ವಜನಿಕ ಸಭೆ ಮತ್ತು ವಿಜಯಪುರದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಯಿತು. ಮೆರವಣಿಗೆಯಲ್ಲಿ ಎಲ್ಲಾಕ್ಷೇತ್ರದ ಮಹಿಳೆಯರು ಭಾಗವಹಿಸಿದ್ದರು. ನರ್ಮದಾ ಬಚಾವೋ ಆಂದೋಲನದ ಖ್ಯಾತಿಯ ಮತ್ತು ರೈಟ್ ಲೈವ್ಲಿಹುಡ್ ಪ್ರಶಸ್ತಿ ಪುರಸ್ಕೃತರಾದ ಮೇಧಾಪಾಟ್ಕರ್‌ರವರು ಈ ಬೃಹತ್ ಮೆರವಣಿಗೆಯ ನೇತೃತ್ವ ವಹಿಸಿದ್ದು ಮತ್ತು ಸಾರ್ವಜನಿಕ ಸಭೆಗೆ ಅತಿಥಿಗಳಾಗಿ ಆಗಮಿಸಿದ್ದು ಮಹಿಳಾ ದಿನಾಚರಣೆಗೆ ಒಂದು ಹೊಸ ಸ್ಫೂರ್ತಿ ತಂದಿತ್ತು. ಅವರು ತಮ್ಮ ಹೋರಾಟದ ಜೀವನವನ್ನು ತಿಳಿಸುವುದರ ಮೂಲಕ ಹುರಿದುಂಬಿಸಿದರು. ದೂರದಿಂದಲೇ ಅವರ ಬಗ್ಗೆ ಕೇಳಿ ತಿಳಿದಿದ್ದೆ ಮತ್ತು ಓದಿ ತಿಳಿದುಕೊಂಡಿದ್ದೆ ಆದರೆ ಹತ್ತಿರದಿಂದ ನೋಡಿ ನನಗೆ ತುಂಬಾ ಸಂತೋಷವಾಯಿತು. ಸದಾ ನಗುಮುಖ, ದಣಿವರಿಯದ ದೇಹ, ನಿರಾಭರಣೆಯಾದರೂ ಸಹಾ ಎಲ್ಲರನ್ನು ಆಕರ್ಷಿಸುವಂತಹ ವ್ಯಕ್ತಿತ್ವ, ತೇಜಸ್ಸು ಅವರದು. ನಿಜ ಹೇಳಬೇಕೆಂದರೆ ಅವರ ಜೊತೆ ಮಾತನಾಡಿ ಕೈ ಕುಲುಕುವ ಅವಕಾಶ ಸಿಕ್ಕಿದ್ದು ನನ್ನ ಅದೃಷ್ಟವೇ ಸರಿ, ಬರಿ ನನಗಲ್ಲ, ಇದು ಅಲ್ಲಿ ಸೇರಿದ ಎಲ್ಲಾ ಮಹಿಳೆಯರ ಅದೃಷ್ಟವೂ ಆಗಿರುತ್ತದೆ ಎಂದು ನನ್ನ ಭಾವನೆ.

ಇನ್ನೊಂದು ವಿಷಯ ತಿಳಿಸಬೇಕೆಂದರೆ ವಿಜಯಪುರದಲ್ಲಿ ಹಮ್ಮಿಕೊಂಡಿದ್ದ ಈ ಮಹಿಳಾ ದಿನಾಚರಣೆಯ ರಾಜ್ಯ ಮಟ್ಟದ ಕಾರ್ಯಕ್ರಮಕ್ಕೆ ವಿಜಯಪುರದ ಜನತೆ ತುಂಬಾ ಸಹಕಾರ ನೀಡಿದ್ದಾರೆ. ಅದನ್ನು ಯಶಸ್ವಿಯಾಗಿ ಮಾಡಿ ಮಹಿಳೆಯರ ಸಮಾನತೆಗಾಗಿ ಸಮಸ್ಯೆಗಳ ನಿವಾರಣೆಗಾಗಿ ಅವರಲ್ಲಿ ಹಂಬಲವಿದೆ ಛಲವಿದೆ ಎಂದು ತೋರಿಸಿಕೊಟ್ಟಿದ್ದಾರೆ. ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ ವಿರೋಧಿ ಒಕ್ಕೂಟವು ಹೀಗೆ ಮಹಿಳಾ ದಿನಾಚರಣೆಯನ್ನು ಮುಂದುವರೆಸಲಿ. ನಾಡಿನಾದ್ಯಂತ ಒಕ್ಕೂಟದ ಕಾರ್ಯಕ್ರಮಗಳು ಯಶಸ್ವಿಯಾಗಲಿ ಎಂದು ಆಶಿಸುತ್ತೇನೆ.

**ಮಹಿಳೆಯರಿಗೂ ಸಮಾನ ಅವಕಾಶವಿರಲಿ ಎಲ್ಲೆಡೆ**

# ಮರೆಯಾದ ಗೆಳತಿಯರು



## ಸಾಹಸಿ ಸಂಧ್ಯಾ ರಾವ್ (1953–2016)

**ಮೀನಾ ಶೇಷು ಮತ್ತು ಲಕ್ಷ್ಮಿ ಮೂರ್ತಿ**

ಚೈತನ್ಯದಲ್ಲಿ ವಿರಮಿಸು ಸಂಧ್ಯಾರಾವ್. ನಿನ್ನನ್ನು ಮಿಸ್ ಮಾಡಿಕೊಳ್ಳುತ್ತೇವೆ. ಅಂದು 18, ಜೂನ್, 2016 ರಂದು ಆರತಿ, ಲಕ್ಷ್ಮಿ ಮತ್ತು ಮಧು ಸೇರಿ ನೀಡಿದ ಪಾರ್ಟಿ ಅವಿಸ್ಮರಣೀಯವಾಗುಳಿಯಿತು. ಕಿಮೋಥೆರಪಿ ಚಿಕಿತ್ಸೆ ನಡೆಯುತ್ತಿದ್ದ ಸಂದರ್ಭದಲ್ಲಿಯೂ ಬೆಂಗಳೂರಿನ ಟ್ರಾಫಿಕ್ ಜಾಮಿನಲ್ಲಿ ದೊಡ್ಡ ರೈಡ್ ಹೋಗಬೇಕೆಂದು ಒತ್ತಾಯಿಸಲು ನಿನಗಷ್ಟೇ ಸಾಧ್ಯ.

ವ್ಯಾಂಪ್, ಮುಸ್ಕಾನ್ ಮತ್ತು ಸಂಗ್ರಾಮ್ ಸಂಸ್ಥೆಗಳು ನಮ್ಮೊಂದಿಗೆ ದಿಟ್ಟವಾಗಿ ನಡೆದ ಸ್ತ್ರೀವಾದಿ ಗೆಳತಿಗೆ ನಮನಗಳನ್ನು ಸಲ್ಲಿಸುತ್ತವೆ. ನಮ್ಮ ಸಂಶೋಧನೆಗಳಿಗಾಗಿ ಅನುವಾದ ಮಾಡಿಕೊಟ್ಟದ್ದು, ಕತೆಗಳನ್ನು ಬರೆದುಕೊಟ್ಟದ್ದು, ತರಬೇತಿಗಳಲ್ಲಿ ಕೈ ಹಿಡಿದದ್ದು, ಸಿಗರೇಟು ಸೇದಿದ್ದು ಮತ್ತು ಇತ್ತೀಚೆಗೆ ನಮ್ಮ ಸಂಸ್ಥೆಯ ಲೈಂಗಿಕ ಕಿರುಕುಳ ಸಮಿತಿಯ ಸದಸ್ಯೆಯಾಗಿದ್ದು, ಸಮಸ್ಯೆ ಬಂದಾಗ ಸಹಾಯ, ಬೆಂಬಲ ನೀಡಿದ್ದು, ಕಷ್ಟದ ದಿನಗಳಲ್ಲಿ ನಮ್ಮ ಕೈ ಹಿಡಿಯುವ ಸಲುವಾಗಿ ಸಾಂಗ್ಲಿಯವರೆಗೂ ಬರುತ್ತಿದ್ದುದು ಮರೆಯಲಾರದ ವಿಷಯಗಳು.

ನೀನು ಸಹ ತಮ್ಮ ರಾಜಕೀಯ ಮತ್ತು ವೈಯಕ್ತಿಕ ನಿಲುವುಗಳಲ್ಲಿ ಫ್ಲ್ಯಾಂಬಾಯಂಟ್, ಅಡಾಸೊಯಸ್ ಆಗಿದ್ದೆ, ವಿವಾಹ, ಏಕಪತ್ನಿತ್ವ ಮತ್ತು ವಿರುದ್ಧ



ಲಿಂಗಿ ಲೈಂಗಿಕತೆಯ ರೂಢಿಗತ ಮಾದರಿಗಳಿಗೆ ಸದಾ ಸವಾಲೊಡ್ಡುತ್ತ ಸಾಗಿದ ಎಂಬತ್ತರ ದಶಕದ ಸ್ತ್ರೀವಾದಿಗಳಂತೆ. ಯಾಕೋ 80ರ ದಶಕದ ತಳಿಗಳು ಶೀಘ್ರವಾಗಿ ಕಣ್ಮರೆಯಾಗುತ್ತಿವೆ!

ಕಾಲೇಜಿನಲ್ಲಿ ಓದುತ್ತಿದ್ದಾಗ ಹಯವದನ ನಾಟಕದಲ್ಲಿ ಮುಖ್ಯ ಪಾತ್ರವಹಿಸುವ ಮೂಲಕ ಕನ್ನಡ ರಂಗಭೂಮಿಯ ಅನುಭವಿ ಕಲಾವಿದರ ವಿಮರ್ಶೆಗೆ ಒಳಗಾಗಿದ್ದೆ. ತನ್ನಿಚ್ಛೆಯಂತೆ ಬದುಕುವ ನೀನು ಹಗುರಾಗಿ ತೇಲಿದ್ದೆ. ಎಪ್ಪತ್ತರಲ್ಲಿ ಗಂಡನ ಹೆಸರನ್ನು ತನ್ನ ಹೆಸರಿನೊಂದಿಗೆ ಜೋಡಿಸಿಕೊಳ್ಳಬಾರದೆಂಬುದು ಸ್ತ್ರೀವಾದಿಯ ಕಟ್ಟಾ ಸೂಚಕವಾಗಿದ್ದ ಸಂದರ್ಭದಲ್ಲಿ ನೀನು ನಿನ್ನ ಮುಸ್ಲಿಮನಾಗಿ ಹುಟ್ಟಿದ್ದ ನಿನ್ನ ಗಂಡನ ಹೆಸರನ್ನು ನಿನ್ನ ಹೆಸರಿನೊಂದಿಗೆ ಸೇರಿಸಬೇಕೆಂದು ಬ್ಯಾಂಕಿನ ಮ್ಯಾನೇಜರುಗಳು, ಸರ್ಕಾರಿ ಬಾಬುಗಳೊಂದಿಗೆ ವೀರಾವೇಶದೊಂದಿಗೆ ಹೋರಾಡುತ್ತಿದ್ದೆ. ಮುಂದೆ ಬೇರೆಯಾದಾಗ ನಿನ್ನ ಹೆಸರಿನೊಂದಿಗೆ ರಾವ್ ಅನ್ನು ಸೇರಿಸಿಕೊಂಡೆ. ಕಟ್ಟಾ ನಿರೀಶ್ವರವಾದಿಯಾದ ನೀನು ಕುಟುಂಬದೊಳಗಿನ ಕಟ್ಟರ್ ಹಿಂದುತ್ವೈಟ್ಸ್‌ನೊಂದಿಗೆ ಗುದ್ದಾಡಲು ಸದಾ ಗೌಸು ಹಾಕಿಕೊಂಡು ಸಿದ್ಧವಾಗಿರುತ್ತಿದ್ದೆ.

ಎಂಬತ್ತರ ಪೂರ್ವದಲ್ಲಿ ಸ್ತ್ರೀಲೇಖ ಮತ್ತು ವಿಮೋಚನಾದೊಂದಿಗೆ ಕೆಲಸ ಮಾಡಿ 1993ರಲ್ಲಿ ಹೆಂಗಸರ ಹಕ್ಕಿನ ಸಂಘ ಎಂಬ ನ್ಯಾಯಿಕ ಹಕ್ಕುಗಳ ಕುರಿತು ಕೆಲಸ ಮಾಡುವ ಸರ್ಕಾರೇತರ ಸಂಸ್ಥೆಯನ್ನು ಸ್ಥಾಪಿಸಿದೆ. ಗ್ರಾಮೀಣ ಮಹಿಳೆಯರಿಗೆ ಕಾನೂನು ಕುರಿತ ಅರಿವು ಮೂಡಿಸುವ ತರಬೇತಿಗಳನ್ನು ನೀಡಲು ರಾಜ್ಯಾದ್ಯಂತ ತಿರುಗಾಡಿದೆ. ಒಂದು ದಶಕದ ಹಿಂದೆ ಯುವ ಪೀಳಿಗೆಯವರಿಗೆ ವರ್ಗಾಯಿಸಿದ್ದು ಸರ್ಕಾರೇತರ ಸಂಸ್ಥೆಗಳ ಇತಿಹಾಸದಲ್ಲಿ ವಿರಳವಾದ್ದು. ಹಾಗೆ ಬಿಟ್ಟು ಕೊಡುವುದು ಕಷ್ಟದ ನಿರ್ಧಾರವಾದರೂ ಅಂತ ನಿರ್ಧಾರ ಸ್ತ್ರೀವಾದಿ ಸಂಘಟನೆಯ ಅಂತರ್ಗತವಾದ ಭಾಗವಾಗಬೇಕೆಂಬುದು ನೀನು ನಂಬಿದ್ದೆ. ಕೆಲವು ತಿಂಗಳುಗಳ ಹಿಂದೆ ಹೆಂಗಸರ ಹಕ್ಕಿನ ಸಂಘವನ್ನು ಮುಚ್ಚಿದಾಗ ಅಸಮಾಧಾನವಾದರೂ ಸಂಘಟನೆಯ ಸ್ವರೂಪಗಳು ಪಡೆದುಕೊಳ್ಳುತ್ತಿರುವ ಅನಿವಾರ್ಯ ಬದಲಾವಣೆಗಳನ್ನು ಒಪ್ಪಿಕೊಳ್ಳುವ ಉದಾರತೆ ತೋರಿದೆ.

ಕೊನೆಯ ವರ್ಷಗಳಲ್ಲಿ ಆಕೆ ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಸುರಕ್ಷತೆ ಕುರಿತಂತೆ ಕಾರ್ಪೋರೇಷನ್‌ಗಳಿಗೆ, ಕೆಲಸ ಮಾಡುವ ಸ್ಥಳಗಳಲ್ಲಿನ ಲೈಂಗಿಕ ಕಿರುಕುಳ ಸಮಿತಿಗಳು ಸಮಸ್ಯೆಗಳನ್ನು ಬಗೆಹರಿಸುವ ಕುರಿತಂತೆ ತರಬೇತಿಗಳನ್ನು, ಮಾರ್ಗದರ್ಶನಗಳನ್ನು ನೀಡುತ್ತಿದ್ದರು, ನೀತಿಗಳನ್ನು ರಚಿಸಲು ಸಹಾಯ ಮಾಡುತ್ತಿದ್ದರು.

ತೊಂಬತ್ತರ ದಶಕದಲ್ಲಿ ತನ್ನಿಬ್ಬರು ಹೆಣ್ಣು ಮಕ್ಕಳನ್ನು ಮುಖ್ಯವಾಹಿನಿ ಶಾಲೆಯಿಂದ ಬಿಡಿಸಿ ಪರ್ಯಾಯ ಶಾಲೆಗಳ ಬಗ್ಗೆ ಪ್ರಯೋಗ ಮಾಡಲು ಪ್ರಯತ್ನಿಸುತ್ತಿದ್ದವರೊಂದಿಗೆ ಕೈ ಜೋಡಿಸಲು ಮುಂದಾದದ್ದು ಆಕೆಗೆ ಪರ್ಯಾಗಳ ಸಾಧ್ಯತೆಗಳ ಬಗ್ಗೆ ಇದ್ದ ಬದ್ಧತೆಯನ್ನು ತೋರುತ್ತದೆ. ಸ್ವಾವಲಂಬಿಗಳು,

ಸೃಜನಶೀಲರೂ ಆಗಿರುವ ಅವಳ ಮಕ್ಕಳಾದ ಶ್ರುತಿ ಮತ್ತು ಶಬರಿಯರು ಸ್ತ್ರೀವಾದಿ ತಾಯ್ತನದ ಸತ್ಯ ನಿರೂಪಣೆಯಂತಿದ್ದಾರೆ.

ನಾನು ಜಿ ಮತ್ತು ಜಿಯೊಂದಿಗೆ ಜೆಂಡರ್ ಮತ್ತು ಮೊಮ್ಮಕ್ಕಳೊಂದಿಗೆ ತೊಡಗಿಕೊಂಡಿದ್ದೇನೆಂದು ಸದಾ ಘೋಷಿಸುತ್ತಿದ್ದರು. ಅವರ ಮೂರು ಮೊಮ್ಮಕ್ಕಳು ಅವರ ದಿವ್ಯಾನಂದವಾಗಿದ್ದವು. ಕೊನೆಯವರೆಗೂ ಅವರಿಗೆ ಜೋಕುಗಳನ್ನು ಹೇಳುತ್ತಾ, ಕತೆಗಳನ್ನು ಹೇಳುತ್ತ, ಕನ್ನಡ ಪದ್ಯಗಳನ್ನು ಕಲಿಸುತ್ತ, ದೋಸೆ ಪಾಸ್ತಾಗಳನ್ನು ಮಾಡಿಕೊಡುತ್ತ ಕಳೆದಳು. ಮೇ 2016ರಲ್ಲಿ ಶ್ವಾಸಕೋಶದ ಕ್ಯಾನ್ಸರ್ ಇರುವುದು ಪತ್ತೆಯಾಯಿತು. ಕಾಯಿಲೆಯನ್ನೂ ಆಕೆ ಎದುರಿಸಿದ್ದು ಪ್ರತಿರೋಧ ಒಡ್ಡಿ, ಹೋರಾಟ ಮಾಡಿ. ಆಗಸ್ಟ್ 27 ರಂದು ಗೆಳತಿಯ ಮನೆಗೆ ಊಟಕ್ಕೆ ಹೋಗಿ ಆನಂದವಾಗಿ ಕಾಲ ಕಳೆದು ಆಸ್ಪತ್ರೆಯಲ್ಲೊಂದು ಇಸಿಜಿ ಮಾಡಿಸಿಕೊಂಡು ಮನೆ ತಲುಪಲು ಟ್ಯಾಕ್ಸಿ ಹತ್ತಿದವಳು ತಲುಪುವ ಮೊದಲೇ ಗಾಢ ನಿದ್ದೆಗೆ ಶಾಂತವಾಗಿ ಜಾರಿದಳು ಎಂದೂ ಏಳದಂತೆ! ವಯಸ್ಸು 62, ಬಹಳ ಜನರನ್ನು ಬಹಳ ಸಣ್ಣ ವಯಸ್ಸಿಗೆ ಕಳೆದುಕೊಳ್ಳುತ್ತಿದ್ದೇವೆ.

ಅಪ್ಪಟ ಸ್ತ್ರೀವಾದಿ. ಚೈತನ್ಯದಲಿ ವಿರಮಿಸು ಸಂಧ್ಯಾ! ನಿನಗೊಂದು ಸಲಾಮು!



## ಮರೆಯಾದ ಹೆಣ್ಣುದಿಕ್ಕು
## ದವಿಂದರ್ ಕೌರ್ (1953–2016)

**ಕಲ್ಪನಾ ಮೆಹ್ತಾ**

ಎಲ್ಲರಿಗೂ ದವಿ ಎಂದೇ ಪರಿಚಿತರಾಗಿದ್ದ ದವೀಂದರ್ ಮೇ 30, 2016ರಂದು ನಮ್ಮನ್ನು ಅಗಲಿದರು. 'ಸಹೇಲಿ' ಯರೊಂದಿಗೆ 1982ರಿಂದಲೂ ಸಹಪಯಣಿಗಳಾಗಿದ್ದ ಆಕೆ ಮಹಿಳಾ ಚಳವಳಿಗೆ ನೀಡಿದ ಕೊಡುಗೆ ಅಮೂಲ್ಯವಾದುದು. ಆಕೆ ನಮ್ಮೊಂದಿಗೆ ಸಂಪರ್ಕಕ್ಕೆ ಬಂದಿದ್ದು ಗಂಡ ಮತ್ತು ಮಕ್ಕಳಿರಡನ್ನು ತೊರೆದು ಬಂದು ತನ್ನದೇ ಬದುಕನ್ನು ಕಟ್ಟಿಕೊಳ್ಳಬೇಕೆಂಬ ಸಂದರ್ಭದಲ್ಲಿ. ಸೋದರಿತ್ವ, ಸ್ಪರ್ಧಾಮುಕ್ತತೆ, ಷರತ್ತಿಲ್ಲದ ಪ್ರೀತಿ, ಉದಾರತೆ, ಇಲ್ಲದವರ ಬಗ್ಗೆ ಅಂತಃಕರಣ ಈ ಎಲ್ಲ ಸ್ತ್ರೀವಾದಿ ನಂಬಿಕೆಗಳನ್ನು ಆಚರಣೆಯಲ್ಲಿ ಆಕೆ ಮೈಗೂಡಿಸಿಕೊಂಡಿದ್ದಳು.

ಶಾಲೆ ಮುಗಿಸುತ್ತಿದ್ದಂತೆಯೇ ಅವಳ ಪೋಷಕರು ಅವಳನ್ನು ಅವಳಿಗಿಂತ ಹತ್ತು ವರ್ಷಕ್ಕೆ ಹಿರಿಯನಾದವನೊಂದಿಗೆ ಮದುವೆ ಮಾಡಿದ್ದರು. ತಡವಿಲ್ಲದೆ ಎರಡು ಮಕ್ಕಳು ಆದವು. ವೈವಾಹಿಕ ಜೀವನದಲ್ಲಿ ತುಂಬಾ ಹೋರಾಡುತ್ತಿದ್ದ ಆಕೆ ಕಷ್ಟಪಟ್ಟು ವಿದೇಶಿ ವ್ಯವಹಾರ ಇಲಾಖೆಯಲ್ಲಿ ಕೆಲಸ ಪಡೆದುಕೊಂಡಳು. ಆ ಸಂದರ್ಭದಲ್ಲಿ ಎಡ ಹಾಗೂ ದಲಿತ ಚಳವಳಿಯ ಸಂಪರ್ಕಕ್ಕೆ ಬಂದ ಮೇಲೆ ಅವಳ ಒಳಗಿನ



ಹೋರಾಟಗಾರ್ತಿ ಎಚ್ಚೆತ್ತುಕೊಂಡಳು. ಆಕೆ 1982ರಲ್ಲಿ ಮನೆ ತೊರೆದು ಬಂದಳು. ದವಿಯಂತೆ ವೈಯಕ್ತಿಕವಾಗಿ ಪ್ರತಿರೋಧಿಸುವುದು, ತಡವರಿಸುತ್ತ ಹಗೆಯ ಜಗದೊಳಗೆ ತನ್ನತಾ ಹುಡುಕಿಕೊಳ್ಳುವುದು ಆ ಕಾಲ ಘಟ್ಟದ ವೈಯಕ್ತಿಕ ಮತ್ತು ರಾಜಕೀಯ ಆಚರಣೆಯಾಗಿತ್ತು. ಸಾಂಪ್ರದಾಯಿಕ ಕಟ್ಟುಪಾಡಿಗೆ ಪ್ರತಿರೋಧ ಒಡ್ಡಲು ಸಿಗರೇಟು ಮತ್ತು ತುಂಡುಗೂದಲು ಅಸ್ತ್ರವಾಗಿದ್ದವು. ಅದಕ್ಕೆ ದವಿಯೂ ಹೊರತಾಗಿರಲ್ಲಿಲ್ಲ. ಸಿಖ್ ಧರ್ಮದಲ್ಲಿ ಹುಟ್ಟಿದ್ದ ಆಕೆಗೆ ಅದೊಂದು ದೊಡ್ಡ ಸಾಹಸವೇ ಆಗಿತ್ತು. ಮೊದಲಿಗೆ ಸ್ವಯಂ ಸೇವಾ ಕಾರ್ಯಕರ್ತೆಯಾಗಿ 'ಸಹೇಲಿ' ಗುಂಪಿಗೆ ಬಂದ ದವಿ ಮುಂದೆ ಕೊಂಚಕಾಲ ಕೆಲಸದಿಂದ ಸಮಯ ಪಡೆದುಕೊಂಡು ಪೂರ್ಣಾವಧಿ ಕಾರ್ಯಕರ್ತೆಯಾಗಿ ಕೆಲಸ ಮಾಡಿದಳು. ಸಹಾಯ, ಆಸರೆ ಯಾಚಿಸಿ ಬರುತ್ತಿದ್ದ ಮಹಿಳೆಯರಿಗೆ ಅವಳೊಂದು ಅಮೂಲ್ಯ ಆಸ್ತಿಯಾಗಿದ್ದಳು. ದಿಕ್ಕೆಟ್ಟ ಪುಕ್ಕಗಳ ನವಿರಾಗಿ ಸವರಿ ಒಪ್ಪಮಾಡುವಂತೆ ಗಂಟೆಗಟ್ಟಲೇ ತಾಳ್ಮೆಯಿಂದ ನೊಂದ ಮಹಿಳೆಯರಿಗೆ ಸಮಯ ನೀಡುತ್ತಿದ್ದಳು. ಅವಳದೊಂದು ಕೋಣೆ ಬಿರುಸಿನ ಚರ್ಚೆಯ ಸಭೆಗಳು, ಸಂಘಟನೆಯ ದುಡಿತಕ್ಕೆ ಮುಕ್ತ ಚಾವಡಿಯಾಗಿತ್ತು. ಅಚ್ಚುಕಟ್ಟಿನ ಪುಟ್ಟಂಜಿಯಾಗಿದ್ದ ಆಕೆ ಎಲ್ಲ ಕೆಲಸವನ್ನು ಶಿಸ್ತಾಗಿ ಮಾಡುತ್ತಿದ್ದಳು. ಮಾಡುವ ಕೆಲಸವನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಂಡು ಮಾಡುತ್ತಿದ್ದಳೇ ಹೊರತು ಕಟ್ ಪೇಸ್ಟ್ ಗಿರಾಕಿಯಾಗಿರಲ್ಲಿಲ್ಲ.

ಹೊರಜಗತ್ತಿನ ಬಗ್ಗೆ ಹೆಚ್ಚು ತೆರೆದುಕೊಂಡಿರದಿದ್ದ ದವಿ ಮೊತ್ತ ಮೊದಲ ಬಾರಿ ರೈಲಿನಲ್ಲಿ ಕುಳಿತಿದ್ದು ಮುಂಬೈನಲ್ಲಿ 1984ರಲ್ಲಿ ನಡೆದ ರಾಷ್ಟ್ರೀಯ ಸಮಾವೇಶಕ್ಕೆಂದು ಸಹೇಲಿಯ ಗೆಳತಿಯರೊಡನೆ ಹೋದಾಗ! ಇದೇ ಹೆಣ್ಣುಮಗಳು ಮುಂದೆ ಆಫ್ರಿಕಾ, ಲ್ಯಾಟಿನ್ ಅಮೇರಿಕಾ, ಯೂರೋಪಿಗೆ ಒಬ್ಬಳೆ ಹೋಗಿ ಜಗತ್ತಿನೊಂದಿಗೆ ವ್ಯವಹರಿಸಿದ್ದು, ಹಲವಾರು ಭಾಷೆಗಳನ್ನು ಕಲಿತಿದ್ದು, ಪ್ರತಿದಿನವೂ ಕಚೇರಿಗೆ ತಡವಾಗಿ ಹೋದರೂ ಇಡೀ ಇಲಾಖೆಯಲ್ಲಿ ಅಪಾರಗೌರವವನ್ನು ಸಂಪಾದಿಸಿದ್ದು ಒಂದು ಪವಾಡವೆನಿಸಿದರೂ ಸತ್ಯ!

ರಾಜಕೀಯದಲ್ಲಿನ ಆಕೆಯ ಭಾಗವಹಿಸುವಿಕೆ ಸುಗಮವಾಗೇನೂ ಇರಲ್ಲಿಲ್ಲ. ತಿಳುವಳಿಕೆಯನ್ನು ವಿಸ್ತರಿಸಿಕೊಳ್ಳುತ್ತ ಹೋದರೂ ಭಿನ್ನ ವಿಚಾರಗಳಿಗೆ ಸಿಗಬೇಕಾದ ಅವಕಾಶಗಳು ಸಂಕುಚಿತಗೊಳ್ಳುತ್ತ ಹೋದಂತೆ ಅಂಥ ತಿಳುವಳಿಕೆಗಳು ಕಾರ್ಯರೂಪಕ್ಕೆ ಇಳಿಯಲ್ಲಿಲ್ಲ. ಕೊನೆಯವರೆಗೂ ಆಕೆ ಪ್ರಾಮಾಣಿಕ ಕಾಲಾಳಾಗಿಯೇ ಇದ್ದಳು. ಹಿಂದಿಗೆ ಅನುವಾದಿಸಲು, ಪ್ರೂಫ್ ತಿದ್ದಲು, ಎಡಿಟ್ ಮಾಡಲು ಸದಾ ಸಿದ್ಧಳಾಗಿರುತ್ತಿದ್ದರೂ, ಸಹೇಲಿಯ ಲೆಕ್ಕಗಳನ್ನು ತಪ್ಪಿಲ್ಲದೆ ನಿರ್ವಹಿಸುತ್ತಿದ್ದರೂ, ಮನೆಯನ್ನು ಮೀಟಿಂಗುಗಳಿಗೆ ಬಿಟ್ಟುಕೊಡುತ್ತಿದ್ದರೂ, ಸಾಧ್ಯವಾದಾಗಲೆಲ್ಲ ದೇಣಿಗೆ ನೀಡುತ್ತಿದ್ದರೂ ತನ್ನ ಅಭಿಪ್ರಾಯಗಳನ್ನು ಖಾಸಗಿಯಾಗಿ ಮಾತ್ರ ಹಂಚಿಕೊಳ್ಳುತ್ತಿದ್ದಳು. ಅವಳ ಉದಾರತೆಗೆ ಗಡಿಗಳಿರಲ್ಲಿಲ್ಲ. ಅವಳ

**ತಮ್ಮ ದುಡಿಮೆಯ ಫಲ ಮಹಿಳೆಗೆ ದಕ್ಕಬೇಕು**

ಚೈತನ್ಯವೆಂಥದ್ದೆಂದರೆ ಬರುವವರೆಲ್ಲರೂ ಅವಳ ಮನೆಯನ್ನು ತಮ್ಮದೇ ಎನ್ನುವಂತೆ ಭಾವಿಸುತ್ತಿದ್ದರು. ಹೊರಗಿನಿಂದ ದೆಹಲಿಗೆ ಹೋಗುತ್ತಿದ್ದವರೆಲ್ಲರೂ ದವಿಯ ಮನೆಯನ್ನು ನಮ್ಮದೇ ಮನೆ ಎಂದೇ ಭಾವಿಸುತ್ತಿದ್ದೆವು. ಮನೆಯನ್ನು ನಿರ್ವಹಣೆ ಅವಳದು.

ಅವಳ ಅಸಮಾನ್ಯ ಸಾಮರ್ಥ್ಯದ ಮೌಲ್ಯವನ್ನು ಅವಳ ಕಚೇರಿಯ ಸಾಮಾನ್ಯಜನ ಗ್ರಹಿಸಿ, ಗೌರವಿಸುತ್ತಿದ್ದರು. ಮಹಿಳಾ ಚಳವಳಿಯಲ್ಲಿ ಅವಳಿಗೆ ಅಂಥ ಮಾನ್ಯತೆ ಸಿಗಲಿಲ್ಲ. ಆ ಬಗ್ಗೆ ಯಾವಗಾಲಾದರೊಮ್ಮೆ ಅವಳಿಗೆ ಬೇಸರವೆನಿಸಿದರೂ ಅದನ್ನೂ ಸಹ ವ್ಯಕ್ತಪಡಿಸಿದ್ದು ಖಾಸಗಿಯಾಗಿ ಮಾತ್ರ.

ದೆಹಲಿಯಲ್ಲಿ ಮತ್ತು ಹೊರಗಡೆಇದ್ದ ಸ್ನೇಹಿತರೆಲ್ಲರನ್ನು ಒಂದೂಗೂಡಿಸುತ್ತಿದ್ದ ಅವಳು ದಿಢೀರನೇ ಅಕಾಲಿಕವಾಗಿ ತೀರಿಕೊಂಡದ್ದು ನಮ್ಮೆಲ್ಲರಿಗೂ ಬಹು ದೊಡ್ಡ ನಷ್ಟ. ಸೋದರಿತ್ವವನ್ನು ಸದಾ ಜೀವಂತವಾಗಿಡುತ್ತಿದ್ದ ದವಿಯ ಸಾವು ಸ್ತ್ರೀವಾದಿ ಪರಂಪರೆಗೆ ಬಹು ದೊಡ್ಡ ನಷ್ಟವಾಗಿದೆ.



## ಅಸಮಾನತೆ ಮತ್ತು ಅನ್ಯಾಯದ ವಿರುದ್ಧ ನಿರಂತರವಾಗಿ ಹೋರಾಡುತ್ತಿದ್ದ ತೃಪ್ತಿ ಷಾ (1962–2016)

ಶೋಷಣೆ, ಹಿಂಸೆ ಮತ್ತು ಅನ್ಯಾಯದ ವಿರುದ್ಧ ನಡೆಯುತ್ತಿದ್ದ ಹೋರಾಟಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ವಡೋದರದ ತೃಪ್ತಿ ಷಾ ಅವರು ಶ್ವಾಸಕೋಶದ ಕ್ಯಾನ್ಸರ್‌ನಿಂದಾಗಿ 2016ರ ಮೇ 26ರಂದು ತೀರಿಕೊಂಡರು. ತೃಪ್ತಿಯವರ ಅಗಲಿಕೆಯಿಂದಾಗಿ ಮಹಿಳಾ ಚಳವಳಿ, ಪರಿಸರ ಚಳವಳಿಯಲ್ಲದೆ ನ್ಯಾಯಕ್ಕಾಗಿ ನಡೆಯುತ್ತಿದ್ದ ಹೋರಾಟಗಳಲ್ಲಿನ ಗಟ್ಟಿ ದನಿಯೊಂದು ಮರೆಯಾದಂತಾಗಿದೆ.

ಅವರ ತಂದೆ ಥಕೋರ್‌ಬಾಯ್ ಷಾ, ಹೆಸರಾಂತ ಕಾರ್ಮಿಕ ನಾಯಕರಾಗಿದ್ದರು. ಅವರ ತಾಯಿ ಸೂರ್ಯಕಾಂತ ಷಾ ಅವರು ಸಾರ್ವಜನಿಕ ಜೀವನದಲ್ಲಿ ಸಕ್ರಿಯವಾಗಿದ್ದರು. ತೃಪ್ತಿಯವರು ಸಣ್ಣವಯಸ್ಸಿನಿಂದಲೇ ಜನಪರ ಹೋರಾಟಗಳಲ್ಲಿ ತೊಡಗಿಸಿಕೊಂಡವರು. "ಅನ್ಯಾಯದ ವಿರುದ್ಧ ಹೋರಾಡುವ ಸಲುವಾಗಿ ಪತ್ರಕರ್ತ ವೃತ್ತಿಯನ್ನು, ಗಾಂಧೀವಾದಿ ಸಿದ್ಧಾಂತವನ್ನು ಕೈಬಿಟ್ಟು, ಮಾರ್ಕ್ಸ್ ಮತ್ತು ಟ್ರಾಟ್‌ಸ್ಕಿ ಸಿದ್ಧಾಂತವಾದಿಯೂ ಹಾಗೂ ಕಾರ್ಮಿಕ ಸಂಘಟನಾವಾದಿಯೂ ಆದ ನನ್ನ ತಂದೆಯಿಂದಲೇ ನಾನು 'ಯಾವುದೇ ಅನ್ಯಾಯವನ್ನು ಸಹಿಸಿಕೊಳ್ಳಬಾರದು'ಎಂಬ



ಚೈತನ್ಯವನ್ನು ಪಡೆದುಕೊಂಡದ್ದು. ಎಪ್ಪತ್ತರ ದಶಕದಲ್ಲಿ ಹುಟ್ಟಿಕೊಂಡ ಬಹುಪಾಲು ಮುಖ್ಯ ಚಳವಳಿಗಳಿಗಳಿಗೆ ನಾನು ಸಾಕ್ಷಿಯಾಗಿದ್ದೇನೆ, ಭಾಗಿಯಾಗಿದ್ದೇನೆ. ಮಹಿಳಾ ಚಳವಳಿಯಲ್ಲಿನ ನನ್ನ ಭಾಗವಹಿಸುವಿಕೆಯ ಮೂಲ ಬೇರುಗಳು ಈ ಅನುಭವಗಳಲ್ಲಿದೆ" ಎನ್ನುತ್ತಿದ್ದ ತೃಪ್ತಿಯವರು ನನ್ನ ಅಕ್ಟಿವಿಸ್ಟ್ ಬದುಕಿಗೆ ನನ್ನ ತಾಯಿ ತಂದೆಯರೇ ಸ್ಫೂರ್ತಿ ಎಂದು ಹೇಳುತ್ತಿದ್ದರು.

ಜನಪರ ಚಳವಳಿಯ ಮೊದಲ ಅನುಭವವಾಗಿದ್ದು 1973ರಲ್ಲಿ. ಆಗ ಅವರಿಗಿನ್ನೂ 11 ವರ್ಷ. ವಡೋದರದಲ್ಲಿ ಹಾಲಿನ ದರ ಒಂದು ರೂ ಏರಿಸಿದಾಗ ಬೆಲೆ ಹೆಚ್ಚಳದ ವಿರುದ್ಧ ನಡೆದ ಹೋರಾಟದಲ್ಲಿ ಹಿರಿಯರೊಂದಿಗೆ ಪಾಲ್ಗೊಂಡಿದ್ದಕ್ಕೆ ಇವರೂ ಸೇರಿದಂತೆ ಐವರು ಹೆಣ್ಣುಮಕ್ಕಳನ್ನು ಮೂರು ದಿನಗಳ ಕಾಲ ಮಕ್ಕಳ ಸ್ಟೇಟ್ ಹೋಮ್‌ನಲ್ಲಿಡಲಾಗಿತ್ತು. ಆನಂತರ ಅವರು ನವ್ ನಿರ್ಮಾಣ್ ಆಂದೋಲನ ಮತ್ತು ಎಮರ್ಜನ್ಸಿ ವಿರೋಧಿ ಚಳವಳಿಯಲ್ಲಿ ಸಕ್ರಿಯವಾಗಿ ಭಾಗಿಯಾದರು. ಮಹಾರಾಜ ಸಯ್ಯಾಜಿರಾವ್ ವಿಶ್ವವಿದ್ಯಾಲಯದ ವಿದ್ಯಾರ್ಥಿನಿಯಾಗಿದ್ದಾಲೇ ಮಹಿಳಾ ಚಳವಳಿಗೆ ಧುಮುಕಿದ ತೃಪ್ತಿಯವರು ಕೊನೆಯವರೆಗೂ ಅದರಲ್ಲಿ ಸಕ್ರಿಯವಾಗಿದ್ದರು.

ಹದಿನೆಂಟು ವರ್ಷದವರಿದ್ದಾಗಲೇ ಕಮ್ಯೂನಿಸ್ಟ್ ಲೀಗ್‌ನಲ್ಲಿ ಸಕ್ರಿಯವಾಗಿ ತೊಡಗಿಕೊಂಡರು. ಫೋರ್ತ್ ಇಂಟರ್ ನ್ಯಾಷನಲ್‌ನ ಭಾರತದ ವಿಭಾಗವಾಗಿದ್ದ ಲೀಗ್ ಸ್ವಾಯತ್ತ ಮಹಿಳಾ ಚಳವಳಿಯನನು ಬೆಂಬಲಿಸುತ್ತಿತ್ತು. ಕಮ್ಯೂನಿಸ್ಟ್ ಲೀಗ್ ನ ಮುಂಚೂಣಿಯಲ್ಲಿದ್ದ ಡಾ. ವಿಭೂತಿ ಪಟೇಲ್ ಅವರು ತೃಪ್ತಿಯವರನ್ನು ಸ್ವಾಯತ್ತ ಮಹಿಳಾ ಚಳುವಳಿಗೆ ಪರಿಚಯಿಸಿದರು. ಸಮಾಜಶಾಸ್ತ್ರಜ್ಞರು ಮತ್ತು ಸ್ತ್ರೀವಾದಿಯೂ ಆಗಿದ್ದ ಡಾ. ನೀರಾ ದೇಸಾಯಿಯವರೂ ಸಹ ಅವರ ಚಿಂತನೆ ಮತ್ತು ಮಹಿಳೆಯರ ಹಕ್ಕುಗಳಿಗಾಗಿ ನಡೆಸುತ್ತಿದ್ದ ಹೊರಾಟವನ್ನು ಪ್ರಭಾವಿಸಿದ್ದರು.

ಮಥುರಾ ಅತ್ಯಾಚಾರ ಪ್ರಕರಣವನ್ನು ಮರು ವಿಚಾರಣೆ ನಡೆಸಿ ಅತ್ಯಾಚಾರ ಸಂಬಂಧಿ ಕಾನೂನಿಗೆ ತಿದ್ದುಪಡಿ ತರಬೇಕು ಎಂದು ದೇಶಾದ್ಯಂತ ನಡೆದ ಆಂದೋಲನದಲ್ಲಿ ತೃಪ್ತಿಯವರು ವಡೋದರದಲ್ಲಿನ ನಾರಿ ಶೋಷಣ್ ವಿರೋಧಿ ಸಮಿತಿಯ ಮೂಲಕ ಭಾಗಿಯಾಗಿದ್ದರು. ಲಿಂಗತ್ವ ಆಧಾರಿತ ಹಿಂಸೆ ಕುರಿತಂತೆ ಮಹಿಳಾ ರಾಜಕೀಯ ನಾಯಕರುಗಳು ತೋರಿದ್ದ ನಿರ್ಲಕ್ಷ್ಯದಿಂದ ಬೇಸತ್ತ ಅವರು 1980ರಲ್ಲಿ ಮುಂಬೈನಲ್ಲಿ ಆಯೋಜಿಸಲಾಗಿದ್ದ ಸ್ವಾಯತ್ತ ಮಹಿಳಾ ಚಳವಳಿಯ ಸಮಾವೇಶದಲ್ಲಿ ಪಾಲ್ಗೊಂಡರು. ಅಲ್ಲಿ ಭಾಗವಹಿಸಿದ್ದ ಅತ್ಯಂತ ಕಿರಿಯ ವಯಸ್ಸಿನ ಪ್ರತಿನಿಧಿ ಅವರಾಗಿದ್ದರು. ಅಲ್ಲಿನ ಪ್ರಕ್ರಿಯೆಯು ಮಹಿಳೆಯರ ಹಕ್ಕುಗಳಿಗಾಗಿ ವಡೋದರಾದಲ್ಲಿ ಏನನ್ನಾದರೂ ಹೊಸದಾಗಿ ಕಟ್ಟಬೇಕೆಂಬ ಇಚ್ಛೆಯನ್ನು ಹುಟ್ಟಿಸಿತು. 'ಇತರೆ ಎಲ್ಲ ವಿಷಯಗಳು ಮತ್ತು ರಾಜಕೀಯ ಅಫಿಲಿಯೇಷನ್‌ಗಳಾಚೆಗೂ ಮಹಿಳೆಯರ ಆಸಕ್ತಿಯನ್ನು ಎತ್ತಿಹಿಡಿಯುವ ಸ್ವಾಯತ್ತ ಮಹಿಳಾ ಸಂಘಟನೆಯ ಅಗತ್ಯ ಬರೋಡಾದಲ್ಲಿ ಇದೆ' ಎಂದು ತೀರ್ಮಾನಿಸಿದ ಆಕೆ ಮುಂದೆ ತನ್ನ ಜೀವಮಾನವಿಡಿ

**ಎದ್ದೇಳು ತಂಗಿ ಎದೇಳು ಹಿಂಸೆಗೆ ತಲೆಬಾಗದಿರು**

ಅಂಥ ಸಂಘಟನೆಯನ್ನು ಕಟ್ಟುವ ಪ್ರಯತ್ನವನ್ನು ನಿರಂತರವಾಗಿ ಮಾಡಿದರು.

ಹಲವಾರು ವರ್ಷಗಳ ಪರಿಶ್ರಮ ಮತ್ತು ಸಮಾನ ಮನಸ್ಕ ಸ್ನೇಹಿತರ ಬೆಂಬಲದಿಂದಾಗಿ ಮಹಾರಾಜ ಸಯ್ಯಾಜಿರಾವ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಮುಂದಾಳತ್ವದಲ್ಲಿ ಸಹ್ಯಾರ್ ಸ್ತ್ರೀ ಸಂಘಟನೆಯ 1984ರಲ್ಲಿ ಆರಂಭವಾಯಿತು. ತೃಪ್ತಿಯವರು ಅದರ ಸ್ಥಾಪಕ ಸದಸ್ಯರು. ಅಸಮಾನತೆ, ಅನ್ಯಾಯ ಮತ್ತು ದೌರ್ಜನ್ಯ ಮುಕ್ತ ಹಾಗೂ ಮಹಿಳೆಯರನ್ನು ಮಾನವಜೀವಿಗಳಾಗಿ, ಸಮಾನರಾಗಿ ಕಾಣುವ ಸಮಾಜದ ದೀರ್ಘಾವಧಿ ಗುರಿಯನ್ನಿಟ್ಟುಕೊಂಡು ಮಹಿಳೆಯರೇ ಮಹಿಳೆಯರಿಗಾಗಿ ಕಟ್ಟಿದ ಈ ಸಂಘಟನೆಯು ಎಚ್ಚೆತ್ತ ಪ್ರಜ್ಞೆಯ ಫಲಶೃತಿಯಾಗಿದೆ. ಕೋಮುವಾದಿ ಶಕ್ತಿಗಳನ್ನು, ಎಲ್ಲ ಮೂಲಭೂತವಾದಿಗಳನ್ನು ಪ್ರತಿರೋಧಿಸುವುದು, ತಾರತಮ್ಯಗಳಿಲ್ಲದ ಸಮಾನತಾ ತತ್ವಗಳನ್ನು ಪ್ರತಿಪಾದಿಸುವುದು, ಸಹ್ಯಾರ್ ಮಾಡುತ್ತಿದ್ದ ಕೆಲಸಗಳ ಕೇಂದ್ರ ಬಿಂದುವಾಗಿತ್ತು.

ಸಹ್ಯಾರ್ ಸಂಘಟನೆಯು ಮಹಿಳೆಯರ ಹಕ್ಕಿಗಾಗಿ ಮತ್ತು ಸಮಾಜದಲ್ಲಿ ಮಹಿಳಾ ವಿಷಯಗಳ ಕುರಿತಂತೆ ಕೆಲಸ ಮಾಡುತ್ತಿದೆ. ಸಂಘಟನೆಯ ಪರವಾಗಿ ಅರಿವು ಮೂಡಿಸುವ ಕಾರ್ಯಕ್ರಮಗಳಾದ ಬೀದಿ ನಾಟಕಗಳು, ಕಾರ್ಯಾಗಾರಗಳು, ತರಬೇತಿ ಸಹಭಾಗಿತ್ವದ ಸಂಶೋಧನೆ ಮತ್ತು ಪ್ರಕಟಣೆಗಳಲ್ಲಿ ಅವರು ಸಕ್ರಿಯವಾಗಿ ತೊಡಗಿಕೊಂಡಿದ್ದರು. ಕಿಶೋರಿಯರಿಗೆ ಮತ್ತು ಮಹಿಳೆಯರಿಗೆ ಆಪ್ತ ಸಮಾಲೋಚನೆಯನ್ನು ಮಾಡುತ್ತಿದ್ದರು ಮತ್ತು ಕಾನೂನಿನ ಬೆಂಬಲವನ್ನು ನೀಡುತ್ತಿದ್ದರು. ಮಹಿಳಾ ವಿಷಯಗಳಿಗಷ್ಟೇ ಅವರ ಕಾಳಜಿ ಸೀಮಿತವಾಗಿರಲ್ಲಿಲ್ಲ, ಇತರೆ ವಿಷಯಗಳಾದ ಪರಿಸರ, ನಾಗರೀಕ ಸ್ವಾತಂತ್ರ್ಯ, ಮಾನವ ಹಕ್ಕುಗಳು ಮತ್ತು ಕೋಮುಸಾಮರಸ್ಯ ಹಾಗೂ ನ್ಯಾಯಕ್ಕಾಗಿ ನಡೆಯುವ ಎಲ್ಲ ವಿಷಯಗಳಿಗೂ ಆಕೆ ಸ್ತ್ರೀವಾದಿ ದೃಷ್ಟಿಕೋನವನ್ನು ನೀಡುತ್ತಿದ್ದರು. ಹಲವಾರು ಸಾಮಾಜಿಕ/ ಸ್ವಾಯತ್ತ ಸಂಘಟನೆಗಳೊಂದಿಗೆ ವಿದ್ಯಾರ್ಥಿ ದೆಸೆಯಿಂದಲೇ ತೊಡಗಿಸಿಕೊಂಡಿದ್ದರಲ್ಲದೆ ಆ ಸಂಘಟನೆಗಳ ಮೂಲಕ ಸಮುದಾಯದ ಕೆಲಸ ಮತ್ತು ಸಾಮಾಜಿಕ ಅರಿವು ಮೂಡಿಸುವ ಕೆಲಸಗಳನ್ನು ಮಾಡುತ್ತಿದ್ದರು. ಪರ್ಯಾವರಣ್ ಸುರಕ್ಷಾ ಸಮಿತಿಯು ಅಂಥ ಒಂದು ಸಂಘಟನೆಯಾಗಿದ್ದು ಅದು ಪರಿಸರ ಹಕ್ಕುಗಳು ಮತ್ತು ಅರಿವು ಮೂಡಿಸಲು ಕೆಲಸ ಮಾಡುತ್ತಿದೆ. ಆ ಸಂಘಟನೆಯಲ್ಲಿಯೂ ತಮ್ಮ ಸಂಶೋಧನಾ ಮತ್ತು ವಿಮರ್ಶಾತ್ಮಕ ನೋಟದ ಮತ್ತು ಮಾನವ ಪರಿಸರ ಕುರಿತ ತಿಳುವಳಿಕೆಯ ಮೂಲಕ ಪರಿಸರ ನಾಶ ಮತ್ತು ಭೂಕಬಳಿಕೆ ಮತ್ತು ಖಾಸಗೀಕರಣಕ್ಕಾಗಿ ಅಭಿವೃದ್ಧಿ ಹೆಸರಿನಲ್ಲಿ ಆದಿವಾಸಿಗಳನ್ನು ಎತ್ತಂಗಡಿ ಮಾಡುವುದನ್ನು ಗುರುತಿಸಿ, ಅಧ್ಯಯನ ಮಾಡುತ್ತಿದ್ದರು. ಪರಿಸರ ವಿಷಯಗಳಿಗೆ ಸಂಬಂಧಪಟ್ಟಂತೆ ಅವರಿಗಿದ್ದ ಕರಾರುವಾಕ್ಕಾದ, ಸಮಗ್ರವಾದ ತಿಳುವಳಿಕೆಯು ಕಾನೂನಿನ ಕ್ರಮಗಳಿಗೆ, ಕಾರ್ಯಯೋಜನೆಗಳಿಗೆ ಸಹಾಯಕವಾಗಿದ್ದವು. ವೈಚಾರಿಕ ಸಮಾಜವಾದಿಯಾಗಿದ್ದ ಅವರು ಪಿಯುಸಿಎಲ್‌ನಲ್ಲೂ ತಮ್ಮನ್ನು ತೊಡಗಿಸಿಕೊಂಡಿದ್ದರು. ತಾವು ಭಾಗಿಯಾಗುತ್ತಿದ್ದ



ಎಲ್ಲಾ ವಿಷಯಗಳಿಗೂ ಮಹಿಳಾ ದೃಷ್ಟಿಕೋನ ಮತ್ತು ಸೂಕ್ಷ್ಮತೆಯನ್ನು ತರುತ್ತಿದ್ದರು. ನರ್ಮದಾ ಅಣೆಕಟ್ಟಿನ ವಿರೋಧಿ ಆಂದೋಲನ, ಮಿಥಿವಿರ್ಡಿಯಲ್ಲಿನ ಅಣುಸ್ಥಾವರ ವಿರೋಧಿ ಹೋರಾಟ, ಗುಜರಾತಿನಲ್ಲಿ ಕೈಗಾರಿಕಾ ಮಾಲಿನ್ಯ ವಿರೋಧಿ ಹೋರಾಟ, 2002ರ ಗುಜರಾತ್ ಹತ್ಯಾಕಾಂಡ ವಿರೋಧಿ ಹೋರಾಟ, ಸರ್ಕಾರದ ಕೈಗೊಂಡ ಸ್ಲಂ ಎತ್ತಂಗಡಿ ವಿರುದ್ಧದ ಹೋರಾಟಗಳು, ಗರುಡೇಶ್ವರ್ ಅಣೆಕಟ್ಟು ಎತ್ತರಿಸುವ ಯೋಜನೆ, ವಿಶ್ವಾಮಿತ್ರಿ ನದಿ ಅಭಿವೃದ್ಧಿ ಯೋಜನೆ, ಐಕ್ಯತೆ ಪ್ರತಿಮೆ ಯೋಜನೆಗಳಿಗೆ ಸಂಬಂಧಪಟ್ಟ ಹೀಗೆ ಪರಿಸರ ಜೀವನಾಧಾರಗಳ ಮೇಲೆ ದುಷ್ಪರಿಣಾಮ ಬೀರುವುದರ ವಿರುದ್ಧ ನಡೆದ ಹೋರಾಟಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು.

ಮಹಾರಾಜ ಸಯ್ಯಾಜಿರಾವ್ ವಿಶ್ವವಿದ್ಯಾಲಯದಲ್ಲಿ ಸಂಶೋಧಕಿಯಾಗಿ, ಶಿಕ್ಷಕಿಯಾಗಿ ಮತ್ತು ಮಹಿಳಾ ಅಧ್ಯಯನ ಕೇಂದ್ರದ ಕೊಆರ್ಡಿನೇಟರ್ ಆಗಿ, ವಾಣಿಜ್ಯ ವಿಭಾಗ ಹಾಗೂ ಸಮಾಜ ಕಾರ್ಯ ವಿಭಾಗಗಳ ಕೋಆರ್ಡಿನೇಟರ್ ಆಗಿ ವಿದ್ವತ್ ವಲಯದಲ್ಲಿಯೂ ತಮ್ಮ ಛಾಪನ್ನು ಮೂಡಿಸಿದರು. ತಮ್ಮ ಆಕ್ಟಿವಿಸಂನಲ್ಲಿ ವಿದ್ವತ್ತಿನ ಪರಿಣಿತಿಯನ್ನು ಬೆಸೆದು ಅದನ್ನು ತಳಮಟ್ಟದಲ್ಲಿ ಕಾರ್ಯರೂಪಕ್ಕೆ ತರುವ ಕೆಲಸ ಮಾಡಿದರು. ಸರ್ಕಾರೇತರ ಸಂಸ್ಥೆಗಳಿಗೆ ತರಬೇತಿಯ ಕೈಪಿಡಿ ಮಾಡುವುದಾಗಲೀ, ಸಮುದಾಯ ಕಾರ್ಯಕ್ರಮಗಳಾಗಲೀ, ತರಬೇತಿ ಕಾರ್ಯಾಗಾರಗಳಾಗಲೀ, ಮೌಲ್ಯಮಾಪನ ಕಾರ್ಯವಾಗಲೀ ಅದರಲ್ಲಿ ವಿದ್ವತ್ತಿನ ಪ್ರತಿಭೆಯೊಂದಿಗೆ ವೈಚಾರಿಕ ಆಕ್ಟಿವಿಸಂ ಅನ್ನು ಸೇರಿಸುತ್ತಿದ್ದರು. ಯಾವುದರಲ್ಲಿಯೇ ಆಗಲಿ ಉತ್ಕಟವಾಗಿ ತೊಡಗುತ್ತಿದ್ದರು.

ನಗರದ ಅನೌಪಚಾರಿಕ ಕ್ಷೇತ್ರದಲ್ಲಿನ ಮಹಿಳೆಯರ ಆರ್ಥಿಕ ಸ್ಥಿತಿ–ಬರೋಡಾ ನಗರದ ಒಂದು ಅಧ್ಯಯನ ಎಂಬ ಮಹಾ ಪ್ರಬಂಧಕ್ಕೆ 2000 ದಲ್ಲಿ ಮಹರಾಜ ಸಯ್ಯಾಜಿರಾವ್ ವಿಶ್ವವಿದ್ಯಾಲಯದಿಂದ ಅವರಿಗೆ ಡಾಕ್ಟರೇಟ್ ಲಭಿಸಿತ್ತು. ಮಹಿಳಾ ಚಳವಳಿಯಲ್ಲಿನ ಗಾಢವಾದ ನಂಬಿಕೆ ಅವರ ಬರಹಗಳಲ್ಲಿ ವ್ಯಕ್ತವಾಗುತ್ತಿತ್ತು. ಉನ್ನತಿ ಮತ್ತು ಸಹ್ಯಾರ್‌ನವರು ಗುಜರಾತಿ ಭಾಷೆಯಲ್ಲಿ 2011ರಲ್ಲಿ ಪ್ರಕಟಿಸಿದ 'ನಾರಿ ಆಂದೋಲನ್ ಇತಿಹಾಸ್' ಎಂಬ ಮಹಿಳಾ ಚಳವಳಿಯ ಇತಿಹಾಸವನ್ನು ಕುರಿತ ನಾಲ್ಕು ಸಂಪುಟಗಳಿಗೆ ಅವರು ಕೆಲಸ ಮಾಡಿದ್ದು ಅವರಿಗೆ ಅಪಾರವಾದ ತೃಪ್ತಿಯನ್ನು ನೀಡಿತ್ತು.

ಅವರ ಕೊನೆಯ ದಿನಗಳಲ್ಲಿ ವಿಶ್ವಾಮಿತ್ರಿ ನದಿಯೋಜನೆಯಲ್ಲಿ ನಡೆಯುತ್ತಿದ್ದ ಉಲ್ಲಂಘನೆಗಳ ಬಗ್ಗೆ ಹೆಚ್ಚು ಚಿಂತಿತರಾಗಿದ್ದರು. ಕಾರಣ ಆ ಪ್ರದೇಶವು ಅಪಾರವಾದ ಜೀವ ವೈವಿಧ್ಯತೆಯನ್ನು ಹೊಂದಿತ್ತಲ್ಲದೆ, ಅಲ್ಲಿನ ಜನರ ಜೀವನಾಧಾರಗಳಿಗೆ ಧಕ್ಕೆಯುಂಟುಮಾಡುವುದರ ಜೊತೆಗೆ ಪರಿಸರ ಅವನತಿಗೂ ಕಾರಣವಾಗಿತ್ತು. "ಜನರು ಮಹಿಳಾ ಹಕ್ಕುಗಳ ಬಗ್ಗೆ ನಿರ್ಲಕ್ಷ್ಯ ತೋರುತ್ತಾರೆ ... ನದಿ ಮತ್ತು ಪರಿಸರವನ್ನು ಅವರು ಅರ್ಥಮಾಡಿಕೊಂಡರೆ ಒಳ್ಳೆಯದು" ಎಂಬುದು ಕೊನೆಯ

ಉಸಿರಿನವರೆಗೂ ಆಕೆಯ ಕಾಳಜಿಯಾಗಿತ್ತು. ಆಕೆಯ ಎಲ್ಲ ಪ್ರಯತ್ನಗಳಲ್ಲೂ ಜೊತೆಯಾಗಿ ನಿಲ್ಲುತ್ತಿದ್ದ ಸಂಗಾತಿ ರೋಹಿತ್ ಪ್ರಜಾಪತಿ, ಮಗ ಮಾನವ್ ಮತ್ತು ಕುಟುಂಬದವರು ಹಾಗೂ ಸ್ನೇಹಿತರನ್ನು ತೃಪ್ತಿ ಷಾ ಅಗಲಿ ಹೋಗಿರುವುದು ಮಹಿಳಾ ಹೋರಾಟಕ್ಕೆ, ಮತ್ತು ಸ್ತ್ರೀವಾದೀ ಅಧ್ಯಯನ ಕ್ಷೇತ್ರಗಳಿಗೆ ಭಾರೀ ನಷ್ಟವನ್ನುಂಟುಮಾಡಿದೆ.

**(ಮರೆಯಾದ ಗೆಳತಿಯರು ಬರಹದ ಕನ್ನಡ ಅನುವಾದ ದು. ಸರಸ್ವತಿ)**



# ಜೊತೆಗೂಡಿ ನಡೆದ ನೆನಪಿನ ಚಿತ್ರಗಳು

## ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ
## 2016, ವಿಜಯಪುರ















ಅಕ್ಕ ಮಹಾದೇವಿ ಮತ್ತು ಚಾಂದ್‌ಬೀಬೀ ನೆನಪಿನ
ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ
Karnataka State Federation Against Atrocities on Women, Vijayapur








ಅಕ್ಕ ಮಹಾದೇವಿ ಮತ್ತು ಚಾಂದ್‌ಬೀಬೀ ನೆನಪಿನ
ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ
Karnataka State Federation Against Atrocities on Women, Vijayapur


ಅಂತಾರಾಷ್ಟ್ರೀಯ ಮಹಿಳಾ


Karnataka State Federation
Atrocities on Women, Vijayapur


ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ
Karnataka State Federation Against Atrocities on Women, Vijayapur


ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ
ಒಕ್ಕೂಟ, ವಿಜಯಪುರ
Karnataka State Federation Against
Atrocities on Women, Vijayapur


ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ
ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ
ವಿರೋಧಿ ಒಕ್ಕೂಟ, ವಿಜಯಪುರ
Karnataka State Federation Against
Atrocities on Women, Vijayapur


ಅಕ್ಕ ಮಹಾದೇವಿ ಮತ್ತು ಚಾಂದ್‌ಬೀಬೀ ನೆನಪಿನ
ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ
ಕರ್ನಾಟಕ ರಾಜ್ಯ ಮಹಿಳಾ ದೌರ್ಜನ್ಯ
ವಿರೋಧಿ ಒಕ್ಕೂಟ, ವಿಜಯಪುರ
Karnataka State Federation Against
Atrocities on Women, Vijayapur










A.S. PATIL COLLEGE OF COMMERCE
(AUTONOMOUS) VIJAYAPUR
NATIONAL SERVICE SCHEME
Prof : I.B.Chippalkatti
Dr.H.M. Mujavar
Prof : S.G. Talikoti
Principal
ಸಮಾನತೆಯೇ ಸ್ವರ್ಗ ಅಸಮಾನತೆಯೇ ನರಕ


ಅಕ್ಕ ಮಹಾದೇವಿ ಮತ್ತು ಚಾಂದ್‌ಬೀಬೀ ನೆನಪಿನ
ಅಂತಾರಾಷ್ಟ್ರೀಯ ಮಹಿಳಾದಿನ
ಮಾರ್ಚ್ 08-2016
ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ






ಶ್ರಮಿಕ ಮಹಿಳೆಯರ ಜೀವನ ಫಲ ಅವರಿಗೆ ದಕ್ಕಲಿ


ಅಸಂಘಟಿತ ವಲಯದವರಿಗೆ ಸಮಾನ ವೇತನ








ಮಹಿಳಾ ಧ್ವನಿ
ಮಾರ್ಚ್ 8, 2016
ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ವಿಶೇಷ ಸಂಚಿಕೆ
ಜಾತಿ ಮತ್ತು ಲಿಂಗತ್ವ ತಾರತಮ್ಯ ಹೋಗಲಾಡಿಸಲು ಮಹಿಳೆಯರು ಬದ್ಧರಾಗಲಿ: ಪ್ರೊ.ಉಮಾ
ಕೃಷಿಯಲ್ಲಿನ ಬಿಕ್ಕಟ್ಟಿಗೆ ಮೂಲ ಕಾರಣ ಹಸಿರು ಕ್ರಾಂತಿ: ವಿ.ಗಾಯತ್ರಿ


ಮಹಿಳಾ ಧ್ವನಿ
ಮಾರ್ಚ 8, 2016
ಮಹಿಳೆಯನ್ನು ಮಹಿಳೆಯಾಗಿ ಗುರುತಿಸಿ: ಶಕ್ಕುನ್
ಮಹಿಳಾ ಸಬಲೀಕರಣ ಎಂದರೆ.....
ಜೀತಕ್ಕೆ ಕಳಿಸಬೇಡವ್ವಾ.....ರೂಪಕ
ಸಮಾನತೆಗಿಂತಲೂ ಸಮಾನ ಗೌರವ ಅವಶ್ಯಕ: ಅನುಪಮಾ



